UNIVERSAL
LIBRARY
OU_202219
UNIVERSAL
LIBRARY

OUP—23—4-4-69—5,000.

**OSMANIA UNIVERSITY LIBRARY**


Call No. K81.6 R89N

Accession No. K3362

Author గుండప్ప, L.

Title నాదరుదగళు. 1943.

This book should be returned on or before the date last marked below.



ಮಾ|| ಶ್ರೀ ಚೆನ್ನಮ್ಮನವರು ಶ್ರೀ|| ಲಿಂಗಣ್ಣಯ್ಯನವರು

# ಅರ್ಪಣೆ

ಮಾತೃಸೇವೆಗೆ ನಿಮ್ಮ ಜೀವನವೆ ಮುಡಿಪಾಯ್ತು;
ಭ್ರಾತೃಹಿತಸಾಧನೆಗೆ ಸುಖ ಸೂರೆಯಾಯ್ತು;
ಸತ್ಯ ನಿಲ್‌ನೆಲೆಯಾಯ್ತು; ದಯೆಯೂರುಗೋಲಾಯ್ತು;
ಚಿತ್ತಶುದ್ಧಿಯೆ ಸತತ ಬಾಳ ಗುರಿಯಾಯ್ತು.

ಅನ್ನೆಯದಿ ಕಾಡಿದರ ಪೀಡೆಗಳ ನೆರೆ ಮರೆದು,
ತನ್ನವರು ಅನ್ನಿಗರು ಎಂಬ ಭೇದವ ತೊರೆದು,
ಊರೆ ಬಾಂಧವರೆಂದು, ಎಲ್ಲ ಸಜ್ಜನರೆಂದು,
ಸಾರಿ ನಂಬುತ ನಡೆದು ನೀವ್ ಹಿರಿಯರೆಂದೂ.

ನಿಮ್ಮ ನಲ್ಮೆಯೆ ನಮ್ಮ ಮೇಲ್ಮೆ, ಓ ತಂದೆ.
ನಿಮ್ಮ ತಾಳ್ಮೆಯೆ ನಮ್ಮ ಬಾಳ್ವೆ, ಓ ತಾಯಿ.
ನಿಮ್ಮೊಲ್ಮೆ ದಿವ್ಯ ಸಂಜೀವನದ ಬಿಂದು.
ನಿಮ್ಮ ಹರಕೆಯೆ ನಮಗೆ ಸರ್ವ ಸುಖ ಸಿಂಧು.

ನಮ್ಮೂರ ಜನದೊಲವ ಹಬ್ಬಿಸಿದ ಹಾಡ
ಹಾಡಿಸುತ ನಲಿದೊಲಿದು ಕೂಡಿಸುತ ನಾವು
ನಾಡ ಪದಗಳದೊಂದು ಮಾಲೆಯನು ತಂದು
ನಿಮ್ಮಡಿಗೆ ಕಾಣಿಕೆಯನರ್ಪಿಸುವೆವೆಂದು.

# FOREWORD

I have read with great pleasure the collection of ballads made by Messrs. Matighatta Ramaswamy & Krishnamurty & edited with introductions and notes by Mr. L. Gundappa, M.A. Such collections of Folk Poetry are being made now for some time both at Dharwar for North Karnatak & here in Mysore. The present one is the best & most interesting I have seen so far. It comes from the region of the great Hoysala capital, Dorasamudra (Halebid) & contains some historical ballads (regarding Princes Lakkanna and Eranna & the fall of Seringapatam), a good many women's songs & tragical tales & religious lyrics, reflecting social life, ideas & culture. Much light will be thrown on Mysore History if antiquarian critical study is made of these poems & their like. Philological & metrical studies can also be made with profit. Not only are these poems interesting to the educated & learned, but I consider their importance specially great in the renaissance of village life that we are attempting today. Blood calls to blood & spirit to spirit & these songs which breathe the very life-blood of the villagers—men and women—will stir them as nothing else will and could be used as texts on which modern sermons could be based. They could be used to

revive much recreation, joy and sport among people who are now lost in drudgery, poverty and despair and appalling soullessness. Personally I feel proud that my students have been, in one way or other, realising and materialising so many of my young and life-long dreams and I congratulate the collectors and editor on their excellent work.

*Basavanagudi*
*18-11-1943*

**B. M. Srikantia**

## ಮುನ್ನುಡಿ

ಶ್ರೀ ಮತಿಘಟ್ಟ ರಾಮಸ್ವಾಮಿ ಮತ್ತು ಕೃಷ್ಣಮೂರ್ತಿಯವರು ಸಂಗ್ರಹಿಸಿ ಶ್ರೀ ಎಲ್. ಗುಂಡಪ್ಪ, ಎಂ.ಎ., ಅವರು ಪರಿಚಯ ಟಿಪ್ಪಣಿಗಳನ್ನು ಬರೆದು ಸಂಪಾದಿಸಿರುವ ನಾಡ ಪದಗಳ ಸಂಗ್ರಹವನ್ನು ಓದಿ ಬಹಳ ಸಂತೋಷವಾಯಿತು. ಈ ರೀತಿಯ ಜನಪದ ಗೀತೆಗಳ ಸಂಗ್ರಹಗಳು ಉತ್ತರ ಕರ್ನಾಟಕ ಪ್ರಾಂತದಲ್ಲಿ ಧಾರವಾಡದಲ್ಲಿಯೂ ಇಲ್ಲಿ ಮೈಸೂರಿನಲ್ಲಿಯೂ ಈಗ ಕೆಲವು ವರ್ಷಗಳಿಂದಲೂ ನಡೆಯುತ್ತಲೇ ಇವೆ. ಇದುವರೆಗೆ ನಾನು ನೋಡಿರುವ ಸಂಗ್ರಹಗಳಲ್ಲೆಲ್ಲ ಈಗಿನ ಈ ಸಂಗ್ರಹವೇ ಸರ್ವೋತ್ತಮವಾದ್ದು ಮತ್ತು ಅತ್ಯಂತ ಸ್ವಾರಸ್ಯವಾದ್ದು. ಇದು ಸಂಗ್ರಹವಾಗಿ ಬಂದಿರುವುದು ಪ್ರಸಿದ್ಧ ಹೊಯ್ಸಳ ರಾಜಧಾನಿ ದೋರಸಮುದ್ರ (ಹಳೆಯ ಬೀಡು) ಪ್ರಾಂತದಿಂದ. ಇದರಲ್ಲಿ ಕೆಲವು ಚಾರಿತ್ರಿಕ ಲಾವಣಿಗಳೂ (ಉದಾ: ಲಕ್ಕಣ್ಣ ಈರಣ್ಣರೆಂಬ ರಾಜಕುಮಾರರನ್ನೂ ಶ್ರೀರಂಗಪಟ್ಟಣದ ಪತನವನ್ನೂ ಕುರಿತವು), ಅನೇಕ ಹೆಂಗಸರ ಹಾಡುಗಳೂ, ಎದೆಗರಗಿಸುವ ಕರುಣಕಥೆಗಳೂ ಧಾರ್ಮಿಕ ಭಾವಗೀತೆಗಳೂ ಇವೆ. ಇವೆಲ್ಲ ಸಮಾಜದ ಜೀವನ, ಭಾವನೆ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತಿವೆ. ಈ ಕವನಗಳನ್ನೂ ಇಂಥ ಇತರ

ಕವನಗಳನ್ನೂ ವಿಮರ್ಶಾತ್ಮಕವಾಗಿ ಅಭ್ಯಾಸಮಾಡಿದರೆ ಮೈಸೂರು ಚರಿತ್ರೆಯ ಮೇಲೆ ವಿಶೇಷ ಬೆಳಕು ಬೀಳುವುದು. ಇವುಗಳ ಆಧಾರದ ಮೇಲೆ ಭಾಷಾಶಾಸ್ತ್ರ ಮತ್ತು ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳನ್ನೂ ಕುರಿತು ಅಭ್ಯಾಸಮಾಡಿ ತುಂಬ ಪ್ರಯೋಜನ ಪಡೆಯಬಹುದು. ಈ ಕವನಗಳು ವಿದ್ಯಾವಂತರಿಗೂ ಪಂಡಿತರಿಗೂ ಸ್ವಾರಸ್ಯವಾಗಿರುವುದು ಮಾತ್ರವೇ ಅಲ್ಲ; ಈಗ ನಾವು ಸಾಧಿಸಲು ಪ್ರಯತ್ನಿಸುತ್ತಿರುವ ಗ್ರಾಮ ಜೀವನದ ಪುನರುಜ್ಜೀವನಸಾಧನೆಯಲ್ಲೂ ಇವುಗಳ ಪ್ರಾಮುಖ್ಯ ವಿಶೇಷ ಮಹತ್ವ ಬೀರುವುದೆಂದು ನಾನು ಭಾವಿಸುತ್ತೇನೆ. ಕರುಳು ಕರುಳನ್ನು ಮಿಡಿಯುತ್ತದೆ; ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ. ನಮ್ಮ ಹಳ್ಳಿಗರ—ಗಂಡು ಹೆಣ್ಣುಗಳೆಲ್ಲರ—ಜೀವನಸಾರವನ್ನೆ ಹೊರಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು. ಇವುಗಳನ್ನು ಆಧಾರವಾಗಿಟ್ಟುಕೊಂಡು ನವೀನಕಾಲಕ್ಕೆ ಉಪಯುಕ್ತವಾದ ಅನೇಕ ಬೋಧನೆಗಳನ್ನು ಮಾಡಬಹುದು. ಈಗ ಬಿಡುವಿಲ್ಲದ ದುಡಿತ, ಬಡತನ, ನಿರಾಸೆ, ಎದೆಬಿರಿಸುವಂಥ ಸತ್ವಹೀನತೆ—ಇವುಗಳಲ್ಲಿ ಮುಳುಗಿಹೋಗಿರುವ ನಮ್ಮ ಜನಕ್ಕೆ ಆಟಪಾಟಗಳ ಮೂಲಕ ಬಹುಮಟ್ಟಿಗೆ ಹರ್ಷವಿಶ್ರಾಂತಿಗಳನ್ನುಂಟುಮಾಡಲು ಇವನ್ನು ಉಪಯೋಗಿಸಿಕೊಳ್ಳಬಹುದು. ನನ್ನ ಸ್ವಂತಕ್ಕೆ ಹೇಳುವುದಾದರೆ, ಚಿಕ್ಕಂದಿನಿಂದ ಮೊದಲುಗೊಂಡು ಜೀವಾವಧಿ ನನ್ನಲ್ಲಿ ನೆಲಸಿದ ಅಷ್ಟೊಂದು ಕನಸುಗಳನ್ನು ನನ್ನ ವಿದ್ಯಾರ್ಥಿಗಳು ಗ್ರಹಿಸಿ ಒಂದಲ್ಲ ಒಂದು ಬಗೆಯಲ್ಲಿ ನನಸಾಗಿಸಿ ಸಾಧಿಸುತ್ತಿರುವರೆಂಬುದು ನನಗೆ ಬಹಳ ಹೆಮ್ಮೆಯ ವಿಷಯ. ಈ ಹಾಡುಗಳ ಸಂಗ್ರಾಹಕರನ್ನೂ ಸಂಪಾದಕರನ್ನೂ ಅವರ ಬಹು ಸೊಗಸಾದ ಈ ಕಾರ್ಯಕ್ಕಾಗಿ ಅಭಿನಂದಿಸುತ್ತೇನೆ.

ಬಸವನಗುಡಿ
೧೮-೧೧-೧೯೪೩

ಬಿ. ಎಂ. ಶ್ರೀಕಂಠಯ್ಯ

# ಬಿನ್ನಹ

ನಮ್ಮೂರಿನ ಹೆಂಗಸರೆಲ್ಲ ಹಾಡಿನ ವಿಶ್ವಕೋಶದಂತಿದ್ದ ನಮ್ಮ ಅಜ್ಜಿಯ ಹತ್ತಿರ ಹಾಡು ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದರು. ಚಿಕ್ಕ ಹುಡುಗಿಯರು ಕೋಲಾಟದ ಹಾಡನ್ನೂ, ಮದುವೆಯಾದ ಮತ್ತು ಆಗ ಲಿರುವ ಹುಡುಗಿಯರು ಉರುಟಣೆಯ ಹಾಡು, ಬೀಗರ ಹಾಡು, ಮತ್ತು ಮಂಗಳಗೌರಿ ಮುಂತಾದ ವ್ರತಕಥೆಗಳನ್ನೂ, ಹಿರಿಯ ಹೆಂಗಸರು ಉದಯ ರಾಗ, ತುಳಸಿಯ ಪೂಜೆ, ಸುದಾಮನ ಹಾಡು, ಗಜೇಂದ್ರ ಮೋಕ್ಷ, ಗಿರಿಜಾ ಕಲ್ಯಾಣ, ಮೊದಲಾದ ಶಾಸ್ತ್ರದ ಮತ್ತು ತತ್ತ್ವದ ಹಾಡುಗಳನ್ನೂ, ಹೇಳಿಸಿಕೊಳ್ಳುತ್ತಿದ್ದರು. ನಮ್ಮ ಮನೆಯ ಸುತ್ತಮುತ್ತ ಒಕ್ಕಲಿಗರ ಮನೆಗಳು. ನಮ್ಮ ಸಣ್ಣ ಹಳ್ಳಿಯಲ್ಲಿ ಯಾರ ಮನೆಯಲ್ಲಿ ರಾಗಿಕಲ್ಲು ಪದ ಹೇಳಿದರೂ ನಮ್ಮ ಮನೆಗೆ ಚೆನ್ನಾಗಿ ಕೇಳಿಸುತ್ತಿತ್ತು. ಮನೆಯಲ್ಲೇ ಇದ್ದುಕೊಂಡು ಅವನ್ನೆಲ್ಲ ಕೇಳಬಹುದಾಗಿತ್ತು. ಕೋಲಾಟ ನಡೆಯುತ್ತಿ ದ್ದುದು ಮಾತ್ರ ಸ್ವಲ್ಪ ದೂರದಲ್ಲಿ. ಅಲ್ಲದೆ ಅದನ್ನು ಕಣ್ಣಿಂದ ನೋಡಲೂ ಬೇಕಷ್ಟೆ. ಅದಕ್ಕೆ ತಕ್ಕಷ್ಟು ಅವಕಾಶವಿರಲಿಲ್ಲ. ಅಲ್ಲಿ ಹೋಗಬೇಕೆಂಬ ಕುತೂಹಲ ಹೆಚ್ಚಾಗಿದ್ದರೂ ಹೊರಗೆ ಹೊರಡಲು ಧೈರ್ಯವಿಲ್ಲ. ಹಿರಿ ಯರಿಗೆ ಈ ಪದಗಳು ಬೇಕಿಲ್ಲ; ನನಗೆ ಬೇರೆ ಜೊತೆಯಿಲ್ಲ. ಬಾಗಿಲ ಬಳಿ ನಿಂತು ಕಿವಿಗೊಟ್ಟು ಆಲಿಸುತ್ತಿದ್ದೆ. ನಮ್ಮ ತಾಯಿ ಈ ಕಷ್ಟವನ್ನರಿತು ಅವರಿಗೆ ಬಿಡುವಾದಾಗಲೆಲ್ಲ ಜೊತೆಗೆ ಬರುತ್ತಿದ್ದರು. ಹೀಗೆ ಚಿಕ್ಕಂದಿ ನಲ್ಲೇ—ಅಕ್ಷರಾಭ್ಯಾಸಕ್ಕೆ ಮೊದಲೇ—ನನಗೆ ಈ ಪದಗಳ ಪರಿಚಯ ವಾಯಿತು.

ಆಗ ಅವುಗಳ ಅರ್ಥ, ಸ್ವಾರಸ್ಯ, ಒಂದೂ ತಿಳಿಯುತ್ತಿರಲಿಲ್ಲ. ಒಂದೊಂದರ ಅಭಿಪ್ರಾಯ ಮಾತ್ರ ಮಸುಕು ಮಸುಕಾಗಿ ಮನ ಸ್ಸಿಗೆ ಹೊಳೆಯುತ್ತಿತ್ತು. ಒಟ್ಟಿನಲ್ಲಿ 'ಇವು ಚೆನ್ನಾಗಿವೆ; ನಮಗೆ ಬೇಕು' ಎನ್ನಿಸುತ್ತಿತ್ತು. ಈಚೆಗೆ ವಿದ್ಯಾಭ್ಯಾಸಕ್ಕಾಗಿ ಹದಿನೈದು ಇಪ್ಪತ್ತು ವರ್ಷ ಹೊರಗಿದ್ದು ಊರಿಗೆ ಹಿಂದಿರುಗಿದಾಗ ಅವುಗಳ ಬೆಲೆ ಮನದಟ್ಟಾಗಿತ್ತು. ಆದರೆ ಅಷ್ಟು ಹೊತ್ತಿಗೆ ಆ ಹಾಡಿನ ಚಿಲುಮೆಗಳೆಲ್ಲ ಬತ್ತಿಹೋಗಿದ್ದವು. ನಮ್ಮೂರಿನಲ್ಲಿ ಆಗ ಕೋಲಾಟಕ್ಕೆ ಹೆಸರಾಗಿದ್ದವರು—ಪುಷ್ಪ, ಬೀರ,

ಹುಲಿಯ, ಮೊದಲಾದವರು—ಮೊದಲನೆಯ ಮಹಾ ಯುದ್ಧ ಕಾಲದ ಇನ್‌ಫ್ಲೂಯೆಂಜಾ ಬೇನೆಗೆ ಬಲಿಯಾಗಿದ್ದರು. ಒಳ್ಳೊಳ್ಳೆಯ ಹಾಡು ಕಲಿತಿದ್ದ ಹೆಣ್ಣುಮಕ್ಕಳು ಮದುವೆಯಾಗಿ ಬೇರೆ ಊರುಗಳಿಗೆ ಹೋಗಿದ್ದರು. ನಾನು ಮಗುವಾಗಿದ್ದಾಗಲೇ ಹಣ್ಣು ಹಣ್ಣು ಮುದುಕಿಯಾಗಿದ್ದ ಅಜ್ಜಿ ಎಂದೋ ಕಣ್ಮುಚ್ಚಿದ್ದರು. ಹಲವು ಹೊಸ ಒಕ್ಕಲು ವಲಸೆಬಂದು ಊರು ದೊಡ್ಡದಾಗಿ ಬೆಳೆದಿರುವುದಾದರೂ ಯಾರಲ್ಲಿಯೂ ಉತ್ಸಾಹವಿಲ್ಲ; ರಸಿಕತನವಿಲ್ಲ; ಜೀವದ ಝುರಿಯಿಲ್ಲ. ಬಾಳು ಬರಡಾಗಿ ಒಣಕಲಾಗಿ ಹೋಗಿದೆ.

ಹೀಗಿದ್ದರೂ ಹಿಂದಿನ ವೈಭವದ ನೆರಳು ಇನ್ನೂ ಸ್ವಲ್ಪ ಉಳಿದಿರುವುದು ಆಗಾಗ ಗೋಚರವಾಗುತ್ತದೆ. ಹಿಂದಿನ ಗುಂಪಿನವರಲ್ಲಿ ಅಳಿದುಳಿದ ಒಬ್ಬಿಬ್ಬರ ಪ್ರಯತ್ನದಿಂದ ಈಗಿನ ಅವರ ಪೀಳಿಗೆಯಲ್ಲಿ ಕೋಲಾಟದ ಪದಗಳು ಇನ್ನೂ ಸ್ವಲ್ಪಮಟ್ಟಿಗೆ ಬದುಕಿವೆ. ಒಕ್ಕಲಿಗರ ಹೆಣ್ಣುಮಕ್ಕಳು ಹೆಚ್ಚು ಪಾಲು ಪದಗಳನ್ನು ಮರೆತಿರುವರಾದರೂ ನೆನಪಿರುವಷ್ಟನ್ನು ಹಾಡುತ್ತಿರುತ್ತಾರೆ. ಬ್ರಾಹ್ಮಣರಲ್ಲಿ ಮಾತ್ರ ನಮ್ಮ ಅಜ್ಜಿಯ ಪರಂಪರೆ ಮುಗಿದಂತೆಯೇ ಕಾಣುತ್ತದೆ. ಹೊಸ ಗಾಳಿ ಬೀಸಿ ಹಳೆಯ ಹಣ್ಣೆಲೆಗಳನ್ನು ಹಾರಿಸಿಬಿಟ್ಟಿದೆ.

ಈಗ ಹದಿನಾರು ವರ್ಷದ ಹಿಂದೆ ನನ್ನ ಹಿರಿಯ ತಮ್ಮ ರಾಮಸ್ವಾಮಿ ಕಾಲೇಜು ವ್ಯಾಸಂಗವನ್ನು ನಿಲ್ಲಿಸಿ ಹಳ್ಳಿಗೆ ಬಂದು ನಿಂತಮೇಲೆ ಈ ಪದಗಳಲ್ಲಿ ಸಾಧ್ಯವಾದಷ್ಟನ್ನು ಬದುಕಿಸಲು ಪ್ರಯತ್ನ ಮಾಡಿದನು. ಮತ್ತೆ ಎರಡು ಮೂರು ವರ್ಷಗಳಲ್ಲಿ ಕಿರಿಯ ತಮ್ಮ ಕೃಷ್ಣಮೂರ್ತಿಯೂ ಕಾಲೇಜಿನಿಂದ ಬಂದು ಅವನ ಜೊತೆ ಸೇರಿದನು. ನಮ್ಮ ಹಳ್ಳಿಯವರು ಹಿಂದಿನ ಹಲವು ಮೇಲಾದ ಪದ್ಧತಿಗಳನ್ನು ತೊರೆಯುತ್ತಿದ್ದುದನ್ನು ಕಂಡು ಅವರಲ್ಲಿ ಮತ್ತೆ ಶ್ರದ್ಧೆಮೂಡಿಸುವುದಕ್ಕೆ ಇಬ್ಬರೂ ಬಹಳ ಸಾಹಸ ಮಾಡಿದರು. ಕೋಲಾಟ, ಯಕ್ಷಗಾನ, ತಿಂಗಳು ಮಾವನ ಪೂಜೆ, ಮೊದಲಾದವುಗಳ ಮಹತ್ವವನ್ನು ತಿಳಿಯ ಹೇಳಿ ಅವನ್ನು ಬಿಡದೆ ಎಂದಿನಂತೆ ನಡಸಿಕೊಂಡು ಬರುವಂತೆ ಅವರನ್ನು ಪ್ರೋತ್ಸಾಹಿಸಿದರು. ಕೆಲವು ದಿನ ರಾತ್ರಿ ಪಾಠಶಾಲೆಯನ್ನೂ ನಡಸಿ ತಿಳಿವಳಿಕೆಕೊಟ್ಟರು. ಇಬ್ಬರೂ ಹೀಗೆ

ಆರೇಳು ವರ್ಷ ಶ್ರಮಪಟ್ಟು ಸಂಗ್ರಹಿಸಿದ ಹಾಡುಗಳನ್ನು ಈಗ ಪುಸ್ತಕ ರೂಪವಾಗಿ ಪ್ರಕಟಿಸಿದೆ.

ಈ ಹಾಡುಗಳನ್ನು ಗಂಡಸರ ಹಾಡು, ಹೆಂಗಸರ ಹಾಡು, ಎಂದು ಎರಡು ಬಗೆಯಾಗಿ ವಿಂಗಡಿಸಬಹುದು. ಬಂಡಿಯ ಪದ, ಕೋಲಾಟದ ಪದ, ಮಾರಿಯ ಪದ, ಜೋಮನ ಪದ, ಮೊದಲಾದವು ಗಂಡಸರು ಹೇಳುವ ಹಾಡುಗಳು. ರಾಗಿಕಲ್ಲು ಪದ, ಸುವ್ವಿಯ ಪದ, ಹಜ್ಜೆಯ ಪದ, ಒಸಗೆಯ ಪದ, ಸೋಬಾನೆಯ ಪದ, ತಿಂಗಳು ಮಾವನ ಪದ, ಮುಂತಾದವು ಹೆಂಗಸರು ಹೇಳುವವು. ಇವುಗಳಲ್ಲೆಲ್ಲ ರಾಗಿಕಲ್ಲು ಪದ ಮತ್ತು ಕೋಲಾಟದ ಪದಗಳು ಬಹು ಮುಖ್ಯ.

ಈ ಹಾಡುಗಳನ್ನು ಕಟ್ಟಿದವರು ಯಾರೋ, ಇವು ಯಾವ ಕಾಲದವೋ ಒಂದೂ ಗೊತ್ತಿಲ್ಲ. ಇವುಗಳ ಛಂದಸ್ಸು ಅನೇಕ ಬಗೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ರಗಳೆ, ಮೊದಲಾದ ರೂಢಿಯ ಛಂದಸ್ಸುಗಳಿವೆ. ಇವುಗಳ ಜೊತೆಗೆ ಸಾಮಾನ್ಯವಾಗಿ ಪರಿಚಯವಿಲ್ಲದ ಅನೇಕರೀತಿಯ ಕಟ್ಟಡದ ಹಾಡುಗಳೂ ಇವೆ. ಒಟ್ಟಿನಲ್ಲಿ ತ್ರಿಪದಿಗಳೇ ಹೆಚ್ಚು.

ನಮ್ಮೂರು ಹಳೆಯ ಬೀಡಿನ ಹತ್ತಿರದ ಒಂದು ಹಳ್ಳಿ. ನಮ್ಮ ಒಂದು ಹಳ್ಳಿಯ ಹಾಡುಗಳನ್ನು ಮಾತ್ರ ಆಯ್ದು ಇಲ್ಲಿ ಸೇರಿಸಿದೆ. (ಬೇರೆ ಕಡೆ ಸಂಗ್ರಹಿಸಿದ್ದು ಒಂದೋ ಎರಡೋ ಇದ್ದೀತು). ಒಂದೇ ಹಳ್ಳಿಯಲ್ಲಿ ಆಯ್ದವಾದರೂ ಇವೆಲ್ಲ ಹಳೆಯ ಬೀಡು, ಬೇಲೂರು, ಹಾಸನ, ಮೊದಲಾದ ಸುತ್ತಮುತ್ತಲಿನ ಪ್ರದೇಶಗಳಲ್ಲೆಲ್ಲ ಹರಡಿವೆ. ಹೊರಗೂ ವ್ಯಾಪಿಸಿರಬಹುದು. ಕೆಲವಾದರೂ ಕನ್ನಡ ನಾಡಿನಲ್ಲೆಲ್ಲ ಪ್ರಚಾರದಲ್ಲಿದ್ದಾವು.

ಜಯಕರ್ನಾಟಕ, ಸರಸ್ವತಿ, ಪ್ರಬುದ್ಧ ಕರ್ಣಾಟಕ, ವಿಚಾರವಾಹಿನಿ ಮೊದಲಾದ ಪತ್ರಿಕೆಗಳವರು ಆಗಾಗ ಈ ಹಾಡುಗಳಲ್ಲಿ ಕೆಲ ಕೆಲವನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಇವುಗಳನ್ನು ಸಂಗ್ರಹಿಸುವ ಉತ್ಸಾಹವನ್ನು ಹೆಚ್ಚಿಸಿದ್ದಾರೆ. ಹಿರಿಯರಾದ ರಾಜಸೇವಾಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಈ ಪ್ರಯತ್ನವನ್ನು ಮೆಚ್ಚಿ ಮೊದಲಿನಿಂದಲೂ ಹುರಿದುಂಬಿಸಿ ಹರಸಿದ್ದಾರೆ. ಸಂಗ್ರಹಿಸಿ ತಂದ ಬಳಿಕ ಈ ಪದಗಳನ್ನೆಲ್ಲ ಹಾಡಿಸಿ ಕೇಳಿದ್ದಲ್ಲದೆ ಸಾಹಿತಿಗಳ ಗೋಷ್ಠಿಯನ್ನು ಸೇರಿಸಿ ಅಲ್ಲೂ ಹಾಡಿಸಿ ಪ್ರಚಾರಮಾಡಿದ್ದಾರೆ. ಇವುಗಳ ಪ್ರಕಟನೆಯಲ್ಲಿ ಹಲವು ಸಲಹೆ

ನೀಡಿ ಸಹಾಯ ಮಾಡಿದ್ದಾರೆ. ತಮ್ಮ ನಡೆ ನುಡಿಗಳಲ್ಲೆಲ್ಲ ಕನ್ನಡದ ಕಟ್ಟೊಲವನ್ನು ಸೂಸುತ್ತಿದ್ದ ಚಿರಸ್ಮರಣೀಯರಾದ ರಾಜಸೇವಾಸಕ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರು ಕನ್ನಡಸಾಹಿತ್ಯದ ಸಹಜ ಸೌಂದರ್ಯಕ್ಕೆ ನಮ್ಮ ಕಣ್ಣು ತೆರಸಿದರು; ಹೊಸ ದೃಷ್ಟಿಯನ್ನು ಕೊಟ್ಟರು. ಒಂದು ರೀತಿಯಲ್ಲಿ ನೋಡಿದರೆ ನಾವು ಈ ಪದಗಳನ್ನು ಸಂಗ್ರಹಿಸಿ ಬೆಳಕಿಗೆ ತರುವ ಸಾಹಸಕ್ಕೆ ಕೈಹಾಕಿದ್ದಕ್ಕೆ ಅವರ ಪಾಠ ಪ್ರವಚನಗಳಿಂದ ದೊರೆತ ಪ್ರೇರಣೆಯೆ ಕಾರಣವೆನ್ನಬಹುದು. ಅಚ್ಚಿಗೆ ಸಿದ್ಧಪಡಿಸಿದ ಈ ಪದಗಳನ್ನೂ ಅವುಗಳ ವಿಷಯವಾಗಿ ನಾನು ಬರೆದಿರುವ ಪರಿಚಯ ಟಿಪ್ಪಣಿಗಳನ್ನೂ ಮೊದಲಿನಿಂದ ಕೊನೆಯವರೆಗೂ ಅವರು ಓದಿ ನೋಡಿ ಪರಿಷ್ಕರಿಸಿ ಕೊಟ್ಟರು; ತಮಗೆ ಗುರುದಕ್ಷಿಣೆ ಸಂದಿತೆಂದು ಸಂತೋಷಪಟ್ಟರು. ಅವರು ಮೆಚ್ಚಿ ಹರಸಿರುವ ಈ ಪುಸ್ತಕದ ಮುದ್ರಿತ ಪ್ರತಿಯನ್ನು ಅವರಿಗೆ ಅರ್ಪಿಸುವ ಭಾಗ್ಯ ನಮಗಿಲ್ಲವಾಯಿತು.

೧೯೪೦ ರಿಂದ ಒಂದೆರಡು ವರ್ಷ ಕಾಲ ನನ್ನ ತಮ್ಮ ಕೃಷ್ಣ ಮೂರ್ತಿ ಹಳೆಯ ಬೀಡಿನಲ್ಲಿ ನೆಲಸಿ ಗ್ರಾಮಸೇವೆಯ ಕೆಲಸಗಳಲ್ಲಿ ತೊಡಗಿದ್ದನು. ಆಗ ಸರ್ಕಾರದವರಿನ್ನೂ ಗ್ರಾಮಸುಧಾರಕರನ್ನು ನೇಮಿಸುವ ಏರ್ಪಾಟು ಮಾಡಿರಲಿಲ್ಲ. ಆಗ ಹಾಸನದ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎನ್.ಎಸ್. ಹಿರಿಯಣ್ಣಯ್ಯ, ಎಂ.ಎ. ಅವರು ಅವನಿಗೆ ತುಂಬ ಬೆಂಬಲಕೊಟ್ಟರು. ನಮ್ಮ ಶ್ರೀಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರ್ ಮಹಾಸ್ವಾಮಿಯರು ಬೇಲೂರು ಕಡೆ ದಯಮಾಡಿಸಿದ್ದಾಗ ಅವರಿಗೆ ಹಳ್ಳಿಯ ಹಾಡುಗಳ ವಿಷಯವಾಗಿ ಇರುವ ಅಭಿಮಾನವನ್ನರಿತು ಶ್ರೀ ಹಿರಿಯಣ್ಣಯ್ಯನವರು ನಮ್ಮ ಪ್ರಯತ್ನವನ್ನು ಮಹಾಸ್ವಾಮಿಯವರಿಗೆ ಶ್ರುತಪಡಿಸಿದ್ದಲ್ಲದೆ ಈ ಪದಗಳ ಸಂಗ್ರಹದ ಹಸ್ತ ಪ್ರತಿಯೊಂದನ್ನು ಅವರಿಗೆ ಅರ್ಪಿಸಲು ಅವಕಾಶ ಮಾಡಿಕೊಟ್ಟರು. ಮಹಾಸ್ವಾಮಿಯವರು ಕೂಡ ಹಳ್ಳಿಗರ ಸಾಹಿತ್ಯದಲ್ಲಿ ಅಭಿಮಾನವಿಟ್ಟು ಆ ಸಂಗ್ರಹವನ್ನು ಒಪ್ಪಿಸಿಕೊಂಡು, ತಮ್ಮ ಸಂತೋಷದ ಕುರುಹಾಗಿ ನೂರು ರೂಪಾಯಿ ಮೆಚ್ಚುಕೊಟ್ಟು ಪ್ರೋತ್ಸಾಹಪಡಿಸಿದ್ದಾರೆ.

ಚೆನ್ನರಾಯಪಟ್ಟಣದ ನಿವಾಸಿಗಳಾದ ಆನೆಕೆರೆ ಶಾನುಭೋಗರು ನಾರಸೀ ದೇವರಯ್ಯನವರ ಮಕ್ಕಳು ಶ್ರೀ ಕೃಷ್ಣಮೂರ್ತಿಗಳು ಹಣ

ಒದಗಿಸಿ ಈ ಮುದ್ರಣ ಪ್ರಯತ್ನಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಮೋದಿ ಪ್ರೆಸ್ಸಿನ ಅಧಿಕಾರಿಗಳು ಆಸಕ್ತಿವಹಿಸಿ ಆದಷ್ಟುಅಂದವಾಗಿ ಅಚ್ಚುಮಾಡಿಕೊಟ್ಟಿದ್ದಾರೆ. ಕೆಲವರು ಮಿತ್ರರು ಮುದ್ರಣ ವಿಷಯದಲ್ಲಿ ಸೂಕ್ತಸಲಹೆ ಕೊಟ್ಟು ನೆರವಾಗಿದ್ದಾರೆ.

ಹೀಗೆ ಹಲವು ಬಗೆಯಲ್ಲಿ ನೆರವಾದ ಈ ಗುರುಹಿರಿಯರಿಗೂ ಮಾನ್ಯ ಮಿತ್ರರಿಗೂ ಅನಂತ ವಂದನೆಗಳು.

ಬೆಂಗಳೂರು
೫-೧-೧೯೪೭

ಎಲ್. ಗುಂಡಪ್ಪ

# ಒಳಪಿಡಿ


| | | |
|---|---|---|
| | ಅರ್ಪಣೆ ... | iii |
| | Foreword by Rajasevasakta B. M. Srikantia, M.A., B.L. ... | iv |
| | ಮುನ್ನುಡಿ: ರಾಜಸೇವಾಸಕ್ತ ಶ್ರೀ ಬಿ. ಎಂ. ಶ್ರೀಕಂಠಯ್ಯನವರಿಂದ ... | v |
| | ಬಿನ್ನಹ ... ... | vii |
| | **ತೆನೆ ೧ ಕೋಲಾಟದ ಪದಗಳು ೧-೪೬** | |
| | ಪರಿಚಯ ... ... | ೩ |
| ೧ | ಬೆನವಣ್ಣ ... ... | ೭ |
| ೨ | ಜಗಜಗದ ಒಡೆಯನೆ ... ... | ೮ |
| ೩ | ಬೇಲೂರು ಚನ್ನಯ್ಯನ ತೇರು ... ... | ೧೦ |
| ೪ | ಮಲ್ಲಯ್ಯ ... ... | ೧೨ |
| ೫ | ಬಿಳಿಗಿರಿ ರಂಗಸ್ವಾಮಿ ... ... | ೧೪ |
| ೬ | ಚನ್ನಯ್ಯ ಸೂಳೆಯ ಮನೆಗೆ ಹೊದದ್ದು ... | ೧೬ |
| ೭ | ಗಂಧದ ನೆರಿಗ್ಯೋಳೆ ... ... | ೧೭ |
| ೮ | ಕುಣಿಗಲು ಕೆರೆ .. ... | ೧೮ |
| ೯ | ಗೀಜಗನ ಗೂಡು ... ... | ೧೯ |
| ೧೦ | ವಿಧಿ ... ... | ೨೦ |
| ೧೧ | ಕರಿಯವ್ವ ... ... | ೨೦ |
| ೧೨ | ಲಕ್ಕವ್ವ ... ... | ೨೨ |
| ೧೩ | ಕಾಳಗದ ಪದ ... ... | ೨೩ |
| ೧೪ | ಸುಲ್ತಾನನ ದೌಲತ್ತು ಹೋದದ್ದು ... ... | ೨೫ |
| ೧೫ | ಜವರಾಯ ... ... | ೨೬ |
| ೧೬ | ಕಾರಣ ... ... | ೨೭ |
| ೧೭ | ಭಾವನಾದಿನಿಯರ ಸರಸ ... ... | ೨೮ |
| ೧೮ | ಚಿಂತಾಮಣಿ ರಾಜಕುಮಾರ ... ... | ೨೯ |
| ೧೯ | ಚೆಲುವಯ್ಯ ಚೆಲುವೋ ... ... | ೩೦ |
| ೨೦ | ಬರಹೇಳಕ್ಕಯ್ಯ ... ... | ೩೩ |
| ೨೧ | ಎಳ್ಳೂರು ಬಣಜಿಗ ... ... | ೩೩ |
| ೨೨ | ಮಾವನ ಮಗಳೆ ... ... | ೩೪ |

೨೩ ಕುಂಜರದ ಬೊಂಬೆ ಕೇಳೆ ... ... ೩೫
೨೪ ಕೆಂಗಪ್ಪ ... ... ೩೬
೨೫ ಹಸೇನ್ಸು ಸೇನ ... ... ೩೯
೨೬ ಸೋಬಾನದಿಂದ ಸುಖದಿಂದ ... ... ೪೧
೨೭ ಎತ್ತಲ್ ಕಾದೊ ಬುತ್ತಲ್ ಉಂಡೊ ... ... ೪೧
೨೮ ಚಿತ್ತಾರದ ಗೊಂಬೆ ... ... ೪೨
೨೯ ಕೆದರದಿರು ಕೇದಿಗೆ ... ... ೪೩
೩೦ ಹುಬ್ಬಳ್ಳಿಂದ ತರಿಸಿಕೊಡುವೆ ... ... ೪೩
೩೧ ಪಗಡೆಯ ಜೂಜು ... ... ೪೪
೩೨ ಕೃಷ್ಣರಾಯ ... ... ೪೫
೩೩ ಕೊನೆಯ ಪದ ... ... ೪೬

ತೆನೆ ೨ ತಿಂಗಳು ಮಾವನ ಪದಗಳು ೪೭-೫೬

ಪರಿಚಯ ... ... ೪೯
೧ ತಿಂಗಳು ಮಾವನ ಪದಗಳು ... ... ೫೧
೨ ಹೆಣ್ಣು ಕೇಳುವುದು ... ... ೫೪
೩ ಚೆಂಡಾಟ ... ... ೫೫
೪ ಸುತ್ತುತಿರುಗುವ ಆಟ ... ... ೫೫
೫ ವಿನೋದದ ಮಾತು ... ... ೫೬

ತೆನೆ ೩ ರಾಗಿ ಕಲ್ಲಿನ ಪದಗಳು ೫೭-೮೦

ಪರಿಚಯ ... ... ೫೯
೧ ರಾಗಿ ಕಲ್ಲಿನ ಮಹತ್ತ್ವ ... ... ೬೧
೨ ಪ್ರಾರ್ಥನೆ ... ... ೬೨
೩ ಅಕ್ಕ-ತಂಗಿ-ಅಣ್ಣ-ತಮ್ಮ ... ... ೬೫
೪ ತವರುಮನೆಯ ಹಂಬಲು ... ... ೬೮
೫ ತವರು ಮನೆಯ ಉಡುಗೊರೆ ... ... ೬೮
೬ ಅಗಲಿಕೆಯ ದುಃಖ ... ... ೬೯
೭ ತಾಯಿಲ್ಲದ ತವರು ... ... ೭೦
೮ ಅಣ್ಣನ ಮನೆಗೆ ಹೆಣ್ಣಿಗೆ ಹೋದದ್ದು ... ... ೭೧
೯ ಹೆಣ್ಣು ಹೇಗಿರಬೇಕು ... ... ೭೪
೧೦ ಅಕ್ಕನ ಮನೆಯಲ್ಲಿ ತಂಗಿ ... ... ೭೫
೧೧ ಕಾವಲಿಯ ಹಾಡು ... ... ೭೭

ತೆನೆ ೧

## ಕೋಲಾಟದ ಪದಗಳು



# ಪರಿಚಯ

ಹಳ್ಳಿಯ ಒಕ್ಕಲಿಗನಿಗೆ ಮಳೆಗಾಲದಲ್ಲಿ ತುಂಬ ಕೆಲಸ. ಸರಿಯಾದ ಹದ ನೋಡಿ ಉತ್ತು ಗೊಬ್ಬರ ಹಾಕಿ ನೆಲ ಹಸನುಮಾಡಬೇಕು. ತಕ್ಕ ಬೆರಗಿನಲ್ಲಿ ಬೀಜ ಬಿತ್ತಿ ಸಸಿ ನಟ್ಟು ಒಳ್ಳೆಯ ಬೆಳೆ ತೆಗೆಯಲು ಹಗಲಿರುಳೂ ದುಡಿಯಬೇಕು. ಆಗ ಅವನೇನಾದರೂ ಸೋಮಾರಿಯಾದರೆ ಅಥವಾ ಅಸಡ್ಡೆ ತೋರಿಸಿದರೆ ಮುಂದೆ ವರ್ಷವೆಲ್ಲ ಗೋಳಾಡಬೇಕು. ಆದ್ದರಿಂದ ಬೆಳೆ ಕೈಗೆ ಬರುವವರೆಗೂ ಅವನಿಗೆ ಒಂದು ಗಳಿಗೆಯೂ ಬಿಡುವಿಲ್ಲ. ಎಡೆಬಿಡದೆ ಕೆಲಸದಲ್ಲಿ ತೊಡಗಿರುತ್ತಾನೆ.

ಪಯಿರೆಲ್ಲ ಬಲಿತು ಹೊಲ ಕುಯ್ದು ಮೆದೆ ಒಟ್ಟಿದಮೇಲೆ ಅವನಿಗೆ ಕೈ ಬಿಡುವಾಗುತ್ತದೆ. ಆಗಿನಿಂದ ಅವನು ಸುಖ ಸಂತೋಷಗಳ ಕಡೆಗೆ ಸ್ವಲ್ಪ ಸ್ವಲ್ಪವಾಗಿ ಮನಸ್ಸು ಕೊಡುತ್ತಾನೆ. ಸುಗ್ಗಿಯಲ್ಲಿ ಕಾಳೊಕ್ಕಿ ಕಣದಲ್ಲಿ ರಾಶಿ ಹಾಕಿದಾಗ, ಮನೆಗೆ ದವಸ ತಂದು ತುಂಬಿಕೊಂಡಾಗ, ಅವನ ಆನಂದ ಉಕ್ಕಿ ಹರಿಯುತ್ತದೆ. ಆ ಕಾಲದಲ್ಲಿ ಎಲ್ಲೆಲ್ಲಿಯೂ ಕೋಲಾಟದ ಸಡಗರ, ಪದಗಳ ಸುಗ್ಗಿ. ಸುಗ್ಗಿಯನ್ನು ಬಿಟ್ಟು ಉಳಿದ ಕಾಲಗಳಲ್ಲಿ ಕೋಲಾಟ ಆಡುವುದಿಲ್ಲವೆಂದಲ್ಲ; ಆಡುತ್ತಾರೆ. ಆದರೆ ಆಗೊಂದು ಸಲ, ಈಗೊಂದು ಸಲ ಮಾತ್ರ.

ಸಾಮಾನ್ಯವಾಗಿ ಬೆಳುದಿಂಗಳ ರಾತ್ರಿಗಳಲ್ಲಿ ಊಟವಾದ ಮೇಲೆ ಪ್ರಾಯದ ಹುಡುಗರು ಗುಡಿಯ ಮುಂದೆ ಸೇರಿ ಕೋಲಾಟ ಆಡುತ್ತಾರೆ. ಕೆಲವು ವೇಳೆ ಉತ್ಸಾಹಭರಿತರಾದ ಮಧ್ಯ ವಯಸ್ಸಿನವರೂ ಅವರ ಜೊತೆ ಸೇರಿಕೊಳ್ಳುತ್ತಾರೆ. ಹೆಂಗಸರು ಮಕ್ಕಳೂ ಹಿರಿಯ ಮುದುಕರೂ ಬಂದು ಕೇಳಿ ಆನಂದಿಸುತ್ತಾರೆ.

ಕೋಲು ಹುಯ್ಯುವುದಕ್ಕೆ ಹೆಚ್ಚಿನ ಸಿದ್ಧತೆಯೇನೂ ಬೇಕಿಲ್ಲ. ಯಾವಾಗಿನ ಹಾಗೆಯೆ ದಟ್ಟಿಸುತ್ತಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ಕೋಲುಹಿಡಿದು ನಿಂತರಾಯಿತು. ಮತ್ತೇನೂ ಅಗತ್ಯವಿಲ್ಲ. ಅಂಗಿ

ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ತಲೆಗೆ ಬಟ್ಟೆ ಸುತ್ತಿದರೆ ಸುತ್ತಿದರು, ಇಲ್ಲದಿದ್ದರೆ ಇಲ್ಲ. ಕೋಲು ಮೂರು ಬೆರಳು ದಪ್ಪವಾಗಿ ಸುಮಾರು ಒಂದು ಮೊಳ ಉದ್ದವಾಗಿ ಬಹು ಬಲವಾಗಿರುತ್ತದೆ. ಚೆನ್ನಾಗಿ ಬಲಿತ ಜೇಗಿನ ಮರ; ಒಂದಕ್ಕೊಂದು ತಟ್ಟಿದರೆ ಖಣಿಖಣಿಗುಟ್ಟುವಂತಿರು ತ್ತದೆ. ಕೋಲಿಗೂ ಒಂದೆರಡು ಗೆಜ್ಜೆ ಕಟ್ಟಿರುವುದುಂಟು.

ಕೋಲಾಟಕ್ಕೆ ಕನಿಷ್ಠ ಪಕ್ಷ ಆರು ಜನ ಬೇಕು. ಆರು, ಎಂಟು, ಹತ್ತು, ಹನ್ನೆರಡು—ಹೀಗೆ ಸಮಸಂಖ್ಯೆಯಲ್ಲೆ ಆಟಗಾರರು ಸೇರ ಬೇಕು. ನಿಲ್ಲುವ ರೀತಿ ಅನೇಕ ಬಗೆ. ಕೋಲು ಹುಯ್ಯುವ 'ವರಸೆ'ಯೂ ಹಲವು ತೆರ. ಆರರಿಂದ ಮೊದಲುಗೊಂಡು ಸಮಸಂಖ್ಯೆಯಲ್ಲಿ ಜನ ಸೇರಿ ಒಂದೊಂದು ಕೈಯಲ್ಲೂ ಒಂದೊಂದು ಕೋಲುಹಿಡಿದು ಬಗೆ ಬಗೆಯ ವ್ಯೂಹಗಳನ್ನು ರಚಿಸುತ್ತ ಕೋಲಿನ ತಾಳಕ್ಕೆ ಸರಿಯಾಗಿ ಗತ್ತಿನ ಮೇಲೆ ಹೆಜ್ಜೆ ಹಾಕುತ್ತ ಪದ ಹೇಳುತ್ತಾರೆ. ಈ ಆಟಗಾರರಿಗೆ ಒಬ್ಬ ಮುಂದಾಳು ಇರುತ್ತಾನೆ. ಪ್ರತಿಯೊಂದು ನುಡಿಯನ್ನೂ ಸಾಮಾನ್ಯ ವಾಗಿ ಈ ಮುಂದಾಳೆ ನುಡಿಯುತ್ತ ಪದವನ್ನು ಮುಂದುವರಿಸುತ್ತಾನೆ. ಉಳಿದವರೆಲ್ಲರೂ ಪಲ್ಲವಿಯನ್ನು ಒಟ್ಟಾಗಿ, ಒಕ್ಕೊರಲಿನಿಂದ ಹಾಡು ತ್ತಾರೆ. ಪದ ಕಲಿಯುವಾಗ, ಮತ್ತು ಆಗೊಮ್ಮೆ ಈಗೊಮ್ಮೆ, ಮುಂದಾಳು ಹಾಡಿದ ಮೇಲೆ ಆ ಒಂದೊಂದು ನುಡಿಯನ್ನೂ (ಹೇಳಿಸಿಕೊಂಡು ಹೇಳುವ ಹಾಗೆ) ಎಲ್ಲರೂ ಹಾಡುತ್ತಾರೆ. ಪದ ಕೇಳಲು ಇಂಪಾಗಿ ರುತ್ತದೆ. ಹಾಗೆಯೆ ಅವರ ಚಲನೆ ನೋಟಕ್ಕೆ ಅಂದವಾಗಿರುತ್ತದೆ.

ತಿಳಿಬೆಳುದಿಂಗಳು, ಕೋಲಿನ ಕಾಲಿನ ಗೆಜ್ಜೆಯ ಸದ್ದು, ಪದಗಳ ನಾದ, ಕಥೆ ವರ್ಣನೆಗಳ ಸೊಗಸು, ಬಗೆಬಗೆಯ ಗತಿಯ ಬೆಡಗು, ಆಡುವವರ ಮತ್ತು ನೋಡುವವರ ಉತ್ಸಾಹ—ಎಲ್ಲ ಸೇರಿ ಹೃದಯ ಹಿಗ್ಗುತ್ತದೆ; ಕಷ್ಟ ಕಾರ್ಪಣ್ಯಗಳೆಲ್ಲ ಮರೆತುಹೋಗುತ್ತದೆ.

ಕೋಲಾಟವಾಡುವಾಗ ಹಾಡುವ ಕೆಲವು ಪದಗಳನ್ನು ಈ ಭಾಗ ದಲ್ಲಿ ಕೊಟ್ಟಿದೆ. ಇಲ್ಲಿನ ಚಿತ್ರಗಳೆಲ್ಲ ಸಾಮಾನ್ಯವಾಗಿ ಗಂಡು ಜೀವನಕ್ಕೆ ಸಂಬಂಧಪಟ್ಟವು. ಈ ಪದಗಳು ಪ್ರಾರ್ಥನೆ, ಕಥೆ, ವರ್ಣನೆ, ಒಲವು,

ಜೇಟ್ಟಿ, ಕಾಳಗ, ಮೊದಲಾದ ವಿಷಯಗಳನ್ನು ಕುರಿತವು; ವೀರ ನೃತ್ಯಕ್ಕೆ ತಕ್ಕಂಥವು. ಹೆಂಗಸರು ಹೇಳುವ ಪದಗಳನ್ನೂ, ಬಂಡಿಪದ ಮೊದಲಾದ ಪದಗಳನ್ನೂ ಕೋಲಾಟದ ಧಾಟಿಗೆ ಹೊಂದಿಸಿಕೊಂಡಿರುವುದೂ ಒಮ್ಮೊಮ್ಮೆ ಕಾಣಬರುತ್ತದೆ.

ಇವುಗಳ ಛಂದೋಗತಿಯಲ್ಲಿ ಬಹುಮಟ್ಟಿಗೆ ವೈವಿಧ್ಯವಿದೆ. ಆಟಗಾರರ ಬಾಯಲ್ಲಿ ನುಡಿಯುವಂತೆಯೆ ಬರೆದರೆ ಬಗೆಬಗೆಯ ಪ್ರಮಾಣದ ಹಲವಾರು ಸಾಲುಗಳಾಗುತ್ತವೆ. ಕೋಲುಹುಯ್ಯುವ ಧಾಟಿಯಿಂದಾದ ವ್ಯತ್ಯಾಸಗಳನ್ನೂ ಮತ್ತೆ ಮತ್ತೆ ಬರುವ ಪುನರುಕ್ತಿಗಳನ್ನೂ ಗಮನಕ್ಕೆ ತಂದುಕೊಳ್ಳದೆ ಕೇವಲ 'ಸಾಹಿತ್ಯ' ಮಾತ್ರವನ್ನೆ ನೋಡಿದರೆ ಬಹು ಪಾಲಿನವು ತ್ರಿಪದಿ ಅಥವಾ ತ್ರಿಪದಿಯ ರೂಪಾಂತರಗಳಾಗಿ ಕಾಣುತ್ತವೆ. 'ಜಗಜಗದ ಒಡೆಯಾನೆ', 'ಕಾಳಗದ ಪದ', 'ಚೆಲುವಯ್ಯ ಚೆಲುವೋ', 'ಭಾವ ನಾದಿನಿಯರ ಸರಸ' ಮೊದಲಾದ ಕಡೆಯಲ್ಲಿ ನಂತೆ ಬೇರೆ ಕಟ್ಟಡದವೂ ಇವೆ.

ತ್ರಿಪದಿಯ ಎರಡನೆಯ ಸಾಲನ್ನು ಮತ್ತೊಂದು ಸಲ ಹೇಳುವುದು ವಾಡಿಕೆ. ಕೋಲಿಗೂ ಅದೇ ಚೆನ್ನಾಗಿ ಹೊಂದುತ್ತದೆ. ಪ್ರತಿ ಪುನರಾವರ್ತನೆಯನ್ನೂ ಸೇರಿಸಿ ಬರೆಯುತ್ತ ಹೋದರೆ ಸಾಲುಗಳ ಸಂಖ್ಯೆ ಅತಿಯಾಗಿ ಹೆಚ್ಚಿ ಬಹಳ ಸ್ಥಳ ಬೇಕಾಗುವುದರಿಂದ ಮೂರು ಸಾಲು ಮಾತ್ರ ಬರೆದಿದೆ. ಗೀಟು ಹಾಕಿರುವ ಕಡೆ ನಿಲ್ಲಿಸಿ, ಆ ಸಾಲನ್ನು ಆವೃತ್ತಿ ಮಾಡಿಕೊಂಡು ಪಲ್ಲವಿ ಹಾಡಿ ಒಟ್ಟಿನಲ್ಲಿ ನಾಲ್ಕು ಸಾಲುಗಳಂತೆ ಹೇಳಿಕೊಳ್ಳಬೇಕು. ಇಲ್ಲಿ ಸಾಧಾರಣವಾಗಿ, ಪದದ ಮೊದಲಿನಲ್ಲಿ ಒಂದೆರಡು ನುಡಿಗಳನ್ನು ವಿಸ್ತರಿಸಿಯೇ ಬರೆದು ಮುಂದಿನ ನುಡಿಗಳನ್ನು ಕುಗ್ಗಿಸಿ ಬರೆದಿದೆ. ಮತ್ತೆ ಕೆಲವು ಕಡೆ ಆವೃತ್ತಿ ಮಾಡಿಕೊಳ್ಳುವಾಗ ಒಂದೆರಡು ಅಕ್ಷರ ಅಥವಾ ಪದಗಳನ್ನು ವ್ಯತ್ಯಾಸಮಾಡಿ, ಹೆಚ್ಚಿಗೆ ಸೇರಿಸಿಕೊಂಡು, ಹೇಳುವುದುಂಟು. ಅಂಥ ಅಕ್ಷರ, ಮತ್ತು ಪದಗಳನ್ನು, ( ) ಈ ರೀತಿಯ ಕಂಸಗಳೊಳಗೆ ಕೊಟ್ಟಿದೆ. ತೊಡಕಾಗಬಹುದೆಂದು ತೋರಿದ ಕಡೆ ಪೂರ್ತಿಯಾಗಿಯೇ ಬರೆದಿದೆ.

ಈ ಪದಗಳನ್ನು ಬಾಯಲ್ಲಿ ನುಡಿಯುವಾಗ ಎಷ್ಟೋ ವೇಳೆ ಹ್ರಸ್ವಾಕ್ಷರಗಳನ್ನು ದೀರ್ಘಾಕ್ಷರಗಳಂತೆ ಎಳೆದು ಹೇಳುತ್ತಾರೆ. ಆ ಎಳೆತವನ್ನೆಲ್ಲ ಬರೆಯುವುದು ಉಚಿತವಾಗಿ ಕಾಣುವುದಿಲ್ಲ. ಕೆಲವು ಕಡೆ ಅದರಿಂದ ಅರ್ಥಕ್ಕೂ ತೊಡಕಾದೀತು. ಅಲ್ಲದೆ ಹಾಗೆ ಎಳೆಯುವುದು ಇಂಥಿಂಥ ಕಡೆಯೆಂಬುದೂ ನಿರ್ದಿಷ್ಟವಾಗಿಲ್ಲ. ಒಬ್ಬೊಬ್ಬರ ಬಾಯಲ್ಲಿ ಒಂದೊಂದು ರೀತಿ ಬರುತ್ತದೆ. ಹಾಡುಗಬ್ಬಗಳಲ್ಲಿ ಬಳಸಿರುವ ಅಚ್ಚಗನ್ನಡದ ಅಕ್ಷರಗಣದ ಛಂದಸ್ಸುಗಳ ಪರಿಚಯವಿರುವವರಿಗೆ ಸಂದರ್ಭಕ್ಕೆ ತಕ್ಕಂತೆ ಹೊಂದಿಸಿಕೊಂಡು ಹೇಳಲು ಕಷ್ಟವಾಗುವುದಿಲ್ಲ. ಹ್ರಸ್ವಾಕ್ಷರ ದೀರ್ಘವಾಗಿ ಉಚ್ಚಾರವಾಗುವುದನ್ನು ಕೆಲವು ಕಡೆ ತೋರಿಸಿದೆ. ಅಂಥ ಕಡೆ ಎಳೆದು ಹೇಳಬೇಕಾದ ಅಕ್ಷರದ ಮುಂದೆ ಽ ಎಂಬ ಚಿಹ್ನೆಯನ್ನು ಉಪಯೋಗಿಸಿದೆ. ಉದಾಹರಣೆಗೆ—

ಮದಾಲು ನೆನೆದೆವೆ ಸ್ವಾಆಮಿ ಲಿಂಗನಾ
ಸನುಮತ ಶಿವಗಂಗೆ ಬೆನಾವನಾ

ಎಂದು ಎಳೆದೆಳೆದು ಹೇಳುವುದನ್ನು

ಮದಽಲು ನೆನೆದೆವೆ ಸ್ವಾಽಮಿ ಲಿಂಗನಽ
ಸನುಮತ ಶಿವಗಂಗೆ ಬೆನಽವನಽ

ಎಂದು 'ಽ' ಚಿಹ್ನೆ ಸೇರಿಸಿ ಬರೆದಿದೆ.

ಕೋಲಾಟದ ಪದಗಳಲ್ಲದೆ ಉಳಿದ ಪದಗಳನ್ನು ಬರೆಯುವಾಗಲೂ ಸಾಮಾನ್ಯವಾಗಿ ಈ ನಿಯಮಗಳನ್ನೇ ಅನುಸರಿಸಿದೆ. ವಿಶೇಷ ವಿಷಯಗಳನ್ನು ಟಿಪ್ಪಣಿಯಲ್ಲಿ ವಿವರಿಸಿದೆ.

# ಕೋಲಾಟದ ಪದಗಳು

## ಚೆನವಣ್ಣ

ಮದಲು ನೆನೆದವೆ ಸ್ವಾಮಿ ಲಿಂಗನ
ಸನುಮತ ಶಿವಗಂಗೆ ಚೆನವನ ||ಪಲ್ಲ||

ಶಿವಗಂಗೆ ಚೆನವನ ಸುಟಿಗೇ ಕಾಳಿಂಗನ
ದಂಡೆಯ ನಾಯ್ಕೊಂದಿಸಿಯುಂಕ—ಮದಲು
ದಂಡೆಯ ನಾಯ್ಕೊಂದಿಸಿಯುಂಕ ಗೌರಿಯು
ಮುದ್ದು ಕುಮಾರ ಕೊಡು ಮತಿಯು—ಮದಲು ೧

ಕಿತ್ ಹುಲಿ(ಸೇ) ಕೆರೆ ಒತ್ತೀಲೆ ಇರುವೋನೆ
ಮುತ್ತೈದೆ ಮಗನೇ ಚೆನವಣ್ಣ—ಮದಲು
ಮುತ್ತೈದೆ ಮಗನೇ ಚೆನವಣ್ ಬೆಳ್ಳೀದೇವ
ಚಿತ್ತೈಸಿ ಪದನ ಬರಕೊಡೊ—ಮದಲು ೨

ಹಾರೂನ ಹಳ್ಳಿಯ ಓರೇಲಿ ಇರುವೋನೆ
ಸಾರಿಯ ಮಗನೇ ಚೆನವಣ್ಣ | ಬೆಳ್ಳೀದೇವ
ಭಾರಾದ ಪದನ ಬರಕೊಡೋ—ಮದಲು ೩

ಜಾಣಾವರದ ಬಾಗಿಲಲ್ಲಿರುವೋನೆ
ಬಾಲೆಯ ಮಗನೇ ಚೆನವಣ್ಣ | ಬೆಳ್ಳೀದೇವ
ಮೇಲಾದ ಪದನ ಬರಕೊಡೊ—ಮದಲು ೪

ಹೆಬ್ಬಾಕಲಲ್ಲಿರುವ್ರೊ ಕಬ್ಬಲ್ಲ ಬೆನವಗೆ
ಕಬ್ಬಿನ ಜಲ್ಲೆ ನೆನಗಡಲೆ। ಸಲಿಸುವೆ
ಕಬ್ಬಲ್ಲ ಬೆನವ ಕೊಡುಮತಿಯ—ಮುದsಲು ೫

ಎಳ್ಳು ಹೊಲದಾಗಿರುವ್ರೊ ದೊಳ್‌ಹೊಟ್ಟೆ ಬೆನವಣ್ಣ
ಎಳ್ಳಿಲಿ ತುಪ್ಪ ತಿಳಿದುಪ್ಪ। ಸಲಿಸುವೆ
ದೊಳ್‌ಹೊಟ್ಟೆ ಬೆನವ ಕೊಡು ಮತಿಯ—ಮುದsಲು ೬

## ಜಗ ಜಗದ ಒಡೆಯನೆ

ತಂದನೋ॰ ತಾನಾನು, ತಂದನೋ॰ ತಾನಾನು,
ತನು ತಂದೆ ನಾನಾನು, ತಂದನೋ॰ತ್ತಾನೋ॰–
ತ್ತಾನು ತಂದನಿ ತಂದೆ ನಾನೊ ಶ್ಯರಣೋ॰ ||ಪಲ್ಲ||

ಜಗಜಗದ ಒಡೆಯsನೆ ಜಗದ ಪುಟ್ಟಳಿಯsನೆ
ಅರಮನೇ॰ ಒಳಗೊಬ್ಬ ದೊರೆಮಗ ಕುಂತವ್ನೆ
ಅಚ್ಚಕಂಬೀ॰ ಹಚ್ಚಡವ ತಲೆಗವ ಸುತ್ತ್ಯವ್ನೆ
ನಲವತ್ತು ಹೊನ್ನಿನ ನಾಮುವsನಿಟ್ಟವ್ನೆ
ಕೇ॰ಳಿದs ನಿಂಗಣ್ಣ, ಕೊಟೆಯು ನಿಟ್ಟೊರು
ಪೇಟೆಯುನು ತೆಗೆದ್‌ಹಂಗೆ, ಕಂದನನು ಪಡೆದ್‌ಹಂಗೆ,
ತಲೆಗಳು ಬಿದ್‌ಹಂಗೆ, ಮುಂದಕೆ ಹೋ॰ದರೆ
ನಾಗಾರೆ ನುಡಿದಾತೆ; ನೌಪತ್ತು ನುಡಿದಾತೆ!
ಏಗ ತಿರುಗಿತೆ ಏಗ, ಭೋ॰ಗ ತಿರುಗಿತೆ ಭೋ॰ಗ!
ಯೋ॰ಗಿ ಚಂಚುನಕಟ್ಟೆ ಶೆಟ್ಟೆ ಮುದ್ದಪ್ಪsಗೆ ಶರಣೋ॰—
ತಂದನೋ॰ ೧

ಕಟಿಕಟೀ ಕಲ್ಲೂರು, ಬೆಡಗಿನಽ ಬೇಲೂರು,
ಮುಂದೆ ತಾವರೆಗೆಽರೆ ಹಿಂದೆ ತಾವರೆಗೆಽರೆ;
ಕಲ್ಲೇಶ ಲಿಂಗಗೆ, ಮಲ್ಲೇಶ ಲಿಂಗಗೆ,
ಒಡೆಯ ನಮ್ಮಪ್ಪಗೆ ಒಡೆದ ತೆಂಗಿನ ಕಾಯಿ
ಓಟೆಯನು ಎಬ್ಬುವರೆ, ಅಂದ ಚಂದಕೆ ಮೂರು
ಪಟ್ಟೆಯನು ಧರಿಸುವರೆ, ಪಟ್ಟದ ಕುಲಸ್ವಾಮಿ
ಪಾದಕೆ ಬಿದ್‌ಹಂಗೆ, ಅರ್ತರಿಗೆ ಅರಿತ್‌ಹಂಗೆ,
ಮರ್ತರಿಗೆ ಮರತ್‌ಹಂಗೆ, ಸತಿಕೊಡೋ ಸಾದೇವ,
ಮತಿ ಕೊಡೋ ಮಾದೇವ, ಇದ್ಯಽವ ಕಲಿಸಯ್ಯ
ಇನಿಯಂಕ ಸುಳೇಗೇರಿ ಸಿದ್ಧಿ ಗಣನಾಥಗೆ ಶರಣೋ—
ತಂದನೋ.... ೧

ಕಬ್ಬು ಹುಟ್ಟುವುದಣ್ಣ ಕರಿಯ ಭೂಮಿದ್ದಲ್ಲಿ.
ಉಬ್ಬೆ ಹರಿಯುವುದಣ್ಣ ಜಲಕರಡೆಯಿದ್ದಲ್ಲಿ.
ಕದನ ಹುಟ್ಟುವುದಣ್ಣ ಕಾಟಕರಿದ್ದಲ್ಲಿ.
ನ್ಯಾಯ ಹರಿಯುವುದಣ್ಣ ಗುರುಹಿರಿಯರಿದ್ದಲ್ಲಿ,
ಮಲ್ಲಿಕಾರ್ಜುನ ನಿನ್ನ ಪಾದವಿದ್ದಲ್ಲಿ ಶರಣೋ—
ತಂದನೋ ೨

## ಬೇಲೂರು ಚನ್ನಯ್ಯನ ತೇರು

ಕೋಲು ರನ್ನದ ಕೋಲಽನ್ನಾ
ಏ ಕೋಲು ಕೋಽಲು ಕೋಲಽನ್ನಾ ||ಪಲ್ಲ||

ಬೇಲೂರು ಎಂಬೋದು ಏಳು ಸುತ್ತಿನ ಕೋಟೆ
ಮೇಲೆ ಡೊಂಕಽಣಿ ಹುಽಲಿ ಮುಖ—ಕೋಲು
ಮೇಲೆ ಡೊಂಕಽಣಿ ಹುಲಿಮುಖ ಚನ್ನಯ್ನ
ಹೆಂಡರಿರುವ್ವೋದೊಂದಽರ ಮಽನೆ—ಕೋಲು ೧

ಭಸುಮವ ಹುಯಿಕೊಂಡು ಬಸವನ ಏರಿಕೊಂಡು
ಅರಸೀರಿಬ್ಬರ ಸ್ವಾಮ್ಯೊಡಗೊಂಡು—ಕೋಲು
ಅರಸೀರಿಬ್ಬರ ಸ್ವಾಮ್ಯೊಡಗೊಂಡು ಚನ್ನಯ್ಯ
ದಸರೇದೋಕುಳಿಗೆಂದ್ ಹೊಽರಟಽನೆ—ಕೋಲು ೨

ಗಂಧವ ಹುಯಿಕೊಂಡು ನಂದೀನ ಏರಿಕೊಂಡು
ಹೆಂಡರಿಬ್ಬರ ಸ್ವಾಮ್ಯೊಡಗೊಂಡು—ಕೋಲು
ಹೆಂಡರಿಬ್ಬರ ಸ್ವಾಮ್ಯೊಡಗೊಂಡು ಚನ್ನಯ್ಯ
ಗಂಧದೋಕುಳಿಗೆಂದ್ ಹೊರಟನೆ—ಕೋಲು ೩

ಬೇಲೂರು ಚನ್ನಯ್ನ ತೇರೆಂಟು ದಿನದಾಗೆ
ಬೀರೂರಿಗ್ ವಾಲೆ ಬಽರದಾರೆ—ಕೋಲು
ಬೀರೂರಿಗ್ ವಾಲೆ ಏನಂತ ಬರದರು
ದೂರಲ ಪರುಸೆ ಬಽರಲೆಂದು—ಕೋಲು ೪

ಬೇಲೂರು ಚನ್ಯಯ್ನ ತೇರೆಂಟು ದಿನದಾಗೆ
ಕಿಕ್ಕೇರಿಗ್ ವಾಲೆ ಬಽರದಾರೆ—ಕೋಲು
ಕಿಕ್ಕೇರಿಗ್ ವಾಲೆ ಏನಂತ ಬರದರು
ಹತ್ತಿರಲ ಪರುಸೆ ಬಽರಲೆಂದು—ಕೋಲು ೫

ಬೇಲೂರು ಚನ್ನಯ್ನ ತೇರೆಂಟು ದಿನದಾಗೆ
ದೇವ್ರ್ಗ ಂದಕ್ ವಾಲೆ ಬಽರದಾರೆ—ಕೋಲು
ದೇವ್ರ್ಗ ಂದಕ್ ವಾಲೆ ಏನಂತ ಬರದರು
ಮುತ್ತಿನ್ ಪಾಲಽಕಿ ಬಽರಲೆಂದು—ಕೋಲು ೬

ಬಿದುರೂರಿಗ್ ಹೋಗ್ವಾಗ ಉದುರಾವೆ ಮಲ್ಲಿಗೆ
ಬಿದುರೂರಿಗ್ ಹೋಗಿ ಬಽರುವ್ರೋನೇ—ಕೋಲು
ಬಿದುರೂರಿಗ್ ಹೋಗಿ ಬರುವ್ರೋ ಚನ್ನಯ್ಯನ
ಕುದುರೆಗೆ ಧೂಳು ಗಽವಿದಽವೆ—ಕೋಲು ೭

ಕಿಕ್ಕೇರಿಗ್ ಹೋಗ್ವಾಗ ಹೊಕ್ಕಽವೆ ಮಲ್ಲಿಗೆ
ಕಿಕ್ಕೇರಿಗ್ ಹೋಗಿ ಬಽರುವ್ರೋನೆ—ಕೋಲು
ಕಿಕ್ಕೇರಿಗ್ ಹೋಗಿ ಬರುವ್ರೋ ಚನ್ನಯ್ಯನ
ಕತ್ತೀಗೆ ಧೂಳು ಗಽವಿದಽವೆ—ಕೋಲು ೮

ಎಣ್ಣೆ ವಸ್ತ್ರದೋನೆ ಎಣ್ಣೆ ರುಮಾಲುದೋನೆ
ಎಣ್ಣೆ ಹೊಳೆಗ್ ಹೊಗಿ ಬಽರುವ್ರೋನೆ—ಕೋಲು
ಎಣ್ಣೆ ಹೊಳೆಗ್ ಹೋಗಿ ಬರುವ್ರೋ ಚನ್ನಯ್ಯಗೆ
ಹಣ್ಣೆಟ್ಟು ಕೈಯ ಮುಗುದೇವೆ—ಕೋಲು ೯

ಕಾವಿ ವಸ್ತ್ರದೋನೆ ಕಾವಿ ರುಮಾಲುದೋನೆ
ಕಾವೇರಿಗ್ ಹೋಗಿ ಬಽರುವ್ರೋನೇ—ಕೋಲು
ಕಾವೇರಿಗ್ ಹೋಗಿ ಬರುವ್ರೋ ಚನ್ನಯ್ಯಗೆ
ಕಾಯಿಟ್ಟು ಕೈಯ ಮುಗುದೇವೆ—ಕೋಲು ೧೦

## ಮಲ್ಲಯ್ಯ

ತಾನು ತಾನಂದಸೋ ತಂದನಾನೋ—ತಂ
ದನಿ ತಾನಂದನೋ ತಂದನಾನೋ ||ಪಲ್ಲ||

ಸೀಗೆಯ ಗುಡ್ಡsದಾ ಸಿರಿಯ ನೋಡನ ಬನ್ನಿ
ನಡುಗುಡ್ಡದೊಳಗೆ ತಿರುಶೂಲ | ತಂ
ದನಿತಾನಂದಸೋ ತಂದನಾಸೋ—ತಾನುತಾ ೧

ಸೀಗೆಯ ಗುಡ್ಡದಾಗೆ ಸಿರಿಗಂಧದ್ ಮರನ್ ಹುಟ್ಟಿ
ಬೇಲೂರಿಗ್ ಬೇರು ಹರಿದsವೆ—ತಂದನಿ
ಬೇಲೂರಿಗೇ ಬೇರು ಹರಿದವ್ ಬಸವನ್ ಹಳ್ಳೀ
ಓರೆಗೆ ಮಗ್ಗು ಸುರುದsವೇ—ತಂದನಿ ೨

ಛತ್ರಿ ಸೂರೀಪಾನs ಒತ್ತಿಲಿ ನಂದೀಕೋಲು
ಅಪ್ಪ ಮಲ್ಲಯ್ಗೆ ಬಿಸುಲೆಂದು—ತಂದನಿ
ಅಪ್ಪನು ಮಲ್ಲಯ್ಗೆ ಬಿಸುಲೆಂದು ಶಿವರಾಯ
ಮುತ್ತು ಚೆಲ್ಲಿಸಿದ ಮುಗಿಲಿsಗೆ—ತಂದನಿ ೩

ಆರೂರಿಗೆ ಇಂಥ ಆಯ್ವಳಿ ಮಲ್ಲಯ್ಯ
ಆದs ಮಲ್ಲಿಗೆ ಒಳಸಾಲು—ತಂದನಿ
ಆದಂಥ ಮಲ್ಲಿಗೆ ಒಳಸಾಲಿನ ಬೀದೀಲಿ
ಆಯ್ವಳಿ ಮಲ್ಲಯ್ಯ ಬರುತಾನೆ—ತಂದನಿ ೪

ಹತ್ತೂರಿಗೆ ಇಂಥ ಹೆಚ್ಚಿನ ಮಲ್ಲಯ್ಯ
ಪುಟ್ಟs ಮಲ್ಲಿಗೆ ಒಳಸಾಲು—ತಂದನಿ
ಪುಟ್ಟ(ನೆ) ಮಲ್ಲಿಗೆ ಒಳಸಾಲಿನ ಬೀದೀಲಿ
ಸ್ವಾಮಿ ಮಲ್ಲಯ್ಯ ಬರುತಾನೆ—ತಂದನಿ ೫

ಎರಿsಮ್ಯಾಲ್ ನಿಂತುಕೊಂಡು ಯಾರಕರದೊ ಮಲ್ಲಯ್ಯ
ದೂರs ಹೋಗವ್ನೆ ನಿನ ಮsಗ—ತಂದನಿ
ದೂರ(ನೆ) ಹೋಗವ್ನೆ ನಿನ ಮಗ ಮಲ್ಲಯ್ಯ
ತೇರಿಗ್ ಹೊಂಬಾಳೆ ತರುವ್ರೋಕೆ—ತಂದನಿ ೬

ಮಲ್ಲಯ್ನ ಗುಡಿ ಮುಂದೆ ಸಂಭ್ರಮವೇನಿರೆ
ಉಕ್ಕಿನ ಬಾಣ ಉರಿ ಬಾಣಾ—ತಂದನಿ
ಉಕ್ಕಿನ(ನೇ) ಬಾಣ ಉರಿಬಾಣ್ಣಗಲು ಜೋತಿ
ಉಪ್ಪರಿಗೆ ಮುಂದೆ ಐಭೋಗ—ತಂದನಿ ೭

ರಾಮರ ಬಾಣsವ ಬೀದೀಲಿ ಬಿಟ್ಟಾರೆ
ಹೋಗಿ ನೋಡಣ ಬನ್ನಿ ಗೆಣೆಯsರು—ತಂದನಿ ೮

ಈವೂರು ಮಲ್ಲಯ್ಯ ಬೇಳುವೆಕಾರ ಕಾಣೆ
ಹೇಳಿ ಕಳುವಿದರೆ ಬರುವ್ರೊಲ್ಲ—ತಂದನಿ
ಹೇಳಿ ಕಳುವಿದರೆ ಬರುವ್ರೊಲ್ಲ ಮಲ್ಲಿಗೆ
ಮಾಲೆ ಕಳುವಿದರೆ ಮನಸಿಟ್ಟ—ತಂದನಿ ೯

ಯಾಲಕ್ಕಿ ಗಮ್ಮೆಂದೊ ಎಲೆಯ ಕೆಂಚಿಯೊಳಗೆ
ಮಲ್ಲಿಗೆ ಗಮ್ಮೆಂದೊ ಮುಡಿಯಾಗೆ—ತಂದನಿ
ಮಲ್ಲಿಗೆ ಗಮ್ಮೆಂದೊ ಮುಡಿಯಾಗೆ ಮಲ್ಲಯ್ನ
ಈಬೂತಿ ಗಮ್ಮೆಂದೊ ಹಣೆಯಾಗೆ—ತಂದನಿ
ಈಬೂತಿ ಗಮ್ಮೆಂದೊ ಹಣೆಯಾಗೆ ಮಲ್ಲಯ್ನ
ತೀರುತ ಗಮ್ಮೆಂದೊ ಗುಡಿಯಾಗೆ—ತಂದನಿ ೧೦

## ಬಿಳಿಗಿರಿ ರಂಗಸ್ವಾಮಿ

ತಂದನ್ನಿ ತಾನು ತಂದೆನಾನೋ—ತಾ
ನಂದನ್ನಿ ತಾನು ತಂದೆನಾನೋ ||ಪಲ್ಲವಿ||

ಏಳಯ್ಯ ಏಳು ಏಳು ಚಿನ್ನದ ಗಿರಿ
ಏಳಯ್ಯ ಸ್ವಾಮಿ ಬೆಳಗಾದೊ—ತಾ
ನಂದನ್ನಿ ತಾನು ತಂದೆನಾನೋ—ತಂದನ್ನಿ
ಏಳಯ್ಯ ಸ್ವಾಮಿ ಬೆಳಗಾದೊ ಮೂಡಲಿಂದ
ಸ್ವಾಮಿ ರಥವೇರಿ ಬರುತಾನೆ—ತಾ
ನಂದನ್ನಿ ತಾನು ತಂದೆನಾನೋ—ತಂದನ್ನಿ
ಸ್ವಾಮಿ ರಥವೇರಿ ಬರುತಾನೆ ಮೂಡಲಿಂದ
ಹಾಸಮೊಜ್ಜುರದ ಹಲಿಗೆಯ—ತಾ
ನಂದನ್ನಿ ತಾನು ತಂದೆನಾನೋ—ತಂದನ್ನಿ
ಹಾಸಮ್ಮೊಜ್ಜುರದ ಹಲಗೆಯ ತುಳಸಮ್ಮ
ಬೀಸಮ್ಮ ಬೆಳ್ಳಿ ಚವುಲಾವ—ತಾ
ನಂದನ್ನಿ ನಾನು ತಂದೆನಾನೋ—ತಂದನ್ನಿ * ೧

ಎತ್ತಲಾರದ ಶಂಖು ಭೂಮಿ ಭಾರದ ಜಾಗಟೆ
ಎತ್ತಲೋ ರಂಗ ನಿನ ಪಯಣ | ಮಲಸೀಮೆ

---

* ಇದು ಕೂಡ ತ್ರಿಪದಿಯೇ. ಪಲ್ಲವಿಯನ್ನು ಸೇರಿಸಿಕೊಂಡು ಕೋಲಾಟದವರು ವಿಸ್ತಾರಮಾಡುವ ರೀತಿಯನ್ನು ಇಲ್ಲಿ ತೋರಿಸಿದೆ. ಆವರ್ತನೆಗಳನ್ನೆಲ್ಲ ಬಿಟ್ಟು ಗೀಟು ಹಾಕಿ ಬರೆದರೆ ಮೊದಲ ೧೨ ಸಾಲುಗಳನ್ನು ಈ ಕೆಳಗೆ ತೋರಿಸಿರುವಂತೆ ಐದೇ ಸಾಲುಗಳಲ್ಲಿ ಬರೆಯಬಹುದು :

ಏಳಯ್ಯ ಏಳು ಏಳು ಚಿನ್ನದ ಗಿರಿ
ಏಳಯ್ಯ ಸ್ವಾಮಿ ಬೆಳಗಾದೊ | ಮೂಡಲಿಂದ
ಸ್ವಾಮಿ ರಥವೇರಿ ಬರುತಾನೆ | ಮೂಡಲಿಂದ
ಹಾಸಮ್ಮೊಜ್ಜುರದ ಹಲಗೆಯ | ತುಳಸಮ್ಮ
ಬೀಸಮ್ಮ ಬೆಳ್ಳೀ ಚವುಲಾವ—

ಮುಂದೆ ಎಲ್ಲಾ ಕಡೆಯೂ ಹೀಗೆ ಅಡಕಮಾಡಿ ಬರೆದಿದೆ.

ಸೋಲಿಗರ್ ಹೆಣ್ಣ ತರಬೇಕು—ತಾ
ನಂದನ್ನಿ ತಾನು ತಂದೆ ನಾನೊ—ತಂದನ್ನಿ ೨

ಮಲಸೀಮೆ ಹೆಣ್ಣಿಗೆ ಮುಂಡೇ ಸೀಗೇಕಾಯಿ
ಬೆಂಡಿನ್ ಬಾಚಣಿಗೆ ಬಲಗೈಲಿ | ಹಿಡುಕೊಂಡು
ತರದಿರೋ ರಂಗ ಬೆಡಗಿಯು—ತಾ
ನಂದನ್ನಿತಾನು ತಂದೆ ನಾನೋ—ತಂದನ್ನಿ ೩

ತಂದರೆ ತರಹೇಳು ನನಗಿಂತ ಚೆಲುವೆಯು
ಬಾಳೀ ಸುಳಿಯಂತೆ ಬಳುಕೋಳ | ತಾ
ನಂದನ್ನಿ ತಾನು ತಂದೆ ನಾನೋ—ತಂದನ್ನಿ ೪

* * *

ಬಿಳಿಗಿರಿ ಬೆಟ್ಟದ ಮೇಲೆ ಬಿಳಿ ಎಮ್ಮೆ ಕಾಯೋಳೆ
ಬೆಳ್ಳೀ ಕೋಲಿನ ಬಿಳಿಗೇರಿ | ನಿನ್ನೆಮ್ಮೆ
ಅಲ್ಲಿ ಮೇದಲ್ಲಿ ತನಿಗ್ಯಾವು | ನಿನ್ನೆಮ್ಮೆ
ಸಾಕೆಂಬೋ ಹಾಲ ಕರದಾವು—ತಾ
ನಂದನ್ನಿ ತಾನು ತಂದೆ ನಾನೋ—ತಂದನ್ನಿ ೫

ಸಾಕೆಂಬೊ ಹಾಲಿಗೆ ಸರಮುತ್ತಿನ ಕಡಗೋಲು
ವಜ್ರ ನಾಟಕದ ಗುದಿಕಣ್ಣಿ | ಹಿಡುಕೊಂಡು
ಮಾರಕ್ಕ ಮೊಸರಾ ಕಡಿ ಬಾರೆ | ಒಳಗಿರುವೊ
ಗುಜ್ಜಾರಿ ಬೆಣ್ಣೇ ತೆಗಿ ಬಾರೆ | ಒಳಗಿರುವೊ
ಮಹಲಿಂಗ ಬೆಣ್ಣೇ ನಲಿಸ್ಯಾನು—ತಾ
ನಂದನ್ನೀ ತಾನು ತಂದೆ ನಾನೋ—ತಂದನ್ನಿ ೬

ಆ ನಾಮ ಈ ನಾಮ ಮೇಲುಕೋಟೆಯ ನಾಮ
ಮೇಲಾದ ನಾಮ ಸುಳಿನಾಮ | ದಯ್ಯಗೆ
ಮೇಲಾದ ಬೆಣ್ಣೆ ಎಡೆಯಾದೊ—ತಾ
ನಂದನ್ನಿ ತಾನು ತಂದೆ ನಾನೊ—ತಂದನ್ನಿ ೭

## ಚನ್ನಯ್ಯ ಸೂಳಿಯ ಮನೆಗೆ ಹೋದದ್ದು

ನೀಲಗುದುರೇ ಮೇಲೆ ಮೆರವಳಿಗೆ
ತಾಯಮ್ಮ ನಿನಗೆ
ಸರ್ಪರಾಜನ್ ಕಾವಲೇನಮ್ಮಾ || ಪಲ್ಲವಿ ||

ಹೊಳೆಯುನೆ ದಡದಲ್ಲಿ ಹೊಂಗೆಯ ತೋಪ್ ಹುಟ್ಟಿ
ಆಲದೆಲೆಂಬೋ ನೆರಳಲ್ಲಿ—ನೀಲಗುದುರೆ
ಆಲದೆಲೆಂಬೋ ನೆರಳಲ್ಲಿ ಗಿಡ್ಡಮ್ಮ
ವಾಲಾಡಿ ದವನಾ ಮುರಿದಳೆ—ನೀಲಗುದುರೆ ೧

ನೀಗೆಯ ಗಿಡದಡಿಯ ಶ್ರೀಗಂಧ ತುಳಸ್ಯೋಳೆ
ಯಾವ ಗೆಣೆಯುಗೆ ಶನಿವಾರ—ನೀಲ ೨

ಬೇಲೂರು ಚನ್ನಯ್ಯ ಸೂಳೇಮನೆಗ್ ಹೋಗುವಾಗ
ಸೇರೂಪಾವಡಕೆ ಬಿಳೀ ಎಲೆ—ನೀಲ
ಸೇರೂಪಾವಡಕೆ ಬಿಳಿ ಎಲೆ ತಕ್ಕೊಂಡು
ಗಿಡ್ಡೀ ನೀ ಕದವಾ ತೆಗೀ ಎಂದ—ನೀಲ ೩

ಕದವನು ತೆಗೆವೋದು ತರವೇನೊ ಚನ್ನಿಗ
ತೆರೆ ಮರೆ ಮುಚ್ಚಿ ಮದಿವ್ಯೇನೋ—ನೀಲ
ತೆರೆ ಮರೆ ಮುಚ್ಚಿ ಮದಿವ್ಯಾದ್ ಹೆಂಡತಿ ಬಿಟ್ಟು
ಎರವಿನ ಸೂಳೆ ಸ್ಥಿರವೇನೊ—ನೀಲ ೪

## ಗಂಧದ ನೆರಿಗ್ಯೋಳೆ

ಗಂಧದ ನೆರಿಗ್ಯೋಳೇ, ಬೆಂಗಳೂರಿನ್, ರವಿಕ್ಯೋಳೇ,
ಕಿರು-ಗೆಜ್ಜೇ ಚಾರ‍್ಯಾವು ಸಣ್ಣ ಮಳಲಾಗೇ—ಸಿರಿ
ಗಂಧಽದ ನೆರಿಗ್ಯೋಳೇ ||ಪಲ್ಲ||

ದೊಡ್ಡನೆ ದ್ಯಾವವ್ವಽ ಅಡ್ಡೇ ಮೇಲ್ ಒರುವಾಗ
ಹೂವಿಽಸೊನ ಮಾಲ್ಯೊಂದ್ ಹೆಗಲೇರಿ—ಸಿರಿ
ಗಂಧಽದ ನೆರಿಗ್ಯೋಳೇ—ಗಂಧದ ೧

ಅಂಗಡಿ ಬೀದೀಲಿ ನಿಂದಕ್ಕ· ತೊಳಸೋಳೆ
ಉಂಗುಷ್ಟ ಸಣ್ಣಽ ನಡುಸಣ್ಣಽ—ಸಿರಿ ಗಂಧದ ೨

ಉಂಗುಷ್ಟ ಸಣ್ಣ ನಡುಸಣ್ ಜಂಗಮರ್ ಹುಡುಗಿ
ನಿನ್ ಹಟ್ಟೇಲಿ ಬೀಡಿಕೆ ಬಿಡಲೇಸೆ—ಸಿರಿ ಗಂಧದ ೩

ಹಟ್ಟೇಲಿ ಬಿಡಲಿಕೇ(ನ್) ಬಿಟ್ಟ ಹೆಣ್ಣಲ್ಲ ಕಾಣೊ
(ನಾನ್ ಬಿಡದೀ ಹೆಣ್ಣಲ್ಲ ಕಾಣೊ)
ಹೋಗಯ್ಯ ಹರಿಯುವ ಜಲಧಿಽಗೆ—ಸಿರಿ ಗಂಧದ ೪

ಜಲಧಿಗೆ ಹೋಗಾಕೆ ಮುದಿ ಎತ್ತೊಂದ್ ಹಸಿದೀತೆ
ರಾಗಿಽಯ ಹುಲ್ಲ ಕೊಡಿರಮ್ಮಾ—ಸಿರಿ ಗಂಧದ ೫

ರಾಗಿಯ ಹುಲ್ಲಿಗೆ ರಾಯರ ಮುದ್ರಿಽಕಾದೊ
ಬೇಕಾದ ಮುತ್ತ ಬೆಲೆ ಮಾಡೆ—ಸಿರಿ ಗಂಧದ ೬

ಮುತ್ತನು ಬೆಲೆ ಮಾಡಾಕೆ ಅತ್ತಿಲ್ಲ ಮಾವಿಲ್ಲ
ಚಿಕ್ಕಽ ಮೈದುನರ ಸುಡಿಯಿಲ್ಲ—ಸಿರಿ ಗಂಧದ ೭

# ಕುಣಿಗಲು ಕೆರೆ

ಮೂಡಲ್ ಕುಣಿಗಲು ಕೆರೆ ನೋಡೋರ್‌ಗೊಂದ್ವೈಭೋಗ.
ಮೂಡಿ ಬರ್ತಾನೆ ಚಂದಿರವಾ—ತಾನಂದನೋ,
ಮೂಡಿ ಬರ್ತಾನೆ ಚಂದಿರವು ||ಪಲ್ಲ||

ಅಂತಂತ್ರಿಸಿ ನೋಡೋರ್ಗೆ ಎಂಥ ಕುಣಿಗಲು ಕೆರೆ
ಸಂತೇ ಹಾದೀಲಿ ಕಲುಕಟ್ಟೆ—ತಾನಂದನೋ,
ಸಂತೇ ಹಾದೀಲಿ ಕಲುಕಟ್ಟೆ—ಮೂಡಲ್ ೧

ಬಾಳೆಯ ಹಣ್ಣಿನಂತೆ ಬಾಗಿದ್ ಕುಣಿಗಲು ಕೆರೆ
ಭಾವ ತಂದನೆ ಬಣ್ಣದ್ ಸೀರೆ—ತಾನಂದನೋ,
ಭಾವತಂದನೆ ಬಣ್ಣದ್ ಸೀರೆ ೨

ನಿಂಬೆಯ ಹಣ್ಣಿನಂತೆ ತುಂಬಿದ್ ಕುಣಿಗಲು ಕೆರೆ
ಅಂದಾ ನೋಡಲು ಶಿವ ಬಂದ್ರು—ತಾನಂದನೋ,
ಅಂದಾ ನೋಡಲು ಶಿವ ಬಂದ್ರು ೩

ಅಂದಾ(ನೆ) ನೋಡಲು ಶಿವ ಬಂದ್ರು ಶಿವಮುಗ್ಗಿ
ಕಬ್ಬಕ್ಕಿ ಬಾಯ ಬಿಡುತಾವೆ—ತಾನಂದನೋ,
ಕಬ್ಬಕ್ಕಿ ಬಾಯ ಬಿಡುತಾವೆ ೪

ಕಬ್ಬಕ್ಕಿ(ನೇ) ಬಾಯ ಬಿಡುತಾವೆ ಇಬ್ಬೀಡ
ಗಬ್ಬದ್ ಹೊಂಬಾಳೆ ನಡುಗ್ಯಾವೆ—ತಾನಂದನೋ,
ಗಬ್ಬದ್ ಹೊಂಬಾಳೆ ನಡುಗ್ಯಾವೆ ೫

ಹಾಕೋಕೊಂದಾರುಗೊಲು ನೂಕೋಕೊಂದೂರುಗೊಲು
ಬೊಬ್ಬೆಹೊಡೆದವೆ ಬಾಳೆ ವಿಮಾನು—ತಾನಂದನೋ,
ಬೊಬ್ಬೆ ಹೊಡೆದವೆ ಬಾಳೆ ವಿಮಾನು ೬

ಬೊಬ್ಬೆ(ನೆ) ಹೊಡೆದವು ಬಾಳೆವಿಮಾನ್ ಕೆರೆಯಾಗೆ
ಗುಬ್ಬಿ ಸಾರಂಗ ನಗುತಾವೆ—ತಾನಂದನೋ,
ಗುಬ್ಬಿ ಸಾರಂಗ ನಗುತಾವೆ—ಮೂಡಲ್ ೭

## ಗೀಜಗನ ಗೂಡು

ಗೀಜುಗ ಗಿಳಿರಾಮನೇ
ರಾಮನೇ ರಘುರಾಮನೇ ||ಪಲ್ಲ||

ಗೀಜುಗನರಮನೆ ಗಾಜಿನ ಕಲುಕಂಬ
ಪಾಲೇವಾಣದ್ ಹಕ್ಕಿಯು ದೊರೆತನ—ಗೀಜುಗ ೧

ಮೂಡಲ ದೇಶಕ್ಕೆ ಹೋದ್ಯಲ್ಲೊ ಗೀಜುಗ
ಬಾದೆಯ ಹುಲ್ಲ ತಂದ್ಯಲ್ಲೊ ಗೀಜುಗ
ಬಾಗಾಡಿ ಗೂಡ ನೇದ್ಯಲ್ಲೊ ಗೀಜುಗ—ಗೀಜುಗ ೨

ತೆಂಕಲ ದೇಶಕ್ಕೆ ಹೋದ್ಯಲ್ಲೊ ಗೀಜುಗ
ಹಂಚಿಯ ಹುಲ್ಲ ತಂದ್ಯಲ್ಲೊ ಗೀಜುಗ
ಹೊಂಚಾಡಿ ಗೂಡ ನೇದ್ಯಲ್ಲೊ ಗೀಜುಗ—ಗೀಜುಗ ೩

ಪಡುವಲ ದೇಶಕ್ಕೆ ಹೋದ್ಯಲ್ಲೊ ಗೀಜುಗ
ಈಚಲ ಹುಲ್ಲ ತಂದ್ಯಲ್ಲೊ ಗೀಜುಗ
ಈಚಾಡಿ ಗೂಡ ನೇದ್ಯಲ್ಲೊ ಗೀಜುಗ—ಗೀಜುಗ ೪

ಬಡಗಲ ದೇಶಕ್ಕೆ ಹೋದ್ಯಲ್ಲೊ ಗೀಜುಗ
ಬಾಳೆಯ ಹಣ್ಣ ತಂದ್ಯಲ್ಲೊ ಗೀಜುಗ
ಬಾಯಾಡಿ ಗೂಡ ನೇದ್ಯಲ್ಲೊ ಗೀಜುಗ—ಗೀಜುಗ ೫

ಉತ್ತರ ದೇಶಕ್ಕೆ ಹೋದ್ಯಲ್ಲೊ ಗೀಜುಗ
ಉತ್ತುತ್ತೆ ಹಣ್ಣ ತಂದ್ಯಲ್ಲೊ ಗೀಜುಗ
ತುತ್ತಾಡಿ ಗೂಡ ನೇದ್ಯಲ್ಲೊ ಗೀಜುಗ—ಗೀಜುಗ ೬

## ವಿಧಿ

ಕಿನ್ನೂಡಿ ಮೇಲೆ ಕಿರುಗೆಜ್ಜೆ—ತಾಂದನಿ ತಾನೋ
ಕಿನ್ನುಡೀ ಕಿರುಗೆಜ್ಜೇ ಕಿರುಗೆ ನಾಗsರ ಸುತ್ತು
ಕಿನ್ನೂಡಿ ಮೇಲೆ ಕಿರುಗೆಜ್ಜೆ—ತಾಂದನಿ ತಾನೋ ||ಪಲ್ಲ||

ಕುಂತಿ ಕೊಟ್ಟಾ ಕುಟ್ಟಿ ಭೀಮ ಭಿಕ್ಷಾ ಬೇಡಿ
ಎಂತೋರಿಗೆಂತಾ ದಿನ ಬಂದೋ—ತಾಂದನಿ ತಾನೋ
ಎಂತೋರಿಗೆಂತಾ(ವಾ) ದಿನ ಬಂದೊ ಪಾಂಡವರ
ಕಂದsರು ಕಾದೋ ಕರುಗsಳ—ತಾಂದನಿ ತಾನೋ
ಕಂದರು ಕಾದರು ಕರುಗಳ ಕುಂತ್ಯಮ್ಮ
ಚಿಂತೇ ಮಾಡ್ಯಾಳು ಶಿವನಿಗೆ—ತಾಂದನಿ ತಾನೋ ೧

ಕುಂತಿದೇವೀ ಮಕ್ಕಳೆಂತೋರು ಭೀಮಯ್ಯ
ಹಂತೀಲಿ ಉಳ್ಳೋ ಎಲೆ ಮೆಲ್ಲೋ—ತಾಂದನಿ ತಾನೋ
ಹಂತೀಲೀ (ನೇ) ಉಳ್ಳೋ ಎಲೆ ಮೆಲ್ಲೋ ಪಾಂಡವರು
ಬಿತ್ತಿs ಹೋಗವ್ರೇ ಅವರೆಯ—ತಾಂದನಿ ತಾನೋ ೨

## ಕರಿಯವ್ವ

ಕೋಗಿsಲೇ ಸಣ್ಣ ಕೋಗಿsಲೇ
ಕೋಗಿsಲೇ ಮುದ್ದು ಕೋಗಿsಲೇ ||ಪಲ್ಲ||

೧

ಹುತ್ತದ ಕೋವೇಲಿ ಹುಟ್ಯಾಳೆ ಕರಿಯವ್ವ
ಮುತ್ತೋಡಿಗ್ ವಾಲೆ ಬsರದsಳೇ—ಕೋಗಿಲೇ
ಮುತ್ತೋಡಿಗ್ ವಾಲೆ ಬರದಳ್ ಹಾಲಪ್ಪನಾಯ್ಕ
ಮುತ್ತಿನಂದಲವ ಕsಳುವ್ಯಾನೆ—ಕೋಗಿಲೇ ೧

ಗದ್ದುಗೇ ಮೇಲಿಂದ ಎದ್ದು ಬಾರೆ ಕರಿಯವ್ವ
(ಅ)ಲ್ಲಿದ್ದರೆ ನಿನಗೆ ಶಿವನಾಣೆ | ಸೀರ್ಯಾವ್ದ
ಮಗ್ಗ ಬಂದಾವೆ ಮುಡಿ ಬಾರೇ—ಕೋಗಿಲೇ ೨

ಕರಿಯ ಕಾಗಿನ ಸೀರೆ ಗರಿಯೊಡೆದ ಹೊಂಬಾಳೆ
ತರಿಯ ಕೆರೆಯೆಂಬೋ ದೊಽರೆಗಳು | ಕಳುಏದ (ಬಣ್ಣ)
ಶಿವದಾರದ್ ಮೇಲೆ ಹೊಳೆದಽವೆ—ಕೋಗಿಲೇ ೩

ಗುಲಗಂಜ್ ಬಣ್ಣದ ಸೀರೆ ಗುಡ್ಡನಾಗಿ ಉಟ್ಟುಕೊಂಡು
ಗುಡುಗನಾಡ್ಯಾಳೆ ದೊರೆದೇವಿ | ಅಂತರಗಟ್ಟೆ
ಕರಿಯೆಳ್ಳು ಬೆಳೆವೊ ಬಯಲಾಗೆ—ಕೋಗಿಲೇ ೪

ಕರಿಯ ಕುದುರೇನೇರಿ ಕರಿಯಽವ್ ಸವಾರಿ ಹೊರಟೊ
ಕಿರುಜಡೆ ಬೆನ್ನ ಒಽಲವುಽತ | ಅಂತರಗಟ್ಟೆ
ಕೆಂಗಾಡಾಗಿಳಿದೊ ಕುದುರೆಯ—ಕೋಗಿಲೇ ೫

೨

ಕೊಣಬೇ ಗೌಡೆಂಬೋನು ದೊಡ್ಡ ಸಾವುಕಾರ
ಕೂರಿಗೆ ನೂರು ಕುಡ ನೂರು | ಕೊಣಬೇಗೌಡ್ನ
ಆರಂಬದೆತ್ತು ಅಯ್ ನೂರು—ಕೋಗಿಲೇ ೬

ಕೊಬ್ಬಿದ ಕೋಣನ ಮೇಲೆ ಗೊಬ್ರುವ ಹೇರ್ಯಾನೆ
ಕೊಬ್ಬಿದೇನೆಽಲಾ ಕೊಣಬಿಗಾ | (ಗ) ನಿನ ಬಾಕ್ಲಿಗೆ
ಕಬ್ಬಿಯ ಮುಳ್ಳ ಎಳಸೇನು—ಕೋಗಿಲೇ ೭

ಅಡುವಾಗ ಇಕ್ಕುವಾಗ ಮಡದೀ ಸಿರಿಯಲ್ಲಿತ್ತು
ಕೆಡುವಾಗ ಮಾರೀ ಕೆಣಕಿದ | ಕೊಣಬೇಗೌಡ್ನ
ನಡುಮನೆಗೆ ಮುಳ್ಳ ಎಳಸೇನು—ಕೋಗಿಲೇ ೮

ಒಂದು ಬಂಡಿಲಿ ಕಲ್ಲು ಒಂದು ಬಂಡಿಲಿ ಮುಳ್ಳು
ಹಿಂದಲ ಬಂಡೀಲಿ ರಣದುರುಗಿ | ಕೂತುಕೊಂಡು
ಹೊಕ್ಕಳು ಕೊಣಬಿಗನರಮನೆಗೆ—ಕೋಗಿಲೇ ೯

ಹಾಸನವೆಂಬೋದು ಹಸನುಳ್ಳ ಪಟ್ಟಣ
ದಾಸಯ್ ಬವನಾಸೀ ಕಳಕೊಂಡ | (ಡ್)ಕಾರಣದಿಂದ
ಹಾಸನದ ಮಾರಿ ನಡೆದಳು—ಕೋಗಿಲೇ ೧೦

ಹಾಸನದ ಮಾರಿ ನಡೆಯೋ(ನೆ) ಹೊತ್ತಿಗೆ
ಹಾಸನದಣ್ಣಯ್ಯ ಎದುರಾದ—ಕೋಗಿಲೇ ೧೧

ಕೊಣಬೇ ಗೌಡೆಂಬೋನ ಮತ್ಹೆಂಗೆ ಕೊಂದ್ಯಮ್ಮ
ಉಕ್ಕಿನ ಕೋರೆ ಉರಿಕೋರೆ | ಮುಸಕೊಂಡು
ನೆತ್ತ್ಯಾಗೆ ನೆಣವ ತೆಗೆದಽಳೆ—ಕೋಗಿಲೇ ೧೨

## ಲಕ್ಕವ್ವ

ಉಯ್ಯಾಲೇ ಬಣ್ಣದುಯ್ಯಾಲೇ—ಸಿರಿ
ಗಂಧದೊಳುಮ್ಮಾಜಿನುಯ್ಯಾಲೇ ||ಪಲ್ಲ||

ಉಯ್ಯಾಲೇನಾಡುತ ಉಯ್ಯಾಲೇ ಪಾಡುತ
ಉಯ್ಯಾಲೆಗೆ ಸಣ್ಣ ದನಿಯೋಳೆ | *ಲಕ್ಕವ್ವ
ಉಯ್ಯಾಲೆನಾಡೋ ಮಗ ಬಂದ | ಲಕ್ಕವ್ವ
ಉಯ್ಯಾಲೆಗೆ ಜಾಗ ಬಿಡುವೊಲ್ಲ—ಉಯ್ಯಾಲೇ ೧

* ಹೀಗೆ ಗೀಟು ಹಾಕಿರುವ ಕಡೆಗಳಲ್ಲೆಲ್ಲ ನಿಲ್ಲಿಸಿ ಪಲ್ಲವಿಯನ್ನು ಹೇಳಿಕೊಳ್ಳುತ್ತಾರೆ. ಮತ್ತೆ ಆ ಪಂಕ್ತಿಯನ್ನು ಆವೃತ್ತಿ ಮಾಡಿ ಮುಂದೆ ಗೀಟು ಹಾಕಿರುವ ಬಳಿ ನಿಲ್ಲಿಸಿ ಪಲ್ಲವಿ ಹೇಳುತ್ತಾ ಕೊನೆಯವರೆಗೂ ಹೀಗೆಯೇ ಆವೃತ್ತಿ ಮಾಡುತ್ತಿರುತ್ತಾರೆ.

ಊರಿಗೆ ದನ ಬಂದೊ ಉಟುಕೊಳ್ಳಿ ಸೀರೆಯು
ತೊಟುಕೊಳ್ಳಿ ಸಣ್ಣ ರವಿಕೆಯು | ಲಕ್ಕವ್ವ
ಹೊತುಕೊಳ್ಳಿ ಹೊನ್ನ ಕಳಸಽವ—ಉಯ್ಯಾಲೇ ೨

ಕೊಂಡ್ಯಕೆ ಬಂಡಿ ಬಂದೊ ಕೊಂಡಕೆ ಸೌದೆ ಬಂದೊ
ಮುಂಗೊಂಡನ್ ಹಾಯೋ ಮಗ ಬಂದ | ಲಕ್ಕವ್ವ
ನಂಬುಗೆ ಕೊಡೇ ಬಲಗೈಯ—ಉಯ್ಯಾಲೇ ೩

ಪಿಲ್ಲಿ ಕಾಲಿನೋಳೆ ಜಲ್ಲಿದ ನೆರಿಗ್ಯೋಳೆ
ಕಲ್ಮೇಲೆ ಕಾಲ ತೊಳೆಯೋಳೆ | ಲಕ್ಕವ್ವ
ಪಿಲ್ಲಿ ಹೊಳೆದವು ಬಿಸಲಿಗೆ—ಉಯ್ಯಾಲೇ ೪

ನಿಲ್ಲೇ ಲಕ್ಕವ್ವ ನಿನ ಪಿಲ್ಲಿ ನೋಡಾರಂತೆ
ಪಿಲ್ಲಿ ಮೇಗಳ ಬಸವನ | ನೋಡಾರಂತೆ
ನಿಲ್ಲೇ ಮಧುರೆಯ ಕೆರೆಯೊಳಗೆ—ಉಯ್ಯಾಲೇ ೫

ಉಂಗುರದ ಕಾಲ ಊರುತ ಜಾರುತ
ಬಿಂಗರದ ನಡುವ ಬಳುಕುತ | ಲಕ್ಕವ್ವ
ಬಂದಽಳೇ ಬಳಿಯ ಅಸ ನೋಡಿ—ಉಯ್ಯಾಲೇ ೬

ಬಾಗಲು ಚಿಕ್ಕದು ಬಗ್ಗಿ ಬಾರೆ ಲಕ್ಕವ್ವ
ಭಾಗ್ಯವುಳ್ಳೋನು ನಿನ ಮಽಗ | ಲಕ್ಕವ್ವ
ಬಾಗ್ಲಿಗೆ ಮುತ್ತ ಬಿಗಿಸಾನೆ—ಉಯ್ಯಾಲೇ ೭

## ಕಾಳಗದ ಪದ

ಅರಸಽನೂರ್ ಮನೆಯ ಮುಂದೆ
ಸಿರಿಯಲ್ ದೇವರ್ ಗುಡಿಯ ಕಟ್ಟಿ
ವರವ ಪಾಲಿಸೇ ಊರ ಚಂಗಿ ಯಲ್ಲಮ್ಮಾ—ಜೈ
ವರವ ಪಾಲಿಸೇ ಊರ ಚಂಗಿ ಯಲ್ಲಮ್ಮಾ ೧

ಕಡುಕಡುಗತ್ತಿ ಕ್ಯೆಯಾಗ್ ಹಿಡಿದು
ನಟ್ಟ ಕತ್ತಿ ಬಗಲಾಗಿಟ್ಟು
ಎಡ್ಕೆ ಬಲ್ಕೇ ಕಟ್ಟ್ಯಾರಣ್ಣ ಎಳ್ಡೆಳ್ಡಾಯ್ದವಾ—ಜ್ಯೆ
ಎಡ್ಕೆ ಬಲ್ಕೇ ಕಟ್ಟ್ಯಾರಣ್ಣಾ ಎಳ್ಡೆಳ್ಡಾಯ್ದವಾ ೨

ಎಂಕೋಜೀ ಎಲ್ಲೋಜೀ ಬಾರೋ
ಮುದುಗುಂಡೀ ಬಾವಾಜೀ ಬಾರೋ
ಎದ್ದು ಬಲ್ಲೀರಣ್ಣ ನಾಳೆ ಜಬ್ಲು ಪೇಟೆಗೆ—ಜ್ಯೆ* ೩

ನಾಡ ಮಂಜು ಮುಚ್ಚಿದಂತೆ
ಜೇನು ಎದ್ದು ಕಚ್ಚಿದಂತೆ
ಹೊಂಟರಣ್ಣ ಬಂಟರ್ ಕದನಕೇ—ಜ್ಯೆ ೪

ಅಪ್ಪನ ಮಾತ ಕೇಳದಲೆ
ಇಪ್ಪತ್ ಸಾವಿರ ದಂಡ ಕಡಿದು
ನೋಡಬೇಕೆಂದ ಮೈಸೂರ್ ಗಾಜಿನ ಕಿಳ್ಯಾವ—ಜ್ಯೆ ೫

ಅಣ್ಣನ ಮಾತ ಕೇಳದಲೆ
ಹನ್ನೆಳ್ಡ್ ಸಾವಿರ ದಂಡ ಕಡಿದು
ತಕ್ಕೋಬೇಕೆಂದ ಜಾಟಂಗಿ ದುರ್ಗವ—ಜ್ಯೆ ೬

ಸಾಬ್ರನೆಲ್ಲ ಬಲ್ಲೀರೆಂದು
ಮೆದಕೇರಪ್ಪನ್ ಕಾವೇರೆಂದು
ಜಾಡಿಸ್ತುಳ್ಳೀ ಮಾಡಾರಣ್ಣ ಜಗಳೂರ್ ಪೇಟೇಲಿ—ಜ್ಯೆ ೭

ಹಣವ ಕಿತ್ತು ಜಗಲೀ ಕಟ್ಟಿ
ನೆಣವ ಕಿತ್ತು ಕೋಟೇ ಕಟ್ಟಿ
ಕೋಟೇ ಒಳಗೆ ನುಲ್‌ನುಲ್ದಾಡಿ ಸಂವರ ಮಾಡಿದ—ಜ್ಯೆ ೮

* ಮುಂದೆ ಮೂರನೆಯ ಸಾಲನ್ನೇ ಮತ್ತೊಮ್ಮೆ ಹೇಳುತ್ತಾರೆ.

ಎಂಟಾಣೆಗೆ ಕಂಠೀಸರ
ಕಂಠೀ ಒಳಗೆ ಮಿಣಿಮಿಣಿದಾರ
ಭಂಟ್ರಿಗೆಲ್ಲ ಚಾಕಲ್ ಮುತ್ತೊಂದ್ ಹೇರು ಮಾಡಿದ—ಜೈ ೯

## ಸುಲ್ತಾನನ ದೌಲತ್ತು ಹೋದದ್ದು

ಏನು ಮೋಸವಾಯಿತೋ—ಸುಲ್ತಾನ ದೌಲತ್
ಯಾರ ಪಾಲಿಗೆ ಸೇರಿತೋ ||ಪಲ್ಲ||

ಸುತ್ಮುತ್ ಕಾವೇರಿ ಹೊಳೆ
ನಡುವೆ ಶ್ರೀ ರಂಗನ ಪಟ್ಣ
ಪಟ್ಟಽಣ ದೊಳಗೆಲ್ಲ
ನೀನೆಂಬೊ ರಂಗಸ್ವಾಮಿ—ಏನು ಮೋಸ ೧

ಕೋಟೇಮೇಲೆ ನಿಂತುಕೊಂಡು
ಹಸ್ರು ಕೊಡೇನ್ ಹಿಡಿದುಕೊಂಡು
ಹೋಗೋ ದಂಡಿಽಗೆಲ್ಲ
ವಸ್ತ್ರಽವ ಬೀಸಿದಾ—
ರಾಜನ್ ದೌಲತ್—ಏನು ಮೋಸ ೨

ಮಟ ಮಟ್ ಮಂಗ್ಳಾರದ್ ದಿವ್ಸ
ಮಧ್ಯಾನ್ಹ ಹೊತ್ತಿನಲ್ಲಿ
ಹದ್ದುಽ ಹಾರಿದ್ಹಂಗೆ ಹಾರಿತಲ್ಲೋ
ರಾಜನ್ ದೌಲತ್—ಏನು ಮೋಸ ೩

ಸುಲ್ತಾನನ್ ದೌಲತ್ ಹೋಯ್ತು
ಕುಂಪ್ಣೀಗ್ ದೌಲತ್ತು ಬಂತು
ಹೆಂಗಽಸರಿಽಗೆಲ್ಲ
ಹೆಚ್ಚಿನ್ ಕಾರ್‌ಬಾರು ಬಂತು—ಏನು ಮೋಸ ೪

## ಜವರಾಯ

ಜವರಾಯ ಬಂದರೆ ಬರಿಕೈಲಿ ಬರಲಿಲ್ಲ
ಕುಡುಗೋಲು ಕೊಡಲ್ಯೊಂದ್ ಹೆಗೆಲೇರಿs
ಜವರಾಯ
ಒಳ್ಳೊಳ್ಳೆ ಮರನ ಕಡಿಬಂದ
ಫಲಬಿಟ್ಟ ಮರನ ಕಡಿಬಂದ ||ಪಲ್ಲ||

ಎಂದೂ ಬರದ ಜವರಾಯ ಇಂದೇಕೆ ಬಂದಿರಿ
ಕೊಳ್ಳಯ್ಯ ನೀರ ಕುಡಿ ನೀರs—ಜವರಾಯ
ಜವರಾಯ ಬಂದರೆ ೧

ಕೂರೋಕೆ ಬಂದಿಲ್ಲ ನಿಲ್ಲೋಕೆ ಬಂದಿಲ್ಲ
ಗಂಡsನ ಮಡದೀ ನಡಿ ಮುಂದೆ—ಜವರಾಯ ೨

ಮಳಿಮಳಿಗೆ ಹಚ್ಚsಡ ಮಳಿಗೇ ಮುಂಡಾಸಿನ
ಗಂಡsನ ಬಿಟ್ಟು ನಾನ್ ಹೇಗೆ ಬರಲೋ—ಜವರಾಯ ೩

ಗಂಡಗೆ ತಕ್ಕಂಥ ದುಂಡೀರು ಬರುತಾರೆ
ಗಂಡನ ಮಡದೀ ನಡಿ ಮುಂದೆ—ಜವರಾಯ ೪

ಹಾಲೂ ಬಾನಾ ಉಂಡು ತೋಳs ಮೇಲಾಡುವ
ಬಾಲನ ಬಿಟ್ಟು ನಾನ್ ಹೇಗೆ ಬರಲೋ—ಜವರಾಯ ೫

ಬಾಲಗೆ ತಕ್ಕಂಥ ಬಾಲೇರು ಬರುತಾರೆ
ಬಾಲನ ತಾಯಿಾ ನಡಿ ಮುಂದೆ—ಜವರಾಯ ೬

ಕಾಳು ಕಡ್ಡೀ ಮಾರಿ ಕಟ್ಟಾಣಿ ಮಾಡಿಸಿದ್ದೆ
ಕಟ್ಟಾಣೊಂದರಫುಳಿಗಿಕ್ಕಲಿಲ್ಲವೋ—ಜವರಾಯ

ಕಟ್ಬ್ಯಾಗೊಂದರಫಳಿಗಿಕ್ಕಲಿಲ್ಲ ಜವರಾಯ
ಕೆಟ್ಟೋಡಿ ಹೋಗ್ಗೋ ಸಡಗರವೇ—ಜವರಾಯ ೭

ಹರಳು ಹತ್ತೀ ಮಾರಿ ವಾಲೆಯ ಮಾಡಿಸಿದ್ದೆ
ವಾಲ್ಯೊಂದರಫಳಿಗೆ ಇಕ್ಕಲಿಲ್ಲವೋ—ಜವರಾಯ
ವಾಲ್ಯೊಂದರಫಳಿಗೆ ಇಕ್ಕಲಿಲ್ಲ ಜವರಾಯ
ವಾಲಾಡಿ ಹೋಗ್ಗೋ ಸಡಗರವೇ—ಜವರಾಯ ೮

ಅಟ್ಟು ಉಂಡೇನೆಂದು ಚಟ್ಟೀ ಕುಡಿಕೇ ತಂದೆ
ಹಟ್ಟೀಲೆ ಇದ್ಯಲ್ಲೋ ಜವರಾಯಾ—ಜವರಾಯ ೯

ಮಾಡಿ ಉಂಡೇನೆಂದು ಮಡಕೆ ಕುಡಿಕೇ ತಂದೆ
ಮಾಡಾಗೆ ಇದ್ಯಲ್ಲೋ ಜವರಾಯಾ—ಜವರಾಯ ೧೦

ಆಚೇ ಕೇರೀಲೀಗ ರಂಡೇರು ಮುಂಡೇರು
ಅವರ್ನಾರ ಕರಕೊಂಡ್ ಹೋಗಬಾರದೇ—ಜವರಾಯ ೧೧

ರಂಡೇರು ಮುಂಡೇರು ಎಂದಿದ್ರು ನಮ್ಮೋರು
ಗಂಡನ ಮಡದೀ ನಡಿ ಮುಂದೆ—ಜವರಾಯ ೧೨

## ಕಾರಣ

ಕೋಲು ಕೋಲೇ ಕೋಲನ್ನ ಕೋಲೇ
ಕೋಲು ಕೋಲೇ ಕೋಲನ್ನ ಕೋಲೇ ||ಪಲ್ಲ||

ಗುಡುಗುಡುಗುಟ್ಟಿತು ಗುಡ್ಡದ್ ಮೇಲೆ ಮಿಂಚಿತು
ಬೇಲೂರ ಮೇಲೆ ಮಳೆ ಬಿತ್ತು—ಮುದ್ದು
ಕೋಲೂ ಕೋಲನ್ನ ಕೋಲೇ—ಕೋಲು ಕೋಲೇ
ಬೇಲೂರ್ ಮೇಲ್ ಮಳೆ ಬಿದ್ದು ಬೆಳವಾಡಿ ಕೆರೆ ತುಂಬಿ

ಜಾವುಗಲ್ಲಾಗೆ ಜಲವೆದ್ದು—ಮುದ್ದು ಕೋಲೂ—
ಜಾವ(ನೆ)ಗಲ್ಲಾಗೆ ಜಲವೆದ್ ಹರಿದಾ ನೀರ
ಬಾಣಾವಾದರ್ ಹುಡುಗಿ ಬಳಸ್ಯಾಳೆ—ಮುದ್ದು— ೧

ಪಟ್ಟಣ ಸೆಟ್ಟೀ ಮಗ ಸತ್ನೆಂಬ್ ಸುದ್ದೀ ಕೇಳಿ
ಹೊತ್ತಿದ್ದ ಗಡಿಗೇ ಕೆಳಗ್ ಹಾಕಿ—ಮುದ್ದು—
ಹೊತ್ತಿದ್ದ(ನೇ) ಗಡಿಗೇ ಕೆಳಗ್ ಹಾಕಿ ಆ ಬಾಲೆ
ದುಕ್ಕಾ ಮಾಡಾಳೆ ಹೊಳೆಯಾಗೆ—ಮುದ್ದು— ೨

ಚಿನ್ನದ ಕೊಡನಲ್ಲ ರನ್ನದ ಕೋಡನಲ್ಲ
ಮಣ್ಣಿನ್ ಕೊಡಕ್ ಯಾಕಿಷ್ಟು ಅಳುತೀಯೆ—ಮುದ್ದು ೩

ಅತ್ತೆ ಕಾಣದ್ ಹಾಗೆ ಮಾವ ನೋಡದ್ ಹಾಗೆ
ಒಪ್ಪದಲಿ ನಾನು ಬಳಸಿದ್ದೆ—ಮುದ್ದು—
ಒಪ್ಪದಲಿ ನಾನು ಬಳಸಿದಂಥ ಹರವಿ
ನುಚ್ಚಾಯ್ತು ನೀರ ಹೊಳೆಯಾಗೆ—ಮುದ್ದು— ೪

## ಭಾವ ನಾದಿನಿಯರ ಸರಸ

ಎಲೆಯೋ! ಎಲೆಯೋ! ಎಲ್ತಂದೆ ಭಾವ?
ಎಳೆ ಬಳ್ಳೀ ತೋಟ್ದಲ್ಲಲೆ ಕುಯ್ಯೋಳ್ಯಾರೆ?
ನಾನ್ ಕಣೊ ಭಾವ ನಿಮ್ ಸೋದ್ರತ್ತೆ ಮಗಳು.
ಸೋದ್ರತ್ತೆ ಮಗಳಾದ್ರೆ ಮೆಟ್ಟೆಸಲೆ ಕುಯ್ಯೆ.
ಮೆಟ್ಟೋದು ಗಿಟ್ಟೋದು ಮೆಟ್ಟೇನೊ ಭಾವ?
ಮೆಟ್ಟಾ ನಿಮ್ಮೋರ್ ಇಕ್ಕುಸವರೇನೆ?
ಇಕ್ಕೋದು ಗಿಕ್ಕೋದು ಗೋಡ್ಯೇನೊ ಭಾವ?
ಗೋಡೇ ನಿಮ್ಮೋರ್ ಒರಗುವರೇನೆ?
ಒರಗೋದು ಗಿರಗೋದು ಕಂಬ್ಯೇನೊ ಭಾವ?
ಕಂಬಾ ನಿಮ್ಮೋರ್ ಕಡಿಯುವರೇನೆ?

ಕಡಿಯೋದು ಗಡಿಯೋದು ರೊಟ್ಟ್ಯೇನೊ ಭಾವ?
ರೊಟ್ಟೀ ನಿಮ್ಮೋರು ಮೆಲ್ಲುವರೇನೆ?
ಮೆಲ್ಲೋದು ಗಿಲ್ಲೋದು ಬೆಲ್ವೇನೊ ಭಾವ?
ಬೆಲ್ಲಾ ನಿಮ್ಮೋರ್ ಆಡ್ಸುವರೇನೆ?
ಆಡ್ಸೋದು ಗೀಡ್ಸೋದು ಆಟ್ವೇನೊ ಭಾವ?
ಆಟಾ ನಿಮ್ಮೋರು ನೋಡುವರೇನೆ ?
ನೋಡೋದು ಗೀಡೋದು ಕನಡ್ಯೇನೊ ಭಾವ?

ಅಮ್ಮಮ್ಮ! ನೀ ಬಹು ಚಬುಕ್‌ಗಾರ್ ಹೆಣ್ಣೇ!
ನಂಗೇಕೆ ಚಬುಕು? ಕುದುರೆಗೆ ಚಬುಕು.
ಅಮ್ಮಮ್ಮ, ನೀ ಬಹು ಕದ್ರುಗಾರ್ ಹೆಣ್ಣೇ!
ನಂಗೇಕೆ ಕದುರು? ರಾಟೆಗೆ ಕದುರು.
ಅಮ್ಮಮ್ಮ, ನೀ ಬಹು ಮದಗಾರ್ ಹೆಣ್ಣೇ!
ನಂಗೇಕೆ ಮಽದ ಆನೆಗೆ ಮಽದ.

ನಾವ್ ತಂದಾಗ್ ನೀನಿನ್ನೂ ಚಿಕ್ಕವಳಲ್ಲೇ!
ಎಲ್ಲಿ ಕಲ್ತೆ ನೀನಿಷ್ಟು ಮಾತ ಚಂದೊಳ್ಳೇ?
ಮಗ್ಗಾದ ಮಲ್ಲಿಗೆ ಅರಳಾದೆ ಭಾವ.

## ಚಿಂತಾಮಣಿ ರಾಜಕುಮಾರ

ಮುಟ್ಟದಿರೋ ಮುತ್ತಿನ್ ಹರಳಾ—ಮೈಗಾದ
ಕೊತ್ತಳವೆ ನಽಡುಽಗ್ಯಾವೋ ||ಪಲ್ಲ||

ಹೆತ್ತಯ್ಯೆಂಬೋನು ಹೆಸರಿಗೆ ಚಿಂತಾಮಣಿ
ಪಟ್ಟಾಽಗಟ್ಯಾನೆಽ ದಯುಽಮಾರ—ಮುಟ್ಟದಿರೋ
ಪಟ್ಟಽಗಟ್ಯಾನೆಽ ದಯುಮಾರವರ್ ಹಟ್ಟೀಲಿ
ಮೆಟ್ಟುಗಾಲಲ್ಲಿ ಹೋಗಽದಿರೋ—ಮುಟ್ಟದಿರೋ ೧

ಹೆತ್ತಯ್ಯ ಬರುವಾಗ ಬತ್ತಿದ ಕೆರೆ ತುಂಬಿ
ಸತ್ತ ಕೋಗಿsಲೆ ಸsರsಗೈದೊ | (ಗೈದ್) ಬಂದಾವಲ್ಲೊ
ಮುದ್ದು ಹೆತ್ತಯ್ನ ಅರsಮನೆಗೆ—ಮುಟ್ಟದಿರೋ ೨

ನೀರಿಲ್ದ ಕೆರೆಯಲ್ಲಿ ದರಬಲದ ಗಿಡ ಹುಟ್ಟಿ
ನೀರಿಲ್ಲದ್ ಹೂವೇ ಸರಗೈದೊ | (ಗೈದ್) ಬಂದಾವಲ್ಲೊ
ರಾಯ ಹೆತ್ತಯ್ನ ಅರsಮನೆಗೆ—ಮುಟ್ಟದಿರೋ ೩

(ಅಪೂರ್ಣ)

## ಚೆಲುವಯ್ಯ ಚೆಲುವೋ

ಚೆಲುವಯ್ಯ ಚೆಲುವೋ—ತಾನಿ ತಂದನ್ನಾ
ಚಿನ್ಮಯsರೂಪೇ—ಕೋಲನ್ನ ಕೋಲೆ ||ಪಲ್ಲ||

ಬೆಟ್ಟದ್ ಮ್ಯಾಗಳ ಜಲ್ಲೀ ಬಿದಿರು
ಬೇಲೀ ಮ್ಯಾಗಳ ಸೋರೆ ಬುರುಡೆ
ಲೋಲು ಕಿನ್ನುಡಿ ನುಡಿಸೋನ್ ಯಾರಯ್ಯೊ
ಚೆಲುವಯ್ಯ ಚೆಲುವೋ ೧

ಭೋರು ಕಿನ್ನುಡಿ ನುಡಿಸುತಾನೆ
ಕೇರಿ ಕೇರಿ ತಿರುಗುತಾನೆ
ನಮ್ಮ ಕೇರೀಗ್ ಯಾಕೆ ಬರವಲ್ಯೋ
ಚೆಲುವಯ್ಯ ಚೆಲುವೋ ೨

ನಮ್ಮ ಕೇರೀಗ್ ಬಂದರೀಗ
ಕರಿಯ ಕಂಬ್ಳೀ ಗದ್ದೀನ್ ಹೂಡಿ
ತಂದು ಕೊಡುವೆನ್ ಗಂಧದೀಳ್ಯವಾ—ಚೆಲುವಯ್ಯ ೩

ಗಂಧಾನಾದ್ರೂ ಧರಿಸಿಕೊಳ್ಳಿ
ವೀಳ್ಯಾನಾದ್ರೂ ಮೆದ್ದುಕೊಳ್ಳಿ
ಬಂದ ಕಾರ್ಯ ಹೇಳಿ ದಮ್ಮಯ್ಯಾ—ಚೆಲುವಯ್ಯ ೪

ಬಂದ ಕಾರ್ಯ ಹೇಳುವುದಕೆ
ಮಂತ್ರಿsa ಪ್ರಧಾನಿ ಬೇಕು
ಕೂರುsವ ಮನೆಯು ತೋರ್ ಹೆಣ್ಣೇ—ಚೆಲುವಯ್ಯ ೫

ಬಾಕ್ಲಲ್ ಬಜಾರಿ ಮರ
ಹಿತ್ಲಲ್ ಕಿತ್ತಿಳೆ ಮರ
ಕೋಟೇ ದಾಟಿದರ್ ಬಾಕ್ಲು ನಮ್ಮನೇ—ಚೆಲುವಯ್ಯ ೬

ಸುತ್ತ ಮುತ್ತ ಸೂರೀಪಾನ
ನಟ್ಟ ನಡುವೆ ಸುಂಗ್ರುದ್ ತ್ವಾಟ
ಕೊಟೇ ದಾಟಿದರ್ ಬಾಕ್ಲು ನಮ್ಮನೇ—ಚೆಲುವಯ್ಯ ೭

ಕರಿಯ ಮುಖದ ಗೆಳೆಯ ನೀನು
ಕಸ್ತೂರಿ ರುಮಾಲು ದೋನೆ
ಮಸೂತಿ ಕೆಳಗೀತ್ ನಮ್ಮನೇ—ಚೆಲುವಯ್ಯ ೮

ಆಗದೋನೆ ಭೋಗದೋನೆ
ನಾಗರ ನಡು ಕಟ್ಟಿನೋನೆ
ಕೋಗಿsಲ್ಹಂಗೆ ಕೂಗುತೀಯಲ್ಲೋ—ಚೆಲುವಯ್ಯ ೯

ನನ್ನ ನಿನ್ನ ಮನೆಯ ಮುಂದೆ
ಸಣ್ಣದೊಂದು ಬೇವಿನ್ ಮರ
ಸಂಜೇಲ್ ಮುಂಜೇಲ್ ಬಂದು ಹೋಗಯ್ಯ—
ಚೆಲುವಯ್ಯ ೧೦

ಊರಿಗಂತ ನೀನು ಬಾರೋ
ನೀರಿಗಂತ ನಾನು ಬರ್ತೀನ್
ದೂರ ನಿಂತು ಮಾತನಾಡನಾ—ಚೆಲುವಯ್ಯ ೧೧

ಎತ್ತಿಗಂತ ನೀನು ಬಾರೊ
ಎಮ್ಮೆಗಂತ ನಾನು ಬರ್ತೀನ್
ಕುಂತು ನಿಂತು ಮಾತನಾಡನಾ—ಚೆಲುವಯ್ಯ ೧೨

ಕಟ್ಯಾನ್ ಕಠಾರಿ ಬಾಕ
ಇಕ್ಯಾನ್ ಮುರವಿನ ಜೋಡ
ಹೊರಟಽನ್ ಸೂಳೇರ್ ಕೇರಿಗೆ—ಚೆಲುವಯ್ಯ ೧೩

ಉಟ್ಟಽನ್ ಪಟ್ಟೇ ಧೋತ್ರ
ಇಕ್ಯಾನ್ ಮುರವಿನ ಜೋಡ
ಹೊರಟಽನ್ ನಾರೀರ್ ಕೇರಿಗೆ—ಚೆಲುವಯ್ಯ ೧೪

ಹಾಲನಾಯಿ ಜೂಲನಾಯಿ
ಊರ ಮುಂದೆ ತಽಳವಾರ
ಹೇಗೆ ಹೋಗಲೂರ ಹೊರಟು—ಚೆಲುವಯ್ಯ ೧೫

ಮೂಡಲ್ ಸೀಮೆ ಹೆಣ್ಣು ಕಾಣೊ
ಮುತ್ತಿನ್ ತುರಾಯಿದೋಳು
ಕತ್ತಲ್ಗ ವಿದಽವೆ ಕಣ್ಣ್ಗೆ—ಚೆಲುವಯ್ಯ

ಚೆಲುವಯ್ಯ ಚೆಲುವೋ—ತಾನಿ ತಂದನ್ನಾ
ಚಿನ್ಮಯಽ ರೂಪೇ—ಕೋಲನ್ನ ಕೋಲೇ ೧೬

## ಬರಹೇಳಕ್ಕಯ್ಯ

ಕರಿಯು ಕಬ್ಬಿನ ಕೋಲ್ ಗರಿಯೊಡೆದ ಸೂಲಂಗಿ
ಕೆರೆಯೇರಿ ಮೇಲ್ ಬರುವೋನಕ್ಕಯ್ಯ *
ಕೆರೆಯೇರಿಮೇಲ್ ಬರುವೋ ನಲ್ಲನ ಕಂಡು
ಗಂಧಾಸು ರಾಣಿ ಮನಸೋತಕ್ಕಯ್ಯ—ಕರಿಯು
ಗಂಧಾಸು ರಾಣಿ ಮನಸೋತ್ ಮಾವನ ಮಗನ
ಮಾತ್ಕೈತೆ ಮನೆಗೆ ಬರಹೇಳಕ್ಕಯ್ಯ—ಕರಿಯು ೧

ಯಾತದ ಭಾವೀಲಿ ಧೋತ್ರಾ ಮಡಿಮಾಡೋನೆ
ಜೋತಿ ಮುತ್ತವ್ನಾ ಕಿವಿಯೊಳಗಕ್ಕಯ್ಯ—ಕರಿಯು
ಜೋತಿ ಮುತ್ತವ್ನ ಕಿವಿಯೋನ್ ಮಾವನ ಮಗನ
ಮಾತ್ಕೈತೆ ಮನೆಗೆ ಬರಹೇಳಕ್ಕಯ್ಯ—ಕರಿಯು ೨

ಗಂಧದ ಬಾವೀಲಿ ಅಂಗಿ ಮಡಿಮಾಡೋನೆ
ದುಂಡು ಮುತ್ತವ್ನ ಕಿವಿಯೊಳಗಕ್ಕಯ್ಯ—ಕರಿಯು
ದುಂಡು ಮುತ್ತವ್ನ ಕಿವಿಯೋನ್ ಮಾವನ ಮಗನ
ಉಂಡಿಲ್ಲಿ ಮನೆಗೆ ಬರಹೇಳಕ್ಕಯ್ಯ—ಕರಿಯು ೩

ಗಂಧವಾಡಿ ಕಣಿವೇಲಿ ಕಂಡಿರ ನಲ್ಲನ
ಗುಂಡಿ ಮುಂಡಾಸಿನಾ ನಿಲುವಂಗ್ಯಕ್ಕಯ್ಯ—ಕರಿಯು
ಗುಂಡಿ ಮುಂಡಾಸಿನಾ ನಿಲುವಂಗಿ ನಲ್ಲನ
ಕಂಡರೆ ಮನೆಗೆ ಬರಹೇಳಕ್ಕಯ್ಯ—ಕರಿಯು ೪

## ಎಳ್ಳೂರು ಬಣಜಿಗ

ತಾನು ತಾನಂದನೋ ತಂದನಾನೋ ತಂ
ದನು ತಾ ನಂದನೋ ತಂದನಾನೋ || ಪಲ್ಲ ||

* ಈ ಪದದಲ್ಲಿ ಮೊದಲಿನ ಎರಡು ಸಾಲುಗಳನ್ನೇ ಪಲ್ಲವಿಯಾಗಿ ಹೇಳುತ್ತಾರೆ.

ಎಳ್ಳೂರು ಬಣಜಿಗ ಎಳ್ಳು ಕೇಳುತ ಬಂದ
ಎಳ್ಳುಂಟೆ ನಾರ್ಯೆಂದ್ ಹಣವಿಗೆ—ತಂ
ದನು ತಾನಂದನೋ ತಂದನಾನೋ—ತನುತಾ ೧

ಎಳ್ಳು ನಮ್ಮಲ್ಲುಂಟು ಹಣವು ನಿಮ್ಮಲ್ಲುಂಟು
ಧಾರಣೆ ಕೇಳಿ ಬಾರ್ ಹೊಸಪೇಟಿ—ತಂ ೨

ಧಾರಣೆ ಕೇಳಿ ಬಂದೆ (ಒಳ್ಳೆ) ಅಳೆಯೋ ಬಳ್ಳವ ತಂದೆ
ಕುಸುಮಾಲೇ ಎಳ್ಳ ಅಳಕೊಡೇ—ತಂ ೩

ಕುಸುಮಾಲೆ ಎಂದೀಗ ಹೊಸ ಮಾತನಾಡದಿರೋ
ದಶರಥರಾಯ ಹಿರಿಯಣ್ಣ—ತಂ
ದಶರಥರಾಯನು ಹಿರಿಯಣ್ಣ ಕೇಳಿದರೆ
(ನಿನ್) ಹಸಿಯ ಶೂಲಕೆ ಹಾಕಿ ಕೊಲಿಸ್ಯಾನೋ—ತಂ ೪

ಹಸಿ ಶೂಲಕ್ ಹಾಕಿಸಲಿ (ನನ್) ಬಿಸಿ ನೆತ್ತರ್ ಹರಿಸಲಿ
ನಿನ ಬಂದಿಯ ತೋಳ ಬಿಡೆ ನಲ್ಲೇ—ತಂ ೫

## ಮಾವನ ಮಗಳೆ

ಸೀರೇ ಸೆರಗ ಬಿಡೋ
ಸೀರೇ ಸೆರಗ ಬಿಡೋ ನನ ಗೆಣೆಯಾ
ಸಾಲೇ ಸೆರಗ ಬಿಡೋ || ಪಲ್ಲ ||

ಮಾವನ ಮಗಳೇ ಕೋಗಿಲೆ ದನಿಯೋಳೆ
ತಾವರೆ ಮಗ್ಗಿನ ಮೊಲೆಯೋಳ್ ಹುಡುಗೀ—ಸೀರೆ
ತಾವರೆ ಮಗ್ಗಿನ ಮೊಲೆಯೋಳ್ ಮಾವನ ಮಗಳೆ
ಬಾಯಾರಿ ಬಂದೆ ಕೊಡು ನೀರ್ ಹುಡುಗೀ—ಸೀರೆ ೧

ನೀರ ಕೊಡುವೋಕೆ ನಾನ್ ಯಾರೊ ನೀನ್ ಯಾರೊ
ಹೋಗಯ್ಯ ಹರಿಯೋ ಹೊಳೆಗಾಗಿ ಹುಡುಗಾ—ಸೀರೆ ೨

ಹರಿಯೋ ನೀರ್ ಹಚ್ಚಗೆ ಕೆರೆಯ ನೀರ್ ಬೆಚ್ಚಗೆ
ನೀ ಕೊಟ್ಟ ಸೀರು ಸಮರುಚಿ ಹುಡುಗೀ—ಸೀರೆ ೩

ನಾ ಕೊಟ್ಟ ನೀರು ಸಮರುಚಿಯಾದರೆ
ಕುಲದಾಗೆ ದಂಡಽ ಬರುತ್ತೈತೆ ಹುಡುಗಾ—ಸೀರೆ ೪

ದಂಡವ ಕೊಟ್ಟೇನು ಹಿಂಡೆಮ್ಮ ಹೊಡಸೇನು
ಬಂಡೀಲಿ ಬದುಕ ಕಳುಹೇನ್ ಹುಡುಗೀ—ಸೀರೆ
ಬಂಡೀಲಿ ಬದುಕಽ ಕಳುಹೇನ್ ಮಾವನ ಮಗಳೆ
(ನಿನ) ಬಂದಿಯ ತೋಳ ಬಿಡಲಾರೆನ್ ಹೆಣ್ಣೇ—ಸೀರೆ ೫

## ಕುಂಜರದ ಬೊಂಬೆ ಕೇಳೆ

ಕುಂಜರದ ಬೊಂಬೆ ಕೇಳೆ ಎಲ್ಲರ ಜಾಣೆ
ಕುಶಲದ ಬೊಂಬೆ ಕೇಳೆ || ಪ ||

ಈ ಪೂರ್ ಗೌಡನ ಮಗಳು ನೀರಿಗೆ ಹೋಗುವಾಗ
ಕಟ್ಟೇ ಕಲ್ಲಾಗ್ಬಂಡಗಿದ್ದನ್ ಹುಡುಗ—ಕುಂಜರದ ೧

ಕಟ್ಟೇ ಕಲ್ಲಾಗ್ಬಂದಡಗಿರೋ ಹೊತ್ತಿಗೆ
ಕಾವೇರಿ ಹೊಳೆಯಾಗಿ ಹರಿದಿದ್ದಳ್ ಹುಡುಗಿ—ಕುಂಜರದ ೨

ಕಾವೇರಿ ಹೊಳೆಯಾಗಿ ಹರಿದಿರೋ ಹೊತ್ತಿಗೆ
ಅಡ್ಡೇರಿನಾಗಿ ಬಂದ್ ತಡೆದಿದ್ದನ್ ಹುಡುಗ—ಕುಂಜರದ ೩

ಅಡ್ಡೇರಿನಾಗಿ ಬಂದ್ ತಡೆದಿರೋ ಹೊತ್ತಿಗೆ
ಬಾಳೇಮೀನಾಗಿ ಮಿಂಚಿದ್ದಳ್ ಹುಡುಗಿ ೪

ಬಾಳೆಽಮೀನಾಗಿ ಮಿಂಚಿರೋ ಹೊತ್ತಿಗೆ
ಚಿನ್ನದ್ ಗಾಳ ಹಾಕಿ ಹಿಡಿದಿದ್ದನ್ ಹುಡುಗ ೫

ಚಿನ್ನದ ಗಾಳಹಾಕಿ ಹಿಡಿದಿರೋ ಹೊತ್ತಿಗೆ
ಲ್ಯಾವ್ಗನ ಮರಿಯಾಗಿ ಹಾರಿದ್ದಳ್ ಹುಡುಗಿ ೬

ಲ್ಯಾವ್ಗನ ಮರಿಯಾಗಿ ಹಾರಿರೋ ಹೊತ್ತಿಗೆ
ಗಿಡುಗನ ಮರಿಯಾಗಿ ಎರಗಿದ್ದನ್ ಹುಡುಗ ೭

ಗಿಡುಗನ ಮರಿಯಾಗಿ ಎರಗಿರೋ ಹೊತ್ತಿಗೆ
ಅಡಕೆ ಮರವಾಗಿ ನಿಂತಿದ್ದಳ್ ಹುಡುಗಿ ೮

ಅಡಕೆ ಮರವಾಗಿ ನಿಂತಿರೋ ಹೊತ್ತಿಗೆ
ಗೊನೆಕಾರನಾಗಿ ಬಂದ್ ತಲೆ ಕುಯ್ದನ್ ಹುಡುಗ ೯

ಗೊನೆಕಾರನಾಗಿ ಬಂದ್ ತಲೆ ಕುಯ್ಯೋ ಹೊತ್ತಿಗೆ
ಜಿಂಕೆ ಮರಿಯಾಗಿ ಚಿಮ್ಮಿದ್ದಳ್ ಹುಡುಗಿ ೧೦

ಜಿಂಕೆಮರಿಯಾಗಿ ಚಿಮ್ಮಿರೋ ಹೊತ್ತಿಗೆ
ಬೇಟ್ಗಾರನಾಗಿ ಬಂದ್ ಕೆಡವಿದ್ದನ್ ಹುಡುಗ ೧೧

ಬೇಟ್ಗಾರನಾಗಿ ಬಂದ್ ಕೆಡವಿರೋ ಹೊತ್ತಿಗೆ
ಹೆಬ್ಬುಲಿನಾಗಿ ನಿಂತಿದ್ದಳ್ ಹುಡುಗಿ ೧೨

ಹೆಬ್ಬುಲಿನಾಗಿ ನಿಂತಿರೋ ಹೊತ್ತಿಗೆ
ಬೆಳ್ಳಿಕಟ್ಟಿನ ಕೋವಿ ಹಿಡಿದಿದ್ದನ್ ಹುಡುಗ ೧೩

ಬೆಳ್ಳಿಕಟ್ಟಿನ ಕೋವಿ ಹಿಡಿದಿರೋ ಹೊತ್ತಿಗೆ
ಮುತ್ತಿನ ಸೆರಗೊಡ್ಡಿ ಬೇಡಿದ್ದಳ್ ಹುಡುಗಿ—ಕುಂಜರದ ೧೪

## ಕೆಂಗಪ್ಪ

ತಂದಾನಿ ತಾನೊಂದರುಳೋ ಜಾಣ
ಅರುಳೋ ಮರುಳೊಂದರುಳೋ ಜಾಣ ॥ ಪಲ್ಲ ॥

ಗದ್ದುಗೆ ಬಿಟ್ಟೆದ್ದು ಬಾರೋ ಜಾಣ
ಗದ್ದುಗೇನೇ ಬಿಟ್ಟು ಎದ್ದು ಬಾರೊ ಕೆಂಗಪ್ಪ
ಓ, ಗದ್ದುಗೇಲಿದ್ರೆ ಶಿವಸಾಣ್ಗೋ ಜಾಣ—ತಂದಾನಿ
ಗದ್ದುಗೇಲಿದ್ದರೆ ಶಿವಸಾಣೆ ಶಿವರಾತ್ರೇ
ಮಗ್ಗು ಬಂದಾವೆ ಮುಡಿ ಬಾರೋ ಜಾಣ—ತಂದಾನಿ
ಮಗ್ಗು ಬಂದಾವೆ ಮುಡಿ ಬಾರೊ ಕೆಂಗಪ್ಪ
ಓ, ಮಗ್ಗಳ್ಳಿ ಬಾಯ್ ಬಿಡುತಾವ್ರೋ ಜಾಣ
ಹೂವಳ್ಳಿ ಬಾಯ್ ಬಿಡುತಾವ್ರೋ ಜಾಣ—ತಂದಾನಿ ೧

* * *

ಹೂವು ಇಲ್ಲವೆಂದು ಹೂವಿಗ್ ಹೋಗಲಿ ಬ್ಯಾಡ
ಹೂವು ಕೆಂಗಪ್ನ ಮನೆ ಹಿಂದೋ ಜಾಣ—ತಂದಾನಿ
ಹೂವು ಕೆಂಗಪ್ಪನ ಮನೆಹಿಂದೊ ಎಲೆ ಜಾಣ
ಹೂವಳ್ಳಿ ಬಾಯ್ ಬಿಡುತಾವ್ರೋ ಜಾಣ—ತಂದಾನಿ ೨

* * *

ಎಳ್ಳೂ(ನೆ) ಹೊಲದಾಗೆ ಎಳಕಿನ ಟಗರ ಸಾಕಿ
ಅಲ್ಲಿ ಬಂದವು ಮುಕ್ಕೆ ಮುನಿಸೋ ಜಾಣ—ತಂದಾನಿ
ಅಲ್ಲಿ ಬಂದsವುs ಮುಕ್ಕೆ ಮುನಿಸು ಕೆಂಗಪ್ಪಗೆ
ಓ, ಹತ್ತ್ಯಾನು ನೀಲಗುದುರೆಯ ಜಾಣ—ತಂದಾನಿ
ಹತ್ತ್ಯಾನು ನೀಲಗುದುರೇ ಕೆಂಗಪ್ಪನಾಗಲೇ
ಓ, ಸಾಲ್ ಹಿಪ್ಪೆ ಮರದ್ ನೆರಳಿಗೆ ಜಾಣ—ತಂದಾನಿ
ಸಾಲ್ ಹಿಪ್ಪೆಯುs ಮರದs ನೆರಳಾಗೆ ಕೆಂಗಪ್ಪ
ಸಣ್ಣ ಜಂಖಾನ ಕೊಡವ್ಹಾಸೋ ಜಾಣ—ತಂದಾನಿ
ಸಣ್ಣನೆ ಜಂಖಾನ ಕೊಡವ್ಹಾಸಿ ಕೆಂಗಪ್ಪ
ಅಲ್ಲಿ ಮಾಡಾನು ಸುಖನಿದ್ರೇ ಜಾಣ—ತಂದಾನಿ
ಅಲ್ಲಿ ಮಾಡಾನು ಸುಖನಿದ್ರೇ ಕೆಂಗಪ್ಪ

ಏಳು ಸೂಳೇರು ಕೈ ಕಟ್ಟ್ಕೋ ಜಾಣ—ತಂದಾನಿ
ಏಳು ಸೂಳೇರುs ಕೈ ಕಟ್ಟಿ ಕೇಳಾರಲ್ಲೋ
ಯಾವೂರ ಗೌಡ ನೀನಾರೋ ಜಾಣ—ತಂದಾನಿ ೩

ಹಳ್ಳಿಕಾರನಲ್ಲ ಹಾದಿಕಾರನಲ್ಲ
ಭದ್ರೆ ಚಿನ್ನಮ್ನ ಮಗನಲ್ಲೇ ಜಾಣೆ—ತಂದಾನಿ ೪

ಭದ್ರೆ ಚಿನ್ನಮ್ಮನ ಮಗನಾದರೇನಾಯ್ತು
ಏಳಯ್ಯ ನಮ್ಮರಮನೆಗ್ ಹೋಗೋವ್ ಜಾಣ—ತಂದಾನಿ ೫

ಅರಮನೆಗೆ ಬರುವ್ರೋದು ತರವೇನೆ ಎಲೆ ಜಾಣೆ
ಹಿಂದೆ ಬರುತಾರೆ ಹಿರಿಯೋರು ಜಾಣೆ
ಹಿಂದೆ ಬರುತಾರೆ ಹಿರಿಯೋರು ಎಲೆ ಜಾಣೆ
ದಂಡ ತೆಗೆದಾರು ಕುಲದಲ್ಲೇ ಜಾಣೆ—ತಂದಾನಿ ೬

ಕಸ್ತೂರೀ ಗಮಾ ಕೊಳ್ಳೋ ಸಾಮದ ಭರಣೀ ಕೊಳ್ಳೊ
ನಿನ ಜೆಂದೊಳ್ಳೆ ಮಕ್ಕಳಕೊಳ್ಳೋ ಜಾಣ—ತಂದಾನಿ ೭

ಕಸ್ತೂರೀ ಗಮಾನೊಲ್ಲೆ ಸಾಮದ ಭರಣೀನೊಲ್ಲೆ
ನಿನ ಕೆಟ್ಟಮೋರೆಗೇ ಬಡುಕೊಳ್ಳೇ ನಾರಿ—ತಂದಾನಿ ೮

ಹತ್ತುಕಾಲೇಣಿಯು ಹತ್ತಿ ಹೂ ಕುಯ್ಯೋನೆ
ಮತ್ಯಾರಿಗ್ ಹೂ ಕುಯಿದೀಯೋ ಜಾಣ—
ಮತ್ಯಾರಿಗೆ ಹೂವ ಕುಯಿದೀಯೊ ಎಲೆ ಜಾಣ
ಬ್ಯಾಡರ್ ಹುಡುಗೀಗೆ ಕುಯದಿರೋ ಜಾಣ—ತಂದಾನಿ ೯

ಬ್ಯಾಡರ್ ಹುಡುಗೀ ಸಂಗ ಬ್ಯಾಡಕಾಣೊ ಕೆಂಗಪ್ಪ
ಹಾಡ ಕಟ್ಯಾರು ನಿನ ಮೇಲೋ ಜಾಣ—
ಹಾಡ ಕಟ್ಯಾರು ನಿನ ಮೇಲೆ ಕೆಂಗಪ್ಪ
ಉಪ್ಪು ಚೆಲ್ಯಾರು ನಿನಮೇಲೋ ಜಾಣ—ತಂದಾನಿ ೧೦

## ಹಸೇನ್ಹುಸೇನ

### ೧

ಮೌಲಾಲಿನೆಂಬುದೊಂದು ಇರುವುದು ಪಟ್ಟಣಾ *
ಅಲ್ಲಿರುವುದು ಪಟ್ಟಣಾ
ತಕ್ಕೊ ವರುಷಲ್ಲಿದ್ದನಪ್ಪ ಮೌಲಾಲಿ ಶರಣಾ
ಮೌಲಾಲಿ ಶರಣಾ
ಮೌಲಾಲಿಗ್ ಮಕ್ಕಳಿಬ್ಬರ್ ಹಸೇನ್ ಹುಸೇನಾ
ಹಸೇನ್ ಹುಸೇನಾ
ಮಗನಿಗ್ ಪತ್ರ ಬರೆದಾನಪ್ಪ ತಂದೆ ದುಸುಮಾನಾ
ತಂದೆ ದುಸುಮಾನಾ
ಬಂದ ಪತ್ರ ಓದಿಕೊಳ್ಳೊ, ಸ್ವೈನಾ ಸ್ವೈನಾ—ಸ್ವೈನಾ...
ಕಣ್ಣಿಗ್ ಮೂಗಿಗೊತ್ತಿಕೊಂಡು ಓದ್ಯಾನ್ ಹುಸೇನಾ—ಓದ್ಯಾನ್....
ದಂಡಿಗಾದ್ರು ಪೋಗಬೇಕು ಕೊಡಮ್ಮ ಪ್ಪಣೆಯಾ—ಕೊಡಮ್ಮ
ದಿಕ್ಕುದೆಸೇನೆಲ್ಲಿ ತಿರುಗಿ ಸೋಸ್ಯಾರು ಹೆಣ್ಣಾ—ಸೋಸ್ಯಾರು
ಮದ್ದು ಗುಂಡು ಬಂಡಿಮೇಲೆ ಹೇರ್ಯಾರು ಜನಾ—ಹೇರ್ಯಾರು
ಸಾರಾ ರೀ ರೀ ಬಾರಾ ರಾ ರಾ ಬಿಟ್ಟರು ಬಾಣಾ—ಬಿಟ್ಟರು
ಥೋಂ ಗಡಗ ಥೀಂ ಗಡಗ ಹಾರ್ಯಾವು ಬಾಣಾ—ಹಾರ್ಯಾವು
ಬಂದು ಜನರು ಹೇಳುತಾರೆ ರಣದ ಸುದ್ದಿನಾ—ರಣದ
ರಕ್ತದ್ ಕಲ್ಯಾವ್ರೊಳ್ಗೆ ಬಿದ್ದು ತೇಲ್ಯಾವು ಹೆಣ—ತೇಲ್ಯಾವು
ಹೋಗಬೇಡ ಎನ್ನ ಕಂದ ರಣದ ಸುದ್ದೀನ—ರಣದ
ದುಃಖ ಮಾಡ್ತ ಕುಂತಳಣ್ಣ ಬೀಬಿ ಫಾತಿಮಾ—ಬೀಬಿ
ಅರಿಸಿನದ ಮೈನಾಗೆ ಒದಗಿತು ವಿಘ್ನಾ—ಒದಗಿತು

---

* ಇಲ್ಲಿರುವ ಎರಡು ಪದಗಳಿಗೂ ಅದರದರ ಮೊದಲ ಸಾಲೆ ಪಲ್ಲವಿ. ಒಂದೊಂದು ಸಾಲಿಗೂ ಈ ಪಲ್ಲವಿಯನ್ನು ಹೇಳಿಕೊಳ್ಳುತ್ತ ಪದ ಮುಂದುವರಿಸುತ್ತಾರೆ.

೨

ಸ್ವಾಮಿಾ ಹುಸೇನಾ—ಕತ್ತಲ್ | ರಾತ್ರಲಾ ದಿನಾ
ಘೋಂ ದುರ್ಗ ಧೀಂ ದುರ್ಗ | ಹಾರ್ತ್ರಾವ್ ಬಾಣಾ
ಆನೆ ಮೇಲೆ ಗುಂಡು ಮದ್ದು | ಹೇರ್‍ಯಾರು ಜನಾ
ಹೇರ್‍ಯಾರು ಜನಾ
ಘೋಂ ಕಡಗ ಧೀಂ ಕಡಗ | ಹಾರ್ತ್ರಾವ್ ಬಾಣಾ—ಸ್ವಾಮಿಾ ೧

ಕರಬಲ್ ಕೋಗಿಲ್ ರಣಗಂಬ್ಲೋಡಿ ಮಾಡ್ಯಾರು ಕದನಾ
ಮಾಡ್ಯಾರು ಕದನಾ
ಘೋಂ ಕಡಗ ಧೀಂ ಕಡಗ ಹಾರ್ತ್ರಾವ್ ಬಾಣಾ—ಸ್ವಾಮಿಾ ೨

ಹಸೇನ್ ಹುಸೇನ್ ಕೇಳ್ ಕುಲಕೆ ಪ್ಯೆದುನಾ—ಕುಲಕೆ
ಕದನಕೆ ಹೊರಟನು ಕಾಸಿಂ ಶರಣಾ—ಕಾಸಿಂ—ಸ್ವಾಮಿಾ ೩

ಬೀಬಿ ಎಂಬೊ ಜಮಾಲಮ್ಮ ಕೊಂದಳು ಕಾಸಿಮನಾ—ಕೊಂದಳು
ನೀರು ನೀರು ನೀರು ಎನ್ನುತ ಬಿಟ್ಟನು ಪ್ರಾಣಾ–ಬಿಟ್ಟನು–ಸ್ವಾಮಿಾ ೪

ಬೀಬಿ ಫಾತಿಂ ಕೇಳು ದಡ್ಡೀಗ್ಗಿಂಡೀ—ದಂಡೀಗ್ಗಿಂಡೀ
ಸುತ್ತಿ ಬಂದಳು ತಾಯಿ ಮಸೂತಿ ಬನಾ—ಮಸೂತಿ—ಸ್ವಾಮಿಾ ೫

ಹಸೇನ್ ಹುಸೇನ್ ಇವರಣ್ಣಾ ತಮ್ಮಾ—ಅಣ್ಣಾ ತಮ್ಮಾ
ಕಾಡ್ಹುತ್ತಿ ಹೋಗೋ ದಿನ ಬಂತೂ—ದಿನ ಬಂತೂ—ಸ್ವಾಮಿಾ ೬

ಬೀಬಿ ಫಾತಿಂ ತಾಯ ಕಣ್ಣೀರು ಬಳಿದು—ಕಣ್ಣೀರು ಬಳಿದು
ಕಾಡಿನಲ್ಲಿ ಸಾರಿದಳು ಜೈತುಂಬನಾ—ಜೈತುಂಬನಾ—ಸ್ವಾಮಿಾ ೭

ಸಾರಿ ಕೂಗಿದಳಲ್ಲೋ ಕಾಡಿನಲ್ಲಿ—ಕಾಡಿನಲ್ಲಿ
ತಾಯ ನೆನೆದು ದುಃಖ ಮಾಡಿ ಸ್ಮರಣೇ ಮಾಡಿ
ಸ್ಮರಣೇ ಮಾಡಿ—ಸ್ವಾಮಿಾ ಹುಸೇನಾ ೮

## ಸೋಬಾನದಿಂದ ಸುಖದಿಂದ

ಸೋಬಾನದಿಂದ ಸುಖದಿಂದ, ಸೋಬಾನವೇ || ಪಲ್ಲ ||

ಕುದುರೇ ಮೇಲ್ ಬರುವ್ರೋನು ಚದುರನೆಂಬುತಲಿದ್ದೆ
ಕದರುಗಾಲಿನ ಮದುವಣ್ಣ—ಸೋಬಾನವೇ
ಸೋಬಾನದಿಂದ
ಕದುರುಗಾಲಿನ ಮದುವಣ್ಣ ನಮ್ಮನೇ
ಚದುರೆಗೆ ನೀನೆಲ್ಲಿ ದೊರಕಿದೋ—ಸೋಬಾನವೇ
ಸೋಬಾನದಿಂದ ೧

ಒಂಟೇಮೇಲ್ ಬರುವ್ರೋನು ಬಂಟನೆಂಬುತಲಿದ್ದೆ
ಗಂಟುಗಾಲಿನ ಮದುವಣ್ಣ—ಸೋಬಾನವೇ
ಗಂಟುಗಾಲಿನ ಮದುವಣ್ಣ ನಮ್ಮನೇ
ಬಂಟಿಗೆ ನೀನೆಲ್ಲಿ ದೊರೆಕಿದೋ—ಸೋಬಾನವೇ
ಸೋಬಾನದಿಂದ ೨

## ಎತ್ತಿಲ್ ಕಾದೊ ಬುತ್ತಿಲ್ ಉಂಡೊ

ತಂದನಾನು ತಂದನಾ—ತಾ
ನಂದನಾನು ತಂದನಾ || ಪಲ್ಲ ||

ಎತ್ತೆಲ್ ಕಾದೊ, ಬುತ್ತೆಲ್ ಉಂಡೊ
ಎತ್ತಿಗೆ ನೀರಾ ಕುಡಿಸೀದೋ—ತಂದನಾನು
ಎತ್ತಿಗೆ ನೀರ ಕುಡಿಸಿದೆ ನನ್ನೈ
ಮುತ್ತಿನ ಸಾಗರದ್ ಹೊಳೆಯಾಗೆ—ತಂದನಾನು ೧

ಆವೆಲ್ ಕಾದೊ ಹೂವೆಲ್ ಮುಡಿದೊ
ಆವಿಗೆ ನೀರಾ ಕುಡಿಸೀದೊ—ತಂದನಾನು
ಆವಿಗೆ ನೀರ ಕುಡಿಸಿದೆ ನನ್ನೈ
ಹೂವಿನ ಸಾಗರದ್ ಹೊಳೆಯಾಗೆ—ತಂದನಾನು ೨

## ಚಿತ್ತಲಾರದ ಗೊಂಬೆ

ಚಿತ್ತಲಾರದ ಗೊಂಬೆ ನೀನ್
ಎತ್ತಮುಂದಲಾದರಮಾ ?
ಎತ್ತಮುಂದಲಾದರೇನೊ ?
ಚಿಂತೆ ನಿಮ್ಮದಲ್ಲರಮಾ ೧

ರೂವಲಾರದ ಗೊಂಬೆ ನೀನ್
ಯಾವತsರವಾದರಮಾ ?
ಯಾವತsರವಾದರೇನೊ ?
ಗ್ಯಾನ ನಿಮ್ಮದಲ್ಲರಮಾ ೨

ಸಗಣೆಯಂಥ ಬಡ್ಡಿ ನೀ
ಸಂತೆಗೇಕೆ ಹೋದರಮಾ ?
ಸಂತೇಗ್ ಹೋದರೇನೋ ಜಾಣ
ಚಿಂತೆ ನಿಮ್ಮದಲ್ಲರಮಾ ೩

## ಕೆದರದಿರು ಕೇದಿಗೆ

ಮಲ್ಲಿಗೇ ಮಳೆ ಹುಯ್ಯಲು
ಕೇದಿಗೇಕೆರೆ ಕಟ್ಟಲು
ಕೇದಿಗೇ ಕೇದಿಗೇ ನೀ
ಕೆದರದಿರು ಕೇದಿಗೇ
ಕೆದರಿದರೆ ಶಿವನಾ
ಪಾದದಾಣೆ ಕೇದಿಗೇ ೧

ದಿಬ್ಬದಾಗಳ ಮಲ್ಲಿಗೇ ನೀನ್
ಹಬ್ಬದಿರು ಮಲ್ಲಿಗೇ
(ನೀನ್) ಹಬ್ಬಿದರೆ ಶಿವನಾ
ಪಾದದಾಣೆ ಮಲ್ಲಿಗೇ ೨

ಹಳ್ಳದಾಗಳ ಮಲ್ಲಿಗೇ ನೀನ್
ಅಳ್ಳದಿರು ಮಲ್ಲಿಗೇ
(ನೀನ್) ಅಳ್ಳಿದರೆ ಶಿವನ
ಪಾದದಾಣೆ ಮಲ್ಲಿಗೇ ೩

## ಹುಬ್ಬಳ್ಳಿಂದ ತರಿಸಿ ಕೊಡುವೆ

ಹುಬ್ಬಳ್ಳಿಂದ ತರಿಸಿ ಕೊಡುವೆನ್ ಕಾಗಿನ್ ಕಣಾ
ತೀರಿತೀನೆ ಹುಡುಗಿ ನಿನ್ ಹಿಂದಲ್ ರುಣಾ ?
ನಿನಗಾಗಿ ಕಳಕೊಂಡೆ ಕಂದಾಯ್ದ್ ಹಣಾ
ಹುಬ್ಬಳ್ಳಿಂದ ತರಿಸಿ ಕೊಡುವೆನ್ ಕಾಗಿನ್ ಕಣಾ
ಚಿಲ್ಕಿ ಪಲ್ಕಿ ಚೆನ್ನಸೈನ ನಾಗರುಬೆಟ್ಟಾ
ಸೂಳೀ ದಮ್ಮಯ್ಯಾ ನೀನು ಹೊಣೆಯಾಗೆಂದಾ

## ಪಗಡೆಯ ಜೂಜು

ರಂಗನೊಲಿದಾ—ಗೋ-ವಿಂದನೊಲಿದಾ
ರಾಮನೊಲಿದಾ—ರಾಮ(ರ್) ಕೃಷ್ಣನೊಲಿದಾ || ಪಲ್ಲ

ಕರಿಯಪುರದ ನಗರದಲ್ಲಿ
ಕೌರವರು ಪಾಂಡವರು
ಧರಣಿಯನ್ನು ಒತ್ತೆಯಿಟ್ಟು
ಜೂಜನಾಡಲು—ರಂಗ ೧

ಪಾಪಿ ಕೇಡಿ ಶಕುನಿ ತಾನು
ಪಾಪದೊಳಗೆ ಸಿಲುಕಿದನು
ದಾತನು ಧರ್ಮಜನು
ದ್ರೌಪದಿಯ ಸೋತನು—ರಂಗ ೨

ಸೋತನೆಂಬ ಸುದ್ದೀ ಕೇಳಿ
ಪಾಪಿಯು ದುರ್ಯೋಧನ
ದೂತರಟ್ಟಿ ಪಾಂಡವರ
ಬದುಕ ತರಿಸಿದ—ರಂಗ ೩

ಭೂಮಿಕಾಣಿ ಎಲ್ಲ ಸೋತು
ಆನೆಸಾಲು ಒಂಟೆಸಾಲು
ಬೇಡವೆಂದರೂ
ಭಂಡಾರ ತರಿಸಿದ—ರಂಗ ೪

ಪಟ್ಟ ಪದವಿ ಅವರಿಗಿರಲಿ
ಬಡವರ್‌ಹಂಗೆ ಇದ್ದೇವೆಂದ್ರೆ
ಕೆಟ್ಟದೊಂದು ಪಗಡೇ ಜೂಜು
ಎಲ್ಲಿ ದೊರಕಿತೋ—ರಂಗ ೫

## ಕೃಷ್ಣರಾಯ

ಇಂದಿಬಾರೊ ರಾಯನೇ ಗೋವಿಂದನ್ಯಾತಕೊ ಬಾರನೇ
ಬಾರನ್ ಹಕ್ಕಿ ಸಾರನೇ ಧೀರ ಕೃಷ್ಣರಾಯನೇ || ಪಲ್ಲ ||

ಹಿಂಡು ಗೆಣೆಯರ ಕೂಡಿಕೊಂಡು
ಚೆಂಡುಬುಗುರೀನಾಡುತ
ಚೆಂಡುಬುಗುರೀನಾಡುವಂಥ
ಚೆಲುವ ಕೃಷ್ಣರಾಯನೇ ೧

ಕಾಳಿಂಗ ಮಡುವನ್ನೆ ಧುಮುಕಿ
ನೀರನೇ ಕಲಕಾಡುತ
ನೀರನೇ ಕಲಕಾಡುವಂಥ
ಬಾಲ ಕೃಷ್ಣರಾಯನೇ ೨

ಹಿಂಡು ದನವಿನೊಳಗೆ ನುಗ್ಗಿ
ಹಸುವಿನ್ ಹಾಲ ಕುಡಿದನೇ
ಹಸುವಿನ್ ಹಾಲ ಕುಡಿದೋನ್ ಯಾರು
ಹಸುಳೆ ಕೃಷ್ಣರಾಯನೇ ೩

ಬಿಲ್ಲಿನ್ ಹಬ್ಬಕ್ ಹೋದನೆ
ಮಾವ ಕಂಸನ ಕೊಂದನೆ
ಮಾವ ಕಂಸನ ಕೊಂದೋನ್ ಯಾರು
ಮಾಯಿ ಕೃಷ್ಣರಾಯನೇ ೪

ಗೊಂದೀ ಮನೆಗೆ ಬಂದನೇ ನನ
ಬಂದೀ ಕೀಲ ಮುರಿದನೆ
ಬಂದೀ ಕೀಲ ಮುರಿದೋನ್ ಯಾರು
ಬಾಲ ಕೃಷ್ಣರಾಯನೇ ೫

ಹುಲ್ಲಿನ ಮನೆಗೆ ಬಂದನೆ ನನ
ಪಿಲ್ಲಿಕಾಲ ತುಳಿದನೆ
ಪಿಲ್ಲಿಕಾಲ ತುಳಿದೋನ್ ಯಾರು
ಚಲ್ವ ಕೃಷ್ಣರಾಯನೇ ೬

ಗೊಲ್ಲರ ಮನೆಗ್ ಹೋದನೆ
ಹಾಲುಬೆಣ್ಣೆ ಕದ್ದನೇ
ಹಾಲುಬೆಣ್ಣೆ ಕದ್ದೋನ್ ಯಾರು
ಲೋಲ ಕೃಷ್ಣರಾಯನೇ ೭

## ಕೊನೆಯ ಪದ


ಕೋಲೇ ಕೋಲೇ ಕೋಲೆ ಕೋಲನ್ನ ಕೋಲೆ
ಕೋಲೇ ಚಿನ್ನದಾ ರತುನಾದ ಕೋಲೆ || ಪಲ್ಲ ||

ನೆತ್ತೀ ಮ್ಯಾಗಳ ನಾರಾಯ್ಣ ಹೊತ್ತಿರುವ್ರೋ ಭೂಮಿತಾಯಿ
ಮತ್ತೆ ನಿನ ಕೋಲ ಬಿಡುತೇನ—ಕೋಲೇ
ಮತ್ತೆ ನಿನ ಕೋಲ ಬಿಡುತೇವೆ ಭೂಮಿತಾಯಿ
ನಾಳೆ ಊಟ್ ಹೊತ್ತಿಗೆ ಬರುತೇವೆ—ಕೋಲೇ ೧

ಎಲ್ಲೋರ ನೆನದೇವೆ ಮಲ್ಲಿಗೆ ಸರದೋರ
ಅಲ್ಲೊಬ್ಬ ಶಿವನ ಮರೆತೇವೆ—ಕೋಲೇ
ಅಲ್ಲೊಬ್ಬ ಶಿವನ ಮರೆತೆವೆ ಪಾರ್ವತಿ
ಇಲ್ಲಿಂದ ಕೈಯ ಮುಗುದೇವೆ—ಕೋಲೇ ೨

ತೆನೆ ೨

## ತಿಂಗಳು ಮಾವನ ಪದಗಳು



# ಪರಿಚಯ

ದೊಡ್ಡ ಊರುಗಳಲ್ಲೂ ಪಟ್ಟಣಗಳಲ್ಲೂ ಹುಡುಗರು ಮನೆಮನೆಗೂ ಸುತ್ತಿ ಬೆರಣಿ ಕಟ್ಟಿಗೆಗಳನ್ನು ಕೂಡಹಾಕಿ ಓಕುಳಿ ಎರಚಾಡಿ (ಕೆಲವು ವೇಳೆ ಬಂಡು ಪದಗಳನ್ನು ಹಾಡುತ್ತ) ಕಟ್ಟಿಗೆಯ ಒಟ್ಟಿಲನ್ನು ಸುಟ್ಟು 'ಕಾಮನ ಹಬ್ಬ' ಮಾಡುವುದು ವಾಡಿಕೆಯಾಗಿದೆ. ನಮ್ಮ ಹಳ್ಳಿಯ ಒಕ್ಕಲಿಗರು ಈ ಹಬ್ಬ ಮಾಡುವ ರೀತಿಯೇ ಬೇರೆ. ಅದರಲ್ಲಿ ಪಟ್ಟಣದ ಆಡಂಬರವಿಲ್ಲದಿದ್ದರೂ ಒಂದು ಸರಳ ಸೌಂದರ್ಯವಿದೆ. ಹಳ್ಳಿಯ ಜೀವನದಲ್ಲಿ ಬೆರೆತು ನೋಡುವವರಿಗೆ ಸಹಜವಾದ ಆನಂದ ದೊರೆಯುತ್ತದೆ.

ಫಾಲ್ಗುಣ ಶುದ್ಧ ಪಾಡ್ಯದಿಂದ ಪ್ರತಿ ಸಂಜೆಯೂ ಹಳ್ಳಿಯ ಹುಡಗ ಹುಡುಗಿಯರೆಲ್ಲ ಎರಡು ಪಂಗಡವಾಗಿ 'ತಿಂಗಳು ಮಾವನ ಪದ'ಗಳನು ಹಾಡಿಕೊಂಡು ಮನೆಮನೆಗೂ ಹೋಗುತ್ತಾರೆ. ಎಲ್ಲ ಮನೆಯವರೂ ಮಕ್ಕಳ ಪದಗಳನ್ನು (ಪದ ಹೇಳುವವರು ಹೆಣ್ಣು ಮಕ್ಕಳು ಮಾತ್ರ. ಗಂಡು ಮಕ್ಕಳು ಕೆಲವು ವೇಷ ಹಾಕುತ್ತಾರೆ, ಆಟ ಆಡುತ್ತಾರೆ) ಕೇಳಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಅಕ್ಕಿ ಕಾಯಿ, ದುಡ್ಡು ಮೊದಲಾದ್ದನ್ನು ಕೊಡುತ್ತಾರೆ. ಹುಣ್ಣಿಮೆಯ ದಿನ ದೊಡ್ಡ ಹಬ್ಬ. ಗಂಡು ಹೆಣ್ಣು ಮಕ್ಕಳು ತಾವು ಎತ್ತಿ ತಂದದ್ದನ್ನೆಲ್ಲ ಒಟ್ಟು ಸೇರಿಸಿ, ಬಂದ ಹಣದಲ್ಲಿ ಹಬ್ಬಕ್ಕೆ ಬೇಕಾದ ಅಣಿಯನ್ನು ಒದಗಿಸಿಕೊಳ್ಳುತ್ತಾರೆ. ಸಂಜೆ ಹೆಣ್ಣು ಮಕ್ಕಳು ಊರಿನ ಗುಡಿಯ ಮುಂದೆ ಸಾರಿಸಿ ರಂಗವಲ್ಲಿಯಿಂದ 'ತಿಂಗಳು ಮಾವನ ಹಸೆ' (ಸೂರ್ಯ, ಚಂದ್ರ ಮುಂತಾದ ಕೆಲವು ಚಿತ್ರಗಳನ್ನು) ಬರೆಯುತ್ತಾರೆ. ಪೂಜೆಗೆ ಅಣಿಮಾಡಿ ರೊಟ್ಟಿ ತಟ್ಟುತ್ತಾರೆ. ಇವರ ಔತಣಕ್ಕೆ ಮನೆಗೊಂದಾಳಿನಂತೆ ಊರಿನವರೆಲ್ಲ ಬರುತ್ತಾರೆ. ಬೆಳದಿಂಗಳಿನಲ್ಲಿ ಎಲ್ಲರೂ ಒಟ್ಟು ಸೇರಿ ಸಡಗರದಿಂದ ಹಬ್ಬ ಮಾಡುತ್ತಾರೆ.

ಹುಡುಗಿಯರು ಒಂದೆರಡು ರೊಟ್ಟಿಗಳನ್ನು ಕೆಲವು ಬೆರಣಿಗಳ ಜೊತೆ ಸೇರಿಸಿ ಮುಚ್ಚಿಟ್ಟಿರುತ್ತಾರೆ. ಅವನ್ನು ಗಂಡು ಹುಡುಗರಲ್ಲಿ

ಒಬ್ಬ (ಬಸವ) ಎತ್ತಿಕೊಂಡು ಹೋಗಬೇಕು. ಅವನು ಆ ರೊಟ್ಟಿಯನ್ನು ತೆಗೆದುಕೊಂಡು ಹೋಗುವಾಗ ಎರಡು ಸಾಲಾಗಿ ನಿಂತಿರುವ ಹುಡುಗಿಯರು ಬೆರಣಿಯಿಂದ ಹೊಡೆಯುತ್ತಾರೆ. ಬಸವ ಅವರ ಏಟಿಗೆ ಹೆದರದೆ ರೊಟ್ಟಿಯನ್ನು ಎತ್ತಿಕೊಂಡು ಹೊರಬಿದ್ದ ಮೇಲೆ ಅವನ ಸಂಗಡಿಗರು ಅವನನ್ನು ಹಿಡಿಯ ಹೋಗುತ್ತಾರೆ. ಅವನು ಯಾರಿಗೂ ಸಿಕ್ಕದ ಹಾಗೆ ಓಡಬೇಕು. ಓಡಿಹೋಗಿ ಕೆರೆಯ ಹತ್ತಿರ ಒಂದು ಮರದ ಮೇಲೆ ರೊಟ್ಟಿಯನ್ನು ತಿಂದು ಗುರುತಿಗೆ ಒಂದು ರೆಂಬೆಯನ್ನು ಮುರಿದುಕೊಂಡು ತರಬೇಕು. ಬೆಳದಿಂಗಳಲ್ಲಿ ಈ ಓಟ, ಆಟ ಬಹು ಸೊಗಸಾಗಿರುತ್ತದೆ (ಸ್ವಲ್ಪ ಮಟ್ಟಿಗೆ 'ಪೇಪರ್-ಚೇಸ್' ಆಟವನ್ನು ನೆನಪಿಗೆ ತರುತ್ತದೆ). ಬಸವ ರೊಟ್ಟಿ ತಿಂದು ಬಂದ ಮೇಲೆ ಗುಡಿಯ ಮುಂದೆ ತಿಂಗಳು ಮಾವನ ಪೂಜೆ. ತಿಂಗಳು ಮಾವನಿಗೆ ಮದುವೆಯಾಗಬೇಕು. ಹುಡುಗರಲ್ಲಿ ಒಬ್ಬ 'ಮದಲಿಂಗ'ನನ್ನೂ ಹುಡುಗಿಯರಲ್ಲಿ ಒಬ್ಬಳು 'ಮದಲಗಿತ್ತಿ'ಯನ್ನೂ ಆಯುತ್ತಾರೆ. ಮದುವೆಯ ಶಾಸ್ತ್ರ ನಡೆಯುತ್ತದೆ. ಆಟ, ಪೂಜೆ, ಮದುವೆ ಇವು ನಡೆಯುತ್ತಿರುವಾಗಲೆಲ್ಲ, ಆಮೇಲೂ ಪದಗಳ ಸುಗ್ಗಿ. 'ತಿಂಗಳು ಮಾವನ ಪದಗಳು' ಮುಗಿದರೂ ಹುರುಡು ನಿಲ್ಲುವುದಿಲ್ಲ. ತಾವು ಕಲಿತ ಪದಗಳನ್ನೆಲ್ಲ ಹಾಡಿಬಿಡುತ್ತಾರೆ. ಮಕ್ಕಳ ನಲಿವಿನಲ್ಲಿ ಹಿರಿಯರೂ ಹಿಗ್ಗುತ್ತಾರೆ. ಕಡೆಗೆ ಎಲ್ಲರೂ ರೊಟ್ಟಿ ತಿಂದು ಆನಂದದಿಂದ ಮನೆಗೆ ಹೋಗುತ್ತಾರೆ.

ಈ ಪದಗಳಲ್ಲಿ ಶೃಂಗಾರದ ಪದಗಳೂ ಕೆಲವಿವೆ. ಆದರೆ ಹೆಂಗಸರು ಮಕ್ಕಳು ಸೇರಿದ ಸಭೆಗಳಲ್ಲಿ ಹೇಳುವುದಕ್ಕೆ ಹಿಂಜರಿಯುವಂಥದು ಒಂದೂ ಇಲ್ಲ. ಮನಸ್ಸಿಗೆ ಕೊಳೆಬಳಿಯುವ, ಜುಗುಪ್ಸೆತರುವ, ಒಂದು ಮಾತೂ, ಒಂದು ನಡತೆಯೂ ಇಲ್ಲಿ ಕಾಣುವುದಿಲ್ಲ.

ನಮ್ಮ ಹಳ್ಳಿಯ ಸುತ್ತಮುತ್ತ ಸುಮಾರು ೨೦-೨೫ ಮೈಲಿಯ ವರೆಗೂ—ಹಾಸನ, ಚಿಕ್ಕಮಗಳೂರು, ಅರಸೀಕೆರೆಗಳ ನಡುವಣ ಪ್ರದೇಶದಲ್ಲಿ-ಈ ಬಗೆಯ ತಿಂಗಳು ಮಾವನ ಪೂಜೆ ರೂಢಿಯಲ್ಲಿದೆ. ಹೊರಗೆ

ಎಲ್ಲೆಲ್ಲಿ ಹರಡಿದೆಯೋ ತಿಳಿಯದು. ಬೆಂಗಳೂರು ಮೈಸೂರು ಕಡೆಯ ಹಳ್ಳಿಗರಿಗಂತೂ ಇದು ಗೊತ್ತಿಲ್ಲವೆನ್ನಬಹುದು.

ಈ 'ತಿಂಗಳು ಮಾವನಪೂಜೆ', 'ಬೆಳದಿಂಗ್ಳಪ್ಪನ' ಪೂಜೆ, ನಮ್ಮ ಹಿಂದಿನ ಸಾಹಿತ್ಯದಲ್ಲಿ ಕಾಣಬರುವ 'ಕೌಮುದೀ ಮಹೋತ್ಸವ'ದ ಉಳಿಕೆಯಾಗಿರಬಹುದೆ?

ನಮ್ಮ ಒಂದು ಹಳ್ಳಿಯಲ್ಲಿ ದೊರೆತಷ್ಟನ್ನು ಒಟ್ಟುಗೂಡಿಸಿ ಅರ್ಥವಾಗುವಷ್ಟನ್ನು ಆಯ್ದು ಇಲ್ಲಿ ಕೊಟ್ಟಿದೆ. ಉಳಿದ ಕಡೆ ಹುಡುಕಿದರೆ ಮತ್ತಷ್ಟು ಸಿಕ್ಕಬಹುದು.

## ತಿಂಗಳು ಮಾವನ ಪದಗಳು

ತಿಂಗ್ಳು ತಿಂಗ್ಳಿಗೆ ತಿಂಗಳು ಮಾವನ ಪೂಜೆ
ಗರುಡನ ಪೂಜೆ ಗನಪೂಜೆ—ಕೋಲುಮಲ್ಲಿಗೆ ಕೋಲೆ
ಗರುಡನ ಪೂಜೆ ಗನಪೂಜೆ ತಿಂಗಳು ಮಾವ
ನಿನ ಪೂಜೆ ಗಂಗೆ ದಿಡದಾಗೆ—ಕೋಲು ೧

* * *

ತಿಂಗ್ಳು ಮಾವನ ತಂಗೇರೇಳು ಮಂದಿ
ಬಂಗಾರದೋಲೆ ಬಳಿಯೋರು—ಕೋಲು
ಬಂಗಾರದೋಲೆ ಬಳಿಯೋರ್ ತಿಂಗಳುಮಾವ
ಮಂಗಳಾರತ್ಯೊಂದ್ ಹದಿನೈದು—ಕೊಲು
ಮಂಗಳಾರತ್ಯೊಂದ್ ಹದಿನೈದ್ ತಿಂಗಳು ಮಾವ
ಒಂದೇ ಪಂಜಾಗೆ ಹೊರಹೊರಡೋ—ಕೋಲು ೨

ಒಂದೇ ಪಂಜಾಗೆ ನಾನ್‌ಹೆಂಗ್ ಹೊರಹೊರಡಲಿ
ಐನೂರು ಪಂಜ ತರಿಸಮ್ಮ—ಕೋಲು
ಐನೂರು ಪಂಜಿಗೈಗೊಳಗೆಣ್ಣೆ ಬೇಕು
ನಾವೆಲ್ಲ ಮಾರ್ನ ಬಡವರು—ಕೋಲು

ನಾವೆಲ್ಲ ವಾರ್ನ ಬಡವರ್ ತಿಂಗಳು ಮಾವ
ಎಳ್ಡೆ ಪಂಜಾಗೆ ಹೊರಹೊರಡೊ—ಕೋಲು ೩

ಎಳ್ಡೆ ಪಂಜಾಗೆ ನಾನ್ ಹೆಂಗ್ ಹೊರಹೊರಡಲಿ
ನಾನೂರು ಪಂಜ ತರಿಸಮ್ಮ—ಕೋಲು

ನಾನೂರು ಪಂಜಿಗ್ನಾಗೊಳಗೆಣ್ಣೆ ಬೇಕು
ನಾವೆಲ್ಲ ವಾರ್ನ ಬಡವರು—ಕೋಲು
ನಾವೆಲ್ಲ ವಾರ್ನ ಬಡವರ್ ತಿಂಗಳು ಮಾವ
ಮೂರೇ ಪಂಜಾಗೆ ಹೊರಹೊರಡೊ—ಕೋಲು ೪

( ಹೀಗೆಯೇ ನಾಲ್ಕು, ಐದು )

*     *     *     *

ನಮ್ ಹಟ್ಟೀಲೊಂದು ಅರಿಸಿನದ ಗಿಡ ಹುಟ್ಟಿ
ಹಟ್ಟಟ್ಟಿಗೆಲ್ಲ ಹರಿದsವೆ—ಕೋಲು
ಹಟ್ಟಟ್ಟಿಗೆಲ್ಲ ಹರಿದಂಥ ಅರಿಸಿನವ
ಚಿನ್ನದ ಗುದ್ಲೀಲಿ ಅಗಸ್ಯಾರೆ—ಕೋಲು
ಚಿನ್ನದ ಗುದ್ಲೀಲಿ ಅಗೆದಂಥ ಅರಿಸಿನವ
ರನ್ನದ ಮುಂಕ್ರೀಲಿ ಮಗೆದsರೇ—ಕೋಲು
ರನ್ನದ ಮುಂಕ್ರೀಲಿ ಮಗೆದಂಥ ಅರಿಸಿನವ
ಹಾಲು ಬಾವೀಲಿ ತೊಳೆದsರೆ—ಕೋಲು
ಹಾಲು ಬಾವೀಲಿ ತೊಳೆದಂಥ ಅರಿಸಿನವ
ಮಾಳಿಗೇಲ್ಹಾಕಿ ಮಡಗ್ಯಾರೆ—ಕೋಲು
ಮಾಳಿಗೇಲ್ಹಾಕಿ ಮಡಗ್ದಂಥ ಅರಿಸಿನವ
ಬೇಲೂರ ಸೂಳೆ ಬೆಲೆ ಮಾಡಿ—ಕೋಲು
ಬೇಲೂರ ಸೂಳೆ ಬೆಲೆ ಮಾಡಿ ಕೊಂಡಳಲ್ಲೆ
ಕೊಂಬು ಕೊಂಬಿಗೆ ಹಣವಡ್ಡ—ಕೋಲು ೨೯

*     *     *

ಚಿಕ್ಕ ಚಿಕ್ಕ ಸೌತೇಕಾಯಿ ಚಿಕ್ಕ ಮೂಟೆ ಕಟ್ಟಿ
ಚಿಕ್ಕೇರೀ ಮೇಲೆ ಬರುವ್ರೋರೆ—ಕೋಲು
ಚಿಕ್ಕೇರೀ ಮೇಲೆ ಬರುವ್ರೋ ಬೆಳದಿಂಗ್ಳಪ್ಪನ
ಚಿಕ್ಕೇರೀ ಸೂಳೆತಡದಳೆ—ಕೋಲು ೬

ತಡೆದರೆ ತಡೆಯಲಿ ತಳಿಮಂಚಾನ್ ಹಾಸಲಿ
ಹಾಸಿದಾ ಮಂಚ ಗಿಳಿ ಬೇಡಿ—ಕೋಲು
ಹಾಸಿದಾ ಮಂಚ ಗಿಳಿ ಬೇಡಿ ತಿಂಗಳುಮಾವ
ಸುವ್ವರದ ನಗೆಯ ನಗುತಾವೆ—ಕೋಲು ೭

*　　　*　　　*

ಒಂದು ಕಂಬಕೆ ಚಿನ್ನ ಒಂದು ಕಂಬಕೆ ರನ್ನ
ಒಂದು ಕಂಬಕೆ ನವರತ್ನ—ಕೋಲು
ಒಂದು ಕಂಬಕೆ ನವರತ್ನ ತಿಂಗಳುಮಾವ
ಒಂದೇ ದಿನದ ಮದಲಿಂಗ—ಕೋಲು ೧
(ಹೀಗೆಯೇ ಎರಡು, ಮೂರು, ನಾಲ್ಕು, ಐದು)

*　　　*　　　*

ಒಂದು ಚಿಬ್ಲಿಗೆ ಒಂದೇ ಅಚ್ಚಿನ ಬೆಲ್ಲ
ಒಂದೆಲೆ ಮಾವ ಚಿಗುರೆಲೆ—ಕೋಲು
ಒಂದೆಲೆ ಮಾವ ಚಿಗುರೆಲೆ ತಿಂಗಳು ಮಾವ
ಒಂದಿನ್ ನಮ್ ಹಟ್ಟೀಲಿರವ್ರೊಲ್ಲ—ಕೋಲು ೧
(ಹೀಗೆಯೇ ಎರಡು, ಮೂರು, ನಾಲ್ಕು, ಐದು)

*　　　*　　　*

ತಿಂಗ್ಳು ಮಾವನ ತಂಗಿ ಸೂತುಕನಾಗಿ
ತುಂಬೆ ಹೂವಿನ ಗುಡುಲ್ಹಾಕಿ—ಕೋಲು
ತುಂಬೆ ಹೂವಿನ ಗುಡುಲ್ಹಾಕಿ ತಿಂಗಳು ಮಾವ

ಮಿಾಯಾನೆಂದರೆ ತಾವಿಲ್ಲ—ಕೋಲು
ಮಿಾಯಾನೆಂದರೆ ತಾವಿಲ್ ತಿಂಗಳು ಮಾವ
ಹೋಗಯ್ಯ ಮುಗಿಲ ಸೆರಗಿಗೆ—ಕೋಲು ೧೦

ತಿಂಗ್ಳುಮಾವನ ಅಕ್ಕ ಸೂತುಕನಾಗಿ
ಹಿಪ್ಪೆ ಹೂವಿನ ಗುಡುಲ್ಹಾಕಿ—ಕೋಲು
ಹಿಪ್ಪೆ ಹೂವಿನ ಗುಡುಲ್ಹಾಕಿ ತಿಂಗಳುಮಾವ
ಮಿಾಯಾನೆಂದರೆ ತಾವಿಲ್ಲ—ಕೋಲು
ಮಿಾಯಾನೆಂದರೆ ತಾವಿಲ್ ತಿಂಗಳು ಮಾವ
ಹೋಗಯ್ಯ ಮುಗಿಲ ಸೆರಗಿಗೆ—ಕೋಲು ೧೧

* * *

ಎಣ್ಣೆ ಗೊರವನ ಹಕ್ಕಿ ನಾಗಾಭರಣದ ಹಕ್ಕಿ
ಹಾರ್ಯಾವೆ ಹಕ್ಕಿ ಗಗನಕ್ಕೆ—ಕೋಲು
ಹಾರ್ಯಾವೆ ಹಕ್ಕಿ ಗಗನಕೆ ಮುತಿಗಟ್ಟಿದ
ಸಾಲಳ್ಳೀಮರದ ನೆರಳಿಗೆ—ಕೋಲು ೧೨

* * *

## ಹೆಣ್ಣು ಕೇಳುವುದು

ಒಂದೇ ಶಿಕಾರಿ ಬಸವ
ಬಲ ಹನುಮ
ಬಲು ಚದುರ
ಬಲದೆ ಭುಜದ ಮೇಲೆ ಸಣ್ಣ ಗಂಟು
ಎಣ್ಣೆ ನಾಮ,
ಸಾರಿರಯ್ಯಾ—ನಾವು
ಹೆಣ್ಣ ಗಂತ ಬರುತೀವಿ ಕೊಡಿರಯ್ಯ ೧೩
( ಹೀಗೆಯೇ ಎರಡೇ ಶಿಕಾರಿಬಸವ ಇತ್ಯಾದಿ )

* * *

## ಚೆಂಡಾಟ (?)

ಬತ್ತ ಹಾಕಯ್ಯಾ ಮಾದ
ಬತ್ತಕ್ ನೀರಿಲ್ಲಾ ಮಾದ
ಯಾತ ಎತ್ತಯ್ಯಾ ಮಾದ
ಎಲಗನ್ನಿದ್ದಯ್ಯಾ ಮಾದ
ಬೆಂಕೆಂಬೋದ್ರುಮೇ ಮಾದ
ಬೇಗೆಂಬೋದ್ರುಮೇ ಮಾದ
ಸಲ್ಲಂಬೋ ಕೆರೇ ರಾಮುರ್
ತಲೆ ಚೆಂಡಾಡ್ಯಾರೆ ೧೪

*  *  *  *

## ಹೆಣ್ಣುಮಕ್ಕಳು ಕೈ ಕೈ ಹಿಡಿದುಕೊಂಡು ಗರಗರನೆ ಸುತ್ತು ತಿರುಗುವ ಆಟ

ಹೊಂದೇರ್ ಹಕ್ಕಿ ಬಂದsವಕ್ಕ
ಗರಗರನಾಡಿ ನಿಂದsವಕ್ಕ
ಕಾಮುನೂರಾ ಹೊಳೆsಯಿಂದ
ಕುಂತು ನಿಂತು ಬರುsತಿದ್ದ
ಕಾಮುನ್ ಯಾರೆ ತಡsದೋರು ?
ಭಿಮುನ್ ಯಾರೆ ತಡsದೋರು ?
ಬಾರಯ್ಯ ಬೆಳದಿಂಗಳೇ—ನಮ್ಮೂರ
ಹಾಲಿನಂಥ ಬೆಳದಿಂಗಳೇ ೧೫

*  *  *  *

## ವಿನೋದದ ಮಾತು

ಬತ್ತ ಬತ್ತ ತಂಡ್ಯೈ ಕಟ್ಟಿ ಎಲ್ಲ ಲಾಲೇ—ನಾವು
ಬತ್ತ್ರದ್ ಸೀಮ್ಯೋರಲ್ಲ ಕಾಣೆ ಪದ್ಮ ಲಾಲೆ
ಬತ್ತ ಬತ್ತ ತೆಂಡ್ಯೈ ಕಟ್ಟಿ ಎಲ್ಲ ಲಾಲೇ—ನೀವು
ಬತ್ತ್ರದ್ ಸೀಮ್ಯೋರ್ ಹೌದು ಕಾಣೆ ಪದ್ಮಲಾಲೆ ೧

* * * *

ಒಂದೆ ಮೆಟ್ಟು ನೀರ ನಾನು ಚೆಲ್ಲಲಾರೆನೇ
ಅಕ್ಕ ಚೆಲ್ಲಲಾರನೇ
ಚಂದ್ರಗಾವಿ ಶಣದೋರ್ ಯಾರೆ ಹೊಳೆಯಾಗೆ—ನಾವು
ಬಂದು ಬೇಟೇಸಾಡುತಿದ್ವು ಬಯಲಾಗೆ ೨

(ಅಪೂರ್ಣ)

# ತೆನೆ ೩

## ರಾಗಿ ಕಲ್ಲಿನ ಪದಗಳು



## ಪರಿಚಯ

ಕೋಲಾಟ ಆಡದ ಮತ್ತು ಬೇರೆ ಯಾವ ಪದವನ್ನೂ ಅರಿಯದ ಗಂಡಸರಿರುವ ಹಳ್ಳಿ ಸಿಕ್ಕಬಹುದು. ಆದರೆ 'ರಾಗಿ ಕಲ್ಲು ಪದ' ಹೇಳದ ಹೆಂಗಸರಿರುವ ಹಳ್ಳಿ ಎಷ್ಟು ಹುಡುಕಿದರೂ ಸಿಕ್ಕಲಾರದು. ಒಂದು ಮನೆಯ ಹಳ್ಳಿಯಲ್ಲಿ ಕೂಡ ರಾಗಿ ಕಲ್ಲು ಇದ್ದೇ ಇರುತ್ತದೆ. ರಾಗಿ ಬೀಸುವಲ್ಲೆಲ್ಲ ಸಾಮಾನ್ಯವಾಗಿ ಬೀಸುವ ಪದ ಕೇಳಬರುತ್ತದೆ.

ಬೆಳಗಿನ ಜಾವ ಸುಮಾರು ಮೂರು ನಾಲ್ಕು ಗಂಟೆಯ ಹೊತ್ತಿಗೇ ನಮ್ಮ ಹಳ್ಳಿಯ ಹೆಂಗಸರು ತಮ್ಮ ನಿತ್ಯಗಟ್ಟಳೆಯ ಕೆಲಸಕ್ಕೆ ತೊಡಗುತ್ತಾರೆ. ಆಗ ಪ್ರಕೃತಿದೇವಿ ಎಚ್ಚತ್ತು ಕತ್ತಲೆಯ ಮುಸುಕನ್ನು ಓಸರಿಸಿ ಮೆಲ್ಲ ಮೆಲ್ಲನೆ ಕಣ್ಣು ಬಿಡುತ್ತಿರುವ ಕಾಲ. ಆ ಪ್ರಶಾಂತ ಸಮಯದಲ್ಲಿ ಎದ್ದು ಕುಳಿತರೆ ಹಳ್ಳಿಯ ಹಲವು ಕಡೆಗಳಿಂದ ಮಂಜುಳನಾದ ತಂಗಾಳಿಯ ಮೇಲೆ ಅಲೆಅಲೆಯಾಗಿ ಹರಿಯುತ್ತ ಬಂದು ಕಿವಿಗೆ ತುಂಬುತ್ತದೆ; ಮೂಡಿ ಬರುತ್ತಿರುವ ಹಗಲಿಗೆ ಸ್ವಾಗತ ನೀಡುತ್ತದೆ. ಹಕ್ಕಿಗಳ ಚಿಲಿಪಿಲಿಗಿಂತ ಎಷ್ಟೋ ಮೊದಲೇ ಕೇಳಬರುವ ಆ ಉದಯರಾಗವೇ ನಮ್ಮ ಹಳ್ಳಿಯ ಹೆಂಗಸರು ರಾಗಿ ಬೀಸುತ್ತ ಹೇಳುವ ಹಾಡಿನ ದನಿ.

ಅವರ ಹಾಡಿಗೆ ಗರಗರನೆ ಬೀಸುವ ಕಲ್ಲಿನ ಸದ್ದೇ ಶ್ರುತಿ; ಘಲ್ ಘಲ್ ಎಂದು ಉಲಿಯುವ ಬಳೆಯ ಸದ್ದೇ ತಾಳ. ಈ ಶ್ರುತಿ ತಾಳಗಳ ಮೇಳನದಿಂದ ಆ ಹಾಡಿಗೆ ಒಂದು ಅಪೂರ್ವವಾದ ಕಳೆ ಕೂಡಿ ಬರುತ್ತದೆ. ಒಬ್ಬರ ದನಿಗೆ ಒಬ್ಬರು ಮರುದನಿ ಕೊಡುತ್ತ ದನಿಯನ್ನು ಏರಿಸುತ್ತ ಇಳಿಸುತ್ತ ಹುರುಪಿನಿಂದ ಹಾಡುವ ಅವರ ಪದಗಳಲ್ಲಿ ಸಹಜವಾದ ಒಂದು ಸೊಬಗು ಕಂಡುಬರುತ್ತದೆ. ಸರಳತೆಯನ್ನು ಮೆಚ್ಚಿದವರಿಗೆ ನಿರಾಡಂಬರವಾದ ಈ ಹಾಡುಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಸಂತೋಷ ಸಿಕ್ಕದೆ ಹೋಗುವುದಿಲ್ಲ.

ರಾಗಿ ಬೀಸುವವರೆಲ್ಲ ಹೆಂಗಸರು. (ಅಪ್ಪಿ ತಪ್ಪಿ ಒಂದೊಂದು ಸಲ ಗಂಡಸರೂ ಬೀಸಬೇಕಾಗುತ್ತದೆ. ಆದರೆ ಅದು ಅತಿ ವಿರಳ. ಅಲ್ಲದೆ ಹಾಗೆ ಬೀಸುವಾಗ ಆ ಗಂಡಸರೂ ಪದ ಹೇಳುವುದು ಅಪರಪವಲ್ಲ.) ಅವರು ಬೀಸುವಾಗ ಹೇಳುವ ಈ 'ರಾಗಿಕಲ್ಲು ಪದ'ಗಳನ್ನು ಕಟ್ಟಿದವರಲ್ಲೂ ನೂರಕ್ಕೆ ತೊಂಬತ್ತು ಜನ ಹೆಂಗಸರೆಂದೇ ತೋರುತ್ತದೆ. ಆ ಪದಗಳನ್ನು ಒಳಹೊಕ್ಕು ನೋಡಿದರೆ—ಅವುಗಳ ಪದ, ಶೈಲಿ, ಭಾವಗಳನ್ನು ಪರೀಕ್ಷಿಸಿದರೆ—ಈ ಊಹೆಯೇ ಸರಿಯಿರಬೇಕೆನ್ನಿಸುತ್ತದೆ.

ಈ ಹಾಡುಗಳಲ್ಲಿ ತವರುಮನೆಯ ಮಮತೆ, ಅಣ್ಣ-ತಮ್ಮ-ಅಕ್ಕ ತಂಗಿಯರ ಪ್ರೀತಿ, ಗಂಡನ ಒಲವು, ಮಕ್ಕಳ ಮುದ್ದು, ಅತ್ತೆ, ಅತ್ತಿಗೆ, ನಾದಿನಿ ಮೊದಲಾದವರ ಹಲವು ತೆರದ ನಡವಳಿಕೆ—ಇವೇ ಮೊದಲಾದ ಹೆಣ್ಣಿನ ಜೀವನಕ್ಕೆ ನೇರವಾಗಿ ಸಂಬಂಧಿಸಿದ ಚಿತ್ರಗಳೇ ಹೆಚ್ಚು. ಬೀಸುವ ಹೆಂಗಸರು ತಮ್ಮ ಬಾಳಿನ ಸಿಹಿ ಕಹಿ ಅನುಭವಗಳನ್ನೆಲ್ಲ—ಉಕ್ಕಿ ಬಂದಾಗ—ಹಾಡಿನ ಮೂಲಕ ಹೊರಹರಿಸಿ ಮನಸ್ಸು ಹಗುರಮಾಡಿಕೊಂಡಿದ್ದಾರೆ. ಬೇರೆ ರೀತಿಯಲ್ಲಿ ಹೊರಪಡಿಸಲು ಅವಕಾಶವಿಲ್ಲದಾಗ ತಮ್ಮ ಮನೋಭಾವನೆಗಳನ್ನೂ ಸುಖದುಃಖಗಳನ್ನೂ ಆಸೆಭಯಗಳನ್ನೂ ಪದ ಕಟ್ಟಿ ಹೇಳಿಕೊಂಡಿದ್ದಾರೆ. ಬಾಳಿನಲ್ಲಿ ತಾವು ನಡೆದ ಮತ್ತು ನಡೆಯಬೇಕಾದ ದಾರಿಯನ್ನು ಗುರುತಿಸಿಕೊಂಡಿದ್ದಾರೆ. ತಮ್ಮ ಆತ್ಮಕಲ್ಯಾಣಕ್ಕಾಗಿ ದೇವರನ್ನು ಬೇಡಿದ್ದಾರೆ. ಆತ್ಮಸಂತೋಷಕ್ಕಾಗಿ ಹಾಡಿಕೊಂಡಿದ್ದಾರೆ. ಇಂಥ ಕೆಲವು ಹಾಡುಗಳನ್ನು ಈ ಸಂಗ್ರಹದಲ್ಲಿ ಕೊಟ್ಟಿದೆ.

ಬೀಸುವ ಕಲ್ಲಿನ ಪದಗಳೆಲ್ಲ ತ್ರಿಪದಿಗಳು. ಎಷ್ಟೋ ಕಡೆ ತ್ರಿಪದಿ ಮೂರು ಸಾಲಿಗೇ ನಿಲ್ಲದೆ ಮುಂದುವರಿಯುತ್ತ ಹೋಗುತ್ತದೆ. ಮಾತುಗಳನ್ನು ಒಂದೊಂದಾಗಿ ಕೂಡಿಸಿಕೊಳ್ಳುತ್ತ ಪ್ರತಿ ಸಾಲನ್ನೂ ಎರಡೆರಡು ಸಲ ಹೇಳುತ್ತಾರೆ. ಇಂಥ ಸಂದರ್ಭಗಳನ್ನು ಅಲ್ಲಲ್ಲೇ ಸೂಚಿಸಿದೆ. ಈ ಪದಗಳೆಲ್ಲ ತ್ರಿಪದಿಗಳೇ ಆದರೂ ಎಲ್ಲವನ್ನೂ ಒಂದೇ ರೀತಿ ಹೇಳುವುದಿಲ್ಲ.

ಬೇರೆಬೇರೆ ರಾಗಗಳಲ್ಲಿ ಹಲವು ಧಾಟಿಗಳಲ್ಲಿ ಹಾಡುತ್ತಾರೆ. ಇದರಿಂದ ಏಕನಾದ ತಪ್ಪಿ ವೈವಿಧ್ಯ ತೋರಿ ಕಿವಿಗೆ ಹಿತವಾಗುತ್ತದೆ.

ರಾಗಿಬೀಸುವುದೇನು ಅಲ್ಪವಾದ ಕೆಲಸವಲ್ಲ. ಬೀಸುವವರ ಅಭಿಪ್ರಾಯದಲ್ಲಿ 'ಸಿರಿಗೌರಿ'ಯೇ ಮೊದಲು ರಾಗಿಬೀಸಿ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾಳೆ. ಆಮೇಲೆ ಬಸವಣ್ಣನವರ ಹೆಂಡತಿ ನೀಲಮ್ಮ ಆ ಮೇಲ್ಪಂಕ್ತಿಯನ್ನು ಅನುಸರಿಸಿ ನಡೆದಿದ್ದಾಳೆ. ಇಷ್ಟು ದೊಡ್ಡ ಪರಂಪರೆಯಿರುವ ಈ ಕಾಯಕ ಅಭಿಮಾನಕ್ಕೆ ಆಸ್ಪದವಲ್ಲವೆ?

ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಸಾರಿ ದಿನದಿನದ ದುಡಿತಕ್ಕೂ ಒಂದು ಆಧ್ಯಾತ್ಮಿಕ ಸ್ವರೂಪವನ್ನು ಕೊಟ್ಟರು. ಅವರ ಪಂಥಕ್ಕೆ ಸೇರಿದ ಹಿರಿಯ ಕವಿಗಳಾದ ಹರಿಹರ ರಾಘವಾಂಕರು ನಮ್ಮ ಹಳ್ಳಿಯ ನೆರೆಯಲ್ಲಿರುವ ಹಳೆಯಬೀಡಿನಲ್ಲಿದ್ದರು. ಅವರ ಪ್ರಭಾವದಿಂದಲೋ ಏನೋ ನಮ್ಮ ಕಡೆಯ ಹಳ್ಳಿಯ ಹಾಡುಗಳಲ್ಲಿ ಬಸವಣ್ಣನವರ ಸ್ಮರಣೆ ತಪ್ಪದೆ ಬರುತ್ತದೆ.

## ರಾಗಿಕಲ್ಲಿನ ಮಹತ್ತ್ವ

ರಾಗಿಯ ಕಲ್ಲಿಗೆ ರಾಜ್ಯವ ತಿರುಗ್ಯಾರೆ
ರಾಯ ಸಂಪನರ ಮಗಳಿಗೆ
ರಾಯಸಂಪನರ ಮಗಳು ನೀಲಮ್ಮಗೆ
ರಾಜ್ಯ ತಿರುಗ್ಯಾರೆ ಬಸವಯ್ಯ ೧

ಬೀಸೋ ಕಲ್ಲಿಗೆ ದೇಶವ ತಿರುಗ್ಯಾರೆ
ಸಕಲ ಸಂಪನರ ಮಗಳಿಗೆ
ಸಕಲ ಸಂಪನರ ಮಗಳು ನೀಲಮ್ಮಗೆ
ರಾಜ್ಯತಿರುಗ್ಯಾರೆ ಬಸವಯ್ಯ ೨

ಅಟ್ಟದ ಮ್ಯಾಗಳ ಪುಟ್ಟಂಚಿನ ಗೆರಸಿಯು
ಅಕ್ಕಯ್ಯ ತಂದಿಡೆ ನಡುಮನೆಗೆ
ಅಕ್ಕಯ್ಯ ತಂದಿಡೆ ನಡುಮನೆಗೆ ನಾವಿಬ್ಬರೂ
ಮುಕ್ಕಣ್ಣೇಶ್ವರನ ನೆನೆದೇವು ೩

ಮಾಳಿಗೆ ಮ್ಯಾಗಳ ಸಾಲಂಚಿನ ಗೆರಸಿಯು
ತಾಯವ್ವೆ ಗೆದಿಡೆ ನಡುಮನೆಗೆ | ನಾವಿಬ್ಬರೂ
ಮುಕ್ಕಣ್ಣೇಶ್ವರನ ನೆನೆದೇವು ೪

ಬಿದಿರೆ ಬೆಟ್ಟದ ಮೇಲೆ ಚದುರ ರಾಗಿಕಲ್ಲು
ಮದನಾರಿನೆಂಬೊ ಹಿಡಿಗೂಟ | ಹಿಡುಕೊಂಡು
ಶಿವನ ಪಾಡ್ಯಾಳೆ ಸಿರಿಗೌರಿ ೫

## ಪ್ರಾರ್ಥನೆ

ಕಲ್ ಹೂಗಿಡಿ ನೆನೆದೆವು ಕಲ್ಯಾಣದಯ್ಯನ
ಬಿಲ್ಲು ಬಾಣದ ಬಿದಿರೆಯ | ರಂಗಯ್ಯನ
ಸೊಲ್ಲು ಸೊಲ್ಲಿಗೆ ನೆನೆದೆವು ೧

ಬಿಲ್ಲು ಬಾಣದಯ್ಯನೆ ನಿಲ್ಲಿರಿ ನಮ್ಮನೆಯಾಗೆ
ಬಿಲ್ಲು ಬಾಣಕೆ ಹರಿಸ್ಯಾವೆ | ಆಗುತಾವೆ
ನಿಲ್ಲಯ್ಯ ನಾಳೆ ಶನಿವಾರ ೨

ರಾಮ ಲಕ್ಷ್ಮಣನೆ, ಸೀತೆಯ ತಂದೋನೆ,
ರಾಮರ ಬಂಟ ಹನುಮಂತ | (ಶರಣೆಂಬೆ)
ಜಯ ಜಯ ರಾಮ ಕರುಣಿಸೊ ೩

* * * *

ಈಗನೆ ಕಲ್‌ಹೂಡಿ ಈಗ್ಯಾರ ನೆನದೆವು
ಈ ಊರು ಗ್ರಾಮದೊಡೆಯ(ನ) | ಮಲ್ಲಯ್ಯನ
ಈಗ ಕಲ್‌ಹೂಡಿ ನೆನೆದೆವು ೪

ದೊಡ್ಡನೇ ಕಲ್‌ಹೂಡಿ ದೊಡ್ಡೋರ ನೆನೆದೆವು
ದೊಡ್ಡಗ್ರಾಮದ ಗರತಿ(ಯ) | ಲಕ್ಕಮ್ಮನ
ದೊಡ್ಡ ಕಲ್‌ಹೂಡಿ ನೆನೆದೆವು ೫

* * * *

ಎದ್ದೋನೆ ನಿಮ ಗ್ಯಾನ ಏಳುತಲೆ ನಿಮ ಗ್ಯಾನ
ಸಿದ್ಧರ ಗ್ಯಾನ ಶಿವಗ್ಯಾನ | ಮಾ ಶಿವನೆ
ನಿದ್ದೆಗಣ್ಣಾಗೆ ನಿಮ ಗ್ಯಾನ ೬

ಶಿವನೇ ಗುರುವೆಂದು ಹಿಡಿದೆನು ರಾಗಿಕಲ್ಲ
ಶಿವನೇ ಕೊಡು ನಮಗೆ ಮತಿಗಳ | ಸಂಗನ ಬಸವ
ಗುರುವೇ ಕೊಡುನಮಗೆ ಸುಖಗಳ ೭

ಆರೆಲೆ ಮಾವಿನ ಬೇರಾಗೆ ಇರುವೋಳೆ
ವಾಲ್ಗದ ಸದ್ದಿಗೆ ಒದಗೋಳೆ | ಸರಸತಿಯೆ
(ನಮ್ಮ) ನಾಲಿಗೆ ತೊಡರ ಬಿಡಿಸಮ್ಮ ೮

ಎಂಟೆಲೆ ಮಾವಿನ ದಂಟಾಗೆ ಇರುವೋಳೆ
ಗಂಟೇ ಸದ್ದಿಗೆ ಒದಗೋಳೆ | ಸರಸತಿಯೆ
(ನಮ್ಮ) ಗಂಟಲ ತೊಡರ ಬಿಡಿಸಮ್ಮ ೯

ಹೆಬ್ಬಾಕಲಲ್ಲಿರುವೊ ಕಬ್ಬಲ್ಲ ಬೆನವಣ್ಣ
ಕಬ್ಬಿನ ಜಲ್ಲೆ ನೆನೆಗಡಲೆ | ಸಲಿಸುವೆ
ಕಬ್ಬಲ್ಲ ಬೆನವ ಕೊಡು ಮತಿಯ ೧೦

* * * *

ಅಂದೊಳ್ಳೆ ಅಡಿಗಲ್ಲೆ ಚೆಂದೊಳ್ಳೆ ಮೇಗಲ್ಲೆ
ಚಂದ್ರಮತಿಯೆಂಬೊ ಗೆರಸಿ(ಯ) | ರಾಗಿಕಲ್ಲೆ
ಒಂದ್ ಹೊಡನ ಬಾರೆ ಹಿರಿಯಕ್ಕ | ನಾ ನಿನ್ನ
ಹಾಡಿಗೆ ದನಿಯು ಕೊಡುತೀನಿ ೧೧

ಅಕ್ಕಿ ಬೀಸೋ ಕಲ್ಲೆ ಸಕ್ಕರೆ ಒಡೆಗಲ್ಲೆ
ಸಟ್ಟಿ ತಮ್ಮಯ್ನ ಅರಮನೆ | ರಾಗೀ ಕಲ್ಲೆ
ಹಟ್ಟಿ ಬಾಗಿಲಿಗೆ ದನಿದೋರೆ ೧೨

ರಾಗಿ ಬಿಸೋ ಕಲ್ಲೆ ರಾಜಾನ ಒಡೆಗಲ್ಲೆ
ರಾಯ ಅಣ್ಣಯ್ನ ಅರಮನೆ | ರಾಗೀಕಲ್ಲೆ
ರಾಜಬೀದಿಗೆ ದನಿದೋರೆ ೧೩

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗಿಯ
(ನೀ) ಜಲ್ಲಜಲ್ಲನೆ ಉದುರಮ್ಮ | ನಾ ನಿನಗೆ
ನೆಲ್ಲಕ್ಕಿ ಪಡಿಯ ನಡಸೇನು ೧೪

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಜನವ
ಜಲ್ಲಜಲ್ಲನೆ ಉದುರವ್ವ | ನಾ ನಿನಗೆ
ಬೆಲ್ಲದಾರತಿಯ ಬೆಳಗೇನು ೧೫

ಅಕ್ಕ ನೀ ತೆರೆಹುಯ್ಯೆ ಅಕ್ಕಯ್ಯ ತೆರೆಹುಯ್ಯೆ
(ನಾನ್) ಅಕ್ಕಿಹೊಂಬಾಳೆ ಕದಲಿಯ | ಕಟ್ಟಿಸುವೆ
ನಮ್ಮಕ್ಕ ಸರಸತಿಯೆ ತೆರೆಹುಯ್ಯೆ ೧೬

* * * *

ಅಕ್ಕಿ ಒರಳೀಗ್ ಹುಯ್ದು ಅಪ್ಪ ನಿಮ್ಮ ನೆನೆದೆನು
ಅಕ್ಕ ಮಾದೇವಿ ಗಿರಿಜೆ (ಯ) | ಕಂಚಮ್ಮನ
ಮಕ್ಕಳೈವರ ನೆನೆದೆನು ೧೭

* * * *

ಶರಣೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದೆ ಶಿವನ ಮಡದಿ(ಗೆ) | ಗೌರಮ್ಮಗೆ
(ನಾ) ಶರಣೆಂದು ಕಲ್ಲ ಹಿಡಿದೆನು ೧೮

## ಅಕ್ಕ-ತಂಗಿ-ಅಣ್ಣ-ತಮ್ಮ

ಅಕ್ಕನ ಕರೆಯಾಕೆ ಚಿಕ್ಕರು ಸುಂಗಾರಾಗಿ
ಹಟ್ಟಿಗೆ ತೇಜಿ ಬಿಗಿದಾರು | (ಬಿಗಿದು) ಕೇಳಾರಲ್ಲೆ
(ನಮ್) ಅಕ್ಕನ ಊರ್‌ಹಾದಿ ಎತ್ತಲೆಂದು ೧

ನಿಮ್ಮಕ್ಕನ ಊರ್‌ಹಾದಿ ತೋರೇನು ಭಾವಯ್ಯ *
ಗೋರಿಕಲ್ಲೊಡದು ಮಳೆಲೆದ್ದು | ಅದರಾಚಿಕೆ
ಹಾಗಲು ಹಬ್ಬಿ ಕುಡಿ ಹಬ್ಬಿ | ಅದರಾಚಿಕೆ
ಕೋಗಲು ಹಬ್ಬಿ ದನಿ ಹಬ್ಬಿ | ಅದರಾಚಿಕೆ
ಅರುವತ್ತಂಕಣದ ಅರಮನೆ | ಒಳಗಿರೋ
ಗಾಜಿನವೆರಡು ಸಣ್ಣ ಮಂಚ | ದೊಳಗೆ
ಚಿನ್ನದವೆರಡು ತಲೆಗಿಂಬು | (ಬಿನ್) ಮೇಲೆ
ಬಾಣತಕ್ಕಯ್ಯಗ್ಗ ಸುಖನಿದ್ರೆ ೨

* * *

ಬಾಣಂತಿ ಅಕ್ಕಯ್ಯ ಮುಂದ್ಯಾಕ್ಹೋಗುತೀಯೆ
ನಾನು ಹಿಡಿದಿದ್ದೆ ಮಡಿಲಕ್ಕಿ | ಅಚ್ಚಿನ ಬೆಲ್ಲ
ಜಾಣ ಹಿಡಿದಿದ್ದ ಜವಳಿಯ ೩

---

* ಎಷ್ಟೋ ಕಡೆ ಬೇರೆ ಬೇರೆ ಪದ್ಯಗಳಾಗಿ ಒಡೆಯುವಾಗದಂತೆ ಪ್ರತಿ ಸಾಲನ್ನೂ ಎರಡೆರಡು ಸಲ ಹೇಳುವುದುಂಟು. ಪುನರಾವೃತ್ತಿ ಮಾಡಬೇಕಾದ ಕಡೆ ಗೀಟುಹಾಕಿ ಮುಂದಿನ ಮಾತು ಕೂಡಿಸುವಾಗ ಆಗುವ ವ್ಯತ್ಯಾಸವನ್ನು ಗೀಟಿನ ಮುಂದೆ ಕಂಸಗಳಲ್ಲಿ ಕೊಟ್ಟಿದೆ. ಗೀಟಿನ ಹಿಂದೆ ಕಂಸಗಳಲ್ಲಿರುವ ಅಕ್ಷರವನ್ನು ಆವೃತ್ತಿಯಲ್ಲಿ ಬಿಡಬೇಕು.

ಉಟ್ಕೊಗೊಳೆ ಸೀರೆಯು ತೊಟ್ಕೊಗೊಳೆ ರವಿಕೆಯ
ಹುಯ್ಕೊಳೆ ಮುತ್ತ ಮಡಿಲಿಗೆ | ಅಕ್ಕಯ್ಯ
ಕಾಡದೆ ಹೋಗೆ ತವರೋರ ೪

ಕಾಡಾಕೆ ಬೇಡಾಕೆ ಕಾಡ ಗೊಲ್ಲರೇನೊ
ನಾಡ ಮೇಗಲ ನಡತೆ (ಯ) | ನಡೆಯುವಿದ್ರೆ
ಆಡಿಕೊಂಬೋರು ಜನರೆಲ್ಲ ೫

* * *

ಅಕ್ಕ ತಂಗೇರಾಟ ಪಟ್ಟೇ ಮಂಚದ ಮ್ಯಾಗೆ
ದೇವ್ಗನ್ನೇರಾಟ ತೊರೆಯಾಗೆ | ಅಣ್ಣಯ್ಯ
ನಮ್ಮಾಟ ನಿನ್ನ ಮನೆಯಾಗೆ |
ನಮ್ಮಾಟವೂ ನಿನ್ನ ಮನೆಯಾಗೆ ಅಣ್ಣಯ್ಯ
ನಿನ್ನಾಟ ಗರುಡೀ ಮನೆಯಾಗೆ ೬

* * *

ರಾಗಿಯು ಕಲ್ಲಿಗೆ ನಾ ಮುಂದೊ ನೀ ಮುಂದೊ
ರಾಮಣ್ಣನೆಂಬೊ ಕ್ಕೆ ಮುಂದೊ | ತಂಗ್ಯಮ್ಮ
ನಾ ಮುಂದು ಅಣ್ಣಯ್ನ ಮದುವೆಗೆ ೭

* * *

(ನಾವ್) ಅಕ್ಕಕ್ಕ ತಂಗೇರು ಲೆಕ್ಕಕ್ಕೆ ನಾಲ್ವರು
ಅಕ್ಕೀಲು ಎಳ್ಳು ಬೆರೆದ್ಹಂಗೆ | (ಗ್) ಕೂಡೇವಲ್ಲೆ
ಚಿಕ್ಕ ಅಣ್ಣಯ್ನ ಮದುವೇಲಿ ೮

* * *

ತಂಗಿಯು ಕರಕೊಂಡು ಕೆಂದಿಯನ್ ಹೊಡಕೊಂಡು
ತಂಗೀಮಕ್ಕಳಿಗೆ ಬಿಸುಲೆಂದು | ಅಣ್ಣಯ್ಯ
ವಲ್ಲಿ ಮುಂಜೆರಗ ಹಿಡಿದನೆ ೯

ಅಕ್ಕನ ಕರಕೊಂಡು ಹಂಡಿಯು ಹೊಡಕೊಂಡು
ಅಕ್ಕನ ಮಕ್ಕಳಿಗೆ ಬಿಸುಲೆಂದು | ತಮ್ಮಯ್ಯ
ವಲ್ಲಿ ಮುಂಜೆರಗ ಹಿಡಿದನೆ ೧೦

ಹಾಲಿಗಕ್ಕೀ ಹಾಕಿ ಹಾದಿಯ ನೋಡಿದೆ
ದೂರಲಿಂದ ಕಂಡೆ ಕುದುರೆ (ಯ) | ಅಣ್ಣಾನ ದಂಡ
ಕಾಲಾಳ ಕಂಡು ತಿರುಗಿದೆ ೧೧

ಆನ್ಯೊಂದು ಐವತ್ತು ಕುದುರ್‍ಯೊಂದು ಐನೂರು
ಕಾಲಾಳೆಂಬೋದು ಗಣನಿಲ್ಲ ೧೨

ಕಾಲಾಳಿಗೆ ಬಾಳೆ ಎಲೆಯವೆ ಅಣ್ಣಯ್ಯ
ನಿನಗವೆ ಬೆಳ್ಳೀ ಹರಿವಾಣ | ಅಣ್ಣಯ್ಯ
ಬಾಳೆಗೆ ದಂಡ ಬಿಡಿರಯ್ಯ ೧೩

ಬಾಳೆಗೆ ಬಿಟ್ಟರೆ ಬಾಳ್ಯೆಲ್ಲ ಬತ್ಯಾವು
ಬಾಳೆಯನಾಚೆ ಬಯಲಿಗೆ | ಬಿಡಿರಿ.... ೧೪

ಅಟ್ಟಕೆ ನಾ ಹತ್ತಿ ಅಕ್ಕಿತೆಗ್ಯೋ ಹೊತ್ಗೆ
ಹಾಸನ ದಾಟಿ ಹೊಳೆ ದಾಟಿ
ಹಾಸನವ ದಾಟಿ ಹೊಳೆದಾಟಿ ಅಣ್ಣಾನ ದಂಡು
ಮೈಸೂರಿಗೆ ಹೋಗಿ ತಳಿಗ್ಯಾವೆ ೧೫

ತುಪ್ಪಕಕ್ಕೀ ಹಾಕಿ ತಿಟ್ಟ ಹತ್ತಿ ನೋಡಿದೆ........

(ಇಲ್ಲಿ ಅಣ್ಣನ ಎಂಬುದಕ್ಕೆ ಬದಲಾಗಿ ತಮ್ಮನ ಎಂದಿಟ್ಟುಕೊಂಡು ಮೇಲಿನಂತೆ ಎಲ್ಲವನ್ನೂ ಹೇಳುತ್ತಾರೆ. ಕೊನೆಯದು ಮಾತ್ರ ಬೇರೆ)

ಮಾಳಿಗೇನೆ ಹತ್ತಿ ಜೋಳ ತೆಗ್ಯೋಹೊತ್ಗೆ
ಹೊನ್ನೂರ ದಾಟಿ ಹೊಳೆದಾಟಿ
ಹೊನ್ನೂರ (ನೇ) ದಾಟಿ ಹೊಳೆದಾಟಿ | ತಮ್ಮನ ದಂಡು
ಬೆಂಗ್ಳೂರಿಗ್‌ಹೋಗಿ ತಳಿಗ್ಯಾವೆ ೧೬

## ತವರುಮನೆಯ ಹಂಬಲು

ಊರ ಮೇಲೆ ಊರು ದೂರವೇನೊ ತಮ್ಮಯ್ಯ
ಬ್ಯಾನಿಲ್ಲವೇನೊ ನನ ಮೇಲೆ | ಗೌರಿsಯು
ಕಾಯ್ ಹ್ಯಾಗೆ ಒಡೆದೊ ಕಣುಜಾಣ ೧

ಕಾಯು ಕ್ಯೊಯಾಗೊಡೆದಿ ನ್ಯೊಯು ಗಂಗೆಲಿ ಮಿಂದೆ
(ನನ) ದೂರದ ಅಕ್ಕಯ್ಯ ಸುಖದಾಗೆ | ಇದಾಳೆಂದು
ಧೀರ್ರೈಸಿಕೊಂಡೆ ಮನದಾಗೆ ೨

ದೂರsದ ಸೀಮೆಗೆ ನಾರಿ ನಾನೊಬ್ಬಳೆ
ಧೀರ್ರೈಸನಾರೆ ದಿನಗಳ | ತಮ್ಮಯ್ಯ
ದೀರ್ರ್ಯಾವ್ರದ ದೊರೆಯ ಮೊಗದೋರೊ ೩

* * *

ಅಟ್ಟsಕೆ ಏಣ್ಯಾಸೆ ಜೆಟ್ಟsಕೆ ಬಿದಿರಾಸೆ
ಹೆಣ್ಣು ಮಕ್ಕಳಿಗೆ ತವ್ರರಾಸೆ ೪

ಪಾರಿವಾಣದ್ ಹಕ್ಕಿ ಏನಾಸೇಲಿದ್ದಾವೋ
ನೀರಾಸೆ ಮರದ ನೆರಳಾಸೆ | ಹೆಣ್ಣು ಮಕ್ಕಳಿಗೆ
ತಾಯಾಸೆ ತೌರ ಮನೆಯಾಸೆ | ನನ್ನವ್ವಾ
ನಿನ್ನಾಸೆ ನನ್ನ ಬಿಡದಲ್ಲೆ | ನನ್ನವ್ವಾ
ನೀ ಬಿಟ್ಟರು ನಿನ್ನ ಮನೆ ಬಿಡದು | ನನ್ನವ್ವಾ
ಮಳೆ ಬಿಟ್ಟರು ಮರದ ಹನಿ ಬಿಡದು ೫

* * * *

## ತವರು ಮನೆಯ ಉಡುಗೊರೆ

ಕಕ್ಕರುಗೋಡಿನೆಮ್ಮೆ ಹೊಕ್ಕಳುಗೋಡಿನೆಮ್ಮೆ
(ನಮ್) ಅಕ್ಕಯ್ಯ ನೆಂಬಿ ಅಳುತಾಳೆ | ಅಣ್ಣಯ್ಯ
(ನೀ) ತೆಕ್ಕೆಯನ್ ಹಾಕಿ ಹೊಡಕೊಡೊ ೧

ರಾಡಗೋಡಿನೆಮ್ಮ ನಾಗೊಳಾಲಿನೆಮ್ಮ
(ನನ) ತಂಗ್ಯಮ್ಮ ನೆಂಬಿ ಅಳುತಾಳೆ | ಅಣ್ಣಯ್ಯ
(ನೀ) ದೊಂಡಿಯನ್ ಹಾಕಿ ಹೊಡಕೊಡೊ ೨

ಹಟ್ಟೀಲಿ ಹತ್ತೆಮ್ಮ ಕೊಟಿಗೇಲಿ ನಾಕೆಮ್ಮ
ಕೊಟ್ಟೇನೊ ಅಣ್ಣಯ್ಯ ನನಗೊಂದ | (ದು) ಎಮ್ಮೆಯ
ನಿನ್ ಹೆಸರ್‍ಹೇಳಿ ಮೊಸರ ಕಡೆದೇನು ೩

ಮೊಸರ ಕಡೆಯೋಳಿಗೆ ಮೈಯೆಲ್ಲ ಬಂಗಾರ
ಕೊರಳಾಗಾಡ್ಯಾವೆ ಸರಮುತ್ತು | ತಂಗ್ಯಮನ
ಕೈಯಾಗಾಡ್ಯಾವೆ ಕಡಗೋಲು ೪

ಕಸಹಾಕಿ ಕೈತೊಳೆದು ಮೊಸರ ಮಡಕೆಗ್ ಹುಯ್ದು
ಹಸುಳೆ ತಂಗ್ಯಮನ ಮನೆಗ್ ಹೋದೆ | (ಹೋಗಿ) ತಂದೆನಲ್ಲೆ
ಎಸಳು ಬಾಸಿಗದ ಕಡಗೋಲ ೫

* * * *

ಚಿಕ್ಕಪ್ಪ ಚಿನ್ನ ಕೊಟ್ಟ ದೊಡ್ಡಪ್ಪ ಎಮ್ಮೆಕೊಟ್ಟ
ನೀನೇನ ಕೊಟ್ಟೊ ಹಡೆದಪ್ಪ | ನಾ ನಿಮಗೆ
ಹಾಲುಬಾನಾ ಉಣ್ಣೊ ಹರವಾಣ | ಕೊಟ್ಟೆನು
ಇನ್ನೇನ ಕೊಡಲಿ ನನ ಮಗಳೆ ೬

* * * *

## ಅಗಲಿಕೆಯ ದುಃಖ

ಎಂಟೆಂಟು ದಿನವಾಗೆ ಸಂತೆ ನಮ್ ತವುರಾಗೆ
ಬಂಟನ ಮೇಲೆ ಕಡಲೆಯ | (ನ್) ಹೇರಿಕೊಂಡು
ನೆಂಟನಾಗ್ಬಂದ ಹಿರಿಯಣ್ಣ ೧

ಸಂತೆಯ ಮನೆಯೊಳು ಸಮರಂತೆ ನಮ್ಮವ್ವ
ಸಂತಿಟ್ಟು ನನ್ನ ಕಳುವ್ಯಾಳೆ (ಕಳುಹಿ) ನಿಂದಿದಾಳೆ
ಸಾಲು ಸಂಪಿಗೆ ನೆರಳಾಗೆ ೨

ಹೆಣ್ಣು ಮಕ್ಕಳ ಕಳುಹಿ ಹೆಂಗಿದ್ಯೆ ನಮ್ಮವ್ವ
ಹನ್ನೆಳ್ಡಂಕಣದ ಅರಮನೆ | ಗೋಡೇಮೇಲೆ
ನಮ್ಮಂತ ರೂಪ ಒರಕೋಳೆ ೩

ಅತ್ತಾರೆ ಕರೆದಾರೆ ಹತ್ತಿರಿದ್ದೇವೇನೆ
ಹುಚ್ಚೇನೆ ಅವ್ವಾ ಮರುಳೇನೆ | ಗೋಡೆಯ
ಚಿತ್ತಾರ ನೋಡಿ ಮರೆಯುವ್ವ ೪

* * *

ಹೆಣ್ಣು ಮಕ್ಕಳ ಕಳುಹಿ ನಿಂದಳು ಬಾರೇಮೇಲೆ
ಹನ್ನೆರಡು ಗುಡ್ಡ ಮರೆಯಾದೊ ೫

ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು
ಹುತ್ತದ ಒಳಗಿರೋ ಸರುಪಾನ | ಬೇಗೆಯ
ನೆತ್ತೀ ಮೇಲಿರುವೊ ಶಿವ ಬಲ್ಲ ೬

* * *

## ತಾಯಿಲ್ಲದ ತವರು

ಬಾಳೇ ತೋಟದಾಗೆ ಬಾಗಿ ನೀರ್ ಹುಯ್ಯೋರೇ
ಚಂದ್ರಮರೇ ಕೇಳಿ ಮೈದುನರೇ | ನಾಸೀಗ
ಹೋಗ್ಬರುವೆ ನಮ್ಮ ತೌರಿಗೆ ೧

ಹೋಗೋಳು ಹೋಗ್ತೀಯ ಹೊನ್ನೋಲೆ ಅತಿಗಮ್ಮ
ತೌರೊಳ್ಳೇದೆಂದು ಇರಬೇಡ ೨

ಅಂದಲ ಸಹಿತಲೆ ಬಂದಳು ತಮ್ಮನ ಮನೆಗೆ
ನಿಂದಿರೆ ಅಕ್ಕ ನಡುಮನೇಲಿ | ಒಳಗಿರುವೊ
ಸುಂದರೀ ಕೇಳಿ ಬರುತೀನಿ ೩

ಏ ನನ್ನ ಚಿನ್ನವೆ ಏ ನನ್ನ ರನ್ನವೆ
ಏ ನನ್ನ ಕೊರಳ ಪದಕವೇ | ಪಟ್ಟದ ರಾಣಿ
(ನಿನ್) ಅತ್ತಿಗೆಯು ಒಳಗೆ ಕರಿ ಹೋಗೆ ೪

ಹಿಂದಿನ ಕಾಲದಾಗೆ ಅಂದಿದ್ಲು ಆಡಿದ್ಲು
ಭಂಗಪಡಿಸಿದ್ಲು ಬೈದಿದ್ಲು | ನಿಮ್ಮಕ್ಕ
ಹಂಗೇನು ಆಡ್ದೆ ಇರಹೇಳಿ ೫

ಪಾಪಿ ತಮ್ಮನ ಮನೆಗೆ ಯಾಕ್ ಬಂದೆ ಅಕ್ಕಯ್ಯ
ತಾಟಗಿತ್ಯವಳೆ ತೌರಾಗೆ | ತಮ್ಮನ ಮನೇಲಿ
(ನೀ) ಕೋಟೆಯು ನೋಡಿ ತಿರುಗಮ್ಮ ೬

ಕೋಟೆಯು ನೋಡಿದೆ ಕೊತ್ತಳ ನೋಡಿದೆ
ನೋಡಿದೆ ತಮ್ಮನೆದೆ ಭುಜವ | ತಮ್ಮಯ್ಯ
ಮಡದಿಗಂಜೋನೆ ಸುಖಿ ಬಾಳೊ ೭

ಗಂಜಿಯು ಕುಡಿದರು ಗಂಡನ ಮನೆ ಲೇಸು
ಅಂದಲದ ಮೇಲೆ ಚೌರಿಯು | ಬೀಸಿಕೊಂಡ್ರು
ಹಂಗಿನ ತೌರ ಮನೆ ಬೇಡ ೮

## ಅಣ್ಣನ ಮನೆಗೆ ಹೆಣ್ಣಿಗೆ ಹೋದದ್ದು

ಅಣ್ಣನ ಮನೆಗೆ ಹೆಣ್ಣಿಗೆ ನಾನ್ ಹೋದೆ
ಸುಣ್ಣದ ಗೋಡೆ ಒರಗ್ಯಾಳೆ | (ಒರಗಿ) ಅತ್ತಿಗೆ ಬಾಲೆ
ಕಣ್ಣು ತಿರುವ್ಯಾಳೆ ನನ ಮೇಲೆ ೧

ಕಣ್ಣು ತಿರುವ್ತೋಕೆ ನಾನ್ ಅನ್ನಿಗರ ಮಗಳೇನೆ
ನಿನ ಗಂಡನ್ ಹಿಂದ್ಲಾಲ ಕಿರುದಂಗಿ | ಅತ್ತಿಗೆ ಬಾಲೆ
ಸುಮ್ಮನೆ ಹೆಣ್ಣು ಕೊಡು ಬಾರೆ ೨

ಹೆಣ್ಣಾನು ಕೊಡುವ್ವೋಕೆ ನನ್ನಿಜ್ಜೈ ನಾದುನಿ
(ನಿಮ್) ಅಣ್ಣಾ ಜೆನ್ನಿಗರ ಬೆಸಗೊಳೆ ೩

ಅಣ್ಣಾನ ಬೆಸಗೊಂಡೆ ಅಣ್ಣಾಯ್ನ ಬೆಸಗೊಂಡೆ
ಅಣ್ಣಾನ್ ಹಿಂದಲ ಗೆಣೆಯರ | ಬೆಸಗೊಂಡೆ
(ನೀ) ಸುಮ್ಮನೆ ಹೆಣ್ಣಾ ಕೊಡು ಬಾರೆ ೪

ಹೆಣ್ಣಾನು ಕೊಡುವ್ವೋಕೆ ನನ್ನಿಜ್ಜೈ ನಾದುನಿ
ನಿನ ತಾಯಿ ತಂದೆಯು ಬೆಸಗೋಳೆ ೫

ತಾಯಿಯ ಬೆಸಗೊಂಡೆ ತಂದೆಯು ಬೆಸಗೊಂಡೆ
ತಂದೆ ಹಿಂದಲ ಬಳಗವ | ಬೆಸಗೊಂಡೆ
ಸುಮ್ಮನೆ ಹೆಣ್ಣಾ ಕೊಡು ಬಾರೆ ೬

ಸೋಮುವಾರದ ಸಂತೆ ಗ್ರಾಮುದೇರೀ ಮೇಲೆ
(ನಾನ್) ಹೋಗೊ ಅಣ್ಣಾಯ್ನ ಸೆರಗ್ ಹಿಡಿದೆ
ಹೋಗೂವ ಅಣ್ಣಾಯ್ನ ಸೆರಗ್‌ಹಿಡಿದ್ ಕೇಳೀನಲ್ಲೆ
ಮಾತುಕೊಡು ಬಾರೊ ಮಗಳಿಗೆ ೭

ಮಾತಿಗೆ ಬರುತೀನಿ ಮಲ್ಲಿರೊ ಅಣ್ಣಾಯ್ಯ
ಮಾತು ಉಳ್ಳೋರ ಕರಕೊಂಡು | ಬರುತೀನಿ
ಮಗಳಿಗೆ ಮಾತ ಕೊಡುವಂತೆ ೮

ಹೆಣ್ಣಿಗೆ ಬರುತೀನಿ ಮಲ್ಲಿರೊ ಅಣ್ಣಾಯ್ಯ
ಹೊನ್ನು ಉಳ್ಳೋರನೊಡಗೊಂಡು | ಬರುತೀನಿ
ಜೆನ್ನಿಗೆ ಮಾತ ಕೊಡುವಂತೆ ೯

ಮಾತನು ಕೋಡುವ್ವೋಕೆ ನನ್ನಿಜ್ಜೈ ತಂಗ್ಯಮ್ಮ
(ನಿಮ್) ಅತ್ತಿಗೆ ಹೊನ್ನಿಯ ಬೆಸಗೊಳೆ ೧೦

ಅತ್ತಿಗೇ ಬೆಸಗೊಂಡೆ ಅತ್ತಿಗಮ್ನ ಬೆಸಗೊಂಡೆ
ಅತ್ತಿಗೆ ಹಿಂದಲ ಬಳಗವ | ಬೆಸಗೊಂಡೆ
(ನೀ) ಸುಮ್ಮನೆ ಹೆಣ್ಣು ಕೊಡು ಬಾರೊ ೧೧

ಹೆಣ್ಣನು ಕೊಡುವ್ರೋಕೆ ನನ್ನಿಚ್ಯೆ ತಂಗ್ಯಮ್ಮ
ನಿನ್ ಅಕ್ಕ ತಂಗೇರ ಬೆಸಗೊಳೆ ೧೨

ಅಕ್ಕನ ಬೆಸಗೊಂಡೆ ತಂಗಿಯ ಬೆಸಗೊಂಡೆ
ಅಕ್ಕತಂಗೇರ್ ಹಿಂದ್ಲ ಬಳಗವ | ಬೆಸಗೊಂಡೆ
(ನೀ) ಸುಮ್ಮನೆ ಹೆಣ್ಣ ಕೊಡು ಬಾರೊ ೧೩

(ಆಕಿ) ಹಾಲು ಬಾನುಣ್ಣೋಳು ಹವಳ ಕೇರಾಡೋಳು
ಆಚೆ ಕೇರೀಲಿ ಪಗಡೆ (ಯ) | ಯಾಡುವ ಮಗಳ
ದೂರಲ ಸೀಮೆಗೆ ಕೊಡಲಾರೆ ೧೪

ಹಾಲು ಬಾನುಣ್ಣಕಲೊ ಹವಳ ಕೇರಾಡಕಲೊ
(ಆಕಿ) ಆಚೆಕೇರೀಲಿ ಪಗಡೆಯ | (ಡೇ) ನಾಡಕಲಣ್ಣ
ನಿನ ಮಗಳ ನಮಗೇ ಕೊಡಬೇಕು ೧೫

ತುಪ್ಪ ಬಾನುಣ್ಣೋಳು ಮುತ್ತ ಮೊಗದಾಡೋಳು
ಹತ್ತಿರದ ಬೀದೀಲಿ ಪಗಡೆ (ಯ) | ಯಾಡುವ ಮಗಳ
ದೂರಲ ಸೀಮೆಗೆ ಕೊಡಲಾರೆ ೧೬

ತುಪ್ಪ ಬಾನುಣ್ಣಕಲೊ ಮುತ್ತ ಮೊಗದಾ
ಹತ್ತಿರದ ಬೀದೀಲಿ ಪಗಡೆಯ | (ಡೇ) ನಾಡಕಲಣ್ಣ
ನಿನ ಮಗಳ ನಮಗೇ ಕೊಡಬೇಕು ೧೭

ಒಂದರುವೆ ಹಾಸಿದ್ದೆ ಒಂದರುವೆ ಹೊಚ್ಚಿದ್ದೆ
ಒಂದೊರುಷ ನಾನು ಸಲಹಿದ್ದ | (ಸಲಹಿದಂಥಾ) ಮಗಳ
ನಿನ ಮನೆಗೆ ನಾನು ಕೊಡಲಾರೆ ೧೮

ಈಗ ಬರುವ್ರೇ ತಂಗಿ ಆಗ್ಯಾಕೆ ಬರದ್ಹೋದೆ
ಆಗಲಾರವಳ ತೌರೋರು | ತಂಗ್ಯಮ್ಮ
ಬಾಲೆ ಬಂಗಾರ ಹರಿಸ್ಯಾರು ೧೯

ನಿನ್ನೆ ಬರುವ್ರೋ ತಂಗಿ ಮನ್ಯಾಕೆ ಬರದ್ಹೋದೆ
ಮಲೆನಾಡರವಳ ತೌರೋರು | ತಂಗ್ಯಮ್ಮ
ಬಂದಿ ಬಂಗಾರ ಹರಿಸ್ಯಾರು ೨೦

ಹೆಣ್ಣ ಕೊಡದಿದ್ದರೆ ಪುಣ್ಯವಂತ ನೀನಾಗೊ
ಹೊನ್ನೂರ ನೀಮ ಗೌಡನ | (ಗೌಡ) ನಾಯ್ಕರ ಮಗಳ
ಹೊನ್ನಿಗಿಬ್ಬರ ಮದಿವೆ(ಯ) | ಮಾಡಿಕೊಂಡು
ನಿನ್ನೂರ ಮುಂದೆ ಬರುತೀನಿ | ಅಣ್ಣಯ್ಯ
ನಿನಗೊಂದೀಳ್ಯಾವ ಕೊಡುತೀನಿ ೨೧

ಕೂಸು ಕೊಡದಿದ್ದರೆ ಆಸುವಂತ ನೀನಾಗೊ
ಕಾತರಿಕೆ ಸೀಮೇ ಕಡುಚೆಲುವ | ನಾಯ್ಕರ ಮಗಳ
ಕಾಸಿಗಿಬ್ಬರ ಮದಿಮೆಯ | ಮಾಡಿಕೊಂಡು
(ನಿನ) ಬೇಸಾಯ್ದ ಮುಂದೆ ಬರುತೀನಿ | ಅಣ್ಣಯ್ಯ
ನಿನಗೊಂದೀಳ್ಯಾವ ಕೊಡುತೀನಿ ೨೨

* * *

## ಹೆಣ್ಣು ಹೇಗಿರಬೇಕು ?

ಚಂದsರ ಗಿರಿಯಾಗೆ ಮನೆನೋಡಿ ಬಂದಿದಿನಿ
ಚಂದ್ರಾಮಗಿಂತ ಚೆಲುವೆಯ | ನೋಡಿದಿನಿ
ಒಪ್ಪೇನೊ ಕಂದ ಮನಸಿಗೆ ೧

ಅತ್ತೆ ಮಾವಗಂಜಿ ಚಿಕ್ಕ ಮೈದುನ(ರಿ)ಗಂಜಿ
(ಅವರ್) ಹಿರಿಯರು ಭಾವಯ್ನ ದನಿಗಂಜಿ | ಬದುಕಿದರೆ
ಒಪ್ಪು ಕಾಣವ್ವ ಮನಸಿಗೆ ೨

## ಅಕ್ಕನ ಮನೆಯಲ್ಲಿ ತಂಗಿ

ಅಕ್ಕಕ್ಕ ತಂಗೀರು ಅಂಗ್ಳದಲ್ಲಿ ಒರಳ್ಹೂಡಿ
ದುಂಡು ರಾಜನವ ತೊಳಸುತ | (ತೀ) ನೆಂದಳೆ
ತಂಗಿ ನಿನ ಮ್ಯಾಯು ನಿಜಗೆಂಪು ೧

ನಿಜಗೆಂಪು ಎಂದು ಗಜಗೋಪುರಗೊಡದಿರೆ
ವಿಜಯನಗರದ ಅರಸಿನವ | ಮಿಂದಿದಿನಿ
ನಿಜವಾಗಿ ಕಾಣೆ ಹಿರಿಯಕ್ಕ ೨

ಎದ್ದಿದ್ದ ಮೋಡಿಲ್ಲ ಎರಗೋರೆ ಸಿಡಿಲಿಲ್ಲ
ಗದ್ದಲಿಸಿ ಹುಯ್ಯೊ ಮಳೆಯಿಲ್ಲ | ರಾಜನವ
ಯಾವ ರಾಯರು ಬಿತ್ತಿ ಬೆಳೆದರೆ ೩

ಎದ್ದಿದ್ದ ಮೋಡುಂಟು ಎರಗೋರೆ ಸಿಡಿಲುಂಟು
ಗದ್ದಲಿಸಿ ಹುಯ್ಯೊ ಮಳೆಯುಂಟು | ರಾಜನವ
ನಿಮ್ಮ ರಾಯರು ಬಿತ್ತಿ ಬೆಳೆದರೆ ೪

ಹಸಿಯುಡಕೆ ಹಾಸುಮಂಚ ಕುಶಲದ ತಲೆಗಿಂಬು
ಹೊಸಮಾಳಿಗೊಳಗೆ ಹೊಡೆಯಾದೊ | ರಾಜನವ
ಇನ್ನ್ಯಾವ ರಾಯರು ಬಿತ್ತಿ ಬೆಳೆದಾರು ? ೫

ಹಣ್ಣಡಿಕ್ಹಾಸು ಮಂಚ ಕುಶಲದ ತಲೆಗಿಂಬು
ಚೆಮ್ಮಾಳಿಗೊಳಗೆ ತೆನೆಯಾದ | ರಾಜನವ
ನಿಮ್ಮ ರಾಯರು ಬಿತ್ತಿ ಬೆಳೆದರು ೬

ಆದರಾಗಲಿ ತಂಗಿ ಯಾರಿಗ್ಹೇಳಲಿ ಬೇಡ
ಹೋಗ್ಯಾರೆ ನಮ್ಮ ತೌರೀಗೆ ೭

ಹೋಗ್ತೀನಿ ಹೊಸ್ತಿಲೆ ಹೋಗ್ತೀನಿ ಬಾಗಿಲೆ
ನಾಗಸಂಪಂಗಿ ನಡುಮನೆಯು । ಭಾವಯ್ಯ
ಹೋಗಿ ಬರ್ತೀನಿ ತೌರಿಗೆ ೮

ಹೋಗೋಳು ಹೋಗ್ತಿಯು ಹೊನ್ನಾಲೆ ನಾದುನಿ
ನಾರಿ ನೀ ಬರುವ ದಿನ ಹೇಳೆ ೯

ಕಕ್ಕೆ ಕಾಯಾದಾಗ ಬಿಕ್ಕೆ ಫಲಬಿಟ್ಟಾಗ
ನಾ ಗಂಡು ಮಗನ ಹಡೆದಾಗ । ಭಾವಯ್ಯ
ಆಗ ಪಾಲಿಗೆ ಬರುತೀನಿ ೧೦

ಪಾಲಿಗೆ ಬಂದರೆ ನಾಲಿಗೆ ಸೀಳಿಸುವೆ
ನೋಡೋ ಕಣ್ಣುಗಳ ಇರಿಸುವೆ । ಎಲೆ ಹೆಣ್ಣೆ
ಪಾಲು ನಿನಗ್ಯಾಂಗೆ ಸಲುವವೆ ೧೧

ಎಲೆಯೂರ ಗೌಡ ಎಲೆಯು ತಿದ್ದುತ ಬಂದ
ಎಳೆಬಾಳೆಯೊಳಗೆ ಸುಳಿಬಾಳೆ । ಇರುವ್ಹೋದ
ಎಲೆಯೂರ ಗೌಡ ಅರಿಯನೆ । ಅಕ್ಕಯ್ಯ
ಅರಿಯದ್ ಗಂಡಸಿಗೆ ತಿಳಹೇಳೆ ೧೨

ಯಾರೂ ಕಾಣದ್ಹಾಗೆ ಯಾರೂ ಕೇಳದ್ಹಾಗೆ
ನಾರಿ ತನ ತಂಗಿ ಪುರುಷರಿಗೆ । ಬಸುರೆಂದು
ಭೋರೆಂಬ ಧಾರೆ ಎರೆಸಾಳೆ ೧೩

## ಕಾವಲಿಯ ಹಾಡು

ಕಾಲಾನು ಕಾಲಕ್ಕೆ ನೀ ಬಂದೆ ದೀವ್ಳಿಗ್ಗೆ
ನಾನು ಸಂಪುಳಿಗೆ ಕದರಿದ್ದೆ | ನಾದುನಿ
ಹೊನ್ನು ಕಾವಲಿಯ ಕೊಡು ಬಾರೆ ೧

ಹೊನ್ನು ಕಾವಲಿಯ ನಿನ್ನೊಬ್ಳು ಕೊಂಡ್‌ಹೋಗಿ
ಎಣ್ಣೆ ಸವರದೆ ಸಿಡಿಸ್ಯಾಳೆ | ಅತ್ತಿಗೆ
ಹೊನ್ನು ಕಾವಲಿಯ ಕೊಡಲಾರೆ ೨

ಎಣ್ಣೇನು ಹಚ್ಚುವ ಬೆಣ್ಣೇನು ಹಚ್ಚುವೆ
ಸಣ್ಣ ಅರಿವೇಲಿ ಒರಸುವೆ | ತಮ್ಮನ ಮಡದಿ
ಹೊನ್ನು ಕಾವಲಿಯ ಕೊಡು ಬಾರೆ ೩

ಎಣ್ಣೇನು ಹಚ್ಬೇಡ ಬೆಣ್ಣೇನು ಹಚ್ಬೇಡ
ಸಣ್ಣ ಅರಿವೇಲಿ ಒರಸ್ಬೇಡ | ಅತ್ತಿಗೆ
ಹೊನ್ನು ಕಾವಲಿಯ ಕೊಡಲಾರೆ ೪

ಚಂದ್ರಗಾವೀ ಪಾಗ ಚುಂಗು ಬಿಟ್ಟು ಸುತ್ತ್ರೋನೆ
ಚಂದ್ರಾಮ ಕೇಳೊ ಕಿರುದಮ್ಮ | ನಿನ ಮಡದಿ
ಹೊನ್ನು ಕಾವಲಿಯ ಕೊಡಲೊಲ್ಲೊ ೫

ಕಡಗದ ಕ್ಯನೋಳೆ ಕಡುಜಾಣೆ ಅಕ್ಕಯ್ಯ
ಕಡುಬ್ಹುಯ್ಯು ಕಡಲೆ ತೊಗೆ ಮಾಡಿ | ತುಪ್ಪ ಹಾಕಿ
ಕೊಡದೋಳಿಗಿಕ್ಕೆ ಹದಿನಾರ ೬

ಅಡ್ಡಮನೆಯೋಳ್‌ಬಾರೆ ದೊಡ್ಡ ತುರುಬ್ನೋಳ್ ಬಾರೆ
ನಾದೂನಿ ಬಾರೆ ಮನೆತನಕ | ನಮ್ಮನೆ
ಹೊಸ ಕಾವಲೀ ದೋಸೆ ಹಸನೇನೆ ೭

ನಾನು ಬರುವೋಕೆ ನಮ್ಮನೇಲಿ ಜಂಬರ ಕಾಣೆ
ನಾನು ಹೊರಟರೆ ಬೀದಿ ಬೆಳಗಾದೊ | ಸೂಲಿಗರಾಯ
ನಿಮ್ಮಾಣೆ ನಮಗೆ ಹಸಿವಿಲ್ಲ ೮

## ಬಳೆಗಾರ

ಇನ್ನೆಲ್ಲಿ ನೋಡಲಿಂಥ ಬಳೆಯು ಬಳೆಗಾರಸೆಟ್ಟಿ
ಹೋಗಯ್ಯ ನನ್ನ ತವರಿಗೆ ೧

ನಿನ್ನ ತವರೂರ ನಾನೇನು ಬಲ್ಲೆನೇ
ತೋರಿಸು ಬಾರೆ ಎಲೆ ಹೆಣ್ಣೆ ೨

ಆಲೆ ಆಡುತಾವೆ ಗಾಣ ತಿರುಗುತಾವೆ
ಪಾಲೆವಾಣದ್ದಕ್ಕಿ ಪಗಡೆಯು
ಪಾಲೆವಾಣದ್ದಕ್ಕಿ ಪಗಡೆಯಾಡುತಾವೆ
ಅದು ಕಾಣೊ ಸೆಟ್ಟಿ ತವರೂರು ೩

ಮುತ್ತೈದೆ ಹಟ್ಟೀಲಿ ಮುತ್ತಿನ ಚಪ್ಪರ್ಹೂಡಿ
ಸುತ್ತಿ ಬಾರಯ್ಯ ಬಳೆಗಾರ | ನಮ್ಮನೆ
ಮುತ್ತೈದೆ ಬಳೆಯ ತೊಡುತಾಳೆ ೪

ಬಡಗಲ ಸೀಮಿಂದ ಬಣ್ಣದ ಬಳೆ ಬಂದೊ
ಸೆಟ್ಟಿ ಅಣ್ಣಯ್ಯ ಇವ ತೊಡಿಸೊ
ಸೆಟ್ಟಿ ಅಣ್ಣಯ್ಯ ಇವ ತೊಡಿಸದಿದ್ದರೆ
(ನಿನ) ದಟ್ಟಿಯ ಸೆರಗ ಬಿಡೆನಲ್ಲೊ ೫

## ಬಿಡಿ ಪದ್ಯಗಳು

ಕುಟ್ಟೋದು ಕುಸುಮಾಲೆ ಬೀಸೋದು ಬ್ಯಾಸರಿಕೆ
ರೊಟ್ಟಿ ಸುಡುವೋದು ಬಹು ಶಖೆ | ಅಣ್ಣಯ್ಯ
ಗಟ್ಟಿಂದ ಕಳುಹೋ ಗೌಡೀರ ೧

* * * *

ಸುವ್ವೆಂದರೆ ನುರಿದಾವೆ ಸುಪ್ಪೆಂದರೆ ನುರಿದಾವೆ
ಆನೆಯು ಪಾದಕೆ ನುರಿದಾವೆ | ಬತ್ತವ
ಯಾವಣ್ಣ ಬಿತ್ತಿ ಬೆಳೆದಽನೆ ೨

* * * *

ಎಮ್ಮೆಯು ಎಳಗಂದಿ ನಮ್ಮವ್ವ ಬಾಣಂತಿ
(ನಮ್) ಅಣ್ಣಯ್ಯ ಮಡದಿ ತವರಿಗೆ | ಹೋದರೆ
ಮತ್ತೊಂದು ಬದುಕು ನನಗಿರಲಿ ೩

* * * *

ಹಾಲು ಇದ್ದಾಗ ಹಬ್ಬವ ಮಾಡವ್ವ
ನಾವು ನಾಲ್ವರು ಮನೆಯಾಗೆ | ಇದ್ದಾಗ
ಮಾಡವ್ವ ಮಗನ ಮದುವೆಯ ೪

* * * *

ಮಡದಿಯು ಹೊಡೆಜಸು ಮನದಾಗೆ ಮರುಗ್ಯಾನು
ಒಳಗ್ ಹೋಗಿ ಮುಸುಕ ತೆಗೆದನು | (ತೆಗೆದು) ಕೇಳಾನಲ್ಲೆ
ನಾನ್ ಹೆಚ್ಚೊ ನಿನ್ನ ತವರ್ ಹೆಚ್ಚೊ ೫

* * * *

ಹೆಣ್ಣಾಗಿ ಹುಟ್ಟೋದು ಮಣ್ಣಾಗಿ ಹುಟ್ಟೇ
ಮಣ್ಣಿನ ಮೇಲೊಂದು ಸಸಿ ಮಽರ | ಹುಟ್ಟಿದರೆ
ಬಂದು ಕೂರರಿಗೆ ನೆರಳಾದೊ ೬

* * *

ಆಡುವಾಗ ಇಕ್ವಾಗ ಆಡವ್ವೆಲ್ಲ ನೆಂಟರು
ಅಡವಿಯ ಸೊಪ್ಪ ಮೆಲುವಾಗ | ಹಡದವ್ವ
ಪಡದೋರ ಗುರುತ ಮರತಽಳು ೭

* * *

ನಮ್ಮ ಗೆಣೆಕಾತಿ ಹೊನ್ನೂರ ಬಣಜಿಗಿತಿ
ಪುಣ್ಯಾತಗಿತ್ತಿ ಪುರುಷರ | ತೊಡೆ ಮ್ಯಾಲೆ
ನಮ್ಮ ಹಂಬಲವ ಮರತಽಳೆ ೮

ನಿಮ್ಮ ಹಂಬಽಲ ನಾನ್ಯಾಕೆ ಮರತೇನು
ಕರಸುವೆ ಮಗನ ಮದುವೆಗೆ | ಗೆಣೆಕಾತಿ
ಉಡಿಸುವೆ ಸೀರೆರಪಕೆಯ ೯

* * *

ನನ್ನೂರ ಮುಂದೆ ಎಮ್ಮೆ ಕಾಯೋ ಗೊಲ್ಲ
ನನ್ನರು ಕಂಡರೆ ಬರಹೇಳೊ | ಅವರುಡಿಸಿರುವೊ
ಸಣ್ಣಂಚಿನ ಸೀರೆ ಅಳಿದಽವು ೧೦

ಅಳಿದರೆ ಅಳಿಯಲಿ ಗಳಿಗೆ ಮಾಡಿಸಿಕೊಡುವೆ
ಬಲಗೈಗೆ ಬೆಳ್ಳಿ ಕಡಗಽವ | ಮಾಡಿಸಿಕೊಡುವೆ
ನನ ತಂಗಿ ಗೆಲವಾಗಿ ಇರಲ್ಹೇಳಿ ೧೧

* * *

ನನ್ನ ತೌರೋರು ಕನಕಮುತ್ತಿನೋರು
ಕೆಣಕದಿವರು ಧನಿಕರು | ಅಣ್ಣಯ್ಗೋಳು
ಅಣಕದಿಂದ್ವಾಲೆ ಬರೆದಾರು ೧೨

* * *

ಅಂಗಿ ಮೇಲಂಗಿ ಸುಂಗರದ ಮೇಲುಕಟ್ಟು
ಎಲ್ಲಿಗೆ ತಮ್ಮಯ್ಯ ನಿನ ಪಯಣ | ಸಂಕೀಹಳ್ಳೀ
ಮಲ್ಲಿಗಕ್ಕಯ್ನ ಕರಿಯಾಕೆ ೧೩

ತೆನೆ ೪

# ಕಥೆ ಮತ್ತು ಶಾಸ್ತ್ರದ ಹಾಡುಗಳು



## ಪರಿಚಯ

ಸಸಿ ನೆಡುವಾಗ, ಕಳೆ ಕೀಳುವಾಗ, ಹೊಲ ಕೊಯ್ಯುವಾಗ, ಕಾಳೊಕ್ಕುವಾಗ ಮತ್ತು ಇತರ ಕೆಲವು ಕೆಲಸ ಮಾಡುವಾಗ ಹಲವು ಹೆಂಗಸರು ಒಟ್ಟಿಗೆ ಸೇರುತ್ತಾರೆ. ಎಲ್ಲರೂ ಜೊತೆಜೊತೆಯಾಗಿ ವಿನೋದ ದಿಂದ ಮಾತಾಡುತ್ತ ಆಯಾಸ ತೋರದಂತೆ ಕೆಲಸ ಮಾಡುತ್ತಾರೆ. ಕ್ರಮ ಕ್ರಮವಾಗಿ ಮಾತು ಮುಗಿದು ಹಾಡಿಗೆ ಎಡೆಗೊಡುತ್ತದೆ. ಮಕ್ಕಳು ಮರಿಗಳ ಮತ್ತು ಮನೆಗೆಲಸಗಳ ಆತಂಕವಿಲ್ಲದೆ ಗೆಳತಿಯರ ಜೊತೆ ಸಿಕ್ಕಿ ಸಂಕೋಚವಡಗಿ ಹಾಡಿನ ಹೊನಲು ಉಕ್ಕಿ ಹರಿಯುತ್ತದೆ.

ರಾಗಿ ಬೀಸುವಾಗ ಹೇಳುವ ಬಿಡಿ ಪದ್ಯಗಳನ್ನೂ ಸಣ್ಣ ಪುಟ್ಟ ಸಂಸಾರಚಿತ್ರದ ಪದಗಳನ್ನೂ ಈ ಸಮಯದಲ್ಲಿ ಹೇಳುವುದುಂಟು. ಆದರೆ ಗಂಟೆಗಟ್ಟಳೆ ಹೇಳಿದರೂ ಮುಗಿಯದ ದೊಡ್ಡದೊಡ್ಡ ಕಥೆಗಳನ್ನೂ ಶಾಸ್ತ್ರದ ಹಾಡುಗಳನ್ನೂ ಹೇಳುವುದೇ ಹೆಚ್ಚು. ಇರುವ ಹೆಂಗಸರೆಲ್ಲ ಎರಡು ಪಂಗಡವಾಗಿ ಒಂದು ಪಂಗಡದವರು ಹಾಡಿದ್ದನ್ನೇ ಮತ್ತೊಂದು ಪಂಗಡದವರು ಮರಳಿ ಹಾಡುತ್ತ—ಕೆಲವು ವೇಳೆ ಎರಡು ಮೂರು ಸಲ ಮರಳಿ ಮರಳಿ ಹಾಡುತ್ತ—ತಮ್ಮ ಇನಿದನಿಯ ಅಲೆಗಳನ್ನು ಗಾಳಿಯಲ್ಲಿ ತೇಲಬಿಡುತ್ತಾರೆ. ಮನೆಯಲ್ಲಿ ತನಿಯಾಗಿ ಹಾಡುವಾಗ ಕಾಣದ ಒಂದು ಹೊಸ ಸೊಗಸು ಈ ಮೇಳಗಾನದಲ್ಲಿ ಕಂಡುಬರುತ್ತದೆ. ಹಾಡು ಮಳೆ ಗಾಲದ ತುಂಬುಹೊಳೆಯಂತೆ ನಿದಾನವಾಗಿ ಮುಂದುವರಿಯುತ್ತದೆ.

ಈ ಹಾಡುಗಳಲ್ಲಿ ಹೇಳಿದ ನುಡಿಯನ್ನೇ ಮತ್ತೆ ಮತ್ತೆ ಹೇಳುವುದು ಬಹಳ ಹೆಚ್ಚು. ಒಂದೊಂದರಲ್ಲೂ ಯಾವುದೋ ಒಂದು ಶಬ್ದ ಬೇರೆ ಯಾಗಿರುತ್ತದೆ. ಆದರೂ ಅದು ಪುನರುಕ್ತಿಯೇ. ಅವರು ಹೇಳುವುದ ನ್ನೆಲ್ಲ ಬರೆದರೆ ಇಲ್ಲಿ ಕೊಟ್ಟಿರುವುದರ ಎರಡುಮೂರರಷ್ಟಾದೀತು. ಮುಖ್ಯ ವಿಷಯ ಬಿಟ್ಟುಹೋಗದಂತೆ, ಹಾಡಿನ ಸ್ವರೂಪ ಚೆನ್ನಾಗಿ ಕಾಣುವಂತೆ, ಅಗತ್ಯವಾದಷ್ಟನ್ನು ಮಾತ್ರ ಆಯ್ದುಕೊಂಡಿದೆ. ಮದುವೆಯ ಹಾಡಿ

ನಲ್ಲಂತೂ ಹೀಗೆ ಆಯುವುದು ಬಹು ಕಷ್ಟ. ನಾಲ್ಕೈದು ನುಡಿಗೊಂದ ರಂತೆ, ಎಂಟು ಹತ್ತಕ್ಕೊಂದರಂತೆ, ಆಯ್ದರೂ ಇಷ್ಟು ದೊಡ್ಡದಾಯಿತು. ಉದಾಹರಣೆಗೆ ಕೊಟ್ಟಂತೆ ಎರಡೆರಡು ನುಡಿಗಳನ್ನಾದರೂ ಕೊಡದಿದ್ದರೆ ಹಾಡಿನ ನಿಜಸ್ವರೂಪವನ್ನು ಮರಸಿದಂತಾಗುತ್ತದೆ; ಅದರ ಆಭಾಸ ಚಿತ್ರ ವನ್ನು ಕೊಟ್ಟಂತಾಗಿ ತುಂಬ ಅನ್ಯಾಯವಾಗುತ್ತದೆ.

'ಸುವ್ವಿಯ ಹಾಡು' ಕುಟ್ಟುವಾಗ ಹೇಳುವ ಹಾಡು. ಕಾವ್ಯಗಳಲ್ಲಿ ಇಂಥ ಹಾಡಿಗೆ 'ಒನಕೆವಾಡು' ಎನ್ನುತ್ತಾರೆ. ಅಲ್ಲಿ ತ್ರಿಪದಿಯಲ್ಲಿರುವ ಒನಕೆವಾಡು ಶೃಂಗಾರ ಸನ್ನಿವೇಶದಲ್ಲಿ ಒಂದೆರಡು ಕಡೆ ಬರುತ್ತದೆ. ಹೀಗೆ ಕಥೆಯನ್ನೊಳಗೊಂಡ ಒನಕೆವಾಡು ಕಾಣಬರುವುದಿಲ್ಲ. ಈ ಸುವ್ವಿಯ ಹಾಡು (ನಾನು ಕಂಡಂತೆ) ಬ್ರಾಹ್ಮಣರಲ್ಲಿ ಹೆಚ್ಚು ಪ್ರಚಾರ ದಲ್ಲಿರುವುದಾದರೂ ಇಲ್ಲಿನ ವಿಷಯ ಒಕ್ಕಲಿಗರ ಜೀವನಕ್ಕೆ ಸಂಬಂಧಿಸಿದ್ದು. ತಾಯಿ ಬದುಕಿರುವಾಗ ಸೋದರತ್ತೆ ಬಂದು ಧಾರೆಯೆರೆಯುವುದು ಬ್ರಾಹ್ಮಣರಲ್ಲಿ ವಾಡಿಕೆಯಿಲ್ಲ. ಒಕ್ಕಲಿಗರಲ್ಲಿ 'ಬಳಗ ಧಾರೆ'ಯು (ನಂಟರೆಲ್ಲ ಬಂದು ಧಾರೆಯೆರೆಯುವ) ಪದ್ಧತಿಯುಂಟು. ಆದ್ದರಿಂದ ಇದನ್ನು ಬ್ರಾಹ್ಮಣರು ರಚಿಸಿರಬಹುದೆಂಬ ಸಂದೇಹ ಬಂದರೂ ಬ್ರಾಹ್ಮ ಣರ ಹಾಡುಗಳಲ್ಲಿ ಸೇರಿಸಲಿಲ್ಲ.

ಉತ್ತರೆ ಮಳೆ ಬರುವ ಮೊದಲು ಬಿಸಿಲಿನ ಬೇಗೆ ಅತಿಯಾಗಿ ನೆಲವೆಲ್ಲ ಬೆಂದು ಬೆಂಡಾಗಿರುತ್ತದೆ. ಅಂಥ ಸಮಯದಲ್ಲಿ ಸೋರುಗಟ್ಟಿ ಕೊಂಡು ಭಾರಿ ಅಡ್ಡಮಳೆ ಹುಯ್ದು ದಗೆಯಡಗಿಸಿ ಕೆರೆಕಟ್ಟೆಗಳನ್ನು ತುಂಬಿಸುತ್ತದೆ. ಬೆಂದ ನೆಲವನ್ನೂ ಧಾರೆಗಟ್ಟಿ ಸುರಿಯುವ ಮಳೆಯನ್ನೂ ಕಂಡು ಸಂಕಟದಲ್ಲಿ ಸೊರಗಿ ಕಣ್ಣೀರ ಕೋಡಿ ಹರಿಸುತ್ತ ಹೊರಟ 'ಉತ್ತರದೇವಿ'ಯನ್ನು ಚಿತ್ರಿಸಿದ್ದಾರೆಂದು ತೋರುತ್ತದೆ. ಹಳ್ಳಿಗರು ಈ ಕಥೆ ನಿಜವಾಗಿ ನಡೆದದ್ದೆಂದು ನಂಬುತ್ತಾರೆ. 'ಮಾ ತಾಯಿ ತಾನು ನೊಂದರೂ ಲೋಕ ತಣಿಸಿದಳು' ಎನ್ನುತ್ತಾರೆ.

'ನವರಾತ್ರಿ' ನಾಡ ಹಬ್ಬವಷ್ಟೆ. ಆಗ ಪ್ರತಿ ಹಳ್ಳಿಯಲ್ಲಿಯೂ ದೇವರನ್ನು ಪಟ್ಟಕ್ಕೆ ಕೂರಿಸಿ ದಿನದಿನವೂ ಬಹಳ ಜನ ಸೇರಿ ಪೂಜೆ

ಮಂಗಳಾರತಿ ಮಾಡುತ್ತಾರೆ. ಸರಸ್ವತೀ ಪೂಜೆ, ಆಯುಧಪೂಜೆ, ಮೊದಲಾದ ಎಲ್ಲ ಕಟ್ಟಳೆಗಳೂ ತಪ್ಪದೆ ನಡೆಯುತ್ತವೆ. ವಿಜಯದಶಮಿಯ ದಿನ ದೊಡ್ಡ ಉತ್ಸವ. ಅವತ್ತು ಸಂಜೆ ದೇವರು 'ಅಂಬೆಸೆಯುವುದಕ್ಕೆ' ಹೋಗಬೇಕು. ಇದು ಹಳ್ಳಿಯ 'ಜಂಬೂ ಸವಾರಿ', 'ಪೌಜು'. ಮಾನೋಮಿ ಮಂಟಪದಲ್ಲಿ ದೇವರನ್ನು ಬಿಜಯಮಾಡಿಸಿ ದೇವರೆದುರಿಗೆ ಹಳ್ಳಿಯ ಕಲಾಕೌಶಲ್ಯವನ್ನೆಲ್ಲ ಪ್ರದರ್ಶಿಸುತ್ತಾರೆ. ಕೋಲಾಟ, ಕುಸ್ತಿ, ಕತ್ತಿಯ ವರಸೆ—ಎಲ್ಲಾ ನಡೆಯುತ್ತದೆ. ಊರಿಗೆ ಮರಳುವ ಉತ್ಸವವನ್ನು ಎದುರುಗೊಂಡು ಆರತಿ ಎತ್ತುವಾಗ ನಮ್ಮೂರ ಹೆಂಗಸರು ಇಲ್ಲಿ ಕೊಟ್ಟಿರುವ ಮಾನೋಮಿಯ ಪದ ಹೇಳುತ್ತಾರೆ. ಕೆರೆ ತುಂಬಿ ಕೋಡಿ ಬಿದ್ದಾಗ ತೆಪ್ಪೋತ್ಸವ ಮಾಡುವುದುಂಟು; ಒಮ್ಮೊಮ್ಮೆ 'ಪರ್ವ' ಮಾಡುವುದುಂಟು. ಆಗಲೂ ಈ ಹಾಡು ಹೇಳುತ್ತಾರೆ.

'ನಂಜಪ್ಪ' ಎಂಬ ಹಾಡಿನಲ್ಲಿ ನಂಜುಂಡೇಶ್ವರ ಚಾಮುಂಡಿಯರ ಪ್ರಣಯ ಕಥೆ ಬರುತ್ತದೆ. ಚಾಮುಂಡಿ ನಂಜಪ್ಪನ ಸೂಳೆಯೆಂದೂ ನಂಜಪ್ಪ ಅವಳ ಮನೆಗೆ ಹೋದ್ದರಿಂದ ನಂಜಪ್ಪನ ಹೆಂಡತಿ ದೇವೀರಿ (ದೇವಿಯರು, ದೇವಿ) ಮುನಿದಳೆಂದೂ ಆ ಮುನಿಸಿಗೆ ನಂಜಪ್ಪನೂ ಮುನಿದು ದೇಶಾಂತರ ಹೋದನೆಂದೂ ಈ ಹಾಡಿನಲ್ಲಿ ಕಲ್ಪಿಸಿಕೊಂಡಿದ್ದಾರೆ. ಇದು ದೊಡ್ಡ ಹಾಡು. ಇಲ್ಲಿ ಕೊಟ್ಟಿರುವುದರಲ್ಲಿ ಎಷ್ಟೋ ಭಾಗ ಬಿಟ್ಟುಹೋಗಿರಬಹುದು; ಅಪೂರ್ಣವಾಗಿಯೂ ಇರಬಹುದು. ನಂಜನಗೂಡಿನ ಜಾತ್ರೆಯ ಕಾಲದಲ್ಲಿ ಯಾತ್ರಿಕರ ವಠಾರಗಳಲ್ಲಿ ಎಂದಾದರೊಮ್ಮೆ ಈ ಹಾಡು ಪೂರ್ತಿಯಾಗಿ ದೊರಕಬಹುದು.

ಗಿರಿಜಾ ಕಲ್ಯಾಣ ಮಹಾಕವಿ ಕಾಳಿದಾಸನೇ ಮೊದಲಾದ ಹಲವು ಕವಿಗಳ ಮನಸ್ಸನ್ನು ಆಕರ್ಷಿಸಿರುವ ದಿವ್ಯ ಕಥೆ; ವಿಶ್ವಕುಟುಂಬಿಯ ಆದರ್ಶ ದಾಂಪತ್ಯವನ್ನು ವರ್ಣಿಸುವ ಪುಣ್ಯ ಚರಿತ್ರೆ. ಅದೇ ಚರಿತ್ರೆ ಹಳ್ಳಿಗರ ಮಟ್ಟಕ್ಕಿಳಿದು ಅವರ ಜೀವನದ ಅನುಭವಗಳನ್ನೊಳಗೊಂಡು ಬಾಳಿಗೆ ಬೆಳಕಾಗಿ ದಾರಿ ತೋರಿಸುತ್ತಿದೆ. ಹಳ್ಳಿಯ ಕವಿಗಳು ಕಟ್ಟಿರುವ ಗಿರಿಜಾ ಕಲ್ಯಾಣವೇ 'ಗೌರಮ್ಮನ ಮದುವೆ'. ಪ್ರತಿಯೊಂದು ಮದುವೆ

ಯಲ್ಲಿಯೂ ಧಾರೆ ಆದಮೇಲೆ ಈ ಹಾಡನ್ನು ತಪ್ಪದೆ ಹೇಳುತ್ತಾರೆ. ಹಳ್ಳಿಯ ಹೆಣ್ಣು ಮಕ್ಕಳಿಗೆ ವೇದ, ಶಾಸ್ತ್ರ, ಪುರಾಣ—ಎಲ್ಲವೂ ಇದೇ. ಇದಕ್ಕನುಸಾರವಾಗಿ ತಮ್ಮ ಬಾಳನ್ನು ತಿದ್ದಿಕೊಳ್ಳಲು ಅವರು ಯತ್ನಿಸುತ್ತಾರೆ. ಈ ಹಾಡನ್ನೂ ಇಲ್ಲಿ ಅಡಕಮಾಡಿ ಕೊಟ್ಟಿದೆ.

ಮದುವೆಯ ಕಾಲದಲ್ಲಿ ಹೇಳುವ 'ಗೌರಮ್ಮನ ಮದುವೆ'ಯಲ್ಲದೆ ಅದೇ ಹೆಸರಿನ ಮತ್ತೊಂದು ಪದವನ್ನೂ ಇಲ್ಲಿ ಕೊಟ್ಟಿದೆ. ಮೊದಲನೆಯದು ತ್ರಿಪದಿ, ಎರಡನೆಯದು ರಗಳೆ. ಕಥೆಯ ರಚನೆಯೂ ಒಂದೊಂದರಲ್ಲಿ ಒಂದೊಂದು ರೀತಿ. ಮೊದಲನೆಯದರಲ್ಲಿ ಶಿವ ಹೆಣ್ಣು ಕೇಳುವುದಕ್ಕೆ ಬಂದು ಗೌರಿಯನ್ನು ಒಲಿಸಿ ಮದುವೆ ಮಾಡಿಕೊಳ್ಳುತ್ತಾನೆ. ಇದು ಎಲ್ಲೆಲ್ಲೂ ಬಳಕೆಯಿರುವ ಪದ್ಧತಿ. ಎರಡನೆಯದರಲ್ಲಿ ಗೌರಿ ತಾನಾಗಿ ಶಿವನನ್ನು ಮೆಚ್ಚಿ, ಅವನಿದ್ದಲ್ಲಿ ಹೋಗಿ ಮದುವೆಯಾಗುತ್ತಾಳೆ. ಈ ಎರಡನ್ನೂ ಬ್ರಾಹ್ಮಣರ ಹಾಡುಗಳಲ್ಲಿ ಕೊಟ್ಟಿರುವ ಅದೇ ವಿಷಯದ ಹಾಡುಗಳೊಡನೆ ಹೋಲಿಸಿ ನೋಡಿ.

ಶಾಸ್ತ್ರದ ಹಾಡುಗಳ ವಿಷಯದಲ್ಲಿ ಒಂದು ಮಾತು ಹೇಳಬೇಕು. ಒಕ್ಕಲಿಗರ ಮದುವೆಗಳಲ್ಲಿ ಪುರೋಹಿತರು ಬರುವುದು 'ಧಾರೆ ಮುಹೂರ್ತ'ದಲ್ಲಿ ಮಾತ್ರ. ಬ್ರಾಹ್ಮಣರ ಮದುವೆಗಳಲ್ಲಿ ಹೇಗೋ ಹಾಗೆ ಪ್ರಯೋಗದ ಪುಸ್ತಕವನ್ನಿಟ್ಟುಕೊಂಡು ಸದಾ ಎದುರಿಗಿದ್ದು ಕೆಲಸಗಳನ್ನು ನೋಡಿಕೊಳ್ಳುವುದಿಲ್ಲ. ಆದ್ದರಿಂದ ದಿನದಿನವೂ ನಡೆಯಬೇಕಾದ ಮದುವೆಯ ಹಲವು ಕಾರ್ಯಗಳನ್ನೂ ಅವರು ಪುರೋಹಿತರ ಸಹಾಯವಿಲ್ಲದೆಯೇ ನಿರ್ವಹಿಸುತ್ತಾರೆ. ಇದಕ್ಕೆ ಹೆಂಗಸರು ಹೇಳುವ ಈ ಶಾಸ್ತ್ರದ ಹಾಡುಗಳು ನೆರವಾಗುತ್ತವೆ. ಈ ಹಾಡುಗಳು ನಡೆಯಬೇಕಾದ ಪ್ರತಿಯೊಂದು ಕಾರ್ಯ (ವಿಧಾನ) ವನ್ನೂ ಪ್ರಯೋಗ ಪುಸ್ತಕಗಳ ರೀತಿಯಲ್ಲೇ ವಿವರವಾಗಿ ವರ್ಣಿಸುತ್ತವೆ. ಇವನ್ನು ಹಾಡಿಕೊಳ್ಳುತ್ತ ಎಲ್ಲ ಕೆಲಸವನ್ನೂ ಸಾಂಗವಾಗಿ ನೆರವೇರಿಸುತ್ತಾರೆ. ಮಂತ್ರಗಳ ಅರ್ಥ ಎಲ್ಲರಿಗೂ ತಿಳಿಯುವುದಿಲ್ಲ. ಆದರೆ ಈ ಹಾಡುಗಳು ಬಳಕೆಯ ಮಾತಿನಲ್ಲಿರುವುದರಿಂದ ಇವುಗಳ ಅರ್ಥ ಚೆನ್ನಾಗಿ ತಿಳಿಯುತ್ತದೆ. ಇದೇ ಇವುಗಳ ಹೆಚ್ಚುಗಾರಿಕೆ.

ಬ್ರಾಹ್ಮಣರಲ್ಲೂ ಈ ಬಗೆಯ ಹಾಡುಗಳು ಬೇಕಾದಷ್ಟಿವೆ. ಆದರೆ ಈಗ ಅವು ಬೆಳಕಿಗೆ ಬರುವುದು ತೀರ ಅಪರೂಪ.

ಮದುವೆಯಲ್ಲಿ ಈ ಶಾಸ್ತ್ರದ ಹಾಡುಗಳಲ್ಲದೆ ಗಂಡು ಹೆಣ್ಣುಗಳು ಹೆಸರು ಹೇಳುವುದು, ಬೀಗರು ಒಬ್ಬರೊಡನೊಬ್ಬರು ವಿನೋದ ಮಾಡು ವುದು—ಮೊದಲಾದ ಸಂದರ್ಭಗಳಲ್ಲಿ ಹಲವಾರು ಹಾಡು, ಒಗಟು ಗಳನ್ನು ಹೇಳುತ್ತಾರೆ. ಮಾದರಿಗೆ ಅಂಥ ಕೆಲವೇ ನುಡಿಗಳನ್ನು ಇಲ್ಲಿ ಕೊಟ್ಟಿದೆ :

ಹತ್ತೀಕಾಯ್ಹಂಗೆ ಹತ್ತಾಳು ಬಂದವ್ರೆ
ಹತ್ತಾಳೂ ಬರಿ ಮುದುಕರು | ನಮ್ ಬೀಗರು
ಏರೀ ಹತುನಾರ್ದೆ ಕೆಳಗವ್ರೆ | ನೀವ್ ಹೋಗಿ
ಏರೀಯ ಕಡಿದು ಎಳತನ್ನಿ

*　　　*　　　*

ಉದ್ದ ಕುದ್ದಲ್ಲ ಗಿಡ್ಡಿಗೆ ಗಿಡ್ಡಲ್ಲ
ಗಿಡ್ಡಿ ಅಕ್ಕಯ್ಯ ಕಳಸವ | ಹಿಡಿದರೆ
ಉಜ್ಜೇಣಿ ತೇರು ಹರಿದ್ಹಂಗೆ

*　　　*　　　*

ಹಳ್ಳು ಬೆಳೆಯೋದ್ ಹಾರನ್ಹಳ್ಳಿ
ಎಳ್ಳು ಬೆಳೆಯೋದ್ ಲಿಂಗದ್ಹಳ್ಳಿ
ಕೊಳ್ಳೀ ಬೆಳಕಾಗುಣ್ಣುತಾರೆ
ಕೋಡೀಹಳ್ಳ್ಯೋರು

*　　　*　　　*

ಹೆಸರು ಕಳಸಾಪುರ(ವಂತೆ) ಎಸರಿಗೆ ನೀರಿಲ್ಲ(ವಂತೆ)
ಹಸುರು ಕುಪ್ಪಸದ ನಾರೀರ | ತಲೆಮೇಲೆ
ಎಸೆದಾಡುತಲಿದೆ ತಲೆಸಿಂಬಿ

*　　　*　　　*

## ನಾಡ ಪದಗಳು

ಆರ್ ಸೇರೆಳ್ಳು ಮೂರ್ ಸೇರ್ ಜಳ್ಳು
........ಗೌಡರ ಮಾತೆಲ್ಲ ಬರಿ ಸುಳ್ಳು

ಬೆಳದಿಂಗ್ಳ ಬೆಳಕು ಕಲ್ಸಕ್ರೆಹಳುಕು
........ಅರಸರ ಮುಖ ಹುಳುಕು

* * *

ಈ ಪದಗಳು ಸಂದರ್ಭಕ್ಕೆ ತಕ್ಕಂತೆ ಆಗಾಗಲೆ ಕಟ್ಟಿ ಹೇಳಿದ ಆಶು ಕವಿತ್ವಗಳು. ಹಳ್ಳಿಗರು, ಅದರಲ್ಲೂ ಹಳ್ಳಿಯ ಹೆಂಗಸರು, ಕಟ್ಟಿದವಾದ್ದರಿಂದ ಇವುಗಳಲ್ಲೆಲ್ಲ ಅಚ್ಚಕನ್ನಡ ನುಡಿ ತುಂಬಿದೆ. ಇಲ್ಲಿ ಸಂಸ್ಕೃತ ಶಬ್ದಗಳು ಬಹು ವಿರಳ. ಇಂಥ ಪದಗಳನ್ನು ಕಟ್ಟಿ ಅಕ್ಷರವಿದ್ಯೆಯರಿಯದ ಹಳ್ಳಿಯ ಹೆಂಗಸರೂ ತಕ್ಕಮಟ್ಟಿಗೆ ಸರಸ್ವತಿಗೆ ಸೇವೆ ಸಲ್ಲಿಸಿದ್ದಾರೆ. ಈಗಿನ ಹೊಸ ಪರಿಸ್ಥಿತಿಯಲ್ಲಿ ಅವರ ಉತ್ಸಾಹ ಕುಗ್ಗದಂತೆ, ಆ ಹಾಡಿನ ಚಿಲುಮೆ ಬತ್ತಿಹೋಗದಂತೆ, ನೋಡಿಕೊಳ್ಳುವುದು ಅಗತ್ಯ. ಅದು ತಿಳಿದವರಿಗೂ ಸಾಹಿತ್ಯ ಸೇವಕರಿಗೂ ಸೇರಿದ್ದಾಗಿದೆ.

## ಸುವ್ವಿಯ ಹಾಡು

ಸುವ್ವಿ ಕುಟ್ಟೆಂದರೆ ಸುವ್ವಂಗನಾಡೋಳು
ನೋಡಣ್ಣಾ ನಿನ್ನ ಮಡದಿಽಯುಽ—ಸುವ್ವಿ ೧

ಒಂದಿಬ್ಬಿ ಕುಟ್ಟುವಾಗ | ಒಬ್ಬಣ್ಣ ಸುಣಬಂದ
ಒಬ್ಬಿಗೆ ಒಬ್ಬಿ ನುರಿಯುವು—ಸುವ್ವಿ
ಒಬ್ಬಿಗೇ(ನೇ) ಒಬ್ಬಿ | ನುರಿಯುವು ಅಣ್ಣಯ್ಯ
ಎಬ್ಬಿಸೋ ನಿನ್ನ ಮಡದಿಯು—ಸುವ್ವಿ ೨

ಮಡದಿಯು ಎಬ್ಬಿಸಿದ್ರೆ ಅರಸಿದ್ದೆ ಆದಾವು
ಎರಡಿಬ್ಬೀ ಮಾಡಿ ಹಣಿ ತಂಗಿ—ಸುವ್ವಿ ೩

ಎರಡಿಬ್ಬಿ ಮಾಡಿದರೆ ಕಡಿ ನುಚ್ಚು ಆದಽವು
ನೋಡಣ್ಣಾ ನಿನ್ನ ಮಡದಿಯು—ಸುವ್ವಿ
ಒಂದಿಬ್ಬಿ ಮಾಡಿದರೆ ಕುರುಡಕ್ಕಿಯಾದಽವು
ಸಾಕಣ್ಣಾ ನಿನ್ನ ಮನೆಗೆಲಸ—ಸುವ್ವಿ ೪

ನನ್‌ಮನೆ ಕೆಲಸಽವಽ ನನ್‌ಮುಂದೆ ಹಳಿಬ್ಯಾಡ
ನನ್ನ ಮನೇಲಿ ಇರಬೇಡ—ಸುವ್ವಿ ೫

ಕುದುರೇನೆ ತರಿಸಣ್ಣ ಜೀನವ ಬಿಗಿಸಣ್ಣ
ನನ್ನ ಊರಿಗೆ ಕಳುಹಣ್ಣ—ಸುವ್ವಿ ೬

ಕುದುರೆ ನಮ್ಮಲ್ಲಿಲ್ಲ ಜೀನು ನಮ್ಮಲ್ಲಿಲ್ಲ
ನಿನ್ನ ಊರಿಗೆ ನಡಿ ತಂಗಿ—ಸುವ್ವಿ ೭

* * *

ಕಕ್ಕೇಹಣ್‌ ತಿಂದು ಕೈತುಂಬ ನೀರ್‌ ಕುಡಿದು
ಕಾಕರುಗಲ್ಲಾಗೆ ನಡುವೊತ್ತಿ—ಸುವ್ವಿ
ಕಾಕರುಗಲ್ಲಾಗೆ ನಡುವೊತ್ತಿ ಆದರೆ
ಸಾಕಣ್ಣಾ ನಿನ್ನ ಮನೆಮಾರು—ಸುವ್ವಿ ೮

ತಂಗ್ಹ್ಯೊದ ಮರುದಿನ ಬಂದಿತು ಛಳಿ ಜ್ವರ
ಮನೆಯ ಮಡದಿಗೆ ತಲೆಶೂಲೆ—ಸುವ್ವಿ
ಮನೆಯ(ನ) ಮಡದಿಗೆ ತಲೆಶೂಲೆ ಆದರೆ
ದೇವರ್ನ ಕೇಳ ಹೊರಟ್ಸನೆ—ಸುವ್ವಿ ೯

ದೇವ್ರಲ್ಲ ದಿಂಡ್ರಲ್ಲ ದ್ಯೆವಲ್ಲ ಭೂತಲ್ಲ
ಮನೆಯ ಹೆಣ್ಮಗಳುಸುರಣ್ಣಾ—ಸುವ್ವಿ
ಮನೆಯ(ನ) ಹೆಣ್ಮಗಳ ಉಸುರಣ್ಣ ಆದರೆ
ತಂಗಿಯ ಕರೆಯ ಹೊರಟ್ಸನೆ—ಸುವ್ವಿ ೧೦

* * *

ಕುದುರೇನೆ ತಂದಿದಿನಿ ಜೀನವ ಬಿಗಿಸಿದಿನಿ
ಬರಬೇಕೇ ತಂಗಿ ಮದುವೆಗೆ—ಸುವ್ವಿ ೧೧

ಅಂಗ್ಳ ಗುಡಿಸೋರಿಲ್ಲ ಗಂಗ್ಳ ತೊಳಿಯೋರಿಲ್ಲ
ಹೇಗೆ ಬರಲಣ್ಣಾ ಮದುವೆಗೆ—ಸುವ್ವಿ ೧೨

ಅಂಗ್ಳಕ್ಕೆ ಆಳಿಡುವೆ ಗಂಗ್ಳಕ್ಕೆ ತೊತ್ತಿಡುವೆ
ಬರಬೇಕೇ ತಂಗಿ ಮದುವೆಗೆ—ಸುವ್ವಿ ೧೩

ಮಜ್ಗೆ ಕಡೆಯೋರಿಲ್ಲ ಬೆಣ್ಣೆ ತೆಗೆಯೋರಿಲ್ಲ
ಹೇಗೆ ಬರಲಣ್ಣಾ ಮದುವೆಗೆ—ಸುವ್ವಿ ೧೪

ಮಜ್ಜಿಗ್ಗೆ ಆಳಿಡುವೆ ಬೆಣ್ಣೆಗೆ ತೊತ್ತಿಡುವೆ
ಬರಬೇಕೇ ತಂಗಿ ಮದುವೆಗೆ—ಸುವ್ವಿ ೧೫

ಬೇಸಗೆ ಬಿಸಿಲಣ್ಣಾ ಕೂಸಿನ ತಾಯಣ್ಣಾ
ಹೇಗೆ ಬರಲಣ್ಣಾ ಮದುವೆಗೆ—ಸುವ್ವಿ ೧೬

ನಿನಗೆ ಪಲ್ಲಕ್ಕಿ ಕೂಸಿಗೆ ಮರಿ ತೇಜಿ
ಬರಬೇಕೇ ತಂಗಿ ಮದುವೆಗೆ—ಸುವ್ವಿ ೧೭

ಮಳೆಯಾರ ಬಂದೀತೋ ಹೊಳೆಯಾರ ತುಂಬೀತೋ
ಹೇಗೆ ಬರಲಣ್ಣಾ ಮದುವೆಗೆ—ಸುವ್ವಿ ೧೮

ಚಿನ್ನದ ಹರಿಗೋಲ್ಗೆ ರನ್ನದ ಹುಟ್‌ಹಾಕಿ
ಜೋಕೇಲಿ ನಿನ್ನ ಕರೆದೊಯ್ವೆ—ಸುವ್ವಿ ೧೯

ಅಪ್ಪ ಕಟ್ಟಿದ ಮಡsನೆ ಅಮ್ಮ ಮಾಡಿದ ಬದುಕು
ಬರಬೇಕೇ ತಂಗಿ ಮದುವೆಗೆ—ಸುವ್ವಿ ೨೦

ಅಪ್ಪ ಇದ್ದರೆ ಎನ್ನ ಒಪ್ಪದಿ ಕರೆದೊಯ್ವ
ಅಪ್ಪ ಇಲ್ಲದಾ ಮನೆಯೊಲ್ಲೆ—ಸುವ್ವಿ ೨೧

ಅಮ್ಮ ಇದ್ದರೆ ಎನ್ನ ಸುಮ್ಮನೆ ಕಳುಹೋಳೆ
ಅಮ್ಮ ಇಲ್ಲದಾ ಮನೆಯೊಲ್ಲೆ—ಸುವ್ವಿ ೨೨

ಬಂದರೆ ಬಂದೇನೋ ಅಂಗ್ಳದಾಗೆ ನಿಂದೇನೋ
ಕಂದಗೆ ಧಾರೆ ಎರೆದೇನೋ—ಸುವ್ವಿ ೨೩

* * *

ಅಲ್ಲದ ಮಾತಾಡಿ ಶಾವಂತ್ಗೆ ಹೂ ಬೇಡಿ
ಊರ ಮುಂದಿನ ಪ್ರಾಣೇಶ ಗತಿ ೨೪

## ಉತ್ತರ ದೇವಿಯ ಹಾಡು

ಅತ್ತೆಗೂ ಸೊಸೆಗೂ ಹಿತ್ಲಾಗೆ ಏಕಾಂತ
ಉತ್ತು ಬಂದಾ ಮಗ್ಗೇ ಉಣಲಿಕ್ಕೆ—ಸುಯ್ಯೋ
ಉತ್ತು ಬಂದಾ ಮಗ್ಗೇ ಉಣಲಿಕ್ಕುತೇನೆಂದಳೇ
ಉತ್ರಾಜಿನೆಂಬೋ ಸೊಸೆ ಬೇಡ—ಸುಯ್ಯೋ
ಉತ್ರಾಜಿನೆಂಬೋ ಸೊಸೆ ಬೇಡ ನನ ಮಗನೇ
ಬಿಟ್ಟುsಬಿಡವಳ ತವರಿsಗೆ—ಸುಯ್ಯೋ ೧

ಬಿಟ್ಟುಬಿಡುವೋಕೆ ಎತ್ತಲ್ಲ ಎಮ್ಮೆಲ್ಲ
ಒಂದೊರಾ ಮುಟ್ಟಿ ತೆರ ಮುಟ್ಟಿ—ಸುಯ್ಯೋ
ಒಂದೊರಾs ಮುಟ್ಟಿs ತೆರ ಮುಟ್ಟಿ ಬಂದೋಳ
ಮಿತ್ರೇ ನಾನ್ ಹೆಂಗೆ ಬಿಡಲವ್ವಾ—ಸುಯ್ಯೋ ೨

ಒಂದು ವರsಕೆ ಬಂದಿಯು ಮಾರೇನು
ಮೇಲೊಬ್ಬ ರಾಣೀ ತರಿಸೇನು | ನನ ಮಗನೇ *
ಬಿಟ್ಟು ಬಿಡವಳ ತವರಿಗೆ—ಸುಯ್ಯೋ ೩

ಬಿಟ್ಟುಬಿಡೋಕೆ ಹಸುವಲ್ಲ ಕರುವಲ್ಲ
ಎಳ್ಡೊರs ಮುಟ್ಟಿ ತೆರ ಮುಟ್ಟಿ | ಬಂದೋಳ
ಮಿತ್ರೀ ನಾನ್ ಹೆಂಗೆ ಬಿಡಲವ್ವಾ—ಸುಯ್ಯೋ ೪

ಎಳ್ಡು ವರsಕೆ ವಾಲೆಯು ಮಾರುವೆ
ಮೇಲೊಬ್ಬ ರಾಣೀ ತರಿಸುವೆ | ನನ ಮಗನೆ
ಬಿಟ್ಟು ಬಿಡವಳ ತವರಿಗೆ—ಸುಯ್ಯೋ ೫

ಬಿಟ್ಟು ಬಿಡುವ್ರೋಕೆ ಆಡಲ್ಲ ಕುರಿಯಲ್ಲ
ಮೂರೊರs ಮುಟ್ಟಿ ತೆರ ಮುಟ್ಟಿ | ತಂದೋಳ
ಮಿತ್ರೀ ನಾನ್ ಹೆಂಗೆ ಬಿಡಲವ್ವಾ—ಸುಯ್ಯೋ ೬

ಮೂರು ವರsಕೆ (ನನ) ಮೂಗ್ತಿಯು ಮಾರುವೆ
ಬೇರೊಬ್ಬ ರಾಣೀ ತರಿಸುವೆ | ನನ ಮಗನೇ
ಬಿಟ್ಟು ಬಿಡವಳ ತವರಿಗೆ—ಸುಯ್ಯೋ ೭

* * *

ನೆಲೀನ ಮ್ಯಾಗಿರುವ್ರೋ ನೆಲ್ಲಕ್ಕಿ ಬಾನವ
ಉಂಡಾರ ಹೋಗೆ ಸೊಸೆ ಮುದ್ದೀ—ಸುಯ್ಯೋ ೮

ನೀನಾರ ಉಣ್ಣೀ ನಿನ ಮಗನಿಗಾರ ಇಕ್ಕೀ
ಮತ್ತೆ ಬರೂವಳಿಗೇ ಮಡಗಿರೆ—ಸುಯ್ಯೋ ೯

---

* ಈ ಹಾಡಿನಲ್ಲಿ ಉದ್ದಕ್ಕೂ ಸಾಲುಗಳನ್ನು ಮರಳಿ ಮರಳಿ ಹಾಡುವುದು ರೂಢಿ. ಅನುವರ್ತನೆ ಮಾಡಬೇಕಾದ ಕಡೆ ಗೆರೆಹಾಕಿ ಸೂಚಿಸಿ ಕೆಲವು ವೇಳೆ ಅಡಕ ಮಾಡಿಯೂ ಬರೆದಿದೆ. ಎಲ್ಲ ಕಡೆಯೂ ಮೊದಲಿನ ೮–೧೦ ಸಾಲುಗಳಂತೆಯೇ ಪ್ರತಿ ಎರಡನೆಯ ಸಾಲನ್ನೂ ಹಿಗ್ಗಿಸಿ ಹೇಳಿ ಕೊನೆಯಲ್ಲಿ 'ಸುಯ್ಯೋ' ಎಂದು ಪಲ್ಲವಿಯನ್ನು ಸೇರಿಸಿ ಹಾಡಬೇಕು.

ಚೆಟ್ಟೀ ಒಳಗಿರುವೋ ಗಟ್ಯಾದ ತುಪ್ಪವ
ತಿಂದಾರ ಹೋಗೆ ಸೊಸೆ ಮುದ್ದೇ—ಸುಯ್ಯೋ ೧೦

ನೀನಾರ ತಿನ್ನೆ ನಿನ ಮಗನಿಗಾರ ತಿನಿಸೆ
ಮತ್ತೆ ಬರೂವಳಿಗೇ ಮಡಗಿರೆ—ಸುಯ್ಯೋ ೧೧

ಒಲೆಯ ಮೇಲೆ ಇರುವೋ ದೊಡ್ಡ ಹಸುವಿನ್ ಹಾಲ
ಕುಡುದಾರ ಹೋಗೆ ಸೊಸೆ ಮುದ್ದೇ—ಸುಯ್ಯೋ ೧೨

ನೀನಾರ ಕುಡಿಯೇ ನಿನ್ ಮಗನಿಗಾರ ಕುಡಿಸೆ
ಮುಂದೆ ಬರುsವಳಿಗೇ ಮಡಗಿರೆ—ಸುಯ್ಯೋ ೧೩

ಅಟ್ಟದ ಮ್ಯಾಗಿರುವೋ ಸಣ್ಣಂಚಿನ ರವಿಕೆಯ
ತೊಟ್ಕಾರ ಹೋಗೆ ಸೊಸೆ ಮುದ್ದೇ—ಸುಯ್ಯೋ ೧೪

ನೀನಾರ ತೊಟುಕೊ ನಿನ ಮಗನಿಗಾರ ತೊಡಿಸು
ಮುಂದೆ ಬರುsವಳಿಗೇ ಮಡಗಿರೆ—ಸುಯ್ಯೋ ೧೫

* * *

ಒಂದನೆತ್ತಿಕೊಂಡು ಕಂದನ ಕೈಲ್ಹಿಡುಕೊಂಡು
ಗೆಜ್ಜೇವಜ್ಜರನ ನಡುಸುತ | (ತು) ತ್ತುರದೇವಿ
ಹೋದಳೆ ಬಾಳೇ ಬನಕಾಗಿ—ಸುಯ್ಯೋ ೧೬

ಬಾಗಲಾಗಿರುವೋ ಬಾಳೆಯ ವನಗಳಿರ
ಹೋಗುತೀನಿ ನನ್ನ ತವರಿಗೆ—ಸುಯ್ಯೋ ೧೭

ಹೋಗೋಳ್ ಹೋಗುsತೀಯ ನೀರ್ಯಾರೆ ಹುಯ್ಯೋರು
ಹಣ್ಣಾದರ್ಯಾರೇ ಮೆಲುವೋರು—ಸುಯ್ಯೋ ೧೮

ನೀರ ಹುಯ್ಯೋಳವಳೆ ಹಣ್ಣು ಮೆಲ್ಲೋಳವಳೆ
ನನಗಿಂತ ಜಾಣೆ ಮನೆಯಾಗೆ—ಸುಯ್ಯೋ ೧೯

ಹಿತ್ತಲಾಗಿರುವೋ ಕಿತ್ತಲೆ ವನಗಳಿರ
ಹೋಗುತೀನಿ ನಮ್ಮ ತವರಿಗೆ—ಸುಯ್ಯೋ ೨೦

ಹೋ೯ಗೊಳು........ ೨೧

ನೀರ ಹುಯ್ಯೋಳವಳೆ........ ೨೨

ಹಿತ್ತಲಾಗಿರುವ್ರೋ ಮಲ್ಲಿಗೆ ವನಗಳಿರ........ ೨೩

ಹೋಗೋಳು ಹೋಗುತೀಯ ನೀರ್‌ಯಾರೆ ಹುಯ್ಯೋರು
ಹೂವಾದರ್ಯಾರೆ ಮುಡಿಯೋರು—ಸುಯ್ಯೋ ೨೪

ನೀರ ಹುಯ್ಯೋಳವಳೆ ಹೂವ ಮುಡಿಯೋಳವಳೆ
ನನಗಿಂತ ಜಾಣೆ ಮನೆಯಾಗೆ—ಸುಯ್ಯೋ ೨೫

* * *

ಈ ಸೀರೆ ನಂದಲ್ಲ ಆ ಸೀರೆ ನಂದಲ್ಲ
ನಮ್ಮವ್ವ ಕೊಟ್ಟ ಸೀರೆ ತೆಗದಿಡೆ—ಸುಯ್ಯೋ ೨೬

ಈ ರವಿಕೆ ನಂದಲ್ಲ ಆ ರವಿಕೆ ನಂದಲ್ಲ
ನಮ್ಮವ್ವ ಕೊಟ್ಟ ರವಿಕೆ ತೆಗೆದಿಡೆ—ಸುಯ್ಯೋ ೨೭

(ಇಲ್ಲಿ ಗಂಗ್ಳ, ಚೆಂಬು, ಎಮ್ಮೆ, ಹಸು, ಆಡು ಮೊದಲಾದುವನ್ನು ಒಂದೊಂದಾಗಿ ಹೇಳುತ್ತಾರೆ. ಅಣ್ಣ ಕೊಟ್ಟದ್ದು, ತಮ್ಮ ಕೊಟ್ಟದ್ದು, ಅಪ್ಪ ಕೊಟ್ಟದ್ದು—ಎಲ್ಲವನ್ನೂ ಕೇಳುತ್ತಾರೆ. ಎಮ್ಮೆ, ಹಸು ಮೊದಲಾದವನ್ನು ಕುರಿತಾಗ 'ಹೊಡಕೊಡೆ' ಎಂಬ ಮಾತು ಬರುತ್ತದೆ)

* * *

ಒಂದನೆತ್ತಿಕೊಂಡು ಕಂದನ ಕೈಲ್ಹಿಡುಕೊಂಡು
ಗೆಜ್ಜೀವಜ್ಜರನ ನಡಸುತ| (ತು)ತ್ತರ ದೇವಿ
ಹೊಗ್ತಾಳೆ ತನ್ನ ತವರಿಗೆ | (ಗು) ತ್ತರ ದೇವಿ
ಹಾಸನದ ಗೌಡ ತಡದರೆ| (ತಡದು) ಕೇಳ್ಯಾರಲ್ಲೆ
ನೀನ್ಯಾವ ರಾಜರ ಸೊಸೆಯಮ್ಮ—ಸುಯ್ಯೋ ೨೮

ನಾನ್ ಯಾವ ರಾಜರ ಸೊಸೆಯೆಂದು ಹೇಳಲಿ
(ನಮ್) ಅತ್ಯಮ್ಮ ನನ್ನ ಉರಿಸ್ಯಾಳು | (ಉರಿಸಿ) ಕಳುವ್ಯಾಳು
ಹೋಗ್ತೀನಿ ನನ್ನ ತವರಿಗೆ—ಸುಯ್ಯೋ ೨೯

ಅಲ್ಲಿಂದುತ್ತರದೇವಿ ಬಂದಳು ತವರಿಗೆ
ನನ್‍ಅಪ್ಪಾ ನನಗೆ ಕದಾ ತೆಗಿಯೊ—ಸುಯ್ಯೋ ೩೦

ಅಪ್ಪಾ ಕದಾ ತೆಗಿಯೊ ಅಪ್ಪಾಜಿ ಕದ ತೆಗಿಯೊ
ನನ್ನಪ್ಪಾ ನನಗೆ ಕದಾ ತೆಗಿಯೊ—ಸುಯ್ಯೋ ೩೧

ಚಾಪೆಯು ಹಾಸೀತೆ ದೀಪವ ತುಂಬೈತೆ
ಕಂದವ್ ತೋಳಾಗೆ ಮಲಗ್ಯವ್ಯೆ। ನನ ಮಗಳೆ
ಹೋಗೇ ನಿಮ್ಮಣ್ಣನರಮನೆಗೆ—ಸುಯ್ಯೋ ೩೨

ಅಣ್ಣಾ ಕದಾ ತೆಗಿಯೊ ಅಣ್ಣಯ್ಯ ಕದ ತೆಗಿಯೊ
ನನ್ನಣ್ಣಾ ನನಗೆ ಕದಾ ತೆಗಿಯೊ—ಸುಯ್ಯೋ ೩೩

ಚಾಪೆಯು ಹಾಸೀತೆ ದೀಪವ ತುಂಬೈತೆ
ಮಲ್ಲಯ್ಯೊಡೆಯಾಗೆ ಮಲಗ್ಯೆತೆ। ನನ ತಂಗಿ
ಹೋಗೇ ನಿಮ್ಮಕ್ಕನರಮನೆಗೆ—ಸುಯ್ಯೋ ೩೪

ಅಕ್ಕ ಕದಾ ತೆಗಿಯೇ ಅಕ್ಕಯ್ಯ ಕದ ತೆಗಿಯೆ
ನನ್ನಕ್ಕಾ ನನಗೆ ಕದಾ ತೆಗಿಯೇ—ಸುಯ್ಯೋ ೩೫

ಚಾಪೆಯು ಹಾಸೀತೆ ದೀಪವ ತುಂಬೈತೆ
ನೀಲವ್ ತೋಳಾಗೆ ಮಲಗ್ಯೆತೆ। ತಂಗ್ಯಮ್ಮ
ಹೋಗೇ ನಿನ ತಮ್ಮನರಮನೆಗೆ—ಸುಯ್ಯೋ ೩೬

ತಮ್ಮ ಕದಾ ತೆಗಿಯೊ ತಮ್ಮಯ್ಯ ಕದ ತೆಗಿಯೋ
ನನ್‍ತಮ್ಮಾ ನನಗೆ ಕದಾ ತೆಗಿಯೋ—ಸುಯ್ಯೋ ೩೭

ಚಾಪೆಯು ಹಾಸೀತೆ ದೀಪವ ತುಂಬೈತೆ
ಕೆಂಪವ್ ತೋಳಾಗೆ ಮಲಗೀತೆ। ಅಕ್ಕಯ್ಯ
ಹೋಗೇ ನಿನ ತಂಗೀ ಅರಮನೆಗೆ—ಸುಯ್ಯೋ ೩೮

ತಂಗಿ ಕದಾ ತೆಗಿಯೇ ತಂಗ್ಯಮ್ಮ ಕದ ತೆಗಿಯೇ
ನನ ತಂಗೀ ನನಗೆ ಕದಾ ತೆಗಿಯೇ—ಸುಯ್ಯೋ ೩೯

ಚಾಪೆಯ ಹಾಸೀತೆ ದೀಪವ ತುಂಬ್ಯೆತೆ
ಕಾಳವ್ ತೋಳಾಗೆ ಮಲಗೀತೆ| ನನ್ನಕ್ಕಾ
ಹೋಗೇ ನಿಮ್ಮವ್ವನರಮನೆಗೆ—ಸುಯ್ಯೋ ೪೦

ಅಲ್ಲಿಂದುತ್ತರದೇವಿ ಬಂದಳೆ ಅವ್ವನ ಮನೆಗೆ
ಕಣ್ಣೀರ ಕೋಡಿ ಹರಿಸೂತ—ಸುಯ್ಯೋ ೪೧

ಅವ್ವ ಕದಾ ತೆಗಿಯೇ ಅವ್ವಯ್ಯ ಕದಾ ತೆಗಿಯೇ
ನನ್ನವ್ವಾ ನನಗೆ ಕದಾ ತೆಗಿಯೇ —ಸುಯ್ಯೋ ೪೨

ಅವ್ವ ಕದಾ ತೆಗದಳು ತಲೆಯನು ತಡವ್ಯಾಳು
ಕಣ್ಣೀರ ಕೋಡಿ ಹರಿಸ್ಯಾಳು—ಸುಯ್ಯೋ
ಕಣ್ಣೀರ ಕೋಡೀ ಹರಿಸುತೇನೆಂದಳು
ನಿಮ್ಮಪ್ಪ ನನ್ನ ಉರಸಿದ| ನನ ಮಗಳೇ
ನನ್‌ಹಾಡು ನಿನಗೆ ಇಗಟೀತೇ| ನನ ಮಗಳೇ
ಉತ್ರೀ ಮಳೆಯಾಗಿ ಹೊರಡವ್ವಾ—ಸುಯ್ಯೋ ೪೩

ಬಂದನೆತ್ತಿಕೊಂಡು ಕಂದನ ಕೈಲ್ಹಿಡುಕೊಂಡು
ಗೆಜ್ಜೀ ವಜ್ಜುರನ ನಡಸುತ—ಸುಯ್ಯೋ
ಗೆಜ್ಜೀ ವಜ್ಜುರನ ನಡಸುತುತ್ತರದೇವಿ
ಉತ್ರೀ ಮಳೆಯಾಗಿ ಹೊರಟಳು—ಸುಯ್ಯೋ ೪೪

## ಮಲ್ಲಯ್ಯನ ಮಾನೋರ್ನಿ

ಮಲ್ಲಯ್ಯ ಇರುವೋದು ಇಲ್ಲಿಗೆ ಗಾವುದ
ಮಲ್ಲಯ್ನ ಮಡದಿ ಮಲುಗಮ್ಮ| ಇರುವೋದು
ಕಲ್ಲು ಮಾಳಿಗೆ ಕೈಲಾಸ ೧

ಮಲ್ಲಯ್ಯ ನಿಮ್ಮ ನಲ್ಲೆಯ ಬರಹೇಳಿ
ಕಲ್ಯಾಣ ನಮ್ಮ ಮನೆಯಾಗೆ| ಮಲ್ಲಯ್ಯೋರೆ
(ನಿಮ್*)ನಲ್ಲೆಯ ಸಾಗಿ ಬರಹೇಳಿ ೨

ಮಲ್ಲಯ್ಯ ಶಿವನೆ ನೀವೆಲ್ಲಿ ಬೀಡಿಕೆ ಬಿಟ್ರಿ
ಮಲ್ಲಿಗೆ ಬೆಳೆದ ಮತಿಗಟ್ಟ | ಊರ ಮುಂದೆ
ಬಯಲಾಗೆ ಬಿಟ್ರು ಪರುಸೆಯು ೩

ಮೂಡ್ಲಿಂದ ಮಳೆ ಬಂದು ಕೋಡೀಲಿ ನಿಂದಿದಾವೆ
ನೋಡಿರಿ ಮಲ್ಲಯ್ಯ ನಿಮ್ಮ ಕೆರೆ | ಅಳ್ಳೀಮರ
ತೂಬು ತಲ್ಲಣಿಸಿ ನಗುತಾವೆ ೪

ಮದ್ಯಾಸ್ಕೆ ಮಳೆ ಬಂದು ಇಬ್ನಿಗೆ ಕೆರೆ ತುಂಬಿ
ಮಗ್ಗು ಈಬೂತಿ ತೆರೆಹುಯ್ದು | ಮಲ್ಲಯ್ನ
ಮದ್ಯಾನ್ದ ಪೂಜೆ ಸಮಸಂದೊ ೫

ಮದ್ಯಾನ್ದ ಮಲ್ಲಿಗೆ ರುದ್ರಶಾವಂತಿಗೆ
ಇಬ್ನೀಲಿ ಬೆಳೆಯೋ ಮರುಗಽವೆ | ಪಚ್ಚೀತೆನೆ
ಇದ್ದವು ಮಲ್ಲಯ್ನ ಜಡೆಯಾಗೆ ೬

ಅಪ್ಪ ಮಲ್ಲಯ್ಯ ತೆಪ್ಗಣಽಕ್ಹೋಗೋವಾಗ
ಇಪ್ಪತ್ತೆ ಪಂಜು ಹಿಡಿಗುದುರೆ | ಮಲ್ಲಯ್ಯ
ತೆಪ್ಗಣಽಕ್ಹೋಗೊ ಸಡಗರ ೭

ಒಕ್ಕಾಲ ಹುರಿಗೆಜ್ಜೆ ಒಕ್ಕಾಲ ಕಿರುಗೆಜ್ಜೆ
ಜೊಕ್ಕ ಬೆಳ್ಳೀಲಿ ಮಕುರಂಬ | ಹಾಕಿದ ಕುಮರೆ
ಹೊಕ್ಕವು ಮಾರ್ನೋಮಿ ಪೌಜಿಗೆ ೮

ನಾಗಾಲ ಹುರಿಗೆಜ್ಜೆ ನಾಗಾಲ ಕಿರುಗೆಜ್ಜೆ
ನಾಗ ಬೆಳ್ಳೀಲಿ ಮಕುರಂಬ | ಹಾಕಿದ ಕುದುರೆ
ಹೊರಟವ್ ಮಾರ್ನೋಮಿ ಪೌಜಿಗೆ ೯

ಮಲ್ಲಯ್ನ ಕುದುರೆಗೆ ನಿಂಬೆಯ ಕಲ್ಯಾಣ
ದುಂಡುಮಲ್ಲಿಗೆ ಮಕುರಂಬ | (ಬ್) ಹಾಕಿದ ಕುದುರೆ
ನಿಂದವ್ ಮಾರ್ನೋಮಿ ಬಯಲಾಗೆ ೧೦

ಒಡೆಯನ ಕುದುರೆಗೆ ಒಡೆದಿಡಿ ತೆಂಗಿನ ಕಾಯ
ಒಡೆಯ ಮಲ್ಲಯ್ನ ಕುಣಿಗಸಲ| ಕುದುರೆಗೆ
ಒಡೆದಿಡಿ ತೆಂಗಿನೆಳಗಾಯ ೧೧

ಕರಿಯ ಕುದುರೆಗೆ ಕಡ್ಲೆ ಬಿಳಿಯ ಕುದುರೆಗೆ ಬೆಲ್ಲ
ಮರಿಗುದುರೆಗೆಲ್ಲ ಮ್ಯೆಸ್ಯಾವೆ| ಮಲ್ಲಯ್ನ
ಹಿಡಿಗುದುರೆಗೆಲ್ಲ ಹಿಡಿ ಹೊನ್ನು ೧೨

ಆನೆ ಸುಂಗರವಾಗಿ ಅಂಗಳದಾಗೈದಾವೆ
ಜಾಣ ತಾನೇಕೆ ಹೊರಡನೆ| ಏಳೋ ನಿನ್ನ
ದೋಣು ಲಾಲಿಸಿ ಕರದsವೆ ೧೩

ಒಂಟೆ ಸುಂಗರವಾಗಿ ಮಂಟಪದಾಗೈದಾವೆ
ಬಂಟ ತಾನೇಕೆ ಹೊರಡನೆ| ಏಳೋ ನಿನ್ನ
ಗಂಟೆ ಲಾಲಿಸಿ ಕರದsವೆ ೧೪

ಕುದುರೆ ಸುಂಗರವಾಗಿ ಚದುರಂಗದಗೈದಾವೆ
ಚದುರ ತಾನೇಕೆ ಹೊರಡನೆ| ಏಳೋ ನಿನ್ನ
ಕಾಳೆ ಲಾಲಿಸಿ ಕರದsವೆ ೧೫

ಜಾತರೆಗೆ ತಕ್ಕ ಜೋತುರುಟ್ಟಿದಾರೆ
ಜಾತಿ ಮುತ್ತುಗಳನಿಳಿಲ್ಹಾಕಿ| ಮಲ್ಲಯ್ಯ
ಮಾರ್ನೋಮಿಗ್ ದಂಡ ನಡಸ್ಯಾರೆ ೧೬

ಮಾರನೋಮಿಗೆ ತಕ್ಕ ಮಾಲೇನಿಕ್ಕಿದಾರೆ
ಮಾಲೆ ಮುತ್ತುಗಳನಿಳಿಲ್ಹಾಕಿ| ಮಲ್ಲಯ್ಯ
ಮಾರ್ನೋಮಿಗ್ ದಂಡ ನಡಸ್ಯಾರೆ ೧೭

ಹಾಲಿಗಕ್ಕಿ ಹಾಕಿ ಹಾದಿಯ ನೋಡಿದೆ
ಆಲದ ಮರದ ನೆರಳಾಗೆ| ಮಲ್ಲಯ್ನ
ದsಳ ಸಾಲಿಟ್ಟು ಬರುತಾವೆ ೧೮

ತುಪ್ಪಕಕ್ಕಿ ಹಾಕಿ ತಿಟ್ಟತ್ತಿ ನೋಡಿದೆ
ಅತ್ತಿಯ ಮರದ ನೆರಳಾಗೆ| ಮಲ್ಲಯ್ನ
ಸತ್ತಿಗೆ ಸಾಲಿಟ್ಟು ಬರುತಾವೆ ೧೯

ಅಂದಲಂದಲ ರಂಗಳಿಸಿ ಬರುತಾವೆ
ಅಂಬ್ ಹಿಡಿದ ಅಣ್ಣ ಅರುಗಾಗೊ | ಮಲ್ಲಯ್ನ
ಅಂದಲಕಾರುತಿ ಬೆಳಗೇವು ೨೦

ದಽಳದ್ ಹಿಂದೆ ದಽಳ ಸಾಲಿಟ್ಟು ಬರುತಾವೆ
ಬಿಲ್ ಹಿಡಿದ ಅಣ್ಣ ಅರುಗಾಗೊ | ಮಲ್ಲಯ್ನ
ದಽಳಕಾರುತಿ ಬೆಳಗೇವು ೨೧

ಸತ್ತಿಗೆ ಸತ್ತಿಗೆ ಚಿತ್ತೈಸಿ ಬರುತಾವೆ
ಕತ್ತಿ ಹಿಡಿದಣ್ಣ ಅರುಗಾಗೊ| ಮಲ್ಲಯ್ನ
ಸತ್ತಿಗ್ ಗಾರುತಿ ಬೆಳಗೇವು ೨೨

ಚಿಕ್ಕ ಚಿಕ್ಕ ಲಿಂಗ ಚಿಕ್ಕವೇಳು ಲಿಂಗ
ಚಿಕ್ಕನು ಮಲ್ಲಯ್ನ ಎದೆಮೇಲೆ
ಚಿಕ್ಕನು ಮಲ್ಲಯ್ನ ಎದೆಯ ಮ್ಯಾಗಳ ಲಿಂಗ
ಚಿತ್ತರದ ಹೆಣತೆ ಹೆಣೆದಾವೆ ೨೩

ದೊಡ್ಡ ದೊಡ್ಡ ಲಿಂಗ ದೊಡ್ಡವೇಳು ಲಿಂಗ
ದೊಡ್ಡನು ಮಲ್ಲಯ್ನ ಎದೆಮೇಲೆ
ದೊಡ್ಡನು ಮಲ್ಲಯ್ನ ಎದೆಯಮ್ಯಾಗಳ ಲಿಂಗ
ಒಡ್ಡಾಣದ್ಹೆಣತೆ ಹೆಣೆದಾವೆ ೨೪

ನಿಲ್ಲೊ ನಿಲ್ಲೋ ಲಿಂಗ ನಿಲ್ಲೊ ಬೀರದ ಲಿಂಗ
ಮಲ್ಲಿಗ್ಹೂವೆಂದು ಸೆರಗೊಡ್ಡಿ| ಬೇಡುವೆ
ನಿಲ್ಲಿಸ್ ಮಲ್ಲಯ್ಯ ಕುದುರೆಯ ೨೫

ತಾಳೊ ತಾಳೋ ಲಿಂಗ ತಾಳೊ ಬೀರದ ಲಿಂಗ
ತಾಳಿ ಹೂವೆಂದು ಸೆರಗೊಡ್ಡಿ | ಬೇಡುವೆ
ತಾಳಿಸ್ಮಲ್ಲಯ್ಯ ಕುದುರೆಯ ೨೬

ಹೇರುಕಾರರ ಕೂಟೆ ಓಡಿ ಬಂದ ಮಲ್ಲಯ್ಯ
ಚಿತ್ತರದ ಗಿಂಡಿ ಹಿಡುಕೊಂಡು | ಮುತಿಗಟ್ಟಿದ
ತಿಟ್ಟೊಳ್ಳೀದೆಂದು ನೆಲಸ್ಯಾನೆ ೨೭

ಮಳೆಯು ಬರುತೀತೆಂದು ಮರದಡಿ ನಿಂದರೆ
ಮಳೆಯಲ್ಲ ಮರದ ಹನಿಯುಂಟು | ಮಲ್ಲಯ್ಯ
ಮಡಿಮಾಡಿ ಜಡೆಯ ಒದರ್‍ಯಾರೆ ೨೮

ವರುಷಕೊಂದು ಪಟ ಅರ್ತಿ ಮುತಿಗಟ್ದಾಗೆ
ಅರಿಸಿನವ ಮಿಂದು ಮಡಿಯುಟ್ಟು | ಮಲ್ಲಯ್ಯ
ವರುಷಕೊಂದು ಪಟ ಮದಲಿಂಗ ೨೯

ಕೋಟಿ ಶರಣರ ಕಂಡೊ ಕೊರಳ ಲಿಂಗ ಕಂಡೊ
ದಾಟುತಲೆ ಕಂಡೊ ಕಣಿವೆಯ | ಮಲ್ಲಯ್ನ
ಕಾಣುತ ಕೈಯ ಮುಗಿದೆವು ೩೦

## ನಂಜಪ್ಪ

ನಂಜಪ್ಪ ಬೆಳೆದಽನೆ ನಂಜುಬಟ್ಟಲಹೂವ
ಮಲ್ಲಯ್ಬೆಳೆದನೆ ಮರುಗವ—ಮಽರುಗಽವ *
ಮಲ್ಲಯ್ಯ ಬೆಳೆದನೆ ಮರುಗಾವ ಮೇಲುಕೋಟೆ
ಚೆಲುವಯ್ಬೆಳೆದನೆ ದವನವ—ದಽವನಽವ ೧

---

*ಈ ಪದದಲ್ಲಿ ಪ್ರತಿ ಎರಡನೆಯ ಸಾಲಿನಲ್ಲೂ ಕಡೆಯ ಒಂದೆರಡು ಮಾತುಗಳನ್ನು 'ಮಾರುಗಾವ, ದಾವನಾವ' ಎಂದು ಮುಂತಾಗಿ ರಾಗವಾಗಿ ಮತ್ತೆ ಎಳೆದು ಹೇಳುತ್ತಾರೆ. ಬಿಡಿಸಿ ಬರೆಯದ ಕಡೆಯೂ ಹಾಗೆಯೇ ಹೇಳಿಕೊಳ್ಳಬೇಕು.

ನಂಜನ ಗೂಡ್ದಾದೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸವೆ ತೋಲ ಗಿಡವಿಲ್ಲ | ನಂಜಪ್ಪ
ಸೂಸಿ ಬಿತ್ಯಾನೆ ದವನವ—ದವನವ ೨

ನಂಜನ ಗೂಡಾಗೆ ನಮುಗ್ಯಾರೆ ನಂಟರು
ನಂಜಪ್ಪ ಕಾಣೆ ಮನೆ ಸ್ವಾಮಿ—ಮನೆ ಸ್ವಾಮಿ ೩

ನಂಜನಗೂಡಾಗೆ ನಮುಗ್ಯಾರೆ ನಂಟರು
ನಂದೀ ಕೋಲ್ಕೈದು ಪಟವೈದು | ನಂಜಪ್ಪನ
ಗೊಂಬೇ ತೇರ್ಕೈದು ಕಳಸೈದು—ಕಳಸೈದು ೪

* * *

ಸೂಳೆ ಸೂತಕನಾಗಿ ಪನ್ನೀರ ಮಡಿಯುಟ್ಟು
ಹಣ್ಣಡಿಕೆ ಗೊನೆಯುನ್ ಹಿಡುಕೊಂಡು | ಚಾಮುಂಡಿ
ಸೇರುಪಾವಡಕೆ ಬಿಳಿ ಎಲೆ | ತಕ್ಕೊಂಡು
ಭೋಗದ ನಂಜಯ್ನ ಬರಹೇಳಿ—ಬರಹೇಳಿ ೫

ನಮ ಸ್ವಾಮಿ ನಂಜಯ್ಯ ಸೂಳೆಮನೆಗ್ಹೋಗ್ವಾಗ
ಕಾಲಾಳ ಮುಂದಿ ಕೈಯ ಪಂಜು | (ಪಂಜನ್) ಹಿಡಿಸಿಕೊಂಡು
ಹೊರಟ ಚಾಮುಂಡೀ ಅರಮನೆಗೆ—ಅರಮನೆಗೆ ೬

ಅರಮನೆಗೆ ಹೋದರೆ ಬಾಗಿಲಾಗೆ ನಿಂದರೆ
ತೆಗೆಯೆ ಚಾಮುಂಡಿ ಅಗಣಿಯ—ಅಗಣಿಯ ೭

ಅಗಣಿಯ ತೆಗೆದಳೆ ಕೈಯೆತ್ತಿ ಮುಗಿದಳೆ
ಪನ್ನೀರಾಗ್ ಪಾದ ಬೆಳಗ್ಯಾಳೆ | ಚಾಮುಂಡಿ
ಮುತ್ತಿನ ಸೆರಗಾಗೊರಸ್ಯಾಳೆ—ಒರಸ್ಯಾಳೆ ೮

ಹತ್ತಂಕಣದರಮನೆ ಪಟ್ಟೆಯ ಕೊಡವ್ಹಾಸಿ
ಸುತ್ತ ದೀವಿಗ ರಚಿಸಿಟ್ಟು | ಚಾಮುಂಡಿ
ತಂದಿಟ್ಟಳೆ ದಾಯ ಪಗಡೆಯ—ಪಗಡೆಯ ೯

ನಂಜಯ್ಯ ಸೋತನು ಚಾಮುಂಡಿ ಗೆದ್ದಳು
ಕೊಡಿರಿ ನಂಜಯ್ಯ ವೀಳ್ಯಾವ—ವೀಳ್ಯಾವ ೧೦

ವೀಳ್ಯಾವ ಕೊಟ್ಟರೆ ಹೀನಾಯ ಚಾಮುಂಡಿ
ನಾನು ವೀಳ್ಯಾವ ಕೊಡಲಾರೆ—ಕೊಡಲಾರೆ ೧೧

ವೀಳ್ಯಾವ ಕೇಳ್ಹೊತ್ತಿಗೆ ಸ್ವಾಮಿಾನೆ ನಂಜಯ್ಯ
ತಾನ್ ಹೋದ ತನ್ನ ಅರಮನೆಗೆ—ಅರಮನೆಗೆ ೧೨

* * *

ಬಂಜೆ ಬಸುರಾಗಲಿ ಇಂಗಿದ ಕೆರೆ ತುಂಬಲಿ
ಸ್ವಾಮಿ ನಮ್ಮೊರಕೆ ದಯವಾಗೊ—ದಯವಾಗೊ ೧೩

ನಂಜಪ್ಪ ಬಂದನು ಬಾಗಿಲಾಗೆ ನಿಂದನು
ತೆಗೆಯೆ ಚಾಮುಂಡಿ ಕದಗಳ—ಕದಗಳ ೧೪

ಕದವನು ತೆಗೆದಳು ಕೈಯೆತ್ತಿ ಮುಗಿದಳು
ಪನ್ನೀರಾಗ್ ಪಾದ ಬೆಳಗ್ಯಾಳು | ಚಾಮುಂಡಿ
ಮುತ್ತಿನ ಸೆರಗಾಗೊರಸ್ಯಾಳು | ಚಾಮುಂಡಿ
ಗಿಲಿಗಿಲಿ ಮಂಚ ಕೊಡವ್ಹಾಸಿ | ಚಾಮುಂಡಿ
ಹಾಲು ಸಕ್ಕರೆ ಎಡೆ ಮಾಡಿ | ಚಾಮುಂಡಿ
ತಟ್ಟೇಲೀಳ್ಯಾವ ಹಿಡಿದಾಳೆ | (ಹಿಡಿದು) ಏನೆಂದಳೆ
ನಂಜಪ್ಪಗೂ ನಮಗು ಇಲವಂಗ—ಇಲವಂಗ ೧೫

* * *

ನಂಜಪ್ಪ ಚಾಮುಂಡಿ ಇಲವಂಗನಾಡುವಾಗ
ದೇವೀರು ಕೇಳ್ಯಾರೆ ಶಕುನವ—ಶಕುನವ ೧೬

ಶಕುನವ ಕೇಳ್ಯಾರೆ ನಿದ್ದೇಲೆದ್‌ಕೂತರೆ
ಮೂರು ಜನ ಮಕ್ಕಳ ಕರೆದರೆ—ಕರೆದರೆ ೧೭

ಬಾಗಿಲ ಬಸವಯ್ಯ ಉಗ್ರಾಣದ ಈರಯ್ಯ
ಮಲ್ಲನ ಮೂಲೆ ಜಲ್ಲಿಗ | ಬಸವಯ್ಯ
ಎದ್ದು ಕೂಗಿರಿ ನಿಮ್ಮ ಒಡೆಯರ—ಒಡೆಯರ ೧೮

ಒಂದು ಕೂಗ ಕೂಗಿದರೆ ಬೆಟ್ಟಕ್ಕೆ ಮುಟ್ಟಿsತೆ
ಬೆಚ್ಚುತ ನಂಜಪ್ಪ ಬೆದರಾನೆ| (ಬೆದರಿ)ಎದ್ದು ಕೂತನೆ
ಏನಿತ್ತ್ರಿರಿ ಸ್ವಾಮಿ ಮಠದಾಗೆ—ಮಠದಾಗೆ ೧೯

ಏನೂವೆ ಕಾಣಲಿಲ್ಲ ಎಂತೂವೆ ನೋಡಲಿಲ್ಲ
ಬಸವನ ಗಂಟೆ ನುಡಿದವು| ಚಾಮುಂಡಿ
ತಿಂಗ್ಳಾರ ನಮು ಕೂಟಿ ಬರಬೇಕು—ಬರಬೇಕು ೨೦

ತಾವರೆ ಮೈನೋಳೆ ವಜ್ರಭೂಷಣದೋಳೆ
ಸಣ್ಣಕ್ಕಿಯಂಥ ಸುಳಹಲ್ಲಿ | ಚಾಮುಂಡಿ
ತಿಂಗ್ಳಾರ ನಮು ಕೂಟಿ ಬರಬೇಕು—ಬರಬೇಕು ೨೧

ನಿಮು ಕೂಟಿ ಬಂದರೆ ದೇವೀರೇನೆಂದಾರು
ಕಂಚಿನ ಗಾಲಿ ಬೆಳಗೆಂದು | ದೇವೀರು
ಬಾಗಿಲ ಕಸವ ಹೊಡಿ ಎಂದು | ದೇವೀರು
ಎಮ್ಮೆ ಸಗಣಿಯ ಹೊರಿಸ್ಯಾಳು | ದೇವೀರು
ಉಟ್ಟಿದ್ದ ಸೀರೆ ಒಗಸ್ಯಾಳು | ನಂಜಪ್ಪ
ಜಾಣ ಜಂಗಮ ದಯವಾಗೊ—ದಯವಾಗೊ ೨೨

* * * *

ಬಸವನೇರಿ ಮೇಲೆ ಬಸುಮವ ಹುಯಿಕೊಂಡು
ಸಸಿಮಾವಿನೊಳಗೆ ಬರುವೋರು| ನಂಜಪ್ಪಗೆ
ದುಸುಮಾನರೆಲ್ಲ ಅರುಗಾಗಿ—ಅರುಗಾಗಿ ೨೩

ನಂಜಪ್ಪ ಬಂದನು ಬಾಗ್ಲಾಗೆ ನಿಂದನು
ತೆಗೆಯೆ ದೇವೇರಿ ಕದಗಳ—ಕದಗಳ ೨೪

ಕದವನು ತೆಗೆಯಲು ಕೈಯೊಂದು ಸವಣೆಲ್ಲ
ಈರಯ್ಯ ಮಗ ತೊಡೇ ಮೇಲೆ | ಮಲಗವ್ನೆ
ಹೋಗಿರಿ ಹರಿಯೊ ಜಲಧಿಗೆ—ಜಲಧಿಗೆ ೨೫

ಕಾವೀ ಕಂತೇ ಕೊಡೆ ನಾಗಬೆತ್ತಾ ಕೊಡೆ
ಹೋಗುತೀನಿ ನಾನು ವನದೇಶ—ವನದೇಶ ೨೬

ಕಾವೀ ಕಂತೆ ಇಲ್ಲ ನಾಗಬೆತ್ತ ಇಲ್ಲ
ಹೋಗಿ ಬನ್ನಿ ಹರಿಯೊ ಜಲಧಿಗೆ—ಜಲಧಿಗೆ ೨೭

ಕಂದನ ಕೈಯಲಿ ಕೊಟ್ಟು ಕೆಂಡ ಬಗಸೇಲಿಟ್ಟು
ಹರಿಯೊ ಜಲಧೀಲಿ ನಿಲಿಸೂವೆ—ನಿಲಿಸೂವೆ ೨೮

* * * *

ಗಂಗೇ ದಿಡದಾಗಿಲ್ಲ ಅಂಗಡಿ ಬೀದೀಲಿಲ್ಲ
ಎಲ್ಲೂ ನಂಜಪ್ನ ಸುಳಿವಿಲ್ಲ—ಸುಳಿವಿಲ್ಲ ೨೯

ಗಂಧದ ಉಂಡೇನ ಮುಂಡೇಲೀಡಾಡುತ
ತಿಂಗಳ ಮಗನ ನಡಸೂತ| ದೇವೇರು
ಗಂಡುಳ್ಳ ತೇರ ಹರಿಸ್ಯಾಳೆ—ಹರಿಸ್ಯಾಳೆ ೩೦

ಅರಿಸಿನದ ಉಂಡೇ ಪರಿಸೇಲೀಡಾಡುತ
ವರುಷದ ಮಗನ ನಡಸೂತ| ಚಾಮುಂಡಿ
ಪುರುಷನ ತೇರ ಹರಿಸ್ಯಾಳೆ—ಹರಿಸ್ಯಾಳೆ ೩೧

## ಗೌರಮ್ಮನ ಮದುವೆ (೧)

ಅತ್ತಿಯ ಮರವ ಕಿತ್ತು ನಡುವ್ವೋರುಂಟೆ
ಅತ್ತಿಲ್ಲದ ಮನೆಗೆ ಗೌರಿಯ| ಕೊಟ್ಟರೆ
ಒಪ್ಪಾ ಇನ್ಯಾರು ಕಲಿಸೋರು ೧

ಅತ್ತೆ ನಾನೇಯ ಮಾವನು ನಾನೇಯ
ಮತ್ತೆ ಸೋದರಿಕೆ ಗೌರಿಗೆ| ನಾನೇಯ
ಒಪ್ಪಾ ನಾನೇಯ ಕಲಿಸುವೆ ೨

ಆಲದ ಮರವ ಸೀಳಿ ನಡುವ್ರೋರುಂಟೆ
ಮಾವಿಲ್ಲದ ಮನೆಗೆ ಗೌರಿಯ | ಕೊಟ್ಟರೆ
ಆಯಾ ಇನ್ಯಾರು ಕಲಿಸೋರು ೩

ಮಾವನು ನಾನೇಯ ಭಾವನು ನಾನೇಯು
ಮತ್ತೆ ಸೋದರಿಕೆ ಗೌರಿಗೆ | ನಾನೇಯು
ಆಯಾ ನಾನೇಯು ಕಲಿಸುವೆ ४

ಹತ್ತು ವರ್ಷದ ಚಿಕ್ಕಳು ನಮ್ಮ ಗೌರಿ
ಪಟ್ಟೀ ಕೊಡುವುದ ಅರಿಯಳು | ನಮ್ಮ ಗೌರಿ
ಗೌರೀ ನಾವ್ ಹೆಂಗೆ ಕೊಡಬ್ಯೆದು ೫

ಹತ್ತು ವರ್ಷದ ಚಿಕ್ಕ ಬಾಲ್ಯಾದರೆ
ಪಟ್ಟೀ ಕೊಡುವೋದ ಕಲಿಸುವೆ | ಗೌರಿಗೆ
ಗೌರೀ ನಮ್ಮನೆಗೆ ಕೊಡಬೇಕು ೬

ಆರು ವರ್ಷದ ನಾರಿ ನಮ್ಮ ಗೌರಿ
ಹರಿವಾಣ ಬೆಳಗೋದ ಅರಿಯಳು | ನಮ್ಮ ಗೌರಿ
ಗೌರೀ ನಾವ್ ಹೆಂಗೆ ಕೊಡಬ್ಯೆದು ೭

ಹರಿವಾಣ ಬೆಳಗೋದ ಅರಿಯದೆ ಇದ್ದರೆ
ನಾಳೆ ನಾನೇಯು ಕಲಿಸುವೆ | ಗೌರಿಗೆ
ಗೌರೀ ನಮ್ಮನೆಗೆ ಕೊಡಬೇಕು ೮

(ಇಲ್ಲಿ ಮನೆಗೆಲಸಗಳನ್ನೆಲ್ಲ ಒಂದೊಂದಾಗಿ ಎತ್ತಿಕೊಂಡು ಗೌರಿಗೆ ಅದು ಬರುವುದಿಲ್ಲವೆಂದೂ ಆದ್ದರಿಂದ ಅವಳನ್ನು ಕೊಡಲಾಗುವುದಿಲ್ಲವೆಂದೂ ಅದಕ್ಕೆ ಉತ್ತರವಾಗಿ ಆ ಕೆಲಸಗಳನ್ನು ತಾನೇ ಕಲಿಸುವುದಾಗಿ ಹೇಳಿ ಅವಳನ್ನು ಮದುವೆ ಮಾಡಿಕೊಡಬೇಕೆಂದೂ–ಹೇಳುತ್ತಾರೆ)

ಹಾದೀಲಿ ಗೌರಮ್ಮ ಆಡುತೇನೆಂದಳು
ಅಪ್ಪಾಜಿ ನಮ್ಮ ಕೊಡಬೇಕು | ಮೇಲೋಕದ
ಇಪ್ಪತ್ತೆ ಜಡೆಯ ಶರಣರಿಗೆ ೯

ಅವರ್ ಹಾದೀಲುಣ್ಣೋರು ಬೀದೀಲಿ ಒರಗೋರು
ತ್ಯಾಗದಲೆ ಹಿಡಿದು ತಿರಿದುಣ್ಣೋ | ಜಂಗಮಗೆ
ತಾಯಿಯಾ ಸಿರಿಗೌರಿ ಮನಸಾದಾ ೧೦

ಹಾದ್ಯವ್ರ ಅರಮನೆ ಬೀದ್ಯವ್ರ ಪಡಸಾಲೆ
ತ್ಯಾಗದೆಲೆ ಚಿನ್ನದ್ ಹರಿವಾಣ | ಶಿವನಿಗೆ
ಹ್ಯಾಗಿದ್ದರು ನನ್ನ ಕೊಡಬೇಕೊ ೧೧

ಹಟ್ಟೀಲಿ ಗೌರಮ್ಮ ಕುಟ್ಟುತೇನೆಂದಳು
ಅವ್ವಯ್ಯ ನಮ್ಮ ಕೊಡಬೇಕೆ | ಕೈಲಾಸದ
ಹನ್ನೆಳ್ಡ ಜಡೆಯ ಶರಣರಿಗೆ ೧೨

ಅವರ್ ಹಟ್ಟೀಲಿ ಉಣ್ಣೋರು ಕೊಟ್ಟಿಗೇಟಿ ಒರಗೋರು
ಎಕ್ಕದೆಲೇ ಹಿಡಿದು ತಿರಿದುಣ್ಣೊ | ಜಂಗಮಗೆ
ತಾಯಿಯಾ ಸಿರಿಗೌರಿ ಮನಸಾದಾ ೧೩

ಹಟ್ಯವ್ರ ಅರಮನೆ ಬೀದ್ಯವ್ರ ಪಡಸಾಲೆ
ಎಕ್ಕದೆಲೆ ಚಿನ್ನದ್ ಹರಿವಾಣ | ಶಿವನಿಗೆ
ಹ್ಯಾಗಿದ್ದರು ನನ್ನ ಕೊಡಬೇಕೆ ೧೪

ಆಕಾಶೆಂಬೋದು ಇಲ್ಲಿಗೆ ಕಾಣೋದಿಲ್ಲ
ನರರಿಲ್ಲ ನರರ ಸುಳುವಿಲ್ಲ | ದ ಕೋಟೆಗೆ
ಮಗಳೇ ಸಿರಿಗೌರಿ ಮನಸಾದಾ ೧೫

ಆಕಾಶೆಂಬೋದು ಇಲ್ಲಿಗೂ ಕಾಣತೀತೆ
ನರರುಂಟು ನರರ ಸುಳುವುಂಟು | ಹಡೆದಮ್ಮ
ಹ್ಯಾಗಿದ್ದರು ನಮ್ಮ ಕೊಡಬೇಕು ೧೬

ಮೇಲೋಕವೆಂಬೋದು ಇಲ್ಲಿಗೆ ಕಾಣೋಕಿಲ್ಲ
ಜನರಿಲ್ಲ ಜನರ ಸುಳುವಿಲ್ಲ | ದ ಕೋಟೆಗೆ
ಮಗಳೇ ಸಿರಿಗೌರಿ ಮನಸಾದಾ ೧೭

ಮೇಲೋಕವೆಂಬೋದು ಇಲ್ಲಿಗೆ ಕಾಣತೀತೆ
ನರರುಂಟು ನರರ ಸುಳುವುಂಟು । ಹಡದಮ್ಮ
ಹ್ಯಾಗಿದ್ದರು ನಮ್ಮ ಕೊಡಬೇಕು ೧೮

*                    *                    *

ಭೂಮಿ ಇಂಬಕೆ ಆಕಾಶದಿಂಬಕೆ
ಹಾಕ್ಯಾರು ಮುತ್ತಿನ ಚಪ್ಪರವ । ಬೇಗನೆ
ಮಾಡ್ಯಾರು (ಸಿರಿ) ಗೌರಿ ಮದುವೆಯು ೧೯

ಪುಷ್ಪನ ಗಿರಿಯಿಂದ ಮತ್ತೆ ಪರ್ವತದಿಂದ
ಇಪ್ಪತ್ತೈಳ್ಹೊಳೀ ದಿಡದಿಂದ । ಬಂದಿರುವೊ
ನಾಡ ಜಂಗಮರ ಕರತನ್ನಿ ೨೦

ಬೇಲೂರ್ಹೊಳೆಯಿಂದ ಬೇಗ ಬನ್ನಿ ನಮ ಗುರುವೆ
ಬೇಲೂರ್ ಹೊಳೆಯಾಗೆ ತಾನಾ ಮಾಡಿ । ಜಪ ಮಾಡಿ
ಬಾಲವ್ನ ಧಾರೆ ಎರೆದರು ೨೧

ಕೊಟ್ಟೂರ್ ಹೊಳೆಯಿಂದ ಬೇಗ ಬನ್ನಿ ನಮ ಗುರುವೆ
ಕೊಟ್ಟೂರ್ ಹೊಳೆಯಾಗೆ ತಾನಾ ಮಾಡಿ । ಜಪ ಮಾಡಿ
ಬಾಲವ್ನ ಧಾರೆ ಎರೆದರು ೨೨

*                    *                    *

ಕೊಪ್ಪ ತಂದಿಲ್ಲೆಂದು (ಅವರ್) ಅಪ್ಪಾಜಿ ಮರುಗ್ಯಾರೆ
ಕೊಪ್ಪ ನನ್ನೂರು ಮದುಗsದ । (ದೇ)ರೀಮ್ಯಾಲೆ
ಕೊಪ್ಪಿನ ಭರಣೇಲಿ ಬರುತಾವೆ ೨೩

ಕೊಪ್ಪ ತಂದೀವೀ ಭರಣೇನು ತಂದೀವಿ
ಕೊಪ್ಪಿಗೆ ತಿರುಪ ಮರತೇ ಬಂದ್ವು । ಈ ವೂರ
ಮಲ್ಲಣ್ಣಗೌಡ ಹೊಣೆಯಾಗೊ । ಈ ಮನೆ
(ಇವರ್) ಅಪ್ಲೊಂದು ಮಾತ ತಿಳೀ ಹೇಳೊ ೨೪

ವಾಲೆ ತಂದಿಲ್ಲೆಂದು (ಅವರ್) ಅವ್ವಯ್ಯ ಮರುಗ್ಯಾಳೆ
ವಾಲೆ ನನ್ನೂರು ಮುದುಗಽದ | (ದೇ)ರೀವ್ಯಾಲೆ
ವಾಲೇ ಭರಣೀಲಿ ಬರುತಾವೆ ೨೫

ವಾಲೇ ತಂದೀವೀ ಭರಣೀನು ತಂದೀವಿ
ವಾಲೇಗ್ ಚಳತುಂಬ ಮರತೇ ಬಂದ್ವು | ಈ ವೂರ
ದೊಡ್ಡಣ್ಣ ಗೌಡ ಹೊಣೆಯಾಗೊ | ಈಮನೆ
(ಇವರ್) ಅವ್ವೊಂದು ಮಾತ ತಿಳೀ ಹೇಳೊ ೨೬

* * *

(ಮದುವೆಯಾದ ಕೆಲವು ದಿನಗಳ ಮೇಲೆ ಗೌರಮ್ಮನನ್ನು ಗಂಡನ ಮನೆಗೆ ಕರೆದು ಕೊಂಡು ಹೋಗಲು ಬಸವ ಬರುತ್ತಾನೆ)

ಎಂದೂ ಬರದ ಬಸವ ಇಂದೇಕೆ ಬಂದಿರಿ
(ನೀವ್) ಬಂದ ಕಾರ್ಯದ ನೆಲೆ ಹೇಳಿ ೨೭

(ನಾವ್) ಯಾತಕು ಬರಲಿಲ್ಲ ಮಾತಿಗೆ ನಾವ್ ಬಂದ್ವು
ನಾರಿ ಗೌರಮನ ಕರೀ ಬಂದ್ವು ೨೮

ಮುತ್ತಿನ ಕೋಣೆಗೆ ಹೊಕ್ಕಳೆ ಅವರವ್ವ
ಮುತ್ತ ತುಂಬ್ಯಾಳೆ ಮರತುಂಬ | ಅವರವ್ವ
ಹುಯ್ದಽಳೆ ಮುತ್ತ ಮಡಲಿಗೆ ೨೯

ಹೊನ್ನಿನ ಕೋಣೆಗೆ ಹೊಕ್ಕಳೆ ಅವರವ್ವ
ಹೊನ್ನ ತುಂಬ್ಯಾಳೆ ಮರತುಂಬ | ಅವರವ್ವ
ಹುಯ್ದಽಳೆ ಹೊನ್ನ ಮಡಲಿಗೆ ೩೦

ಬಿತ್ತಿದ ಹೊಲದಾಗೆ ಮುತ್ತು ಸೂರಿಟ್ಟಂಗೆ
ನಾರಿ ಗೌರಮನ ಗೆಣತೇರ | ಕಣ್ಣೀರು
ಸಾಲೀ ಸೆರಗೆಲ್ಲ ನೆನೆದವು ೩೧

ಕಣ್ಣೀರ ಸೆರಗಾಗೆ ಒರಸುತೇನೆಂದರು
ಎಂದಿಗೆ ಬರುವೆ ಗವುರಮ್ಮ| ಎಂದ್ ಹೇಳಿ,
ಗೆಣತೇರೆಲ್ಲರು ಅಳುತಾರೆ ೩೨

ಹರಗಿದ ಹೊಲದಾಗೆ ಹವಳ ಸೂರಿಟ್ಟಂಗೆ
ಹರದಿ ಗೌರಮನ ಗೆಣತೇರ| ಕಣ್ಣೀರು
ಪಟ್ಟೇ ಸೆರಗೆಲ್ಲ ನೆನೆದವೆ ೩೩

ಪಟ್ಟೇ ಸೆರಗಾಗೆ ಒರಸುತೇನೆಂದರು
ಎಂದಿಗೆ ಬರುತೀಯೆ ಸಿರಿಗೌರಿ| ಎಂದ್ ಹೇಳಿ
ಗೆಣತೇರೆಲ್ಲರು ಅಳುತಾರೆ ೩೪

ಗೆಣತೇರೆಲ್ಲರೂ ಅಳುತ ಕೇಳಿದರೆ
ಈಗೇನ್ ಹೇಳ್ಯಾಳೆ ಸಿರಿ ಗೌರಿ ೩೫

ಎಂದಿಗೆ ಬರುತೀಯೆಂದು ನೀವೇನೋ ಕೇಳೀರಿ
(ನಾನ್) ಹಾಗ್ಹೋಗಿ ಹೀಗೆ ಬರಲಾರೆ| ಗೆಣತೇರ
ವರುಷಕೊಂದ್ ದಿನ ಬರುವೆನು| ಗೆಣತೇರ
ಅರಗಳಿಗೆ ಇದ್ದು ತೆರಳೇನು ೩೬

*  *  *

## ಗೌರಮ್ಮನ ಮದುವೆ (೨)

ಹುಟ್ಟಿದಳೆ ಗೌರಮ್ಮ ಭೂಲೋಕದಲ್ಲಿ
ಅಪ್ಪಾಗಿ ಇಪ್ಪಾಗಿ ತಾ ದೊಡ್ಡೋಳಾಗಿ
ಹನ್ನೆರಡು ವರ್ಷವೆ ತುಂಬಿತು ಗೌರಿ
ಗೌರೀ ತಾಯಿಾ ತಂದೆ ಏನೆಂದರಾಗ
ಗೌರಮ್ಮ ಹುಟ್ಟಿದಳಿನ್ ಯಾರಿಗೆ ಕೊಡಲಿ ೫

ಬ್ರಾಂಬರಿಗೆ ಕೊಡಲೇನೆ ಮಗಳೆ ಶ್ರೀ ಗೌರಿ
ಬ್ರಾಂಬರ ಸಾವಾಸ ಹೇಳೇನು ಕೇಳು
ಬ್ರಾಂಬರ ವೇದವು ಬ್ರಹ್ಮ ವೇದ
ಅಂಥ ಬ್ರಾಂಬರ ವೇದ ನಾ ಓದಲಾರೆ
ನಿತ್ಯ ತಣ್ಣೀರಲ್ಲಿ ನಾ ಬೀಳಲಾರೆ
ದಿನಕೊಂದು ಮಡಿಸೀರೆ ನಾ ಉಡಲಾರೆ
ಹೊತ್ತಿಗೆ ಒಪ್ಪತ್ತು ನಾ ಉಣ್ಣಲಾರೆ
ಬ್ರಾಂಬರ ಸಾವಾಸ ಬೇಕಿಲ್ಲ ತಂದೆ
ಶಿವ ಭಕ್ತ್ರಿಗ್ ಕೊಡಲೇನೆ ಶ್ರೀ ಮುದ್ದು ಗೌರಿ
ಶಿವಭಕ್ತ್ರ ಶಿವಪೂಜೆ ನಾ ಮಾಡಲಾರೆ
ಹರಭಕ್ತ್ರ ಗುರುಪೂಜೆ ನನ ಕೈಲಿ ಬರದು
ಲಿಂಗಕ್ಕೆ ವಸ್ತ್ರವ ನಾ ಧರಿಸಲಾರೆ
ಜಂಗಮಗೆ ಭಿಕ್ಷವ ನಾ ನೀಡಲಾರೆ
ಜಂಗಮರ ಕಾಲಿಗೆ ನಾ ಬೀಳಲಾರೆ
ಶಿವಭಕ್ತ್ರ ಸಾವಾಸ ಬೇಡವೊ ತಂದೆ
ಒಕ್ಕಲಿಗರಿಗ್ ಕೊಡಲೇನೆ ಅಕ್ಕಯ್ಯ ನಿನ್ನ
ಒಕ್ಕಲರ ಹೊಲಗದ್ದೆ ನಾ ಗೆಯ್ಯಲಾರೆ
ಒಕ್ಕಲರ ಕಳೆಶತ್ತೆ ನಾ ಕೀಳಲಾರೆ
ಒಕ್ಕಲರ ಮೂರು ಮುದ್ದೆ ನಾ ತಿನ್ನಲಾರೆ
ದಿನಕೆ ಮೂರು ಸಾರಿ ನಾ ಉಣ್ಣಲಾರೆ
ಒಕ್ಕಲರ ಸಾವಾಸ ಬೇಡವೊ ತಂದೆ
ಬ್ಯಾಡರಿಗೆ ಕೊಡಲೇನೆ ಬೇಕಾದ ಗೌರಿ
ಬ್ಯಾಡರ ಬಿಲ್ಲಂಬು ನಾನ್ ಹಿಡಿಯಲಾರೆ
ಬ್ಯಾಡರ ಕಾಯ್‌ಸೊಪ್ಪು ನಾ ತಿನ್ನಲಾರೆ
ಬ್ಯಾಡರ ಸಾವಾಸ ಬೇಕಿಲ್ಲ ತಂದೆ

ಕುರುಬರಿಗೆ ಕೊಡಲೇನೆ ಗೌರಮ್ಮ ನಿನ್ನ
ಕುರುಬರ ಕುರಿಬಣ್ಣ ನಾನುಡಲಾರೆ
ಕಂಬ್ಳಿಗೆ ಸರಿಗಂಜಿ ನಾ ಕಾಸಲಾರೆ
ಕುರುಬರ ಸಾವಾಸ ಬ್ಯಾಡ ನನ ತಂದೆ
ಕೋಮಟಿಗರಿಗ್ ಕೊಡಲೇನೆ ಕೋಟಿ ಮಾ ಗೌರಿ

ಕೋಮಟಿಗರ ಯಾಪಾರ ಜೂಜಿನ್ಯಾಪಾರ
ತರಗೆಲೆ ಗೋಟಡಕೆ ನಾ ಮಾರಲಾರೆ
ಕೋಮ್ಟಿಗರ ಕೊಟ್ಣವ ನಾ ಕುಟ್ಟಲಾರೆ
ಕಾಸಿಕ್ಕಾಸಿಗೆ ತಕ್ಡಿ ನಾ ತೂಗಲಾರೆ
ಕೋಮ್ಟಿಗರ ಸಾವಾಸ ಬ್ಯಾಡ ನನ ತಂದೆ
ಗೊಲ್ಲರಿಗೆ ಕೊಡಲೇನೆ ಬೇಕಾದ ಗೌರಿ

ಗೊಲ್ಲರ ಕುರಿಹಿಂಡ ನಾ ತಿರುವಲಾರೆ
ಗೊಲ್ಲರ ಹುಳಿಯಂಬ್ಲಿ ನಾ ಕುಡಿಯಲಾರೆ
ಗೊಲ್ಲರ ಒಣರೊಟ್ಟಿ ನಾ ಕಡಿಯಲಾರೆ
ಗೊಲ್ಲರ ಸಾವಾಸ ಬೇಡವೊ ತಂದೆ

ಹದಿನೇಳು ಹತ್ತು ಜಾತಿ ಹೇಳಿ ನಾ ಕೊಟ್ಟೆ
ಕುರಿಯಮ್ಮ ಎಲೆ ಗೌರಿ ಯಾರ್ನ ಕುರುತೀಯೋ
ಸಿದ್ದ ಪಟ್ಟಣತ್ತಾವ ಶಿವಗಂಗೆ ಮೊದಲು
ಶಿವಗಂಗೆ ಮೊದಲಲ್ಲಿ ಸಂನ್ಯಾಸಿ ಮಠವು
ಸಂನ್ಯಾಸಿ ಮಠದಲ್ಲಿ ಜಂಗಮಿದ್ದಾನೆ
ಜಂಗಮಗೆ ಕೊಡುಸಯ್ಯ ಜಾಣ ನನ ತಂದೆ

ಬೂದಿ ಜಂಗಮನನ್ನು ಹ್ಯಾಗೆ ಮೆಚ್ಚಿದೆ
ಉಣ್ಣೋಕೆ ತಣಿಗಿಲ್ಲ ಮಣ್ಣು ಕೊಪ್ಪರಿಕೆ
ಏರೋಕೆ ಕುದುರಿಲ್ಲ ಮುದಿಯೆತ್ತು ಶಿವಗೆ
ಇಕ್ಕೋಕೆ ಒಡವಿಲ್ಲ ನಾಗರ್ ಹಾವುಗಳು

ಧರಿಸೋಕೆ ಗಂಧವಿಲ್ಲ ಕಾಡು ಈಭೂತಿ
ಅಂಥ ಜಂಗಮನನ್ನು ಯಾಕೆ ಮೆಚ್ಚಿದೆ
ಹೋಗೆಲೆ ಎಲೆ ಗೌರಿ ಎಲ್ಲಾದರ್ಹೋಗೆ

ಕಣ್ಣಿಗೆ ಬಟ್ಟೆ ಕಟ್ಟಿ ಕಾಡಿಗೆ ಬಿಟ್ಟರು
ಹರಹರ ಎಂದಳು ಕಾಡಿಗ್ ಹೊರಟಳು
ಶಿವಶಿವ ಎಂದಳು ಕಾಡಿಗ್ ಹೊರಟಳು
ಹರಹರ ಎಂದಳು ಹರನ ಕುರಿತಳು
ಶಿವಶಿವ ಎಂದಳು ಶಿವನ ಕುರಿತಳು

ಶಿವಶಿವ ಎಂದದ್ದು ಶಿವಗೆ ಕೇಳಿತು
ಹರಹರ ಎಂದದ್ದು ಹರಗೆ ಕೇಳಿತು

ಸಿದ್ದ ಪಟ್ಟಣತ್ತಾವ ಶಿವಗಂಗೆ ಮಠವು
ಶಿವಗಂಗೆ ಮಠದಲ್ಲಿ ರುದ್ರಾಕ್ಷಿ ವನವು
ರುದ್ರಾಕ್ಷಿ ವನದಲ್ಲಿ ಭದ್ರಾಕ್ಷಿ ಮರವು
ಭದ್ರಾಕ್ಷಿ ಮರದಲ್ಲಿ ಸೂಜಿಯು ಕಲ್ಲು
ಸೂಜಿ ಕಲ್ಲಿನ ಮೇಲೆ ಸೂಜಿಗಳ ನಿಲಿಸಿ
ಏಳು ಸೂಜಿಯು ಮೇಲೆ ದಬ್ಬಳವ ನಿಲಿಸಿ
ದಬ್ಬಳದ ಕೊನೆಗೊಂದು ನಿಂಬ್ಯಹಣ್ಣ ಮಡಗಿ
ನಿಂಬೆ ಹಣ್ಣಿನ ಮೇಲೆ ತಪಸಿಗೆ ಕುಳಿತು
ಶಿರಸೊಂದ ಕೆಳಗ್ಮಾಡಿ ಶ್ರೀ ಪಾದ ಮೇಲೆ

ಶಿವಶಿವ ಎಂದಳು ಶಿವನ ಕೇಳಿದಳು

ಮುದಿ ಮುದಿ ಜಂಗಮನು ಆದನು ಸ್ವಾಮಿ
ಮುಂಗೈಲಿ ಜೋಳಿಗೆ ಹಾಕಿದ ಸ್ವಾಮಿ
ನಾಗರ್ಹಾವನು ಹಿಡಿದು ನಡುಕಟ್ಟ ಕಟ್ಟಿ
ಕ್ಯಾರೆ ಹಾವನು ಹಿಡಿದು ಜನಿವಾರ ಹಾಕಿ
ಹೆಬ್ಬೆ ಹಾವನು ಹಿಡಿದು ತಲೆಪಾಗ ಸುತ್ತಿ

ಚಿಕ್ಕ ಚಿಕ್ಕ ಹಾವೆಲ್ಲ ಶಿರದಲ್ಲಿ ಮಡಗಿ
ಗೌರಿದ್ದ ಬಳಿಗಾಗ ಬಂದನು ಸ್ವಾಮಿ

ಮುತ್ತಿನ ಭಿಕ್ಷವ ನೀಡಲು ಸ್ವಾಮಿ
ಮುತ್ತು ನನ್ನರಮನೆ ಮುಕ್ಕು ಜ್ವಾಳವು
ನವರತ್ನ ಭಿಕ್ಷವ ನೀಡಲು ಸ್ವಾಮಿ
ರವರತ್ನ ನನ ಮನೆ ರಾಗಿಯ ಕಾಳು
ಏನ ಕೊಟ್ಟರು ಸ್ವಾಮಿ ಒಲ್ಲೆನೆಂದೀಯ
ನೀ ಕೊಡೋ ಪಡವ್ನಲ್ಲ ನನಗೇನು ಬೇಕೆ
ಕನ್ಯಾದಾನವನೆನಗೆ ಕೊಡಬೇಕೆ ಗೌರಿ

ಈತನೆ ನನ ಗಂಡ ಎಂತ ಕೈ ಮುಗಿದು
ಚಿನ್ನದ ಚೆಂಬ್ನಲ್ಲಿ ಪನ್ನೀರ ತಂದು
ಪನ್ನೀರ ತಂದಾಗ ಪಾದ ತೊಳೆದಳು
ಪಾದ ತೊಳೆದಾ ನೀರ ಪಾನವ ಮಾಡಿ
ನಡಿಯಲೆ ಎಲೆ ಗೌರಿ ಮಠಕೆ ಹೋಗಾನ

ಆಕಾಶವೇನುಂಟು ಚಪ್ಪರವೆ ಹಾಕಿ
ಭೂಮಿ ಅಷ್ಟಗಲಕೆ ಹಸೆಗಲ್ಲ ಬರೆದು
ಗೌರಿಗು ಈಶ್ವರಗು ಲಗ್ನವ ಮಾಡಿ
ದೇವ ಬ್ರಾಂಬರಿಗೂವೆ ಇಬ್ಬರಿಗು ಕರಸಿ
ಗೌರಿಗು ಈಶ್ವರಗು ಲಗ್ನವಾದಿತು
ಗೌರೀ ತಾಯಿಮಾ ತಂದೆ ಅಲ್ಲಿಗೆ ಕರಸಿ
ಸ್ವಾಮೀ ತಾಯಿಮಾತಂದೆ ಅಲ್ಲಿಗೆ ಕರಸಿ
ದೇವ ಬ್ರಾಂಬರು ಧಾರೆಯೆರೆದರು

## ಸೋಬಾನೆ ಮತ್ತು ಒಸಗೆಯ ಪದಗಳು

(ಮದುವೆಯ ಶಾಸ್ತ್ರಗಳಲ್ಲಿ ಹೇಳುವ ಪದಗಳಲ್ಲಿ ಕೆಲವನ್ನು ಆಯ್ದು ಇಲ್ಲಿ ಕೊಟ್ಟಿದೆ)

### ಹಸೆ ಹಾಕುವುದು

ತೆಂಕಲಕೇರಿಯ ಕೆಂಚೇರ ಕರಸವ್ವ
ಅಂಚು ಗುಪ್ಪಟ್ಟೆ ಸೆರಗಿನ | ಸೀರೇನುಟ್ಟ
ಕೆಂಚೇರ ಸೋಬನಕೆ ಕರಸವ್ವ ೧

ಬಡಗಲ ಕೇರಿಯ ಬೆಡಗೀರ ಕರಸವ್ವ
ಅಂಚು ಗುಪ್ಪಟ್ಟೆ ಸೆರಗಿನ | ಸೀರೇನುಟ್ಟ
ಚೆಲುವೇರ ಸೋಬನಕೆ ಕರಸವ್ವ ೨

ಮ್ಯಾಗಳ ಕೇರಿಯ ನಾರೇರ ಕರಸವ್ವ
ಅರುಗು ಗುಪ್ಪಟ್ಟೆ ಸೆರಗಿನ | ಸೀರೇನುಟ್ಟ
ಹರದೇರ ಸೋಬನಕೆ ಕರಸವ್ವ ೩

*   *   *

ಹಸೆ ಹಾಕೋ ಮಲ್ಲೀ ಕಸವಿಲ್ಲ ಮುಸುರಿಲ್ಲ
ಹಸಿಯಡಕೆ ಸಿಪ್ಪೆ ಮೊದಲಿಲ್ಲ | ಈ ಮನೇ
ಸೊಸೆಯರಿನ್ನೆಷ್ಟು ಚೆಲುವೇರೊ ೪

ಮಣೆ ಹಾಕೋ ಮಲ್ಲೀ ಕಸವಿಲ್ಲ ಮುಸುರಿಲ್ಲ
ಹಣ್ಣಡಕೆ ಸಿಪ್ಪೆ ಮೊದಲಿಲ್ಲ | ಈ ಮನೇ
ಹೆಣ್ಮಕ್ಕಳೆಷ್ಟು ಚೆಲುವೇರೊ ೫

*   *   *

ಕರುವಿನ ಸಗಣಿಯ ಕಿರುದಂಗೇರು ತಕ್ಕೊಂಡು
ಅರಮನೆಯೊಳಗೆ ನೆಲಾ ಬಳಿದು | ಅದರಂದಕೆ
ಅರುವತ್ತು ಗೀರ ಬರದರೆ ೬

ಹಸುವಿನ ಸಗಣಿಯ ಅವರಕ್ಕಯ್ಯ ತಕ್ಕೊಂಡು
ಉಪ್ಪರಿಗೊಳಗೆ ನೆಲ ಬಳಿದು | ಅದರಂದಕೆ
ಎಪ್ಪತ್ತು ಗೀರ ಬರದರೆ ೭

ಎತ್ತಿನ ಸಗಣಿಯ (ಅವರ್) ಹಡದವ್ವ ತಕ್ಕೊಂಡು
ಜೆಮ್ಮಾಳಿಗೊಳಗೆ ನೆಲ ಬಳಿದು | ಅದರಂದಕೆ
ಎಂಬತ್ತು ಗೀರ ಬರದರೆ ೮

ಬಾಗಿಲೆದುರಿಗೆ ಬರೆಯುವ್ವ ಚೌಕವ
ಬಾಗಿಲಾಗೆರಡು ಅರಗಿಳಿ | ಸುರಗಿಳಿ
ಸುವ್ವರದ ನಗೆಯ ನಗುತಾವೆ ೯

ಹಟ್ಟೀಯೆದುರಿಗೆ ಬರೆಯುವ್ವ ಪಟ್ಟೆಯ
ಹಟ್ಟೀಯಲೆರಡು ಅರಗಿಳಿ | ಸುರಗಿಳಿ
ಸುವ್ವರದ ನಗೆಯ ನಗುತಾವೆ ೧೦

ಅತ್ತ ಬರೆಯೆಂದರೆ ಇತ್ತ್ಯಾಕೆ ಬರೆದವ್ವ
ಹಿತ್ತಲ ಬಾಳೆ ಬಲಕಾದೊ | ಸೂಲಿಗರಾಯ
ಎತ್ತ ಮೂಡಿದರೂ ಜಗಕೆಲ್ಲ ೧೧

ಹಾಗೆ ಬರೆಯೆಂದರೆ ಹೇಗ್ಯಾಕೆ ಬರೆದವ್ವ
ಬಾಗಿಲ ಬಾಳೆ ಬಲಕಾದೊ | ಸೂಲಿಗರಾಯ
ಹ್ಯಾಗೆ ಮೂಡಿದರು ಜಗಕೆಲ್ಲ ೧೨

* * *

ಹಂಡಕ್ಕಿ ದುಂಡಕ್ಕಿ ದುಂಡುರಾಜಣದಕ್ಕಿ
ಬಂದೂರ ಗದ್ದೆ ಗೊನೆ ಬತ್ತ |ದ ನೆಲ್ಲಕ್ಕಿ
ಬಂದವೆ ನಮ್ಮ ಅರಮನೆಗೆ ೧೩

ಹಾಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ
ಬೇಲೂರ ಗದ್ದೆ ಗೊನೆ ಬತ್ತ |ದ ನೆಲ್ಲಕ್ಕಿ
ಸೇರಾವೆ ನಮ್ಮ ಅರಮನೆಗೆ ೧೪

ಅಕ್ಕಿಯ(ನೇ) ಗಣಿಗೆ ಒತ್ತಿ ನಿಂದಿರುವ್ರೋಳೆ
ಸಟ್ಟಿ ಮುದುವಣನ ಹಿರಿಯಕ್ಕ | ಕಿರುದಂಗಿ
ಅಕ್ಕೀ ತತ್ತಾರೆ ಹಸೆ ಹುಯ್ಯೆ ೧೫

ಗೋದುವೆ(ನೇ) ಗಣಿಗೆ ಒರಗಿ ನಿಂದಿರುವ್ರೋಳೆ
ರಾಯ ಮುದುವಣನ ಹಿರಿಯಕ್ಕ | ಕಡು ಚೆಲುವೆ
ಗೋದ್ವೆ ತತ್ತಾರೆ ಹಸೆ ಹುಯ್ಯೆ ೧೬

ರಾಜಣದ(ನೇ) ಗಣಿಗೆ ಒರಗಿ ನಿಂದಿರುವ್ರೋಳೆ
ರಾಜ ಮುದುಣನ ಕಿರುದಂಗಿ | ಕಡು ಚೆಲುವೆ
ರಾಜಣ ತತ್ತಾರೆ ಹಸೆ ಹುಯ್ಯೆ ೧೭

* * *

ಒಂದ ಬರೆಯೆಂದರೆ ಒಂಬತ್ತ ಬರೆದಳೆ
ಒಂಬತ್ತರ ನಡುವೆ ಕೊಳಸ್ ಹೂಡಿ | ಪಾಂಡವರ
ಅಂಗಿಯ ಸೆರಗ ಬರೆದರೆ ೧೮

ಎರಡ ಬರೆಯೆಂದರೆ ಇಪ್ಪತ್ತ ಬರೆದರೆ
ಇಪ್ಪತ್ತರ ನಡುವೆ ಕೊಳಸ್ ಹೂಡಿ | ಪಾಂಡವರ
ವಸ್ತ್ರದ ಸೆರಗ ಬರೆದರೆ ೧೯

ಅಕ್ಕಿಯ ಹಸೆಯ ಯಾರವ್ವ ಬರೆದೋರು
ಅಕ್ಕ ಲಕ್ಕವ್ವ ತುಳಸವ್ವ | ತಿಮ್ಮಪ್ಪನ
ಪಟ್ಟದ ರಾಣ್ಯಾಸೆಯ ಬರೆದರೆ ೨೦

ಗೋದಿಯ ಹಸೆಯ ಯಾರವ್ವ ಬರೆದೋರು
ಅಮ್ಮ ಲಕ್ಕಮ್ಮ ತುಳಸಮ್ಮ | ತಿಮ್ಮಪ್ಪನ
ಪಟ್ಟದ ರಾಣ್ಯಾಸೆಯ ಬರೆದರೆ ೨೧

ಹಸೆ ಹಾಕ್ ಪಾರ್ವತದೇವಿ ಋಷಿಗಳು ಬಂದವ್ರೆ
ಹಸನಾಗಿ ತುಂಬೆ ಗಿಡ ಬರೆದು | ನಾಲಕು ಮೂಲೆ
ಋಷಿಗಳು ಬೀಸ್ಯಾರೆ ಚವುಲವ ೨೨

ಮಣಿ ಹಾಕ್ ಪಾರ್ವತದೇವಿ ಮುನಿಗಳು ಬಂದವ್ರೆ
ಅನುವಾಗಿ ತುಂಬೆ ಗಿಡ ಬರೆದು | ನಾಲಕು ಮೂಲೆ
ಮುನಿಗಳು ಬೀಸ್ಯಾರೆ ಚವುಲವ ೨೩

ಹಸೆಯು ಬರೆದವ್ಮಗೆ ಮುತ್ತೇನ ಕೊಡಬ್ಯೆದು
ಮುತ್ತೆ ನಾನೂರು ಗಿಣಿ ಹಿಂಡ | ಬರೆದವ್ಮಗೆ
ಬಾಳೆಯ ಹಣ್ಣ ಕೊಡಬ್ಯೆದು ೨೪

ಮಣಿ ಹಾಕಿದವ್ಮಗೆ ಮುತ್ತೇನ ಕೊಡಬ್ಯೆದು
ಮುತ್ತೆ ಐನೂರು ಗಿಣಿ ಹಿಂಡ | ಬರೆದವ್ಮಗೆ
ಕಿತ್ತಳೆ ಹಣ್ಣ ಕೊಡಬ್ಯೆದು ೨೫

* * *

## ಮದವಣಿಗನ ಅಲಂಕಾರ

ಅಂದುಳ್ಳೆ ಗೆಣೆಯರು ಚೆಂದುಳ್ಳೆ ಗೆಣೆಯರು
ಅಂದ ಚಂದುಳ್ಳೆ ಗೆಣೆಯರು | ಅಪ್ಪಯ್ಯಗೆ
ಅಂಗೀ ತೊಡಿಸ್ಯಾರೊಂದೊಲಪಿನ ೨೬

ಆಯುಳ್ಳೆ ಗೆಣೆಯರು ಛಾಯುಳ್ಳೆ ಗೆಣೆಯರು
ಆಯ ಛಾಯುಳ್ಳೆ ಗೆಣೆಯರು | ಅಪ್ಪಯ್ಯಗೆ
ಪಾಗ ಸುತ್ತ್ಯಾರೊಂದೊಲಪಿನ | ಅಪ್ಪಯ್ಯಗೆ
ಆಯ ನೋಡಾರೆ ಗೆಣೆಯರು ೨೭

ತಾಯಿ ತನ್ನ ಮಗನ ಆಯ ನೋಡೇನೆಂದು
ಅಂಗಳದಾಗಿದ್ದೊ ಅವರವ್ವ | ಅವರಪ್ಪಯ್ಯ
ದೇವರಾಗಿದ್ದೊ ಹಸೇ ಮೇಲೆ ೨೮

ತಂದೆ ತನ್ನ ಮಗನ ಅಂದ ನೋಡೇನೆಂದು
ಅಂಗಳದಾಗಿದ್ದೊ ಅವರಪ್ಪ | ಅಪ್ಪಯ್ಯ
ಲಿಂಗನಾಗಿದ್ದೊ ಹಸೇ ಮೇಲೆ ೨೯

ಹಸೆಗೆದ್ದು ಬರುವಾಗ ಋಷಿಗಳ ನೆಸೆ ಮಗನೆ
ದೆಸೆಮೂರುತಿ ನಮ್ಮ ಗುರುವಿನ | ಪಾದಾ ನೆನೆದು
ಸಿಸುವೆ ಬಂದೇರು ಹಸೆ ಮೇಲೆ ೩೦

ಮಣೆಗೆದ್ದು ಬರುವಾಗ ಮುನಿಗಳ ಸೆಸೆ ಮಗನೆ
ಮನಮೂರುತಿ ನಮ್ಮ ಗುರುವಿನ | ಪಾದ ನೆನೆದು
ಮಗನೆ ಬಂದೇರು ಮಣೆ ಮೇಲೆ ೩೧

ಸಾದ ಅಣಿಮಾಡಿ ಆಯಿಕೆ ಭರಣಿ ತುಂಬಿ
ತಾಯವ್ ನಾಲ್ವರ ಕರೆದಾಳೆ | ಈ ಮನೆ
ಪುತ್ರಯ್ಗೆ ಸಾದನಿಡುವೋಕೆ ೩೨

ಗಂಧ ಅಣಿಮಾಡಿ ಚಂದಕೆ ಭರಣಿ ತುಂಬಿ
ತಂಗ್ಯವ್ ನಾಲ್ವರ ಕರೆದಾಳೆ | ಈ ಮನೆ
ಕಂದಯ್ಗೆ ಗಂಧನಿಡುವೋಕೆ ೩೩

ಸಾದ ಇಡುವಾಗ ಪಾಗಿನ ಮೇಲಿನ ಸರಪ
ಕಂಡರೆ ನಮಗೆ ಹೆದರಿಕೆ | ಪರಮೇಶ್ವರಗೆ
ಸಾದವನಿಟ್ಟು ಜಯುವೆನ್ನಿ ೩೪

ಗಂಧ ಇಡುವಾಗ ಮಂಡೆ ಮೇಲಿನ ಸರಪ
ಕಂಡರೆ ನಮಗೆ ಹೆದರಿಕೆ | ಪರಮೇಶ್ವರಗೆ
ಗಂಧವನಿಟ್ಟು ಜಯುವೆನ್ನಿ ೩೫

* * *

## ಮದುವೆಗೆ ಪಯಣ

ಕಳಸಾ ತಕ್ಕೊಳ್ಳಿ ಕಳೆಯುಳ್ಳ ಮುತ್ತೈದೆ
ವರುಷಕೆ ನೂರು ಮದುವೆಯು | (ಯಾ)ಗಲೆಂದು
ಹರಸಿ ತಕ್ಕೊಳ್ಳಿ ಕಳಸವ ೩೬

ಗಿಂಡಿ ತಕ್ಕೊಳ್ಳಿ ಅಂದುಳ್ಳಿ ಮುತ್ತೈದೆ
ತಿಂಗಳಿಗೆ ನೂರು ಮದುವೆಯು | (ಯಾ)ಗಲೆಂದು
ರಂಬೆ ತಕ್ಕೊಳ್ಳಿ ಕಳಸವ ೩೭

ಬಾಗಲ ಬಿಟ್ ಹೋಳ್ದ್ವಾಗ ಬಾಳೆ ಪಲ್ಲೈಸ್ಯಾವೆ
ಬಾಗಲ ಗೌಳಿ ನುಡಿದವೆ | ಮದಲಿಂಗನ
ಅಕ್ಕಯ್ತುಕ್ಕೊಳ್ಳಿ ಕಳಸವ ೩೮

ಹಟ್ಟಿ ಬಿಟ್ ಹೋಳ್ದ್ವಾಗ ಹಣ್ಣು ಪಲ್ಲೈಸ್ಯಾವೆ
ಹಟ್ಯಾಗ್ಳ ಗೌಳಿ ನುಡಿದವೆ | ಮದಲಿಂಗನ
ತಂಗ್ಯಮ ತಕ್ಕೊಳ್ಳಿ ಕಳಸವ ೩೯

ಅಂಗ್ಳ ಬಿಟ್‌ಹೋಳ್ದ್ವಾಗ ನಿಂಬೆ ಪಲ್ಲೈಸ್ಯಾವೆ
ಅಂಗಳದ ಗೌಳಿ ನುಡಿದವೆ | ಮದಲಿಂಗನ
ಅತ್ತಿಗೆ ತಕ್ಕೊಳ್ಳಿ ಕಳಸವ ೪೦

ಹಟ್ಟೀಗ್ಹೊರಟನೆ ಅವರಪ್ಪಯ್ನ ಕರೆದನೆ
ಹತ್ತೆಮ್ಮ್ರ ಜೋಕೆ ಮನೆ ಜೋಕೆ | ಅಪ್ಪಾಜಿ
ಮಿತ್ರೀ ಗೆದ್ದು ನಾಳೆ ಬರುತೀನಿ ೪೧

ಮಿತ್ರೀ ಗೆದಿಯೋಕೆ ನನ್ನಿಚ್ಯೆ ನಿನ್ನಿಚ್ಯೆ
ಮನೆದೇವರ ಕರುಣೆ ನಿನ ಮ್ಯಾಲೆ | ಇದ್ದರೆ
ಮಿತ್ರೀ ಗೆದ್ದು ನಾಳೆ ಬರ ಹೋಗು ೪೨

ಬಾಗಿಲಿಗೆ ಬಂದನೆ ತಾಯಿಯ ಕರೆದನೆ
ಆರೆಮ್ಮ್ರ ಜೋಕೆ ಮನೆ ಜೋಕೆ | ತಾಯವ್ವ
ನಾರೀ ಗೆದ್ದು ನಾಳೆ ಬರುತೀನಿ ೪೩

ನಾರಿಯ ಗೆದಿಯಾಕೆ ನನ್ನಿಚ್ಯೆ ನಿನ್ನಿಚ್ಯೆ
ಮನೆದೇವರ ಕರುಣೆ ನಿನ ಮ್ಯಾಲೆ | ಇದ್ದರೆ
ನಾರೀ ಗೆದ್ದು ನಾಳೆ ಬರಹೋಗು ೪೪

ಅಂಗಳಕೆ ಬಂದನೆ ತಂಗಿಯ ಕರೆದನೆ
ಏಳೆಮ್ಮ ಜೋಕೆ ಮನೆ ಜೋಕೆ | ತಂಗ್ಯಮ್ಮ
ರಂಬೇ ಗೆದ್ದು ನಾಳೆ ಬರುತೀನಿ ೪೫

ರಂಬೆಯ ಗೆದಿಯಾಕೆ ನನ್ನಿಚ್ಛೆ ನಿನ್ನಿಚ್ಛೆ
ಗುರುದೇವರ ಕರುಣೆ ನಿನ ಮ್ಯಾಲೆ | ಇದ್ದರೆ
ರಂಬೇ ಗೆದ್ದು ನಾಳೆ ಬರ ಹೇಳೀಗು ೪೬

ಹತ್ತು ಬೆರಳಿಗೆ ಹತ್ತು ಕೆತ್ತಿಸಿದ ಹೊನ್ನುಂಗುರ
ಒಪ್ಪಕೆ ಬಿಳಿ ಎಲೆ ಹಿಡುಕೊಂಡು | ಮುತಿಗಟ್ಟಿದ
ಅಪ್ಪ ಮಲ್ಲಯ್ಗೆ ಶರಣೆನ್ನಿ ೪೭

ಐದು ಬೆರಳಿಗೆ ಐದು ಕೆತ್ತಿಸಿದ ಹೊನ್ನುಂಗುರ
ಆಯಕೆ ಬಿಳಿಯೆಲೆ ಹಿಡುಕೊಂಡು | ಮುತಿಗಟ್ಟಿದ
ರಾಯ ಮಲ್ಲಯ್ಗೆ ಶರಣೆನ್ನಿ ೪೮

ಮೂರು ಬೆರಳಿಗೆ ಮೂರು ಕೆತ್ತಿಸಿದ ಹೊನ್ನುಂಗುರ
ಅಂದಕೆ ಬಿಳಿಯೆಲೆ ಹಿಡುಕೊಂಡು | ಮುತಿಗಟ್ಟಿದ
ತಂದೆ ಮಲ್ಲಯ್ಗೆ ಶರಣೆನ್ನಿ ೪೯

ಅತ್ತ ಶರಣೆನ್ನಿ ಇತ್ತ ಶರಣೆನ್ನಿ
ಸುತ್ತಲ ದೇವರಿಗೆ ಶರಣೆನ್ನಿ | ನಮ್ ಭಾಗದ
ಅಪ್ಪ ಮಲ್ಲಯ್ಗೆ ಶರಣೆನ್ನಿ ೫೦

ಹಾಗೆ ಶರಣೆನ್ನಿ ಹೀಗೆ ಶರಣೆನ್ನಿ
ಮ್ಯಾಗಳ ದೇವರಿಗೆ ಶರಣೆನ್ನಿ | ನಮ್ ಭಾಗದ
ಸ್ವಾಮಿ ಮಲ್ಲಯ್ಗೆ ಶರಣೆನ್ನಿ ೫೧

ಸಂದಿಯ ಮನೆಗೆ ಬಂಧಿಸಿ ಬೀಗ ಹಾಕಿ
ಕೆಂಬರುಗಣ್ಣಿನ ತುರುಕರ | ಕಾವಲಿಟ್ಟು
ರಂಬೇರು ನೀವ್ ಹೊರಡಿ ಮದುವೆಗೆ ೫೨

ಗೌಡರ ಮನೆಗೆ ಬೇಗದಿ ಬೀಗ ಹಾಕಿ
ರಾವುಗಣ್ಣಿನ ತುರುಕರ | ಕಾವಲಿಟ್ಟು
ಗೌಡರೆ ನೀವ್ ಹೊರಡಿ ಮದುವೆಗೆ ೨೪೩

ಅಕ್ಕ ನೀವ್ ಹೊರಡಿ ಅಕ್ಕಯ್ಯ ನೀವ್ ಹೊರಡಿ
ಪುತ್ರ್ರಯ್ಯಾಲುಂಬೊ ವಳಲೆಯ | ಹೇರಿಗ್ಹಾಕಿ
ಮಿತ್ರೇರು ನೀವ್ ಹೊರಡಿ ಮದುವೆಗೆ ೨೪೪

ತಂಗಿ ನೀವ್ ಹೊರಡಿ ತಂಗ್ಯಮ್ಮ ನೀವ್ ಹೊರಡಿ
ಕಂದಯ್ಯಾಲುಂಬೊ ವಳಲೆಯ | ಹೇರಗ್ ಹಾಕಿ
ಮಿತ್ರೇರು ನೀವ್ ಹೊರಡಿ ಮದುವೆಗೆ ೨೪೫

ತಾಯಿ ನೀವ್ ಹೊರಡಿ ತಾಯವ್ವ ನೀವ್ ಹೊರಡಿ
ಬಾಲಯ್ಯಾಲುಂಬೊ ವಳಲೆಯ | ಹೇರಿಗ್ಹಾಕಿ
ಮಿತ್ರೇರ್ ನೀವ್ ಹೊರಡಿ ಮದುವೆಗೆ ೨೪೬

* * *

## ಹೆಣ್ಣಿನವರು ಬೀಗರನ್ನು ಎದುರುಗೊಳ್ಳುವುದು

ಅಂಕದೇರೀಮೇಲೆ ಬಿಂಕದ ಗೂಡಾರ್ ಹುಯ್ದು
ಕೆಂಚೆ ನಿನ್ನಳಿಯ ಬರುತಾನೆ | ಬೇಲೂರ
ಸಂಪಿಗೆ ಮುಡಿಸೆ ಮಗಳಿಗೆ ೨೪೭

ಆಲದೇರೀಮೇಲೆ ಬೆಲ್ಲದ ಗೂಡಾರ್ ಹುಯ್ದು
ನಲ್ಲೆ ನಿನ್ನಳಿಯ ಬರುತಾನೆ | ಬೇಲೂರ
ಮಲ್ಲಿಗೆ ಮುಡಿಸೆ ಮಗಳಿಗೆ ೨೪೮

ಎತ್ತೆಲ್ಲಿ ಬಿಟ್ಟಿರಿ ಬುತ್ತೆಲ್ಲಿ ಉಂಡಿರಿ
ಸುಕ್ಕರ ನಿಮಗೆಲ್ಲಿ ಉದಿಸಿದ | ಮತಿಗಟ್ಟದ
ಸ್ವಾಮಿ ಮಲ್ಲಯ್ನ ಗುಡಿಯಾಗೆ ೨೪೯

ಬೀಡೆಲ್ಲಿ ಬಿಟ್ಟಿರಿ ಬಾನವೆಲ್ಲುಂಡಿರಿ
ಸೂರ್ಯ ನಿಮಗೆಲ್ಲಿ ಉದಿಸಿದ | ಮುತಿಗಟ್ಟದ
ಅಪ್ಪ ಮಲ್ಲಯ್ನ ಗುಡಿಯಾಗೆ ೬೦

ಹತ್ತು ವಽರಾದ ಕೊಪ್ಪನಿಕ್ಕಿದಾಳೆ
ಎತ್ತಿನ ಮುಂದೆ ಕಳಸವ | ಹಿಡಿದಿರುವ್ರೋಳು
ಸೆಟ್ಟಿ ಮದುವಣನ ಹಿರಿಯಕ್ಕ ೬೧

ನಾರಿ ಬಂಗಾರದ ವಾಲೆಯನಿಟ್ಟಿದಾಳೆ
ಹೋರಿಯ ಮುಂದೆ ಕಳಸವ | ಹಿಡಿದಿರುವ್ರೋಳು
ರಾಯ ಮದುವಣನ ಕಿರುದಂಗಿ ೬೨

ಒಂದು ವರದ ಬಂದಿಯನಿಕ್ಕಿದಾಳೆ
ನಂದಿಯ ಮುಂದ ಬಳುಕುತ | ಬರುವ್ರೋಳು
ಸುಂದರ ಮದುವಣನ ಹಡದವ್ವ ೬೩

ಈ ವೂರ ಮುಂದೊಂದು ಆಲದ ಮರವಿಲ್ಲ
ನಮ್ ಆನೆ ಕಟ್ಟಾಕೆ ನೆರಳಿಲ್ಲ | (ಲ್ಲೀ) ಊರಾಗೆ
ನಮ ರಾಯರು ಮುಖ ತೊಳೆಯೊ ಕೊಳವಿಲ್ಲ ೬೪

ಈ ವೂರ ಮುಂದೊಂದು ಅತ್ತಿಯ ಮರವಿಲ್ಲ
(ನಮ್) ಎತ್ತು ಕಟ್ಟಾಕೆ ನೆರಳಿಲ್ಲ | (ಲ್ಲೀ) ಊರಾಗೆ
ಮಿತ್ರೇರು ಮುಖತೊಳೆಯೊ ಕೊಳವಿಲ್ಲ ೬೫

* * *

## ಧಾರೆಯಾಗುವಾಗ ಹೇಳುವ ಪದಗಳು

ಅಂದರ ಗಿರಿಯಿಂದ ಚಂದಿರನ ಗಿರಿಯಿಂದ
ಸೋಬಾನ ಸೋಬಾನವೇ
ಗಂಧ ಮಾರೋರ ಮಳಿಽಗಿಂದ ,,
ಗಂಧ ಮಾರೋರ ಮಳಿಗಿಂದ ಬಂದಿರುವೊ ,,
ಗಿಂಡೀ ತಂದಿಡಿರಿ ಕಳಸಾಕೆ ,, ೬೬

**(ಪ್ರತಿ ಚರಣಕ್ಕೂ ಹೀಗೆ 'ಸೋಬಾನ ಸೋಬನವೇ' ಎಂದು ಪಲ್ಲವಿ ಹೇಳುತ್ತಲೇ ಹಾಡು ಮುಂದುವರಿಸುತ್ತಾರೆ)**

ಆಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ
ಬೇಲೂರು ಗದ್ದೇ ಗೊನೆಬತ್ತ|ದ ನೆಲ್ಲಕ್ಕಿ
ಸೇರ್‍ಯಾವೆ ನಮ್ಮ ಕಳಸಕೆ—ಸೋಬಾನ ೬೭

ಹಂಡಕ್ಕಿ ದುಂಡಕ್ಕಿ ದುಂಡುರಾಜಣದಕ್ಕಿ
ಬಂದೂರ ಗದ್ದೇ ಗೊನೆಬತ್ತ| ದ ನೆಲ್ಲಕ್ಕಿ
ಹೊಂದ್ಯಾವೆ ನಮ್ಮ ಕಳಸಕೆ—ಸೋಬಾನ ೬೮

ಈಚೇಲಿ ಗೊಬ್ಬರ ಹಾಕಿ ಕೊಳದಿಂದ ನೀರ್‍ ಹುಯ್ದು
ಗಿಡದಿಂದ ಗಿಡಕೆ ತೊಡರುವ | (ತೊಡರೊ) ನಾಗವಳ್ಳಿಯ
ಮಿತ್ರೇರು ತಂದಿಡಿರಿ ಕಳಸಕೆ—ಸೋಬಾನ ೬೯

ಹೊಡೆಹುಲ್ಲ ಮೇದು ಮಡುವಿನ ನೀರ ಕುಡಿದು
ಮರದ ಬುಡದಲ್ಲಿ ಮಲಗುವ | (ಗೊ) ಬಸವೇಶ್ವರನ
ಬಸುಮಂಗ ತಂದಿಡಿರಿ ಕಳಸಕೆ—ಸೋಬಾನ ೭೦

ಆಚೇಲ್ಹಾಕಿದರೆ ಈಚೆಲಿ ಗಮ್ಮನ್ನೋದೆ
ಕಾತರಂಗಡಿಲಿರುವೋ(ದ) | ಸಾಂಬ್ರಾಣಿಯು
ಬೇಗ ಕಂಕಣಕೆ ಅಣಿ ಮಾಡಿ—ಸೋಬಾನ ೭೧

ಅಲ್ಲಿ ಹಾಕಿದರೆ ಇಲ್ಲಿ ಗಮ್ಮನ್ನೋದೆ
ವಲ್ಲಪುರಂಗಡಿಲಿರುವೋ(ದೆ)|ಸಾಂಬ್ರಾಣಿಯು
ವಲ್ಲಕೆ ಕಂಕಣಕೆ ಅಣಿಮಾಡಿ—ಸೋಬಾನ ೭೨

ಅಪ್ಪ ಗುರುಸ್ವಾಮಿ ತಪ್ಪನೆ ಬರೋರಲ್ಲ
ಉತ್ತು ಸದರ್‍ಹೋಗಿ ಕರತನ್ನಿ | ಈ ಮನೆ
ಇಪ್ಪತ್ತು ಗದಿಗೆ ನಡುವಿಗೆ—ಸೋಬಾನ ೭೩

ಮಠವೇ ಮಠವೆಲ್ಲಿ ಮಠದ ಬಾಗಿಲೆಲ್ಲಿ
ಮಠದಾಗಿರುವಂಥ ಗುರುವೆಲ್ಲಿ | ಮತಿಗಟ್ಟದ
ಮಠವಯ್ತೆ ಮಾವಿನ ವನದಾಗೆ—ಸೋಬಾನ ೭೪

ಹತ್ತು ಬೆರಳಿಗೆ ಹತ್ತು ಕೆತ್ತಿಸಿದ್ ಹೊನ್ನುಂಗುರ
ಒಪ್ಪಕೆ ಬಿಳಿ ಎಲೆ ಮಡಿಸುತ | ಗುರುಸ್ವಾಮಿ
ಪುತ್ರಯ್ಗೆಳೆ ಕಂಕ್ಣ ಧರಿಸ್ಯಾರೆ—ಸೋಬಾನ ೭೫

ಆರು ಬೆರಳಿಗೆ ಆರು ಕೆತ್ತಿಸಿದ್ಹೊನ್ನುಂಗುರ
ಒಪ್ಪಕೆ ಬಿಳಿಯೆಲೆ ಮಡಿಸುತ| ಗುರುಸ್ವಾಮಿ
ಬಾಲವ್ಗೆಳೆ ಕಂಕ್ಣ ಧರಿಸ್ಯಾರೆ—ಸೋಬಾನ ೭೬

(ಇದಾದ ಮೇಲೆ ಗಿರಿಜಾಕಲ್ಯಾಣವನ್ನು ಹೇಳುತ್ತಾರೆ)

## ಗೋದಿಕಲ್ಲು ಶಾಸ್ತ್ರದ ಹಾಡು

ಹಟ್ಟೀ ಕಲ್ಲೊಳ್ಳಿಗೆ ಬಟ್ಟು ಗಂಧವನಿಟ್ಟು
ಪುಟ್ಟಬಾಳೆ ಹಣ್ಣ ಸುಲಿದಿಟ್ಟು
ಸುವ್ವಾ ಬಾ ಸುವ್ವಿ ಸುವ್ವಾ ಬಾ
ಪುಟ್ಟಬಾಳೆಹಣ್ಣ ಸುಲಿದಿಟ್ಟು ಈ ಮನೆ
ನಾರೇರೊರಳಕ್ಕಿ ತೊಳಿಸ್ಯಾರೆ
ಸುವ್ವಾ ಬಾ ಸುವ್ವಿ ಸುವ್ವಾ ಬಾ ೧

ಹಾದೀ ಕಲ್ಲೊಳ್ಳಿಗೆ ಗೀರು ಗಂಧವನಿಟ್ಟು
ಬೂದುಬಾಳೆ ಹಣ್ಣ ಸುಲಿದಿಟ್ಟು—ಸುವ್ವಾ ಬಾ
ಬೂದುಬಾಳೆ ಹಣ್ಣ ಸುಲಿದಿಟ್ಟು ಈ ಮನೆ
ಮಿತ್ರೇರೊರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೨

**(ಮುಂದೆಯೂ ಹೀಗೆಯೆ ಎರಡೆರಡು ಸಾಲಿಗೂ ಪಲ್ಲವಿ ಹೇಳಿಕೊಂಡು ಹಾಡಬೇಕು)**

ಹಟ್ಟೀಲಿ ಒಳಕಲ್ಲು ಕೊಟ್ಟಿಗೇಲಿ ಸೇದೋ ಬಾವಿ
ಹೊಕ್ಕು ಕುಟ್ಟಿದರೆ ಧಣಿರೆಂಬೋ| ಒನಕೆಯ
ಕೆತ್ತಿಸಿದಪ್ಪಾಜಿ ಸುಖಿ ಬಾಳೊ—ಸುವ್ವಾ ಬಾ ೩

ಹಾದೀಲಿ ಒಳಕಲ್ಲು ಬೀದಿಲಿ ಸೇದೊ ಬಾವಿ
ಹೋಗಿ ಕುಟ್ಟಿದರೆ ಧಣಿರೆಂಬೊ|ಒನಕೆಯು
ಮಾಡಿಸಿದಣ್ಣಯ್ಯ ಸುಖಿ ಬಾಳೊ—ಸುವ್ವಾ ಬಾ ೪

ಅಣ್ಣನೂ ತಮ್ಮನೂ ಹಾಲು ಬಾನಾ ಉಂಡು
ಹೊನ್ನಿನುಳಿಬಾಚಿ ಹೆಗಲೇರಿ | ಗುಡ್ಡಾಕ್ ಹೋಗಿ
ಹೊನ್ನೆಯ ಮರವ ಕಡಿದರೆ | (ಕಡಿದು) ಒನಕೇ ಮಾಡಿ
ಕನ್ನೇರೊರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೫

ಅಪ್ಪನೂ ಮಗನೂ ತುಪ್ಪ ಬಾನಾ ಉಂಡು
ಉಕ್ಕಿನುಳಿಬಾಚಿ ಹಿಡುಕೊಂಡು | ಗುಡ್ಡಾಕ್ ಹೋಗಿ
ಹಿಪ್ಪೆಯ ಮರವ ಕಡಿದರೆ |(ದು) ಒನಕೇ ಮಾಡಿ
ಮಿತ್ರೇರೊರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೬

ಮರಕೆ ಮುತ್ತಿನ ಕಟ್ಟು ಒನಕೆಗೆ ಹುರಿಗೆಜ್ಜೆ
ಹೊನ್ನು ಮಾಣಿಕದ ಮರಜರಡಿ | ತಕ್ಕೊಂಡು
ಕನ್ನೇರು ಪಾಡಾರೆ ಶಿವಶರಣು—ಸುವ್ವಾ ಬಾ ೭

ಅಂಗಯ್ಯ ಚೆಂದಕೆ ಮುಂಗಯ್ಯ ತಿರುವುತ
ಅಂಬರಕೊನಕೆನೆಸೆವುತ | ಗೌಡರ
ಮಕ್ಕಳು ಒರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೮

ಆ ಕೈಯ ಚೆಂದಕೆ ಈ ಕೈಯ ತಿರುವುತ
ಆಕಾಶಕೊನಕೆನೆಸೆವುತ | ಗೌಡರ
ಸೊಸೆಯರೊರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೯

ಅಕ್ಕಕ್ಕ ತಂಗೇರು ಕೊಪ್ಪು ಬಂಗಾರಿಟ್ಟು
ಸುತ್ತಿ ಬಂದ ಸೆರಗ ದ್ರೂವಿಗೆ| ಕಟ್ಟಿಕೊಂಡು
ಹಾಡುತ ಒರಳಕ್ಕಿ ತೊಳಿಸ್ಯಾರೆ—ಸುವ್ವಾ ಬಾ ೧೦

## ಲೆತ್ತ ಆಡಿದ್ದು

ಲೆತ್ತ ಲೆತ್ತವ ತನ್ನಿ ಲೆತ್ತದ್ ಹಲಗೇ ತನ್ನಿ
ಅತ್ತೆಯ ಮಗಳ ಕರತನ್ನಿ
ಅತ್ತೆಯ ಮಗಳ ಕರತನ್ನಾಕೇ ಕೂಟಿ
ಲೆತ್ತವನಾಡಿ ಗೆಲಬೇಕು ೧

ದಾಯ ದಾಯುವ ತನ್ನಿ ದಾಯದ್ ಹಲಗೇ ತನ್ನಿ
ಮಾವನ ಮಗನ ಕರತನ್ನಿ
ಮಾವನ ಮಗನ ಕರತನ್ನಾತನ ಕೂಟಿ
ದಾಯುವನಾಡಿ ಗೆಲಬೇಕು ೨

ಅತ್ತೆಯ ಮನೆ ಮುಂದೆ ಹತ್ತು ತೆಂಗಿನ ಮರ
ಹತ್ತಿರ ನೆರಿಯ ಒದರ್‍ಯಾಳೆ | ತಾಯಮ್ಮ
(ನಿಮ್) ಅತ್ತೆ ಬೈದಾರು ಒಳಗ್ಹೋಗೆ ೩

ಅತ್ತೆ ಬೈದರೆ ಹತ್ತು ಪಟ ಶರಣೆಂಬೆ
ಅತ್ತೆಯ ಮಗ ಅಪರಂಜಿ | ಪುರುಷರ ಕೂಟಿ
ಲೆತ್ತವನಾಡಿ ಗೆಲಬೇಕು ೪

ಮಾವನ ಮನೆ ಮುಂದೆ ಮೂರು ತೆಂಗಿನ ಮರ
ಹತ್ತಿರ ನೆರಿಯ ಒದರ್‍ಯಾರೇ | ಅಪ್ಪಯ್ಯ
(ನಿಮ್) ಮಾವ ಬೈದಾರು ಒಳಗ್ಹೋಗೊ ೫

ಮಾವ ಬೈದರೆ ಮೂರು ಪಟ ಶರಣೆಂಬೆ
ಮಾವನ ಮಗಳು ಅಪರಂಜಿ | ಕಾಂತೇ ಕೂಟಿ
ದಾಯುವನಾಡಿ ಗೆಲಬೇಕು ೬

ಅತ್ತೆಯ ಮಗಳ ಲೆತ್ತವು ಸರಿಬಂದರೆ
ಸುತ್ತಲ ದೇವರಿಗೆ ಇಡಿಗಾಯ | ನಿಡಿಸೇನೆಂದು
ಗ್ಯಾನ ಅಪ್ಪಯ್ನ ಮನದಾಗೆ ೭

ಮಾವನ ಮಗನ ದಾಯವು ಸರಿಬಂದರೆ
ದೂರಲ ದೇವರಿಗೆ ಇಡಿಗಾಯ| ನಿಡಿಸೇನೆಂದು
ಗ್ಯಾನ ತಾಯಮ್ಮ ಮನದಾಗೆ ೮

ಉಪ್ಪರಿಗೇ ಮುಂದೆ ಉಪ್ಪು ರಾಸಿ ಹುಯ್ದಂಗೆ
ಅತ್ತೆಯ ಮಗಳೆ ಹಿವಹಿಡಿ |ಯದಿದ್ದರೆ
ನಿನ ಪಟ್ಟೇ ಮುಂಜೆರಗ ಹಿಡಿದೇನು ೯

ಸೆರಗ್ ಹಿಡಿದರಾ ಬಾಲೆ ಗಡಗಡನೆ ನಡುಗ್ಯಾಳೆ
ಕೊಡ ನೀರ್ ಹುಯ್ದಂಗೆ ಬೆವತಾಳೆ| ತಾಯಮ್ಮ
ದಿಡುನ ಸೇರಾಳೆ ಸಭೆಯಾಗೆ ೧೦

ದಿಡುನ ಸೇರದೆ ತೊಡೆಮೇಲೆ ಕೂಡು ಬಾರೆ
ಹೆದರದಿರು ನನ್ನ ಸತಿಯಳೆ|ಎಂದಪ್ಪಯ್ಯ
ಮಡದಿಗೆ ಧೈರ್ಯವ ಕೊಡುತಾನೆ
ಮಡದಿಗೆ ಧೈರ್ಯವ ಏನೆಂತ ಕೊಡುತಾನೆ
ನಿನ್ನಕ್ಕತಂಗೇರ ಕರಸೇನು ೧೧

ಜಾಗ ಕೊಟ್ಟೇರ ಜಾಗವ ಬಿಟ್ಟೇರ
ಜಾಗ ಕೊಟ್ಟೇರ ರಾಯ ಎಡದಾಗೆ| (ಗಾ)ಕೆ ನಿಮ್ಮ
ಕೆನ್ನೆಯ ಬೆವರ ಒರಸಾಳೆ ೧೨

ಜಾಗ ಕೊಟ್ಟೇನು ಜಾಗವ ಬಿಟ್ಟೇನು
ಜಾಗ ಕೊಟ್ಟೇನು ಬಾರೆ ಎಡದಾಗೆ ೧೩

ಅಂದುಳ್ಳ ಅಪ್ಪಯ್ಯ ಚೆಂದುಳ್ಳ ತೊಡೆಮೇಲೆ
ಬಂದು ಕೂತೋಳು ಇವಳ್ಯಾರೆ | ತಾಯಮ್ಮ
ಹಿಗ್ ಹೀಗೆ ಕೂರೆ ಸೆಕೆ ಭಾಳ ೧೪

ನಾಲ್ಕು ವರದ ವಾಲೆಯನಿಕ್ಕಿದಾಳೆ
ವಾಲೆ ಭಾರಕೆ ಬೆವತಾಳೆ | ತಾಯಮ್ಮ
ಇತ್ತಿತ್ತ ಕೂರೆ ಸೆಕೆ ಭಾಳ ೧೫

## ಕತೆ ೫

# ಸಂಕೀರ್ಣ ಪದಗಳು



## ಪರಿಚಯ

ಹಳ್ಳಿಗರ ಹಾಡಿನಲ್ಲಿ ಕೋಲಾಟದ ಪದಗಳೂ ರಾಗಿಕಲ್ಲು ಪದಗಳೂ ಮುಖ್ಯವಾದವು, ಹೆಚ್ಚು ಪಾಲಿನವು. ಈಗ ಹೆಚ್ಚಾಗಿ ಬೆಳಕಿಗೆ ಬಂದಿರುವುವೂ ಇವೇ. ಇವುಗಳಲ್ಲದೆ ಇನ್ನೂ ಅನೇಕ ಬಗೆಯ ಪದಗಳು ಪ್ರಚಾರದಲ್ಲಿವೆ. ಅವನ್ನೆಲ್ಲ ತಕ್ಕಷ್ಟು ಮೊತ್ತದಲ್ಲಿ ಕೂಡಿಸಲಾಗಲಿಲ್ಲ.

ಹಚ್ಚೆ ಕುಕ್ಕಿಸಿಕೊಳ್ಳುವುದು ಹಳ್ಳಿಯ ಹೆಂಗಸರಿಗೆ ಬಹು ರೂಢಿ. ಗಂಡಸರೂ ಒಬ್ಬೊಬ್ಬರು ಕುಕ್ಕಿಸಿಕೊಳ್ಳುವುದುಂಟು. ಹಣೆ, ಹುಬ್ಬಿನ ನಡುವೆ, ಕೆನ್ನೆ, ಗಲ್ಲ, ಕುತ್ತಿಗೆ, ಎದೆ, ಕೈ, ತೋಳು, ತೊಡೆ—ಹೀಗೆ ಮೈಯಲ್ಲಿ ಎಲ್ಲಿ ಬೇಕಾದರೂ ಹಚ್ಚೆ ಕುಕ್ಕಿಸಿಕೊಳ್ಳುತ್ತಾರೆ. ತಿಲಕ, ಚುಕ್ಕಿ, ಬಟ್ಟು, ಕಡಗ, ಕಂಕಣ ಮುಂತಾದ ಅಲಂಕಾರಗಳು; ತ್ರಿಕೋಣ, ಚೌಕ, ವರ್ತುಲ ಮೊದಲಾದ ಹಲವು ಆಕಾರದ ರಂಗೋಲಿ ಹಸೆಗಳು ; ಲಿಂಗ, ನಂದಿ, ಕೊಳಲುಕೃಷ್ಣ, ಕಾಳಿಂಗಮರ್ದನ, ರಾಮಸೀತೆ, ನಾಗರು, ಮರ, ಬಳ್ಳಿ ಮೊದಲಾದ ಬಗೆಬಗೆಯ ಚಿತ್ರಗಳು—ಯಾವುದು ಬೇಕಾದರೂ ಅವರವರ ಇಷ್ಟಕ್ಕೆ ತಕ್ಕಂತೆ ಹಚ್ಚೆ ಹುಯ್ಯಿಸಿಕೊಳ್ಳಬಹುದು. ಮುತ್ತೈದೆ ಲಕ್ಷಣವೆಂದೂ ಸಂಪ್ರದಾಯವೆಂದೂ ಹರಕೆಯೆಂದೂ ಪ್ರೀತಿಯ ಗುರುತೆಂದೂ ಇದಕ್ಕೆ ಹಲವು ಕಾರಣಗಳುಂಟು.

ಹಚ್ಚೆ ಹುಯ್ಯುವವರೆಲ್ಲ ಸಾಮಾನ್ಯವಾಗಿ ಹೆಂಗಸರು ; ಕಣಿ ಹೇಳಿ ಭಿಕ್ಷವೆತ್ತುತ್ತ ಊರೂರು ತಿರುಗುವ ಕೊರವಂಜಿಯರು. ಅವರು ಕಪ್ಪು, ಕೆಂಪು, ಹಸುರು ಮೊದಲಾದ ಬಣ್ಣವನ್ನು ಸೂಜಿಯಲ್ಲಿ ಅದ್ದಿಕೊಂಡು ಹಚ್ಚೆ ಹುಯ್ಯಿಸಿಕೊಳ್ಳುವವರ ಚರ್ಮಕ್ಕೆ ಚುಚ್ಚಿ ಚುಚ್ಚಿ ಬೇಕಾದ ಆಕಾರವನ್ನು ನಿರ್ಮಿಸುತ್ತಾರೆ. ಹೀಗೆ ಚುಚ್ಚುವಾಗ ರಕ್ತ ಜಿನುಗಿ ಚಿಮ್ಮುತ್ತದೆ. ಆ ನೋವು ಮರೆಯುವುದಕ್ಕಾಗಿ ಹಚ್ಚೆ ಹುಯ್ಯುವವರು ರಾಗರಾಗವಾಗಿ ಪದ ಹೇಳುತ್ತಿರುತ್ತಾರೆ. ಆಗ ದನಿಯೊಂದೇ ಕಿವಿಗೆ ಬೀಳುತ್ತಿರುವುದು ; ಒಂದು ಮಾತೂ ಸರಿಯಾಗಿ ತಿಳಿಯುವುದಿಲ್ಲ. ಹಚ್ಚೆಗೆ

ಕೂತವರು ಅತ್ತರೂ ಆ ಅಳು ಇವರ ರಾಗದಲ್ಲಿ ಮುಳುಗಿ ಹೋಗುತ್ತದೆ. ರಾಗವನ್ನು ಬಿಟ್ಟು ನಿದಾನವಾಗಿ ಹೇಳಿಸಿ ತಿಳಿದುಕೊಳ್ಳುವುದು ಬಹು ಕಷ್ಟ. ಇವರ ಪದಗಳಲ್ಲಿ ರಾಮಾಯಣ, ಭಾರತ ಮೊದಲಾದ ಪುರಾಣ ಪುಣ್ಯಕಥೆಗಳೂ, ಗ್ರಾಮದೇವತೆಗಳಿಗೂ ಹಳ್ಳಿಯ ಐತಿಹ್ಯಗಳಿಗೂ ಸಂಬಂಧಿಸಿದ ಸಂಗತಿಗಳೂ ಹೆಚ್ಚು. ರಾಗಿಕಲ್ಲು ಪದಗಳನ್ನೂ ಹೇಳುವುದುಂಟು. ಕೆಲವು ವೇಳೆ ದಾನಿಗಳನ್ನು ಹೊಗಳುವ ಪ್ರಶಂಸೆಗಳನ್ನೂ ಹಾಡುತ್ತಾರೆ.

ಹಿಂದೆ ಈಗಿನಂತೆ, ರೈಲು, ಬಸ್ಸು ಮೊದಲಾದ ಪ್ರಯಾಣ ಸಾಧನಗಳಿರಲಿಲ್ಲ. ಜನರ ಪ್ರಯಾಣ, ಸಾಮಾನು ಸಾಗಣೆ, ಎಲ್ಲಕ್ಕೂ ಎತ್ತಿನ ಬಂಡಿಯೇ ಆಧಾರವಾಗಿತ್ತು. ದೂರ ಪ್ರಯಾಣವಾದರೆ ದಿನಗಟ್ಟಳೆ, ವಾರಗಟ್ಟಳೆ, ಒಂದೇ ಸಮನಾಗಿ ಹೋಗಬೇಕಾಗುತ್ತಿತ್ತು. ಆ ದೀರ್ಘ ಪ್ರಯಾಣದಲ್ಲಿ ಬೇಸರ ಪರಿಹಾರಕ್ಕೂ ಆತ್ಮಸಂತೋಷಕ್ಕೂ ಬಂಡಿ ಹೊಡೆಯುವವರು ಹಲವು ಪದಗಳನ್ನು ಹಾಡುವುದು ವಾಡಿಕೆಯಾಗಿತ್ತು. ಗಂಡು ಬಾಳಿಗೆ ಸಂಬಂಧಿಸಿದ ವೀರಸಾಹಸಗಳ ಮತ್ತು ಶೃಂಗಾರ ಸನ್ನಿವೇಶಗಳ ವರ್ಣನೆಯೇ ಆ ಪದಗಳ ಮುಖ್ಯ ವಿಷಯ. ಈಗ ಅಂಥ ಪದಗಳನ್ನು ಹೇಳುವುದು ಬಹು ವಿರಳ.

'ಮಾರಿಯ ಹಬ್ಬ' ಈಗಲೂ ಎಷ್ಟೋ ಕಡೆ ನಡೆಯುತ್ತದೆ. ಊರ ನಡುವೆ ಚಪ್ಪರಕಟ್ಟಿ ಮಾರಿಯನ್ನಿಟ್ಟು ಪೂಜಿಸಿ ಕುರಿಕೋಣಗಳನ್ನು ಬಲಿಕೊಟ್ಟು ಹೆಂಡ ಕುಡಿದು ರಾತ್ರಿಯೆಲ್ಲ ಪದ ಹೇಳಿಕೊಂಡು ಕುಣಿಯುತ್ತ ಆ ಉಗ್ರ ದೇವತೆಯನ್ನು ಆರಾಧಿಸುತ್ತಾರೆ. ಈಗೀಗ 'ಮಾರಿ ಹಬ್ಬದ' ಉಗ್ರತೆ ಕಡಮೆಯಾಗುತ್ತಿದೆ. ಮಾರಿಯೆದುರಿಗೆ ಕುಣಿಯುವಾಗಲೂ ಆ ಬಳಿಕ ಮಾರಿಯನ್ನು ಅಡ್ಡೆಯ ಮೇಲೆ ಕೂರಿಸಿ ಉತ್ಸವ ಮಾಡಿಕೊಂಡು ಹೋಗುವಾಗಲೂ ಅನೇಕ ಪದಗಳನ್ನು ಹೇಳುತ್ತಾರೆ. ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ. ಮಾರಿಗೆ ಸಂಬಂಧಿಸಿದವು ಕೋಲಾಟದ ಪದಗಳಲ್ಲಿಯೂ ಬೆರತಿವೆ(ಉದಾ– ಕರಿಯವ್ವ, ಲಕ್ಕವ್ವ). ಈ ಮಾರಿಯ ಪದಗಳು ಬೇಕಾದಷ್ಟಿವೆ. ಅವನ್ನಿನ್ನೂ ಸಂಗ್ರಹಿಸಬೇಕಾಗಿದೆ. ಕುಕ್ಕೆಯಲ್ಲಿಯೂ ಪೆಟ್ಟಿಗೆಯಲ್ಲಿಯೂ ಮಾರಿಯನ್ನಿಟ್ಟು ಹೊತ್ತುಕೊಂಡು ಊರೂರು ತಿರುಗುವವರಿರುವರಷ್ಟೆ.

ಅವರು ಹೇಳುವ ಪದಗಳನ್ನು ಇಲ್ಲಿ ಸಂಗ್ರಹಿಸಿಲ್ಲ, ಸೀಮೆಸೀಮೆ ಅಲೆಯುವ ಅವರಿಂದ ಸಂಗ್ರಹಿಸುವುದು ಸುಲಭವೂ ಅಲ್ಲ.

ಮಾರಿಯ ಮುಂದೆಯೂ ಪ್ರತ್ಯೇಕವಾಗಿಯೂ 'ಜೋಮ' ನನ್ನು ಕುಣಿಸುವುದುಂಟು. ಜೋಮನೂ ಉಗ್ರದೇವತೆ; ಭೂತನಾಯಕ. ರೋಗಾದಿಗಳು ಬಂದರೆ, ಕಷ್ಟ ಸಂಕಟಗಳುಂಟಾದಾಗ, ಕೆಲವು ಮುಖ್ಯ ವ್ಯವಹಾರಗಳನ್ನು ನಡಸಬೇಕಾದಾಗ ಜೋಮನ ಗುಡಿಗೆ ಹೋಗಿ ಪೂಜೆ ಮಾಡಿಸಿ ಕಣಿಕೇಳುವುದು ಹಳ್ಳಿಗರಲ್ಲಿ ವಾಡಿಕೆಯುಂಟು. ಉಗ್ರವಾಗಿರುವ ಮುಖವಾಡವನ್ನು ಹಾಕಿಕೊಂಡು ಕೈಯಲ್ಲಿ ಕತ್ತಿ ಬೆತ್ತಗಳನ್ನು ಹಿಡಿದು 'ಜೋಮ' ಕುಣಿಯುವಾಗ ತಮಟೆ ಅಥವಾ 'ಕರಡೆ' ವಾದ್ಯ ಬಾರಿಸಿಕೊಂಡು ಹಲವು ಪದಗಳನ್ನು ಹೇಳುತ್ತಾರೆ. ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

'ಹತ್ತಿಯ ಹಾಡು' ಹತ್ತಿಯ ಮಹತ್ವವನ್ನು ವರ್ಣಿಸುತ್ತ, 'ಖಾದಿ ಸ್ವರಾಜ್ಯಕ್ಕೆ ಹಾದಿ' ಎಂದು ಸಾರುವ ಈಗಿನ ಗಾಂಧೀಯುಗದ ಅಭಿಪ್ರಾಯವನ್ನೇ ಸಮರ್ಥಿಸುವ ಒಂದು ಹಳೆಯ ಪದ. ಹತ್ತಿಯನ್ನು ಬೆಳೆದು ಬಟ್ಟೆ ಮಾಡುವ ವಿಧಾನವನ್ನೂ ಅದರಿಂದ ನಮಗಾಗುವ ಉಪಕಾರವನ್ನೂ ವಿವರಿಸುತ್ತದೆ; 'ಹತ್ತಿ ನಾಡ ಸಂಜೀವನ' ಎಂದು ಅದರ ಬೆಲೆಯನ್ನು ಒತ್ತಿ ಹೇಳುತ್ತದೆ. ವ್ಯವಸಾಯಕ್ಕೂ ಕೈಗಾರಿಕೆಗೂ ಸಂಬಂಧಿಸಿದ ಇಂಥ ಪದಗಳು ಬಹು ವಿರಳ.

ಮುಂದಿನದು 'ಬಾಂದಿನವರ ಹಾಡು' ಇದು ಈಗಿನ 'ಸರ್ವೇ ಇಲಾಖೆ' ಹುಟ್ಟಿದ ಮೇಲೆ ರಚಿಸಿರುವ ಪದ. ನೆಲವನ್ನೆಲ್ಲ ಅಳೆದು ವಿಂಗಡಿಸಿ ಕಂದಾಯ ಗೊತ್ತು ಮಾಡುವ 'ಮೋಜಣಿಯವರ' ಕಾರ್ಯರೀತಿಯನ್ನು ಇದು ವಿಮರ್ಶಿಸುತ್ತದೆ. ಯಾವ ತಂಟೆಯೂ ಇಲ್ಲದೆ ಸುಖವಾಗಿ ವ್ಯವಸಾಯ ಮಾಡಿಕೊಂಡಿದ್ದ ನಮ್ಮ ರೈತರಿಗೆ ಹೊಸ ಕಾಲದ ಶಿಸ್ತು ಬಂದಾಗ ಉಂಟಾದ ತೊಂದರೆಯನ್ನು ಈ ಪದದಲ್ಲಿ ಅರಿತುಕೊಳ್ಳಬಹುದು. ಇದಲ್ಲದೆ.

"ಬಾಂದಿನವರು ಬಂದರು ಕಾಣಣ್ಣಾ
ನಾನ್ ಬಾಳೋದ್ ಹೆಂಗಣ್ಣಾ"

ಎಂದು ಮೊದಲಾಗುವ ಮತ್ತೊಂದು ಪದವನ್ನು ಚಿಕ್ಕಂದಿನಲ್ಲಿ ಕೇಳಿದ್ದೆ. ಹೊಗೆಯ ಸೊಪ್ಪು, ಕಾಫಿ ಬೀಜಗಳನ್ನು ಕುರಿತ ಹಾಡುಗಳೂ ಇವೆ. ಹೊಸ ಘಟನೆಗಳಿಂದ ಹಳ್ಳಿಗರ ಮನಸ್ಸಿನ ಮೇಲೆ ಆದ ಪರಿಣಾಮಗಳನ್ನು ಇಂಥ ಪದಗಳಲ್ಲಿ ಕಾಣಬಹುದು. ಪ್ರಚಲಿತ ವಿಷಯಗಳ ಮೇಲೂ ಹಳ್ಳಿಗರು ಕವನ ಕಟ್ಟುತ್ತಿದ್ದರೆಂಬುದಕ್ಕೆ ಇದು ಸಾಕ್ಷಿ.]

'ಹಲಗೆ ಕುಣಿತ' ವೆಂದು ಒಂದು ಕುಣಿತಪ್ರಕಾರ. ಇದರಲ್ಲಿ ವೀರಭದ್ರನ ಚಿತ್ರಕೆತ್ತಿದ ಹಲಗೆಯನ್ನು ಕಟ್ಟಿಕೊಂಡು 'ಭಲ್ಲರೆ ಬೀರಾ' ಎಂದು ಜೋರಾಗಿ ಉಗ್ಗಡಿಸುತ್ತ ಬಹು ರಭಸದಿಂದ ಕುಣಿಯುತ್ತಾರೆ. ಈ ಕುಣಿತ ವೀರಭದ್ರನಿಂದಾದ ದಕ್ಷಯಜ್ಞ ಧ್ವಂಸದ ಸ್ಮಾರಕವೆಂದು ತೋರುತ್ತದೆ. (ವೀರಭದ್ರನಿಗೆ ಹಲಗೆಯು ಕಲಿಯೆಂದು ಬಿರುದು.) ಕೆಲವು ಜಾತ್ರೆ ಉತ್ಸವಕಾಲಗಳಲ್ಲಿ 'ಹರಿಗೆ ಸೇವೆ' ಎಂಬ ಮತ್ತೊಂದು ನಡವಳಿಕೆ ಕಂಡು ಬರುತ್ತದೆ. ನೆಲದ ಮೇಲೆ ಚೌಕವನ್ನು ಹಾಸಿ ಅದರ ನಾಲ್ಕು ಮೂಲೆಗಳಲ್ಲೂ ಮಧ್ಯ ಭಾಗದಲ್ಲೂ ಎಲೆಯ ಮೇಲೆ ಬಾಳೆಯ ಹಣ್ಣಿನ ರಸಾಯನವನ್ನು ಗುಡ್ಡೆಯಾಗಿಡುತ್ತಾರೆ. ಅದಕ್ಕೇ ಗೊತ್ತಾದ ಇಬ್ಬರು ಮೂವರು ಒಂದು ಕೈಯಲ್ಲಿ ಭೂತನ ಮುಖ ಕೆತ್ತಿರುವ ದೊಡ್ಡ ಗುರಾಣಿಯಂಥ ಹಲಗೆಯನ್ನೂ ಮತ್ತೊಂದು ಕೈಯಲ್ಲಿ ಬೆತ್ತ ಅಥವಾ ಕತ್ತಿಯನ್ನೂ ಹಿಡಿದು ಆರ್ಭಟಿಸಿ ಕುಣಿಯುತ್ತಿದ್ದು ಕುಣಿತ ಮುಗಿದ ಮೇಲೆ ಚೌಕದ ಮೇಲೆ ಬಗ್ಗಿ ರಸಾಯನಕ್ಕೆ ಬಾಯಿ ಹಾಕಿ, ಬಾಯನ್ನು ಮೇಲಕ್ಕೆತ್ತದೆ ಎಲ್ಲವನ್ನೂ ತಿಂದು ಬಿಡುತ್ತಾರೆ. ಈ ಕುಣಿತಗಳಿಗೆಲ್ಲ ಒಂದೊಂದು ಬಗೆಯ ಪದಗಳೂ ಉಗ್ಗಡಣೆಗಳೂ ಇವೆ. ಮಲೆನಾಡಿನ 'ಸುಗ್ಗಿಯ ಕುಣಿತ', ಮತ್ತೆ ಕೆಲವು ಕಡೆ ನಡೆಯುವ ಅದೇ ರೀತಿಯ 'ರಂಗದ ಕುಣಿತ'—ಇವಕ್ಕೂ ಹಲವು ಪದಗಳಿವೆ. ಕೆಲವರು ಭಿಕ್ಷುಕರು 'ಕಿನ್ನರಿ' ನುಡಿಸುತ್ತ 'ಅಂಬಾ ಭವಾನೀ' ಎಂಬ ಪಲ್ಲವಿ

ಯೊಡನೆ ಮೂರು ನಾಲ್ಕು ದಿನ ಹೇಳಿದರೂ ಮುಗಿಯದ ದೊಡ್ಡ ದೊಡ್ಡ ಪದಗಳನ್ನು ಹೇಳುತ್ತಾರೆ. 'ಭಟ್ಟಂಗಿಗಳು ನಾವೂ' ಎಂದುಕೊಂಡು ಹೊಗಳಿ ಹೊಗಳಿ ಭಿಕ್ಷವೆತ್ತುವ ಒಂದು ಬಗೆಯ ಭಿಕ್ಷುಕರು 'ಮಂತ್ರ ಹೇಳಿದ ಹಾಗೆ' ನುಡಿಯುವ ಪದಗಳು ಹಲವು. ಬುಡುಬುಡಿಕೆಯವರ ಪದಗಳು ಬೇರೆ (ಅವರು ಬಳಸುವ ಭಾಷೆ ಬೇರೆಯಾದರೂ ಬುಡುಬುಡಿಕೆ ಬಾರಿಸಿ ಆಡುವ ಮಾತು, ಪದ ಕನ್ನಡ). ಇದರ ಜೊತೆಗೆ ಜೋಗಿ ಜಂಗ ಮರು ಏಕನಾದ ನುಡಿಸುತ್ತಾ ಹೇಳುವ ಪದಗಳು ಮತ್ತಷ್ಟು—ಹೀಗೆ ಇನ್ನೂ ಸಂಗ್ರಹಿಸಬೇಕಾದ ಪದಗಳು ಬೇಕಾದಷ್ಟಿವೆ. ಈ ಹಲವು ಬಗೆಯ ಪದಗಳಿಗೆ ಮಾದರಿಯಾಗಿ ನಾಲ್ಕೈದನ್ನು ಮಾತ್ರ ಈ ಸಂಗ್ರಹ ದಲ್ಲಿ ಸೇರಿಸಲು ಸಾಧ್ಯವಾಗಿದೆ.

## ಹಚ್ಚೆಯ ಪದ

ಚಿಕ್ಕದು ಶಿಂಗsನ್ಹಳ್ಳಿ ಚಿನ್ನದ ಬಾಗsಲು
ಚಿತ್ತಾರ ಗೇದ ಕಲುಕಟ್ಟಿ—ನಾರೀ
ಚಿತ್ತಾರs(ನೇ) ಗೇದ ಕಲುಕಟ್ಯೊರಾ ಮುಂದೆ
ಚಿಕ್ಕ ರಾಮಣ್ಣನ ಗೌಡಿಕೆ—ನಾರೀ ೧

ತಿಟ್ಟಿನ ಮೇಲ್ ಕುತುಕೊಂಡು (ಬಳ್ಳಿ) ಪತ್ತsರ ಓದೋನೇ
ನೀಲsದ ಒಂಟಿ ನಿಜಗೆಂಪು—ನಾರೀ
ನೀಲsದ (ನೇ) ಒಂಟಿsನಿಜಗೆಂಪು ನಮ್ಮೂರ
ಗೋವಿನ ಸೆರೆಗsಳಬಿಡಿಸಯ್ಯಾ—ನಾರೀ
ಗೋವಿನ (ನೇ) ಸೆರೆಯ ಬಿಡಿಸಯ್ಯಾ ವೂರಾಗೆ
ನೀರಿsಗಪ್ಪಣೆಯ ಕೊಡಿಸಯ್ಯ—ನಾರೀ ೨

* * *

ನೀರಿಗ್ಹೋಗನ ಬಾರೆ ನಿಜಗಲ್ಲ ದುರುಗಕ್ಕೆ
ತಡವಾದರತ್ತೆ ಬಯಿದಾಳು—ನಾರೀ
ತಡವಾದರೇ ಅತ್ತೆ ಬಯಿದಾಳು ಮೂಡಲಸೀಮು
ಗಿಳಿ ಬಂದು ನೀರ ಕಽಲಿಕ್ಯಾವ್ರು—ನಾರೀ ೩

ನೀರ (ನೇ) ಕಲಕಿದರೆ (ಒಳ್ಳೆ) ನಿರಿಗ್ಯಾಕೆ ಮಾಸಾವೆ
ಮಾವನ ತೋಟದ ಮುರುಗಽವೇ—ನಾರೀ
ಮಾವನ ತೋಟಽದ ಮುರುಗದ ಬಾಳೇ (ಮುಳ್ಳು)
ಮುಳ್‌ಹೊಡದು ಸೆರಗು ಸೆಣದಾವೇ—ನಾರೀ ೪

ಬಾಳೆಽಗೆ ಮುಳ್ಳುಂಟೆ (ಒಳ್ಳೆ) ಬದನೆಗೆ ಚಪ್ಪಽರುಂಟೆ
ಹಸುವಿಽನ ಹಾಲು ವಿಷವುಂಟೇ—ನಾರೀ
ಹಸುವಿನ (ನೇ) ಹಾಲು ವಿಷವುಂಟೆ ಹಿಂದಗಣ
ರುಷಿಗೋಳ ಮಾತುಽ ಸಟೆಯುಂಟೇ—ನಾರೀ ೫

* * *

ಅಕ್ಕ ಹೋಗನ ಬಾರೆ ಕಿಕ್ಕೇರಿ ಸಂತೀಗೆ
ತಕ್ಕೊಳ್ಳಣ ಬಾರೇ ಚವಲಿಽಯ—ನಾರೀ
ತಕ್ಕೊಳ್ಳಣ ಬಾರೇ ಚವಲಿ ಚಿನ್ನದ ಬಽಟ್ಟು
ಒಪ್ಪೇನೆ ನಿನ್ನಾ ಮನಸಿಗೆ—ನಾರೀ ೬

ಕಾಡಿಗ್ಗಣ್ಣಿನೋಳೇ ಕೂಡುಹುಬ್ಬಿನೋಳೇ
ಕೋಡೀಲಿ ನೀರ ಮಗೆವ್ರೋಳೇ—ನಾರೀ
ಕೋಡೀಲಿ(ನೇ) ನೀರಽ ಮಗೆವ್ರೋಳೆ ಎಲೆ ಹೆಣ್ಣೇ
ಕೋಗಿಲಿಗೆ ಮೇವಽ ತರಬೇಕು—ನಾರೀ ೭

ಕೆಂಪಽನೆ ಹೆಣ್ಣಽಗು ಕೆಂದಾವ್ರೆ ಮುಗ್ಗಿಽಗೂ
ಕಂಚ್ವಾಳದ್‌ಹೂವು ಎಳಗೆಂಪು—ನಾರೀ
ಕಂಚ್ವಾಳದಾ ಹೂವು ಎಳಗೆಂಪು ಆದಽರೆ
ಬಿಚ್ಚಿ ನೋಡದರ ಹುಳುಗಽಳ—ನಾರೀ ೮

ಕರ್‍ರನೆ ಹೆಣ್ಣೀsಗು ಕಸ್ತೂರಿ ಬಟ್ಟೀsಗೂ
ಹಲಸಿsನ ಹಣ್ಣು ಮಯ ಮುಳ್ಳು—ನಾರೀ
ಹಲಸಿsನನೇ ಹಣ್ಣು ಮಯಮುಳ್ಳು ಆದsರೆ
ಮೆದ್ದು ನೋಡದರ ಬಲುರುಚಿ—ನಾರೀ ೯

## ಬಂಡಿಯ ಪದ

ಬಂಡಿ ಹೊಡೆಯೋನ ಬಂಡಾಟ ನೋಡಿsರೋ
ನೀರುಳ್ಳಿಗೆಡ್ಡೆ ಒಣರೊಟ್ಟಿ | ತಕ್ಕೊಂಡು
ಹಳದsಡೆ ಬಾಯ ಬಿಡುತಾನೆ ೧

ಕಾಕನ್ಹಾಕಿದ ಬಂಟ ಕೆರೆಯ ನೀರಿಗೆ ಹೊಂಟ
ಹುಲ್ಲೂರು ಸೀಮೆ ದೊರೆಮsಗ
ಹುಲ್ಲೂರು ಸೀಮೆ ದೊರೆಮಗ್ಹಾಕಿದ ಕಾಕು
ಕಣಿವೆ ಬಾಗಿಲಿಗೆ ಕದವಾಯ್ತು ೨

ಗುಡದ ಮ್ಯಾಗಿರೊ ಗೆಣೆಯ ಗುತ್ತಿವ್ಯಾಕೆ ಬಾರೋ
ಬುತ್ತಿ ತಂದಿದಿನಿ ಉಣು ಬಾರೋ | ಗಿಣುಬಾರೋ
ಬಿಟ್ಟಿ ಬಂದೈತೆ ಹೊರು ಬಾರೋ ೩

ಯಾಕ್‌ಯಾಕೊ ನನ ಗೆಣೆಯ ಎಂದಿನ್‌ ಹಂಗಿಲ್ಲವಲ್ಲೋ
ಕುಂದಿ ಬಂದೈತೆ ಸವುಸಾರ | ಮಲಸೀಮೆ
ಗಂಜಿ ಕುಡಿದೋಟು ಬೆಲೆಯಿಲ್ಲ ೪

ಏರಿಮ್ಯಾಗಳ ಸೂಳೆ ಯಾರಿಗೆ ಕಣ್ಣಿಟ್ಟೀಯೇ
ತೇರಿನ ಮುಂದಿರುವ ಬೂತಯ್ನ | ಪಾದದ
ಮುಂದಿಟ್ಟು ದವನ ಮುಡಿದಳು ೫

ತುಮ್ಕೂರ ಹೆಣ್ಣಿಗೆ ತುದಿಗಾಲಿನ್‌ ಪಾಪಾಸ
ಜವ್ಹಾನ ಚವರಿ ನೆರಿಗೇಲಿ

ಜವ್ವಾನ ಚವರಿ ನೆರಿಗೇಲಿಟ್ಟುಕೊಂಡು
ತುಮ್ಕೂರಿಗ್ವಾಲೆ ಬರೆದಽಳೆ
ತುಮ್ಕೂರಿಗ್ವಾಲೆ ಏನಂತ ಬರೆದಽಳೆ
ಮೀನು ನುಂಗಿಽತು ಮೊಸಳೆಽಯಾ
ಮೀನು ನುಂಗಿಽತು ಮೊಸಳೆಽಯು ಈ ವೂರಾ
ರಾಣಿ ನುಂಗ್ಯವ್ಳೆ ಚದುರಽನಾ ೬

ಬೇಲೂರು ಹೆಣ್ಣೆ ಬೇಗನೆ ರಾಗೀ ಮಾಡೆ
ಕೂರಿಗೆ ನಿಂತಽವೆ ಹೊಲದಾಗೆ | ಎಲೆ ಹೆಣ್ಣೇ
ಜಾಣ ನಿಂತವ್ನೆ ಬಿಸುಲಾಗೆ ೭

* * *

## ಮಾರಿಯ ಪದ

ಅರಸಿನ ಕಂಬೀ ಸೀರೆ ಕಣಕಾಲ್ ಗಂದರಿಸಿಽನ
ಕೆಣಕದಿಽರಯ್ಯ ಕಿಡಿಗಣ್ಣೆ
ಕೆಣಕದಿಽರಯ್ಯ ಕಿಡಿಗಣ್ಣೆ ಓಣೀಮಾರಿ
ಮಲತೋನ ಮನೆಯ ಮುರಿದಾಳೇ ೧

ಅಕ್ಕೂರು ಆಲೂರು ತಂಗ್ಯೂರು ಬೇಲೂರು
ಚಿಕ್ಕಕ್ಕನೂರು ಕುಣಿಗಲು | ಕನ್ನಂಬಾಡೀ
ಹೊಕ್ಕುಬಾರಯ್ಯ ಬಳೆಗಾರಾ ೨

ಹರಗಿದ ಹೊಲದಾಗೆ ಮರುಗ ಎತ್ತೋಳ್ ಯಾರೆ
ಹರಳ್ ಹಚ್ಚಿದ್ವಾಲೆ ಕಿವಿಯೋಳೂ | ದೇವೀರಮ್ಮ
ನಿನ್ದೇ ನಮ್ಮ್ಯಾಲೆ ದಯವಿರಲೆ ೩

ಬಿತ್ತಿದ ಗದ್ಯಾಗೆ ಪುಷ್ಪ ಎತ್ತೋಳ್ಯಾರೆ
ಮುತ್ತಾಕಿದ್ವಾಲೆ ಕಿವಿಯೋಳೆ | ದೇವೀರಮ್ಮ
ನಿನ್ದೇ ನಮ್ಮ್ಯಾಲೆ ದಯವಿರಲೆ ೪

ಊರಾಗೆ ತಿರುಗೋಳೆ ಹೂವಿನ ನೆರಿಗ್ಯೋಳೆ
ಜಾಲ ಹೂವಿನ ಜಡೆಯೋಳೆ | ಅಂತರಗಟ್ಟೆ
ನಿಸ್ತ್ರೇ ನಮ ಮ್ಯಾಲೆ ದಯವಿರಲೆ ೫

ಹಗಲೆಲ್ಲ ಕುಯ್ದೆಽನೆ ಮುಗಿಲು ಚಂದಽದ್ ಹೂವ
ಇರುಳೆಲ್ಲ ದಂಡೆ ಹೆಣೆದೆಽನೆ | ಕಾಳವ್ವ
ಕರೆಯೊ ಈರಣ್ಣನ ಕೊರಳಿಗೆ ೬

## ಚೋಮನ ಪದ

ಬಿಲ್ಲು ತಕ್ಕಂಡು ಹೋಗಿ ಬಿಲುಪತ್ರಿ ಮರಕಿಟ್ಟು
ಎಲ್ಲಿ ಹೋಗಿದ್ದೊ ಚೆಲುವಯ್ಯೋ
ಎಲ್ಲಿ ಹೋಗಿದ್ದೋ ಚೆಲುವಯ್ಯ ಮೂಡುನಾಳ
ಕಲ್ಯಾಣಿಯೊಳಗೆ ಅಯಿಬೋಗಾ ೧

ಕತ್ತಿಯ ಕಿತ್ತಽನು ಕಲ್ಲು ಮೇಲೆ ನೆಟ್ಟಽನು
ನೆತ್ಯಗಳ ಜುಂಗ ಒದರ್ಯಾನೂ | ಚೆಲುವಯ್ಯ
ಹುಚ್ಚು ಮಾಡ್ಯಾನು ವಯಿರಿಯಾ ೨

ದೊಡ್ಡಾನು ಈರಯ್ಯ ಸಣ್ಣಾನು ಚೆಲುವಯ್ಯ
ಇಬ್ಬರೊಂದು ಕಣಿವೆ ಇಳಿವಾಗ | ಗಂಗೂರ
ಗಬ್ಬದ್ ಹೊಂಬಾಳೆ ಒದರ್ಯಾವು ೩

ಆಕಾಶಕಂಬು ಬಿಟ್ಟ ಮುಗಿಲಿಗೆ ಬಾಣ ಬಿಟ್ಟ
ಮೆಳಲಲಿ ಕಾಸೆ ಒದರುಟ್ಟ | ಚೆಲುವಯ್ಯ
ಸೂಳೆಮನೆಗ್ಹೋಗೊ ಸಡಗರ ೪

ಅಡಕೆ ಮರದುದ್ದನ್ನ ಬಾಳೆ ಮರದುದ್ದ ಬಾಡು
ಭಾಗ್ಯವಂತ ಕಾಣೋ ಕರಿರಾಯ | (ನ) ಗುಡಿಮುಂದೆ
ಕಾವಳದ ಎಽಡೆ ಗನವಾದೊ ೫

ಹಂಕದ ಆಲದ ಮರ ಬಿಂಕದ ಗೋಣಿ ಮರ
ಕೆಂಚಮ್ ಕುಣಿಯೋದು ಕಿರುಬೇವು
ಕೆಂಚಮ್ಕುಣಿಯೋದು ಕಿರುಬೇವಿನ ಮರದಡಿಯ
ಕಂಚಿನ ಚ್ವಾಮು ಮೆರೆದsವು ೬

(ಎಲೆ) ಹಾಗಲ್ವಾಡಿಯ ಹರಿಯೊ ಹಳ್ಳದ ನೀರ
ಹಾಲೆಂದು ಕುಡಿದ ದೊರೆಮsಗ | ಚೋಣೂರ
ಬಾವಿಯ ಕುರುವ ಹರಿದನು ೭

ಎಲೆ ಜಾಣ ಚೆಲುವಯ್ಯ ಜಾತರೆಗೆ ಹೋಗ್ವಾಗ
ಚಾರಿ ಬಿದ್ದsವೆ ಚಿಗುರೆಲೆ | ಸೂಳೇರ್ ಹುಡುಗಿ
ತಾಳೆ ಹೂವೆಂದು ಮುಡಿದsಳೇ ೮

ಕಗ್ಗದ ಕಲಿ ಬೀರಾ ಎದ್ದು ಬಾರೋ ಸಗನಯ್ಯಾ
ಸಬ್ಬ ದಂಡೆಲ್ಲ ನಿನ ವ್ಯಾಲೆ | ಗನಪೂಜೆ
ಹಬ್ಬೀಲಿ ಬಂದು ನೆಲಸಿರುವೇ ೯

## ಹತ್ತಿಯ ಹಾಡು

ಎರೆಯ ಹೊಲನು ಕರಿಯ ಭೂಮಿ
ಕರಿಯ ಕಲ್ ಕಬ್ಬಿಣದ ಕೊಡನು
ಹೊತರಿನ ಬ್ಯೆಗಿನ ಹೂ ಬಿಸಿಲು
ಹೊತರಿನ ಬ್ಯೆಗಿನ ಎಳೆ ಬಿಸಿಲು
ಜೋಗೋ ಜೋಗೋ ಕೊನೆಗsಳು
ಜೊಗೋ ಜೋಗೋ ತೆನೆಗsಳು
ಬೆಳೆದು ಬಂದ ಹತ್ತೀನೇ ಪಿಡಿದು ;
ಹತ್ತೀನೇ ಪಿಡಿದಳ್ಳೇ ಇಕ್ಕಿ
ರಾಮರು ಪಿಡಿವೋ ಏಳ್‌ಹೆಡೆ ಬಿಲ್ಲು
ಜೋಳದ ಗಿಣಿಕೇಲ್ ಹಂಚೀ ಪಿಡಿದು ;

ಹಾಸುಮಣೆಯಂಬಿಗೆ ಆಧಾರ, ಅರ
ಕಾಸಿಗೆ ಒಂದು ಕದರನೆ ಹೂಡಿ
ಎಂಟೆಳೆಯದೊಂದು ರಾಟೆಯ ಪಿಡಿದು
ಅದೇ ಅದರ ಸಾಯದ ಗಂಡ
ಕದರೇಯ ಬ್ರಹ್ಮಾ ೧

ಸಣ್ಣಸಿ ನೂತು ಬಣ್ಣಿಸಿ ಹುಯ್ದು
ಒಪ್ಪೆಂದರುವೆಗೆ ಅಪ್ಪಿಗೆ ಹಚ್ಚಿ
ಇಪ್ಪತು ಮಳಕೆರಡು ನೂತೀನೇ ನೂತು
ಮಳಕೊಂದು ದುಡ್ಡು ಕಲ್ಲುಗಳನೇ ತರಿಸಿ
ನಾಲಕು ಮಂದಿ ಜಾಡರನೇ ಕರಸಿ
ಆಯ್ದಂ ಗೂಟಂ ಭಾಯ್ದಂ ಗೂಟಂ
ನಾಡ ಜಾಡರ ಮನೆ ಮಗ್ಗದ ಗೂಟಂ
ಅಚ್ಚಿನ ಮಣೆಯಂ ಹೆಚ್ಚಿನ ಗೂಟಂ
ಚಿತಚಿತ್ತಾರದ ಮಗ್ಗವ ಪಿಡಿದು
ಹಳದಿ ಹಸುರು ಧಾರವ ಪಿಡಿದು
ಘಟ್ಟಿಸಿ ನೇದಂ ಘಳಿಗೇ ತಂದರೆ
ಕೇಳೋರಿಲ್ಲವಲ್ಲಾ ೨

ಇಂದ್ರನೂ ಪರಮೇಶ್ವರನೊಪ್ಪುವ
ನಂದೀ ಮ್ಯಾಲನ ಕಂಬೀ ಪಠವು
ಬಂದು ಹಿರಿಯರು ಕುಳಿತುಕೊಂಡು
ಒಳಗೆ ಹೊರಗೆ ಜಾಳಿ ಪಿಂಡಿ
ಬೀಗರಿಗೊಯ್ವ ಮೈಮುಟ್ಟುಗಳು
ರಂಭೆರ ಕೊರಳಿನ ಮಾಂಗಲ್ಯ ಸೂತ್ರ
ಮುಂಗೈ ಕಟ್ಟಿದ ಕಂಕಣ ಧಾರ
ಜನಿವಾರದ ಬ್ರಾಹ್ಮಣರ ಕರೆದು
ತಲೇ ಮೇಲ್ ಮೂರಕ್ಕೀ ತೊಳೆದರೆ

ಮುಕ್ತೀ ಪಡೆಬಲ್ಲಾ
ಸತ್ಯಕ್ಕೇ ಹಂಚಂದ್ರಾಮಾ ಸೊಂ
ದ್ದಾತ್ರೀಯ ಗಿಡವೇ ೩

ಸಣ್ಣಾ ಸಣ್ಣಾ ಚಿತ್ತಾರದ ಕೌದಿ
ನೆಂಟರು ಬಂದರೆ ಹಾಸುವ ಕೌದಿ
ಬಾಣಂತ್ಯೆತ್ತರೆ ಹೊದಿಸೋ ಕೌದಿ
ತೊಟ್ಟಿಲ ಬಟ್ಟೆಯು ಕಳಿವ್ರೋ ಕೌದಿ
ಕೂಸನೆತ್ತಿ ವಾಲಾಡುವ ಕುಂಚಿಗೆ
ನಾರೀಕೊರ್ಡನ ಸಿಂಬಿಗಳು
ನಾರೀಜಡೆಯ ಲಾಡಿಗಳು
ಜಂಗಮದೇವರ ಜಂಗಿನ ಪಠವು
ಲಿಂಗ ಧರಿಸೋ ಕಾವೀ ವಲ್ಲಿ
ಜೋಗಿಗಳ್ ಹೊದೆವ್ರೋ ಚೀಟೀ ದಟ್ಟಿ
ಸಂತೇ ಪ್ಯಾಟೆಕೋಟೆ ಗೂಡಾರಗಳು
ಉಟ್ಟಾವಳಿಯು ಪಟ್ಟಾವಳಿಯು
ಪಟ್ಟೆ ಮಂಚಕೊಪ್ಪುವ ಶಾಲು ಸಕಲಾತಿ
ದೊರೆಗಳು ಒರಗೋ ಲೋಡಿಗಳು
ದೊರೆಗಳ ಮಹಡೀ ಮಂಚಗಳು
ಸತ್ರಿಗೆ ಸೂರೇ ಪಾನಗಳು
ಹೋಳಿ ಜಲತಾರದ ದಿಂಬುಗಳು
ಹೋಳಿ ಜಲತಾರದ ಗೊಂಡೆಗಳು
ದಂಡಿನ ಬೇರಿ ಜಂಬೂಖಾನ
ಆನೆಯ ಕುದುರೆಯ ಮುಖವಾಡಗಳು
ಹತ್ತಿs ನಾಡ ಸಂಜೀವನವ್ರೊಂದ್
ಹತ್ತಿಯ ಗಿಡವೇ ೪

## ಬಾಂದಿನವರ ಹಾಡು

ಬಾಂದ್ಹಾಕೋರು ಬರುತಾರಂತೆ
ಬಹು ಜನ ಕೆಡಬಂತೆಲೋ
ತಂದೆ ತಾಯಿಗೆ ಕೂಳಿಕ್ಕದೆ ಜನ
ಹಿಂದೆ ಬರುವರಂತೆಲೋ ೧

ಬಾಂದು ಎಂಬೋದು ಬಂಧನವಾಗಿದೆ
ಬಹು ಜನ ಕೆಡಬಂತೆಲೋ
ಒಂದೇ ಜಾತಿಗೆ ಆಗುವ ಸಂಗತಿ
ತಂದರು ರಾಜ್ಯಕ್ಕೆಲೋ ೨

ಹರಣಿ ಶಾಣಿ ಹಗ್ಗದ ಸರಪಣಿ
ಕಾರಾಡಿಸುವರಂತೆಲೋ
ಪ್ರೇಮವಿಲ್ಲದ ಗ್ರಾಮಗಳೆಲ್ಲ
ಧೂಳೀ ಮಾಳ್ಪರಂತೆಲೋ ೩

ಹಾರೇಲಗದು ಧೂಳ ಮಣ್ಣನು
ಬಾಯಲಿ ತಿಂಬುವರೆಲೋ
ಮಣ್ಣಿನ ರುಚಿಯು ತಣ್ಣನೆ ತಿಳಿದು
ಮಣ್ಣಗೆ ಮಾಳ್ಪರಂತೆಲೋ ೪

ಅವ್ವಲ್, ದೂಯಂ, ಸೀಯಂ, ಚಾರಂ
ನಾಲ್ಕನು ಹೇಳುವರಂತೆಲೋ
ಸೀಯಂ ನಂಬರು ದೂಯಂ ಮಾಡುವ
ಸಬೂಬ್ ಜವಾಬ್ ನೋಡೆಲೋ ೫

ಸೀಯಂ ನಂಬರು ಅವರಿಗೆ ಸೇರಿಸಿ
ರೈತರ ಮನೆ ಹಾಳೆಲೋ
ಕುಲುಕುಲು ಹೊಲದಲಿ ಗೋರಿಗಳ್ಹಾಕಿಸಿ
ಹೂಡಿಸಿಬಿಡುವರಂತೆಲೋ ೬

ಶಾನುಭೋಗನ ಬೇಗನೆ ಕರೆಯಿಸಿ
ಮೌನದಿ ಪೇಳುವರಂತೆಲೋ
ಸಾವಕಾಶವು ಏಕೆಂದೆನುತ
ಸೇರಿಸಿ ಗುದ್ದಾಕುವರೆಲೋ ೭

ರಸ್ತೆಮಾಡುವ್ರೋ ಸಿಸ್ತುಗಾರಗೇ
ಹೊತ್ತು ಆಗುವುದೇನೆಲೋ
ವಸ್ತು ನಾಯಕನು ಹೋಗುವ ವೇಳೆಗೆ
ರಸ್ತೆಯಿರುವುದೇನೆಲೋ ೮

ಒಂದು ರುಪಾಯಿ ಅರ್ಧ ರುಪಾಯಿ
ರುಸುಂ ಕೇಳುವರೆಲೋ
ಕಂಬಳಿ ಹೊದ್ದಾ ಗೌಡನ ಕರೆಯಿಸಿ
ಗುಂಡಿಗೆ ಹಾಕುವರಂತೆಲೋ ೯

ರಾಜಾ ಸಾಹೇಬ್ ದೌಲತ್ತೆಲ್ಲಾ
ಕಂಪ್ನಿಯೋರ್ ಪಾಲಾಯ್ತೆಲೋ
ಇನ್ನ್ಯಾವ ಕಾಲಕೋ ಇವರಿಗೆ ರಾಜ್ಯ
ಎಂದಿಗೆ ನೋಡುವಿರೆಲೋ ೧೦

ತಂತೀ ಕಳ್ಳರು ನಿಂತಿರುವಾಗ
ಒಂತು ಕೇಡು ನೋಡೆಲೋ
ಅಂತರ ಮಾರ್ಗದಿ ಹೊಗೆ ಬಂದ್ಹೋಗುವ
ಕಂತು ನೋಡಿಕೊಳ್ಳಲೋ ೧೧

ಹೆಂಗಸು ದೌಲತ್ತು ಭಂಗವಾಗಿದೆ
ಸಂಗಡಲೇ ನೋಡೆಲೋ
ಅಂಗಜನಯ್ಯನ ಹಣೆಯಪುರದ ಶ್ರೀ
ರಂಗನ ನೋಡಿದಿರೆಲೋ ೧೨

ತೆನೆ ೬

## ಚರಿತ್ರೆಗೆ ಸಂಬಂಧಿಸಿದ ಪದಗಳು



# ಪರಿಚಯ

ನಾನು ಚಿಕ್ಕವನಾಗಿದ್ದಾಗ ನಮ್ಮ ಅಜ್ಜಿ ತನ್ನ ಬಾಲ್ಯಕಾಲದ ಹಲವು ಸಂಗತಿಗಳನ್ನು ವಿವರಿಸಿ ಹೇಳುತ್ತಿದ್ದರು. 'ರಂಗಪ್ಪ ನಾಯಕನ ಅಡಾವುಡಿ' ಅವುಗಳಲ್ಲೊಂದು. ರಂಗಪ್ಪನಾಯಕ ತರೀಕೆರೆಯ ಪಾಳೆಯಗಾರನಂತೆ. ನಾಡಿನಲ್ಲೆಲ್ಲ ಗದ್ದಲವೋ ಗದ್ದಲ. ಹಳ್ಳಿ ಹಳ್ಳಿಯಲ್ಲೂ ಜನ ದೊಣ್ಣೆ ಹಿಡಿದು ಹೊರಟರಂತೆ; ಕೆಲವು ಮುಂದಾಳುಗಳ ಕೈಕೆಳಗೆ ಒಟ್ಟುಗೂಡಿ ಸರ್ಕಾರದ ಅಂಕೆಯನ್ನು ಲಕ್ಷ್ಯಮಾಡದೆ ತಮಗೆ ಆಗದವರನ್ನು ಬಗೆಬಗೆಯಲ್ಲಿ ಪೀಡಿಸತೊಡಗಿದರಂತೆ; 'ಕೂಟ'ಕೂಡಿ ಮೇಲೆಬಿದ್ದು ಊರೂರುಗಳನ್ನೇ ದೋಚತೊಡಗಿದರಂತೆ. ಕಡೆಗೆ ಮೈಸೂರಿನಿಂದ 'ಕುದುರೆ ದಂಡು' ಬಂದು ದಂಗೆಯನ್ನಡಗಿಸಿತಂತೆ. ರಂಗಪ್ಪನಾಯಕನನ್ನು ಅವನ ಸೂಳೆ ಮೋಸದಿಂದ ಹಿಡಿದುಕೊಟ್ಟಳಂತೆ. ತಾನು ಕಣ್ಣಾರ ಕಂಡ ಮತ್ತು ಕೇಳಿದ ಆಗಿನ ಅನೇಕ ಸಾಹಸಕೃತ್ಯಗಳನ್ನು ಮುದುಕಿ ವಿವರಿಸಿ ಹೇಳುತ್ತಿದ್ದರೆ ಕೇಳಿ ನಮಗೆಲ್ಲ ಮೈ ನವಿರೇಳುತ್ತಿತ್ತು.

ಈಚೆಗೆ ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದಾಗ ಭಿಕ್ಷದವರು ಹಾಡುತ್ತಿದ್ದ ಸರ್ಜಪ್ಪನಾಯಕನ ಲಾವಣಿಯೊಂದರ ಕೆಲವು ನುಡಿಗಳನ್ನು ಕೇಳಿದ್ದೆ. ಕೇಳಿದಷ್ಟರಲ್ಲಿ ಕಥೆ ರಂಗಪ್ಪ ನಾಯಕನ ಕಥೆಯನ್ನು ಹೋಲುತ್ತಿತ್ತು. ಇತ್ತೀಚೆಗೆ ರಂಗಪ್ಪ ನಾಯಕನ ವಿಷಯವನ್ನು ತಿಳಿಯಬೇಕೆಂಬ ಕುತೂಹಲದಿಂದ 'ಮೈಸೂರು ಗೆಸೆಟಿಯರ'ನ್ನು ನೋಡಿದಾಗ ಆ ದಂಗೆಯಲ್ಲಿ ಭಾಗವಹಿಸಿದ್ದ ತರೀಕೆರೆಯ ಪಾಳೆಯಗಾರ ರಂಗಪ್ಪ ನಾಯಕನೆಂಬುದಕ್ಕೆ ಬದಲಾಗಿ ಸರ್ಜಾ ಹನುಮಪ್ಪನಾಯಕನೆಂದು ತಿಳಿಯ ಬಂತು. ರಂಗಪ್ಪ ನಾಯಕನೂ ಹನುಮಪ್ಪ ನಾಯಕನೂ ಬೇರೆ ಬೇರೆಯೋ ಅಥವಾ ಒಬ್ಬನಿಗೇ ಎರಡು ಹೆಸರುಗಳೂ ಇದ್ದವೋ ಹೇಳಲಾಗುವುದಿಲ್ಲ. ಆದರೂ ದಂಗೆಯೆದ್ದ ತರೀಕೆರೆಯ ಪಾಳೆಯಗಾರನ ಕಥೆ ಸರ್ಜಪ್ಪನಾಯಕನ ಲಾವಣಿಯಲ್ಲಿ ಚಿತ್ರಿಸಿದೆಯೆಂದು ನಂಬಿಕೆ

ಯುಂಟಾಯಿತು. ಆದ್ದರಿಂದ ಅದನ್ನು ಇಲ್ಲಿ ಸೇರಿಸಿದೆ. ಅರಸೀಕೆರೆಯು ರೈಲಿನಲ್ಲಿ ಹಾಡುತ್ತಿದ್ದ ಒಬ್ಬ ಭಿಕ್ಷುಕನಿಂದ ಇದನ್ನು ಸಂಗ್ರಹಿಸಿದೆ.

ಈಗ ಒಂದೆರಡು ತಿಂಗಳ ಹಿಂದೆ ಮತ್ತೊಮ್ಮೆ ರೈಲಿನಲ್ಲೇ ಈ ಲಾವಣಿ ಕಿವಿಗೆ ಬಿತ್ತು. ಅದರಲ್ಲಿ ಕಥೆ ಇನ್ನೂ ಮುಂದುವರಿದಿತ್ತು. ಸರ್ಜಪ್ಪ ನಾಯಕ ಸೆರೆ ಸಿಕ್ಕಿದರೂ ಶೌರ್ಯವನ್ನು ಮೆರೆಯುತ್ತಾನೆ. ಕಳ್ಳನಂತೆ ಕೊಲೆಯಾಗಲೊಲ್ಲದೆ ಕತ್ತಿಹಿರಿದು ಹೋರಾಡಿ ತೊಡೆ ತಲೆಗಳನ್ನು ಕತ್ತರಿಸಿಕೊಂಡು ವೀರಮರಣ ಹೊಂದುತ್ತಾನೆ. ನಿದ್ದೆಗಣ್ಣು ಸೆಳೆಯುತ್ತಿದ್ದದ್ದರಿಂದ ಆ ಭಾಗವನ್ನು ಬರೆದುಕೊಳ್ಳಲಾಗಲಿಲ್ಲ. ಲಾವಣಿ ಅಪೂರ್ಣವಾಗಿಯೇ ಅಚ್ಚಾಗಬೇಕಾಯಿತು.

'ಲಕ್ಕಣ್ಣ–ಈರಣ್ಣ' ಹಳೆಯಬೀಡಿನ ಕಡೆಗಾಲಕ್ಕೆ ಸಂಬಂಧಿಸಿದ ಒಂದು ಕಥೆ (ಕಥೆಯ ಸಾರಾಂಶವನ್ನು ಮುಂದೆ ಕೊಟ್ಟಿದೆ). ಇದನ್ನು ರಾತ್ರಿಯೆಲ್ಲ ಹೇಳಿದರೂ ಮುಗಿಯದಂತೆ ಹೇಳುತ್ತಾರೆ. ಅವರು 'ಹಲವಾರು ವಿಧದಲ್ಲಿ ರಾಗ ರಾಗವಾಗಿ ಹೇಳಿದ್ದನ್ನೆ ಮತ್ತೆ ಮತ್ತೆ' ಹೇಳುವುದರಿಂದ ಕಥೆ ಅಷ್ಟು ದೊಡ್ಡದಾಗುತ್ತದೆ. ಹಾಗೆ ದೊಡ್ಡದು ಮಾಡುವುದಕ್ಕೆ 'ನಮ್ಮ ಹಳ್ಳಿಯವರು ಕತೆಯ ಬೆಲೆಯನ್ನು ಅದನ್ನು ಹೇಳಿದ ಅವಧಿಯಿಂದ ಅಳೆದು ನೋಡುವರೆಂ'ಬುದೇ ಮುಖ್ಯ ಕಾರಣ. ಇಲ್ಲಿ ಕಥೆಯನ್ನು ಬಹು ಸಂಕ್ಷೇಪಮಾಡಿ ಬರೆದಿದೆ. ಈ ಕಥೆ ಹೇಳುವವರು ಈಗೀಗ ವಿರಳವಾಗುತ್ತಿದ್ದಾರೆ.

ಕೋಲಾಟದ ಪದಗಳಲ್ಲಿ ಶ್ರೀರಂಗಪಟ್ಟಣದ ಪತನವನ್ನು ಕುರಿತದ್ದು ಒಂದಿದೆ (ಪುಟ ೨೫). ನಾನು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ

'ಷಹರು ಗಂಜಾಂ ಪೇಟೆಯೊಳಗೆ ಹೊಂಟರು ವುಸ್ತಾದರು'

ಎಂದು ಒಂದು ಲಾವಣಿಯ ಪಲ್ಲವಿ ಆಗಾಗ ಕೇಳುತ್ತಿತ್ತು. ಎಲ್ಲಿಯೂ ಆ ಲಾವಣಿಯನ್ನು ಪೂರ್ತಿಯಾಗಿ ಕೇಳಿಲ್ಲ; ಎರಡು ಮೂರು ನುಡಿಗಳನ್ನು ಕೂಡ ಕೇಳಲಿಲ್ಲ. ಅದು ಶ್ರೀರಂಗಪಟ್ಟಣದ ವೈಭವವನ್ನೋ ಪತನವನ್ನೋ ಕುರಿತದ್ದಾಗಿರಬಹುದು. 'ನಮ್ಮ ಕೋಲಾಟದವರು

ಹೇಳುವ ಪದ ಅಪೂರ್ಣವಾಗಿರಬೇಕು. ಅಥವಾ ಇನ್ನೂ ವಿವರವಾದ ಬೇರೊಂದು ಲಾವಣಿಯಿರಬೇಕು' ಎಂದು ಮೊದಲಿನಿಂದಲೂ ನನಗೊಂದು ಸಂದೇಹವಿತ್ತು. ಅದು ನಿಜವೆಂದು ಈಚೆಗೆ ಸ್ಪಷ್ಟವಾಯಿತು.

ಜಾನ್ ಲೇಡನ್ ಎಂಬ ಸ್ಕಾಟ್ಲೆಂಡಿನ ಕವಿಯೊಬ್ಬನು ಶ್ರೀರಂಗ ಪಟ್ಟಣದ ಕಡೆಗಾಲವನ್ನು ಕುರಿತ ಎರಡು ಕವನಗಳನ್ನು ಇಂಗ್ಲಿಷಿಗೆ ಭಾಷಾಂತರ ಮಾಡಿರುವನೆಂಬ ಸಂಗತಿಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರೊಫೆಸರಾಗಿದ್ದ ಶ್ರೀಮಾನ್ ಬಿ. ನಾಗೇಶ ರಾವ್, ಎಂ.ಎ. ಅವರು ತಿಳಿಸಿದರು. ಆ ಕವನಗಳನ್ನು ಓದಿ ನೋಡಿದಾಗ ಒಂದು ಕನ್ನಡದಿಂದಲೂ ಇನ್ನೊಂದು ಹಿಂದೂಸ್ಥಾನಿಯಿಂದಲೂ ಭಾಷಾಂತರಿಸಿದ್ದೆಂದು ತಿಳಿಯಿತು. ಅವೆರಡನ್ನೂ ಮತ್ತೆ ಕನ್ನಡಿಸಿ ಇಲ್ಲಿ ಕೊಟ್ಟಿದ್ದೇನೆ.

ಈ ಜಾನ್ ಲೇಡನ್ ಕವಿ ಶ್ರೀರಂಗಪಟ್ಟಣ ಇಂಗ್ಲಿಷರ ಕೈಗೆ ಬಿದ್ದ ತರುಣದಲ್ಲೆ (೧೮೦೩ ರ ಸುಮಾರಿನಲ್ಲಿ) ಮೈಸೂರಿಗೆ ಬಂದು ಕಮೀಷನರುಗಳ ವೈದ್ಯನಾಗಿ ಕೆಲವುಕಾಲ ಇದ್ದನು. ಇವನು ತನ್ನ ತಾಯ್ನಾಡಿನಲ್ಲಿ ಜನಪದ ಸಾಹಿತ್ಯವನ್ನು ಕೂಡಿಸಿ ಬೆಳಕಿಗೆ ತರಲು ವಿಶೇಷ ಪ್ರಯತ್ನ ಮಾಡುತ್ತಿದ್ದನು; ಸರ್ ವಾಲ್ಟರ್ ಸ್ಕಾಟ್ ಕವಿಗೆ ಆ ಕೆಲಸದಲ್ಲಿ ತುಂಬ ನೆರವಾಗಿದ್ದವನು. ಇಲ್ಲಿಯೂ ಇವನ ಮನದೊಲವು ಸ್ವಾಭಾವಿಕವಾಗಿ ನಾಡ ಹಾಡುಗಳ ಕಡೆಗೇ ತಿರುಗಿತು. ಅಂಥವನು, ಹೊಸದಾಗಿ ಬಂದ ಸೋಲಿನ ಸಂಕಟದಿಂದ ಕುದಿಯುತ್ತ ತಮ್ಮ ಮನದಳಲನ್ನು ಹೊರ ಹರಿಸಿದ ಜನತೆಯ ಕವನಗಳನ್ನಾಯ್ದುಕೊಂಡದ್ದು ಆಶ್ಚರ್ಯವಲ್ಲ. ಆ ತರುಣ ಕವಿ ೧೮೧೧ ರಲ್ಲಿ ತನ್ನ ಮೂವತ್ತಾರನೆಯ ವರ್ಷದಲ್ಲೆ ತೀರಿ ಹೋದನಂತೆ.

ಹೀಗೆ ಚರಿತ್ರೆಗೆ ಸಂಬಂಧಿಸಿದ ಪದಗಳು ಅಲ್ಲಲ್ಲೆ ಅನೇಕ ಇರಬಹುದು. ಸೀರ್ಯದ ನಾಶವನ್ನು ಕುರಿತ ಒಂದು ಲಾವಣಿ 'ಜಯ ಕರ್ನಾಟಕ' ದಲ್ಲಿ ಹಲವು ವರ್ಷಗಳ ಹಿಂದೆ ಪ್ರಕಟವಾಗಿತ್ತು. ಪೆರಿಯಾ ಪಟ್ಟಣದ್ದೊಂದು ಲಾವಣಿ ಇದೆಯೆಂದು ಕೇಳಿದ್ದೇನೆ. ಈ ಸಂಗ್ರಹದಲ್ಲೆ

ಕೋಲಾಟದ ಪದಗಳಲ್ಲಿ ಬರುವ 'ಕಾಳಗದ ಪದ' ಚಿತ್ರದುರ್ಗದ ಮದಕೆರೆ ನಾಯಕನ ಆಳಿಕೆಯಲ್ಲಿ ನಡೆದ ಯಾವುದೋ ಒಂದು ಘಟನೆಯನ್ನು ವರ್ಣಿಸುವುದೆಂಬುದು ಸ್ಪಷ್ಟವಾಗಿದೆ. 'ಚಿಂತಾಮಣಿಯು ರಾಜಕುವಾರ'ನ ಕಥೆ ಅಪೂರ್ಣವಾಗಿದೆ. ಇಂಥ ಪದಗಳನ್ನು ಆಯ್ದು ಕೂಡಿಸಿದರೆ ದೇಶದ ಚರಿತ್ರೆಯ ಅಭ್ಯಾಸಕ್ಕೂ ಸಹಾಯವಾಗುವುದರಲ್ಲಿ ಸಂಶಯವಿಲ್ಲ.

## ಸರ್ಜಪ್ಪನಾಯಕ

(ಲಾವಣಿ)

ಹಸುರು ಮುಂಡಾಸದವನೇ
ದುಸುಮುಖ ಸರಜಪ್ಪನಾಯ್ಕ
ಹೆಸರನೀರೀತಿ ಪಡೆದಲ್ಲೋ
ಲೋಕsದ ಮೇಲೆ ‖ ಪಲ್ಲ ‖

ನೆಗದು ಪಾಳ್ಯಾವ ಗೆಣೆಯ
ಎಳ್ದು ಕೈಯಿಗೆ ಎಳ್ದು | ಮಿರಡಿಯು ಸರಪಣಿ
ಗರುಡೀ ಮನೆ ತಂಕs ಬರುವೋನೇ
ಮಾಸ್ವಾಮಿ ದೊರೆಯೇ ೧

ಈಟೀಟು ಹುಡುವ್ಗsರು
ಚೀಟೀ ಚಲ್ಲಣದೋರು
ತುದಿಗಾಲ್ಪಾಪಾಸುದೋರು
ಕೋರೆ ರುಮ್ಮಾಲುದೋರು
ಎಲ್ಲಿಗೆ ಸರುಜಪ್ಪಾ ನಿನ ಪಯ್ಣ
ಲೋಕsದ ಮೇಲೆ ೨

## ಚರಿತ್ರೆಗೆ ಸಂಬಂಧಿಸಿದ ಪದಗಳು

ಹಾಲು ಅನ್ನಽದ ಬುತ್ತಿ
ಕೈಲಿ ಚಿನ್ನಽದ ಕತ್ತಿ
ಹೊಸಕೋಟೇ ಏರೀಮೇಲ್ ಹೊರಪಯ್ಣು
ಸರುಜಪ್ಪ ನಾಯ್ಕು ೩

ಕುರುಬರ ಸಂಗಽವ ಮಾಡಿ
ಕುರಿಗಳ ಮೆಯ್ಸೋದ ಕಲಿತು
ಬಂಡ ನೂಲೋದ ಕಲಿತು
ವಲ್ಲೀ ನೇಯೋದ ಕಲಿತು
ಕಾರೇ ಗಿಡದಲ್ಲಿ ಕೈಜಗಳ
ಸರುಜಪ್ಪ ನಾಯ್ಕು ೪

ಹೆಣ ಬಿತ್ರೊಂದ್ ಹಳ್ಳ್ಯಽವದಲ್ಲಿ
ಕುದ್ರೆ ಬಿತ್ರೊ ಲಾಯದಲ್ಲಿ
ಸರಜಪ್ಪನ ಕತ್ತಿ ಬಿತ್ರಣ್ಣಾ
ರಣಾಽ ಸೂರದಲ್ಲಿ ೫

ಊರ ಮುಂದ್ ಹೂವಿಽನ ತೋಟ
ಮನೆ ಮುಂದ್ ಮಲ್ಲಿಽಗೆ ತೋಟ
ಸಣ ಮಲ್ಲಿಗೆ ಬಿಡಿಽಸಿಕೊಂಡು
ಶಾವಂತ್ಗೆ ಕುಯಿಽಸಿಕೊಂಡು
ಯಮುಡೊಳ್ಳ್ಯ ಹೊಡಿಽಸಿಕೊಂಡು
ಸಂಗೀತ ಬಿಡಿಽಸಿಕೊಂಡು
ಮ್ಯಾಳಾ ಕುಣಿಽಸಿಕೊಂಡು
ಸೂಳೆ ಮನೆತಂಕ ಹೊರಪಯ್ಣು
ಸರುಜಪ್ಪ ನಾಯ್ಕು ೬

ಸೂಳೆಯ ಮನೆಗೆ ಹೋಗಿ
ಸುಖ ನಿದ್ರೆ ಮಾಡುವಾಗ
ಸೂಳೆ ಮಾಡಿದಳಲ್ಲೊ ಮಿತ್ರೂರಿ
ಸುಕನಾತಿ ಮುಂಡೆ ೭

ಗೇಣುದ್ದ ತಲೆದಿಂಬನ್ ಹಾಕಿ
ಮೊಳದುದ್ದ ಹಾಸಿಗೆ ಹಾಸಿ
ಒಂದು ಕಡಾಯ್ ನೀರು ಕಾಸಿ
ಒಂದು ಮಣ ಸೀಗೇಯ ಅರದು
ತಾನಾ ಮಾಡಿರಿ ಬನ್ನಿ ಮಾಸಾಮೀ
ಮಾಸಾಮಿ ದೊರೆಯೇ ೮

ಯಾಲಕ್ಕೀ ಗೌಡನ ಮಗಳು
ಎಂತ ಚೀನಾಲಿ ಹೆಣ್ಣು
ಗಿರಿಜಂತ ರೂಪಿನವಳು
ಸೀಗೇಕಾಯ್ ನೀರನು ತಂದು
ತಲೆ ಮೇಲೆ ಹುಯ್ಯಿದಳು
ಎಳ್ಡೂ ಕಣ್ಣು ಮುಚ್ಚಿಕೊಂಡ
ಸರುಜಪ್ಪ ನಾಯ್ಕ ೯

ಮುಂದೆ ಮುನ್ನೂರು ದಂಡು
ಹಿಂದೆ ಇನ್ನೂರು ದಂಡು
ನಡುವೆ ಫಿರಂಗಿ ಗುಂಡು
ಸುತ್ಮುತ್ ಫರಂಗಿ ದಂಡು
ಹೆಸರನೀರೀತಿ ಪಡೆದಲ್ಲೋ
ಸರುಜಪ್ಪ ನಾಯ್ಕ ೧೦

(ಅಪೂರ್ಣ)

# ಲಕ್ಕಣ್ಣ - ಈರಣ್ಣ

## (ಹಳೆಯಬೀಡಿನ ಒಂದು ಹಳೆಯ ಕಥೆ)

### ಕಥಾ ಸಾರಾಂಶ

ಇದು ಹಳೆಯಬೀಡು ಪ್ರಾಂತದಲ್ಲಿ ಪ್ರಚಾರದಲ್ಲಿರುವ ಒಂದು ನೀಳ್ಗತೆ. ಹಳೆಯಬೀಡು ಹಾಳಾದುದಕ್ಕೆ ಕಾರಣವೇನೆಂಬುದನ್ನು ಈ ಕತೆಯಲ್ಲಿ ಹೇಳಿದೆ. ಈ ಕತೆಗೂ ಇತಿಹಾಸಕ್ಕೂ ಏನಾದರೂ ಸಂಬಂಧ ವಿದೆಯೆ ಎಂಬ ವಿಚಾರವನ್ನು ಓದುಗರಿಗೇ ಬಿಟ್ಟು, ಈ ಕತೆಯ ಪರಿಚಯ ಕೊಡಬೇಕೆಂಬುದೇ ಈ ಲೇಖನದ ಉದ್ದೇಶ.

ಹಳೆಯಬೀಡಿನಲ್ಲಿ 'ಸೋಗೆ ಬಲ್ಲಾಳ, ವಜ್ರಬಲ್ಲಾಳ' ಎಂಬವರು ರಾಜ್ಯವಾಳುತ್ತಿದ್ದರು. ಅವರಿಗೆ ಹರಿಯಲದೇವಿ ಎಂಬ ತಂಗಿಯಿದ್ದಳು. ಅವಳು ಚಂದ್ರಗಿರಿಯ ರಾಜನನ್ನು ಮದುವೆಯಾಗಿದ್ದಳು. ಕಾರಣಾಂತರದಿಂದ ಚಂದ್ರಗಿರಿಗೂ ಹಳೆಯಬೀಡಿಗೂ ವೈರ ಬೆಳದು ಬಲ್ಲಾಳ ರಾಜನು ಹರಿಯಲದೇವಿಯ ಗಂಡನನ್ನೂ ಮಾವನನ್ನೂ ಕೊಲ್ಲಿಸಿದ್ದುದರಿಂದ ವಿಧವೆಯಾದ ಹರಿಯಲದೇವಿ ಮೂವರು ಚಿಕ್ಕಮಕ್ಕಳೊಡನೆ ಚಂದ್ರಗಿರಿಯಲ್ಲೇ ಇರುತ್ತಾಳೆ. ಆ ಮಕ್ಕಳಲ್ಲಿ ಇಬ್ಬರು ಗಂಡುಮಕ್ಕಳು, ಒಬ್ಬಳು ಮಗಳು. ಗಂಡುಮಕ್ಕಳ ಹೆಸರು ಲಕ್ಕಣ್ಣ, ಈರಣ್ಣ ಎಂದು. ಲಕ್ಕಣ್ಣ ಈರಣ್ಣರು ದೊಡ್ಡವರಾಗಿ ಬೆಳೆಯುತ್ತಾರೆ. ಅವರು ಅತ್ಯಂತ ರೂಪವಂತರು, ಶೂರರು. ಒಂದು ದಿನ ಹಳೆಯಬೀಡಿನ ಸೌಂದರ್ಯ ಸಂಪತ್ತುಗಳನ್ನು ಕನಸಿನಲ್ಲಿ ಕಂಡು ತಮ್ಮ ಸೋದರಮಾವನ ಅತುಳೈಶ್ವರ್ಯವನ್ನು ನೋಡಿಕೊಂಡು ಬರಬೇಕೆಂದು ಆಸೆಪಡುತ್ತಾರೆ. ಹರಿಯಲದೇವಿ ಅವರಿಗೆ ಎಷ್ಟೋ ವಿಧದಲ್ಲಿ ಬೇಡವೆಂದು ಹೇಳಿ ತನ್ನ ಗಂಡ ಮಾವಂದಿರು ಹಳೆಯಬೀಡಿನಲ್ಲಿ ತಲೆ ಕೊಟ್ಟುದನ್ನು ತಿಳಿಸುತ್ತಾಳೆ. ಆದರೆ ಮಕ್ಕಳು ಕೇಳದೆ ಹಟ ಹಿಡಿಯುತ್ತಾರೆ. ನಿರ್ವಾಹವಿಲ್ಲದೆ ಅತ್ಯಂತ ವ್ಯಾಕುಲದಿಂದ ಹರಿಯಲದೇವಿ ಅವರಿಗೆ ಅನುಮತಿ ಕೊಡುತ್ತಾಳೆ. ಮೊದಲಿನಿಂದಲೂ ಅನೇಕ ಅಪಶಕುನಗಳಾಗುತ್ತವೆ. ಯುವಕರು ಅವೊಂದನ್ನೂ ಲಕ್ಷ್ಯ

ಮಾಡುವುದಿಲ್ಲ. ದಾರಿಯಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸುತ್ತಾರೆ. ಹಸಿದು ಬುತ್ತಿಯನ್ನು ಬಿಚ್ಚಿದಾಗ ಅದೆಲ್ಲಾ ಕೆಟ್ಟುಹೋಗಿರುತ್ತದೆ. ಅಡಿಗೆ ಮಾಡಲು ತೊಡಗಿದಾಗ ಅದೂ ಕೆಟ್ಟುಹೋಗುತ್ತದೆ. ಎಡರುಗಳನ್ನು ಲಕ್ಷ್ಯಮಾಡದೆ ಮುಂದೆ ಹೋಗುತ್ತಾರೆ. ದೇವರು ಸಾಧುವಿನ ರೂಪದಲ್ಲಿ ಬಂದು ಹಳೆಯಬೀಡಿಗೆ ಹೋದರೆ ತೊಂದರೆಯಾಗುವದೆಂದೂ, ಹಿಂತಿರುಗಿ ಊರಿಗೆ ಹೋಗಿರೆಂದೂ ಬುದ್ಧಿವಾದ ಹೇಳುತ್ತಾನೆ. ಅವರು ಕೇಳದೆ ಅನೇಕ ಗಾವುದಗಳನ್ನು ನಡೆದು ಕಡೆಗೆ, ಹಳೆಯಬೀಡಿಗೆ ೫-೬ ಮೈಲಿ ಪೂರ್ವದಲ್ಲಿರುವ ಅಡುಗೂರಿಗೆ ಬರುತ್ತಾರೆ. ಚಂದ್ರಗಿರಿಯಿಂದ ಹೊರಟ ಬಳಿಕ ಅದುವರೆಗೂ ಅವರಿಗೆ ಊಟವೇ ಇಲ್ಲ. ಅಡುಗೂರಿನಲ್ಲಿ ಅಡುಗೂರಜ್ಜಿ (ಅಡುಗೂಳಜ್ಜಿ ಇರಬಹುದೆ?) ಅವರಿಗೆ ಊಟಕ್ಕೆ ಇಕ್ಕಿ ಸತ್ಕರಿಸಿ, ಹಳೆಯಬೀಡಿಗೆ ಹೋಗಬೇಡಿರೆಂದೂ, ಹಾಗೆ ಹೋದರೆ ಪ್ರಾಣಾಪಾಯವುಂಟೆಂದೂ ತಿಳಿಸುತ್ತಾಳೆ. ಏಕೆಂದರೆ ಹಳೆಯಬೀಡಿನಲ್ಲಿ "ತಾಟ್ಗಿತ್ತಿ ತಿರುಮಲದೇವಿ" ಇರುತ್ತಾಳೆ. ಅವಳಿಂದ ಲಕ್ಕಣ್ಣ ಈರಣ್ಣರಿಗೆ ತೊಂದರೆಯಾಗುವುದೆಂದೂ ಭವಿಷ್ಯ ಹೇಳುತ್ತಾಳೆ. ಆದರೆ ಲಕ್ಕಣ್ಣ ಈರಣ್ಣರು ಎಲ್ಲರ ಮಾತನ್ನೂ ಮೀರಿ ಕುದುರೆಯೇರಿ ಹಳೆಯಬೀಡಿನ ವಿಸ್ತಾರವನ್ನು ನೋಡುತ್ತ ಬರುತ್ತಾರೆ. ಗೊಣೀ ಸೋಮೇನಹಳ್ಳಿ, ಚಟ್ಟಚಟ್ಟನಹಳ್ಳಿ, ಹೂವೇನಹಳ್ಳಿ, ರಾಜಗೆರೆ, ಹುಲೀಕೆರೆ, ಸಿದ್ದಾಪುರ, ಚಿನಾಯ್ಕನಹಳ್ಳಿ, ಕರೀಕಟ್ಟೇಹಳ್ಳಿ, ರಾಮನಹಳ್ಳಿ, ಕುಮಾರನಹಳ್ಳಿ, ಸೊಪ್ಪಹಳ್ಳಿ ಮುಂತಾದ ಕೇರಿಗಳನ್ನು (ಇವು ಈಗ ಹಳೆಯಬೀಡಿನ ಸುತ್ತಲೂ ಇರುವ ಹಳ್ಳಿಗಳು) ನೋಡಿಕೊಂಡು "ಒಂಟೇಮರಟಿ"ಗೆ ಬರುತ್ತಾರೆ (ಇದು ಹಳೆಯಬೀಡಿನ ಪೂರ್ವಕ್ಕಿರುವ ಒಂದು ಗುಡ್ಡ). ಅಲ್ಲಿ ಆನೆ ಒಂಟೆಗಳ ಸಾಲುಗಳನ್ನು ನೋಡಿಕೊಂಡು ಊರೊಳಗೆ ಹೋಗಲು ಕೆರೆಯ ಏರಿಯ ಮೇಲೆ ಬರುತ್ತಾರೆ. ಕೆರೆಯಲ್ಲಿ ಕೈಕಾಲು ತೊಳೆದುಕೊಂಡು ನೀರು ಕುಡಿದು ವಿಶ್ರಮಿಸಿಕೊಳ್ಳುತ್ತಿರುವಾಗ "ಹಳೆಯಬೀಡು ಗದ್ದೆ ಬಯಲಿನ ಪೈರನ್ನೆಲ್ಲಾ ಒಂದೇ ಗುಕ್ಕಿಗೆ ಮೆಲ್ಲುವ, ಕೆರೆಯ ನೀರನ್ನೆಲ್ಲ ಒಂದೇ ಗುಟುಕಿಗೆ ಕುಡಿಯುವ ಬಸವ" ಬರುತ್ತದೆ.

ಲಕ್ಕಣ್ಣ ಈರಣ್ಣರು ಆ ಬಸವನೊಡನೆ ಹೋರಾಡಿ, ಅದನ್ನು ಹಿಡಿದು ಅದಕ್ಕೆ ಸಂಕೋಲೆ ಹಾಕುತ್ತಾರೆ.

"ತಾಟಗಿತ್ತಿ ತಿರುಮಲದೇವಿ!" ಬಲ್ಲಾಳರಾಜನ ಹೆಂಡತಿ (ಬಂಗಾರದವಳಿರಬಹುದು). ಅವಳ ದಾಸಿಯರು ಕೆರೆಗೆ ಬಂದಿದ್ದವರು ಲಕ್ಕಣ ಈರಣ್ಣರ ಶೌರ್ಯ ರೂಪಲಾವಣ್ಯಗಳನ್ನು ನೋಡಿ ತಮ್ಮ ಒಡತಿಗೆ, "ಒಂಟೀ ಮರಟಿಯ ಮೇಲೆ ಒಬ್ಬ ಸೂರ್ಯ ಹುಟ್ಟಿ ಬಂದರೆ, ಇವರು ಇಬ್ಬರು ಸೂರ್ಯರಂತೆ ಇದ್ದಾರೆ. ನಿನಗೆ ತಕ್ಕವರು" ಎಂದು ದುರ್ಬೋಧನೆ ಮಾಡುತ್ತಾರೆ. ತಿರುಮಲದೇವಿ ಶೃಂಗರಿಸಿಕೊಂಡು ಗಂಗಾಪೂಜೆಯ ನೆಪದಿಂದ ಲಕ್ಕಣ್ಣ ಈರಣ್ಣರಿದ್ದಲ್ಲಿಗೆ ಬಂದು ತನ್ನ ಇಂಗಿತವನ್ನು ಸೂಚಿಸುತ್ತಾಳೆ. ರಾಜಕುಮಾರರು, ಬಲ್ಲಾಳರಾಜನ ಮಡದಿಯರು ತಮಗೆ ತಾಯಿಯ ಸಮನೆಂದು ಅವಳನ್ನು ತಿರಸ್ಕರಿಸುತ್ತಾರೆ. ಮುಂದೆ ಸಾರಂಗಧರನ ಕಥೆಯಂತೆ ನಡೆಯುತ್ತದೆ. ತಿರುಮಲದೇವಿ ದೊರೆಯೊಡನೆ ದೂರು ಹೇಳಿ, ಲಕ್ಕಣ್ಣ ಈರಣ್ಣರನ್ನು ಕೂಡಲೆ ಸೆರೆ ಹಿಡಿದು ಮಾರನೆಯ ದಿನ ಅವರನ್ನು ಶೂಲಕ್ಕೆ ಹಾಕಿಸಲು ಅಪ್ಪಣೆ ಮಾಡಿಸುತ್ತಾಳೆ. ತಮಗೊದಗಿದ ಆಪತ್ತನ್ನು ತಿಳಿದು, ತಾಯಿಯ ಮಾತು ಮೀರಿ ಬಂದುದಕ್ಕಾಗಿ ದುಃಖಿಸಿ, ಅಣ್ಣತಮ್ಮಂದಿರು ಒಂದು ಕಾಗದ ಬರೆದು ಗಾಳಿಯಲ್ಲಿ ಬಿಟ್ಟು "ನಾವು ಸತ್ಯವಂತರಾದರೆ ಅದು ತಾಯಿಗೆ ತಲುಪಲಿ" ಎನ್ನುತ್ತಾರೆ. ಅವರನ್ನು ದಣಾಯಕನು ಸೆರೆಯಲ್ಲಿಡಲು ಕರೆದುಕೊಂಡು ಹೋಗುತ್ತಾನೆ.

ಇತ್ತ, ಹರಿಯಲದೇವಿ ನೀರಿಗೆ ಹೋಗಿದ್ದಾಗ ಅವಳಿಗೆ ಲಕ್ಕಣ್ಣ ಈರಣ್ಣರು ಬರೆದ ಕಾಗದ ಸಿಕ್ಕುತ್ತದೆ. ಅದನ್ನು ನೋಡಿ ದುಃಖದಿಂದ ಆ ಹಗಲು ರಾತ್ರಿಯೆಲ್ಲಾ ನಡೆದು ಮಾರನೆಯ ದಿನ ಮಧ್ಯಾಹ್ನದ ಹೊತ್ತಿಗೆ ಹಳೆಯಬೀಡಿಗೆ ಬರುತ್ತಾಳೆ. ಅಂದೇ ಲಕ್ಕಣ್ಣ ಈರಣ್ಣರನ್ನು ಶೂಲಕ್ಕೆ ಹಾಕುವ ದಿನ. ಬಹಳ ದೂರ ನಡೆದು ಆಯಾಸಪಟ್ಟು ಬಾಯಾರಿ ತೊಟ್ಟು ನೀರಿಗಾಗಿ ಕೇರಿ ಕೇರಿ ಅಲೆಯುತ್ತಾಳೆ. ಯಾರೂ ನೀರು ಕೊಡುವುದಿಲ್ಲ (ಹಾಗೆ ರಾಜಾಜ್ಞೆಯಾಗಿರಬಹುದು). ಕೇರಿ

ಕೇರಿಯೂ ಹಾಳಾಗಿ ಹೋಗಲೆಂದು ಶಪಿಸುತ್ತಾಳೆ. ಆದರೆ ಕುಂಬಾರರ ಕೇರಿಯಲ್ಲಿ ಕುಂಬಾರರ ಗುಂಡಣ್ಣ ನೀರನ್ನು ದಾರಿಯಲ್ಲಿಟ್ಟಿರುತ್ತಾನೆ. ಅದನ್ನು ಕುಡಿದು ಹರಿಯಲದೇವಿ 'ಕುಂಬಾರರ ಕೇರಿ ಊರಾಗಿ ಉಳಿಯಲಿ' ಎಂದು ನುಡಿಯುತ್ತಾಳೆ. ಈಗ ಇರುವ ಊರು ಹಿಂದಿನ ಕುಂಬಾರರ ಕೇರಿ ಎಂಬ ಪ್ರತೀತಿಯಿದೆ.

ಹೀಗೆ ಹರಿಯಲದೇವಿ ನೀರಿಗಾಗಿ ಕೇರಿ ಕೇರಿಯನ್ನು ಸುತ್ತುತ್ತ ಕುಂಬಾರರ ಕೇರಿಗೆ ಬರುವ ಸಮಯಕ್ಕೆ ಸರಿಯಾಗಿ ಲಕ್ಕಣ್ಣ ಈರಣ್ಣ ರನ್ನು ಶೂಲಕ್ಕೆ ಹಾಕಲು ಆ ಮಾರ್ಗವಾಗಿ ಕರೆದುಕೊಂಡು ಹೋಗುತ್ತಿದ್ದರು. ತಾಯಿಯನ್ನು ಕಂಡು ಲಕ್ಕಣ್ಣ ಈರಣ್ಣರು ಪಹರೆಯಿದ್ದವರನ್ನು ಸ್ವಲ್ಪ ನಿಧಾನಿಸಲು ಕೋರುತ್ತಾರೆ. ಹರಿಯಲದೇವಿ ಮಕ್ಕಳಿಗೊದಗಿದ ಆಪತ್ತಿಗಾಗಿ ದುಃಖಿಸುತ್ತಾಳೆ. ಆದರೆ ಅವರ ಬಿಡುಗಡೆಗಾಗಿ ತನ್ನ ಅಣ್ಣನನ್ನು ಪ್ರಾರ್ಥಿಸಲಿಲ್ಲ. ಮಕ್ಕಳೊಡನೆ ತಾನೂ ಶೂಲಕ್ಕೆ ಬೀಳುತ್ತಾಳೆ.

ಲಕ್ಕಣ್ಣ ಈರಣ್ಣರ ಸಹೋದರಿಯು ಚಂದ್ರಗಿರಿಯಲ್ಲಿ ಸ್ನಾನ ಮಾಡುತ್ತಿದ್ದಾಗ ತನ್ನ ತಮ್ಮಂದಿರಿಗೊದಗಿದ ಆಪತ್ತನ್ನೂ ತಾಯಿ ಹಳೆಯಬೀಡಿಗೆ ಹೊರಟು ಹೋದುದನ್ನೂ ಕೇಳಿ, ದುಃಖದ ಭರದಲ್ಲಿ ಬಟ್ಟೆಯನ್ನೂ ಹಾಕಿಕೊಳ್ಳದೆ, ಮಾರುದ್ದ ಮಂಡೆಯಿಂದ ಮೈ ಮುಚ್ಚಿಕೊಂಡು, ಲಕ್ಕಣ್ಣ ಈರಣ್ಣರು ಶೂಲಕ್ಕೆ ಬೀಳುವ ಸಮಯಕ್ಕೆ ಅವರಲ್ಲಿಗೆ ಧಾವಿಸಿ ಬರುತ್ತಾಳೆ. ಬರಿಮೈಯಲ್ಲಿ ಬಂದು ತಮಗೆ ಅವಮಾನ ಮಾಡಿದಳೆಂದು ಲಕ್ಕಣ್ಣ ಈರಣ್ಣರು ಅವಳನ್ನು ಕೋಪದಿಂದ ಒದೆದು ಪ್ರಾಣ ಬಿಡುತ್ತಾರೆ. ಅವಳೂ ಸೊಂಟ ಮುರಿದು ಬಿದ್ದು ಬಿಡುತ್ತಾಳೆ.

ಇಲ್ಲಿಗೆ ಕತೆ ಮುಗಿಯುತ್ತದೆ. ಈಗಲೂ ಬಸ್ತೀಹಳ್ಳಿಯ ಹತ್ತಿರದಲ್ಲಿ ಹುಲೀಕೆರೆಗೆ ಹೋಗುವ ಮಾರ್ಗದಲ್ಲಿ ಶೂಲದ ಬನವಿದೆ. ಅಲ್ಲಿ ಒಂದು ಸಣ್ಣ ದೇವಸ್ಥಾನವಿದೆ. ಲಕ್ಕಣ್ಣ ಈರಣ್ಣರು ಶೂಲಕ್ಕೆ ಬಿದ್ದುದೆಂದು ಒಂದು ವಿಗ್ರಹವನ್ನು ತೋರಿಸುತ್ತಾರೆ. ಪಕ್ಕದಲ್ಲೇ ಇರುವ ತಲೆಗೆದರಿದ ಒಂದು ಹೆಣ್ಣು ವಿಗ್ರಹವನ್ನು ಅವರ ಅಕ್ಕನದೆಂದು ತೋರಿಸುತ್ತಾರೆ.

ಅಲ್ಲದೆ, ಅಂದು ಲಕ್ಕಣ್ಣ ಈರಣ್ಣರು ಸಂಕೊಲೆ ಹಾಕಿದ ಬಸವನ ವಿಗ್ರಹವೂ ಹಳೆಯಬೀಡು ಗದ್ದೆ ಬಯಲಿನಲ್ಲಿರುವುದೆಂದೂ ದನಗಳು ಕರು ಹಾಕಿದಾಗ ಮೊದಲು "ಸಂಕೋಲೆಯ ಬಸವ"ನಿಗೆ ಮೊಸರನ್ನದ ಎಡೆ ಮಾಡುವುದು ಇಂದಿಗೂ ಅಲ್ಲಿ ವಾಡಿಕೆಯಾಗಿ ಉಳಿದು ಬಂದಿರುವುದೆಂದೂ ಹಳೆಯಬೀಡಿನ ನನ್ನ ಮಿತ್ರರೊಬ್ಬರು ತಿಳಿಸಿದರು.

ಹೊಯ್ಸಳ ಸಾಮ್ರಾಜ್ಯ ನಾಶವಾದ ಮೇಲೆ, ಯಾವುದೋ ಘಟನೆಯಿಂದ ಜನಸಾಮಾನ್ಯದಲ್ಲಿ ಒಂದು ಪ್ರತೀತಿ ಹುಟ್ಟಿ ಹರಡಿ, ಕಡೆಗೆ ಈ ಕತೆಯ ರೂಪವನ್ನು ಹೊಂದಿರಬಹುದೆ? ಅಥವಾ ಈ ಕತೆಗೂ ಚರಿತ್ರೆಗೂ ಏನಾದರೂ ಸಂಬಂಧವಿದೆಯೆ? ಎಂಬುದು ವಿಚಾರಾರ್ಹವಾಗಿದೆ.

ಮತಿಘಟ್ಟ ಕೃಷ್ಣಮೂರ್ತಿ

## ಲಕ್ಕಣ್ಣ - ಈರಣ್ಣ

ಚಂದೀ ಚಂದೀವಾರ ಸುವ್ವಲಾಲೇ | ಚಂದ್ರಗಿರಿಪಟ್ಟಣ ಸುವ್ವಲಾಲೇ
ಲಕ್ಕಣನೂ ಈರಣನೂ ಸುವ್ವಲಾಲೇ | ಸುಖನಿದ್ರೆಮಾಡುವಾಗ ಸುವ್ವಲಾಲೇ
ಹಳೆಯಬೀಡಿಸ್ತಾರ ,, ಎಪ್ಪತ್ತೇಳು ಬಸ್ತಿಗಳು ,,
ಸ್ವಪ್ನಾಕೆ ಬರುತಾವೆ ,, ಮಲಗಿದ್ದ ಲಕ್ಕಣಗೆ ,,
ಮಲಗಿದ್ದ ತಮ್ಮಯ್ನ ,, ಬೇಗದಲ್ಲಿ ಎಬ್ಬೀಸಿ ,,
ಏನು ಹೇಳಲಿ ತಮ್ಮ ,, ಹಳೆಯ ಬೀಡಿಸ್ತಾರ ,,
(ನಾವ್) ನೋಡಿಕೊಂಡು ಬರಬೇಕು ಎಪ್ಪತ್ತೇಳು ಬಸ್ತಿಗಳ ,,
ಬೆಳಕನ್ನು ಹರಿದವು ,, ಅಣ್ಣನು ತಮ್ಮನು ,,
ಕೆರೆಗಾಗಿ ಹೋದರು ,, ಕೈಕಾಲು ಮುಖಗಳ ,,
ಬೇಗದಿಂದ ತೊಳೆದರು ,, ಲಕ್ಕಣನೂ ಈರಣನೂ ,,
ಅರಮನೆಗೆ ಬಂದರು ,, 'ತಾಯವ್ವ ತಾಯವ್ವ ,,
ರೊಟ್ಟೀಯ ಸುಡವ್ವ ,, ಬುತ್ತೀಯ ಕಟ್ಟವ್ವ' ,,

* 'ನನ್ನ (ನೆ) ಕಂದ್ಗಳಿರ | ನೀವೆಲ್ಲಿಗೆ ಹೋದೀರೊ? ' | 'ಹಳೆಯು ಬೀಡಿಸ್ತಾರ | ನಾವ್ ನೋಡಿಕೊಂಡು ಬರುತೇವೆ | ರೊಟ್ಟೀಯ ಸುಡವ್ವ | ಬುತ್ತೀಯ ಕಟ್ಟವ್ವ ' | 'ಹಳೆಯುಬೀಡೆಂಬೋದು | ಹಾಳಾಗಿ ಹೋಗಲಿ | ನೀವ್ ಹೋಗಬೇಡಿ ಕಂದ್ಗಳಿರ' | 'ತಾಯವ್ವ ತಾಯವ್ವ | ರೊಟ್ಟಿಯ ಸುಡವ್ವ | ಬುತ್ತಿಯ ಕಟ್ಟವ್ವ | ಹಳೆಯುಬೀಡೂರೊಳಗೆ | ನಮಗ್ಯಾರವ್ವ ನೆಂಟರು ?' | 'ನಾ ಹುಟ್ಟಿದೋಳು ಒಬ್ಬಳೆ | ನಾ ಬೆಳೆದೋಳು ಒಬ್ಬಳೆ | ನಮಗ್ಯಾರೂನೆ ಇಲ್ಲಪ್ಪ | ನನ್ನ (ನೆ) ಕಂದ್ಗಳಿರ' ೨

'ಕೆಟ್ಟಕೆಟ್ಟ ತಾಯವ್ವ | ನೀನ್ಯಾವ್ ಮಾತನಾಡುತೀಯೆ ? | ಸೋಗೆ ಬಲ್ಲಾಳರಾಯ| ವಜ್ರ ಬಲ್ಲಾಳರಾಯ| ನಮ್ ಸೋದರಮಾವಲ್ವೆ?| ನೀನ್ ಯಾವ್ ಮಾತಾಡುತೀಯೆ ?' ೩

'ನಿಮ್ ಸೋದರಮಾವನು | ಹಗಲೇ ಹಾಳಾಗಲೀಳು | ಹಳೆಯು ಬೀಡು ಪಟ್ಟಣ | ಬೆಂಕೀಲ್ ಬೀಳ್ಸಲೇಳು | ನಿಮ್ಮಪ್ಪನ ತಲೆಗಳು | ಅಲ್ಲೇ ಮಡಿದಾವಲ್ಲೊ ! | ನಿಮ್ಮಜ್ಜನ ತಲೆಗಳು | ಅಲ್ಲೆ ಮಡಿದಾವಲ್ಲೊ! | ಹಳೆಯುಬೀಡ್ ಹಾಳಾಗಲಿ |ನೀವ್ ಹೋಗ್ಬೇಡಿ ಕಂದ್ಗಳಿರ' ೪

ಎಟೂನೆ ಹೇಳಿದರೂ | ಕೇಳಲಿಲ್ಲ ಮಕ್ಕಳು | ರೊಟ್ಟಿಯ ಸುಟ್ಟಳು | ರೊಟ್ಟಿಳ್ಳು ತುಂಡಾದ್ವು | 'ರೊಟ್ಟಿಳ್ಳು ತುಂಡಾದ್ವು | ನೀವ್ ಹೋಗ್ಬೇಡಿ ಕಂದ್ಗಳಿರ'| 'ರೊಟ್ಟಿಳ್ಳು ತುಂಡಾದ್ರೆ| ಅದು ಒಂದು ಲೆಕ್ಕವೆ?'| ಬುತ್ತಿಯ ಕಟ್ಟಿದರೆ| ಬುತ್ತಿಳ್ಳು ತುಂಡಾದೊ| 'ಬುತ್ತಿಳ್ಳು ತುಂಡಾದೊ| ನೀವ್ ಹೋಗಬೇಡಿ ಕಂದ್ಗಳಿರ'| 'ಬುತ್ತಿಳ್ಳು ತುಂಡಾದ್ರೆ | ಅದು ಒಂದು ಲೆಕ್ಕವೆ ? ' ೫

ಲಕ್ಕಣನೂ ಈರಣನೂ | ತೇಜಿಯ ಹಿಡುಕೊಂಡು | ಬೇಗದಲ್ಲಿ ಕಟ್ಟಿದರು | ಹಾಲೂ ಬಾನುಂಡರು | ಅಂಗಿಯ ತೊಟ್ಟರು | ಪಾಗನೆ

* 'ಸುವ್ವಲಾಲೀ' ಎಂಬ ಪಲ್ಲವಿ ಮಾತು ಮಾತಿಗೂ ಬರುತ್ತಿರುತ್ತದೆ. ಇಲ್ಲಿಂದ ಮುಂದೆ ಪಲ್ಲವಿಯನ್ನು ಕೂಡಿಸಬೇಕಾದ ಎಡೆಗಳನ್ನು ಗೀಟುಹಾಕಿ ಸೂಚಿಸಿ ಗದ್ಯದಂತೆಯೇ ಬರೆದಿದೆ. ಮಾತುಗಳನ್ನು ಪ್ರತಿಯೊಂದು ಸಾಲೂ ಮೊದಲೆರಡು ಸಾಲುಗಳಷ್ಟೇ ಅಳವುಳ್ಳದ್ದಾಗುವ ಹಾಗೆ ಎಳೆದು ಎಳೆದು ಹೇಳುತ್ತಾರೆ.

ಸುತ್ಯಾರು| ಕತ್ತಿsಯ ಹಿಡಿದರು | ಬಾಗಿಲು ಬಿಟ್ ಹೊಳ್ಳುತಾರೆ | ಬಾಗಲ (ನೇ) ಗೌಳಿ | ಲೊಚಲೊಚನೆ ನುಡದವು | ' ನನ್ನ (ನೆ) ಕಂದ್ಗಳಿರ | ಅವ ಶಕುನವಾದವು | ಎಷ್ಟುಮಾತ್ರಕು ನೀವು | ಹೋಗಬೇಡ ಕಂದ್ಗಳಿರ' ೬

'ಗೌಳಿಯ ಶಕುನವು | ಅದು ಒಂದು ಲೆಕ್ಕವೆ' | ಅಣ್ಣನೂ ತಮ್ಮನೂ | ಹಟ್ಟಿಗ ಬಂದರು | ತೇಜಿಯ ಹಿಡದರು | ಊರು ಮುಂದಕೆ ಬಂದ್ರು | ಊರು ಬಾಗಿಲ ಗೌಳಿ | ಲೊಚಲೊಚನೆ ನುಡದವು | ' ನನ್ನ (ನೆ) ಕಂದ್ಗಳಿರ | ನೀವ್ ಹೋಗಬೇಡಿ ಮಕ್ಕಳಿರ | ಅವಶಕುನವಾದವು | ನಿಮ್ ಸೋದರ ಮಾವನು | ಹಗಲೇ ಹಾಳಾಗಲೇಳು | ನನ್ ಕಾಣ್ಸದ ಕಂದ್ಗಳಗೆ | ಹೇಳದೋರ ಮನೆಗೋಳು | ಹಾಳಾಗಿ ಹೋಗಲಿ' | ತಾಯವ್ವ ಅಳುತಾಳೆ | ಎಡದೇಯ ಕಣ್ಣೀರು | ಎಡದೇ ಸಾಗರವಲ್ಲೋ | ಬಲದೇಯ ಕಣ್ಣೀರು | ಬಲದೇ ಸಾಗರವಲ್ಲೋ ೭

'ಗೌಳೀ ಶಕುನಾವ್ಯಾಕೆ ?' | ಲಕ್ಕಣನೂ ಈರಣನೂ | ಮುಂದಕೆ ಬಂದರು | ಒಂಟು ಗಡಿಗೆ ಬಂದು | ಅವಶಕುನವಾಗುತಾವೆ | ಅಣ್ಣನೂ ತಮ್ಮನೂ | ಮತ್ತೆ ಮುಂದಕೆ ಬಂದ್ರು | ಸೌದೆ ಹೊರೆಯೇ ಸಿಕ್ಕಿ | ಅವಶಕುನವಾಗುತಾವೆ| ಲಕ್ಕಣನೂ ಈರಣನೂ| ಮತ್ತೆ ಮುಂದಕೆ ಬಂದ್ರು | ಗುದ್ದಲಿ ಮಂಕರಿ | ಬೇಗದಲ್ಲಿ ಬರುತಾವೆ | ಲಕ್ಕಣನೂ ಈರಣನೂ | ಮತ್ತೆ ಮುಂದಕೆ ಬಂದ್ರು | ಒಂಟು ಹಾರುsವಯ್ಯ | ಇದಿರಿಗೆ ಬರುತಾರೆ

ತಾಯಿ ಹರಿಯಲದೇವಿ | ದುಃಖsವ ಮಾಡುತಾಳೆ | ಭಾಳs ದುಃಖs ಮಾಡಿ | ' ಹಳೆಯಬೀಡೆಂಬೋದು | ಹಾಳಾಗಿ ಹೋಗಲಿ | ಎಷ್ಟುಮಾತ್ರಕು ನೀವು | ಹೋಗ ಬೇಡಿ ಕಂದ್ಗಳಿರ | ಏಟನು ಹೇಳಿದರೂ | ನೀವ್ ಕೇಳದೆ ಹೋಗುತೀರಿ| ಹೋಗಬೇಡಿ ಕಂದ್ಗಳಿರ' | ' ಹಳೆಯ ಬೀಡಿಸ್ತ್ಯಾರ | ದಿನವೂ ಒಪ್ಪತ್ತಿಗೆ | ನಾವ್ ನೋಡಿಕೊಂಡು ಬರುತೀವಿ | ನೀನರಮನೆಗೆ ಹೋಗವ್ವ ' ೮

ಲಕ್ಕಣನೂ ಈರಣನೂ | ತಾಯಿಯ ಕಳುವ್ಯಾರು | ಅರಮನೆಗೆ ಕಳುವ್ಯಾರು | ಹಡದ (ನೆ) ತಾಯವ್ನ | ಲಕ್ಕಣ್ಣನೂ ಇರಣನೂ | ತೇಜಿ

ಯನೇರ್ಯ್ಯಾರು | ಮತ್ತೆ ಮುಂದಕೆ ಬಂದ್ರು | ಏಳು ಹೆಡೇ ಸರ್ಪ | ಎದುರಿಗೆ ಬಂದಿತು | 'ಅಣ್ಣಯ್ಯ ಅಣ್ಣಯ್ಯ | ಅಲ್ ಬರುವ್ರೋದು ಎಂಥದೊ ? | ಏಳು ಹೆಡೇ ಸರ್ಪ | ನಮುಗಡ್ಡ ಬರುತೀತಲ್ಲೋ' | 'ಬಾರಪ್ಪ ನನ ತಮ್ಮಾ | ಮೂರು ತುಂಡು ಮಾಡಾಣ' | ಲಕ್ಕಣನೂ ಈರಣನೂ | ಕುದುರೆಯನಿಳಿದರು | ಹಾವನು ಕಡಿದರು | ತೇಜಿಯನೇರ್ಯ್ಯಾರು | ಮತ್ತೊಂದು ಯೋಜನವ | ಬೇಗದಲ್ಲಿ ಬರುತಾರೆ ೧೦

ಮಾರ್ಗ ದಾರೀಗ್ಬಂದ್ರು | ಅಲ್ಲೀನೆ ಸ್ವಾಮಿಗಳು | ಮೇಲೋಕ ದಿಂದಾವೆ | ಇಳಿದರು ಸ್ವಾಮಿಗಳು | ಅಣಗಜ್ಜಿ ಸಣಗಜ್ಜಿ | ಬೇಗದಲ್ಲಿ ಎದ್ದವ್ರು | 'ಯಾರಪ್ಪ ಕಂದ್ಗಳಿರ | ನೀವ್ ಹೋಗೋರು ದಾರೀಲಿ ? | ನಿಮ್ ತೇಜಿಗಳಿರುವವು | ಇಳಿದು ಬನ್ನಿರಪ್ಪ' | ಲಕ್ಕಣನೂ ಈರಣನೂ | ತೇಜೀನೆ ಇಳಿದರು | ಸ್ವಾಮಿಗಳ ಮುಂದಕೆ | ಬೇಗದಲಿ ಬಂದರು | ಅಣ್ಣನೂ ತಮ್ಮನೂ | ಕೈಯೆತ್ತಿ ಮುಗಿದರು | 'ಯಾವ ಸೀಮೇ ದೊರೆ ಗಳೋ ? | ನೀವ್ ಯಾವ ಸೀಮೆ ದೊರೆಮಕ್ಕಳೊ ? | ನಿಮ್ಮ ತಾಯ್ ಹೆಂಗೆ ಕಳುವ್ಯಾಳೊ ? | ನಿಮ್ ತಂದ್ಹೆಂಗೆ ಕಳುವ್ಯಾನೊ ? | ನೀವೆಲ್ಲಿ ಹೋದೀರೋ | ನನ್ನ (ನೆ) ಕಂದ್ಗಳಿರ ?' ೧೧

'ಹಳೆಯು ಬೀಡ್ ಪಟ್ಟಣಕೆ| ನಾವ್ ಹೋಗುತೀವಿ ಸ್ವಾಮ್ಗಳಿರ'| 'ಹಳೆಯು ಬಿಡ್ಪಟ್ಟಣ | ಹಾಳಾಗಿ ಹೋಗಲಿ | ನೀವ್ ಹೋಗ್ಬೇಡಿ ಮಕ್ಕಳಿರ' | ಸ್ವಾಮ್ಗೋಳು ಹೇಳಿದರು | ನನ ಕಜ್ಜಿಯ ಕೆರೀರೆಂದು | ಲಕ್ಕಣನೂ ಈರಣನೂ | ಮೈ ಸೇವೆ ಮಾಡುತಾರೆ | ಮೈ ಸೇವೆ ಮಾಡಲು | ಸ್ವಾಮಿಗೆ ಅರುವಾದು | 'ಹಸುಳೆ ಕಂದಪ್ಗಳಿರ | ನೀರು ಬಾವೀಗ್ ಹೋಗಿನ್ನು | ಕೈ ಕಾಲು ತೋಳೀರಪ್ಪ | ನೀವ್ ಹಾಲು ಬಾವೀಗ್ ಹೋಗಿ | ಹಾಲುಗಳ ಕುಡೀರಪ್ಪ | ಹಳೆಯು ಬೀಡೆಂಬೋದು | ಹಾಳಾಗಿ ಹೋಗಲಿ | ನೀವ್ ಹೋಗ್ಬೇಡಿ ಕಂದ್ಗಳಿರ | ನಿಮ್ ತೇಜಿಯ ತಿರುಗಿಸಿ | ನೀವ್ ಹಿಂದಕೆ ತಿರುಗಿರೊ' ೧೨

ಅಣ್ಣಾನೂ ತಮ್ಮಾನೂ । 'ನಾವ್ ಹಳೆಯ ಬೀಡಿಸ್ತಾರ । ನೋಡಿಕೊಂಡೆ ಬರಬೇಕು । ನಮುಗಪ್ಪಣೆ ಕೊಡಬೇಕು' । ಸ್ವಾಮಿಗೋಳು ಹೇಳುತಾರೆ । 'ನನ್ನ (ಸೆ) ಮಾತುಗಳ । ಮಿೀರಿ ನೀವ್ ಹೋಗುತೀರಿ । ಮಂಗಳವಾರೊಪ್ಪತ್ತು । ನೀವ್ ಸೂಲಕೆ ಬೀಳುತೀರಿ । ಹಳೆಯ ಬೀಡೆಂಬೋದು । ಹಾಳಾಗಿ ಹೋಗಲಿ । ನೀವ್ ಹೋಗಬೇಡಿ ಮಕ್ಕಳಿರ' ೧೩

'ನಾವ್ ಹೋಗಿ ಬರುತೀವಿ । ನಮುಗಪ್ಪಣೆ ಕೊಡಬೇಕು' ; ಲಕ್ಕಣನೂ ಈರಣನೂ । ಕೈಯೆತ್ತಿ ಮುಗಿದರು । ತೇಜೀಯ ಏರ್‍ಯಾರು । ಮೂರ್ ಹೆಜ್ಜೆ ಬಂದರು । ಮೂರು ಹೆಜ್ಜೆ ಬಂದು । ತಿರುಗಿ ನೋಡೂತಾರೆ । ತಿರುಗಿ ನೋಡೋ ಹೊತ್ಗೆ । ಅಲ್ಲಿ ಕುಂತಿದ್ದ ಸ್ವಾಮಿಗಳು । ಮಾಯವಾಗಿ ಹೋದರು ೧೪

ಅಣ್ಣಾನು ತಮ್ಮಾನು । ಮತ್ತೊಂದು ಯೋಜನವ । ಬೇಗದಲ್ಲಿ ಬಂದರು । ಲಕ್ಕಣನೂ ಈರಣನೂ । ಎಳ್ಡಾಳೂ ಬಂದರು । 'ಅಣ್ಣಯ್ಯ ಅಣ್ಣಯ್ಯ । ಭಾಳ ಹೊಟ್ಟಸ್ತವು' । ಒಂದ್ ಸುರಹೊನ್ನೆ ಮರದಡಿಯೆ । ತೇಜಿಯ ಕಟ್ಯಾರು । ಲಕ್ಕಣನೂ ಈರಣನೂ । ನೀರ್ ಬಾವೀಗ್ ಹೋದರು । ನೀರು ಬಾವೀಗ್ ಹೋಗಿ । ಕೈಕಾಲ ತೊಳೆದರು । ಹಾಲು ಬಾವೀಗ್ಬಂದರು । ಹಾಲು ಬಾವೀಗ್ಬಂದು । ಹಾಲುಗಳ ಕುಡಿದರು । ಅವರ ತಾಯಿ ಸುಟ್ಟಾ ರೊಟ್ಟಿ । ಅವರವ್ವ ಕಟ್ಟಿಟ್ಟ ಬುತ್ತಿ । ಬೇಗದಲ್ಲಿ ಬಿಚ್ಯಾರು । ಬೇಗದಲ್ಲಿ ಬಿಚ್ಚಿದರೆ । ರಕ್ತದ ಕೋಡಿ ಹರಿದವು । 'ಅಣ್ಣಯ್ಯ ಅಣ್ಣಯ್ಯ । ನಾವ್ ಕೆಟ್ಟೆವಲ್ಲೊ ನಮ್ಮಣ್ಣ । ತಾಯಿಯ ಮಾತುಗಳ । ನಾವ್ ಮೀರಿ ಬಂದೆವಲ್ಲೊ' । 'ಬಾರಪ್ಪ ನನ ತಮ್ಮ । ನೀನು ಹೆದರಬೇಡಾ ಕಂದ' । ಅಣ್ಣನೂ ತಮ್ಮನೂ । ಹಾಲು ಬಾವಿಗೆ ಬಂದ್ರು । ಹಾಲುಗಳ ಕುಡಿದರು । ಬುತ್ತೀನೂ ರೊಟ್ಟೀನೂ । ನೀರು ಬಾವಿಗ್ ಹಾಕಿದರು । ಅವರ ತೇಜಿಗಳಿರುವವು । ಬೇಗದಲ್ಲಿ ಏರಿದರು । ಮತ್ತೊಂದು ಯೋಜನವ । ಬೇಗದಲ್ಲಿ ಬಂದರು ೧೫

ಲಕ್ಕಣನೂ ಈರಣನೂ । ಮತ್ತೆಳ್ಡು ಯೋಜನವ । ಬೇಗದಲ್ಲಿ ಬಂದರು । 'ಅಣ್ಣಯ್ಯ ಅಣ್ಣಯ್ಯ । ಭಾಳ ಹೊಟ್ಟಸ್ತವು । ಹಾಲು ಬಾವಿ

ನೀರು ಬಾವಿ | ಸುರಹೊನ್ನೆ ಮರದಡಿಯ | ತೇಜಿಯ ಕಟ್ಟಿಕೊಂಡು |
ಇರುತೀನಿ ಅಣ್ಣಯ್ಯ| ಮುಂದೆ ಕಾಣೋ ಪಟ್ಣ | ಅಲ್ಲಿಗೆ ನೀನ್ ಹೋಗಿ |
ಸಣ್ಣಕ್ಕಿ ತಗರೀ ಒಡಕ್ಲು | ತಗೊಂಡು ಬಾ ಹೋಗು' | ಅಕ್ಕೀಯ
ತಕ್ಕೊಂಡು | ಮಡಕೆಯ ತಕ್ಕೊಂಡು | ಬಂದನು ಅಣ್ಣಯ್ಯ | ಕಲ್ಲನು
ಇಟ್ಟರು | ಒಲೆಗುಂಡನ್ ಹೂಡಿದರು | ಮಡಕೆಯನಿಟ್ಟರು | ಅಕ್ಕಿಯನ್
ಹಾಕ್ಯಾರು | ನೀರನು ಹುಯ್ದರು | ಸೌದೆಯ ಹಾಕಿದರು ! ಉಕ್ಕುಕ್ಕಿ
ಬರುತಲೆ | ರಕ್ತದ್ ಕೋಡಿ ಹರಿದವು | 'ನೋಡಿದೇನೋ ನಮ್ಮಣ್ಣ |
ಇಲ್ಲಿ ನೋಡೋ ಇಲ್ಲಿ | ತಾಯಿಯ ಮಾತುಗಳ | ನಾವ್ ಮಾರಿ ಬಂದೆ
ವಲ್ಲೋ' | ಅನ್ನದ ಮಡಕೆಯ | ನೀರಿಗೆ ಹಾಕ್ಯಾರು ೧೬

ಲಕ್ಕಣನೂ ಈರಣನೂ | ತೇಜಿಯನೇರಿದರು | ಎಳ್ಡಾಳೂ ಕೂತು
ಕೊಂಡು | ಮತ್ತೊಂದು ಯೋಜನವ | ಬೇಗದಲ್ಲಿ ಬರುತಾರಯ್ಯ |
ಲಕ್ಕಣನೂ ಈರಣನೂ | ಅಡುಗೂರಿಗ್ ಬಂದರು | ಕಲ್ಲುಕಟ್ಟೇ ತಾವ |
ತೇಜಿಯ ಕಟ್ಯಾರು | ತೇಜಿಯ ಕಟ್ಟಿಕೊಂಡು | ಕಲ್ಲುಕಟ್ಟೇ ಮೇಲೆ |
ಬೇಗದಲ್ಲಿ ಕುಂತರು ೧೭

ಅಡುಗೂರ ಅಜ್ಜವ್ವ | ಬೇಗದಲ್ಲಿ ಬಂದಳು | ಕಂದರ ಮುಖಗಳ |
ನೋಡಿದಳು ಅಜ್ಜವ್ವ | 'ನೀವ್ ಯಾವ ರಾಜ್ಯದರಸುಗಳೊ ? | ನೀವ್
ಯಾವ ಸೀಮೆ ದೊರೆಮಕ್ಕಳೊ ?| ನಿಮ್ ತಾಯ್ ಹೆಂಗೆ ಕಳುವಿದಳೊ? |
ನಿಮ್ ತಂದ್ಹೆಂಗೆ ಕಳುವ್ಯಾನೊ| ಹಸುಳೆ ಕಂದಯ್ಗಳಿರ | ನಿಮ್ಮ ಮುಖ
ವೆಲ್ಲ ಬಾಡ್ಯಾವೊ | ಬನ್ನಿರೊ ಮಕ್ಕಳಿರ | ಅರಮನೆಗೆ ಹೋಗಾನ' |
ಚಿನ್ನದ ಗಿಂಡೀಲಿ | ಪನ್ನೀರ ಕೊಟ್ಟಳು | ಲಕ್ಕಣನೂ ಈರಣನೂ |
ಕೈಕಾಲು ಮುಖಗಳ | ಇಬ್ಬರೂ ತೊಳೆದರು | ಅರಮನೆಗೆ ಬಂದರು |
ಚಿನ್ನದ ಹರಿವಾಣ | ಬೇಗದಲಿ ಬೆಳಗ್ಯಾಳು | ಹಾಲು ಅನ್ನಗಳ | ಊಟಕೆ
ಇಕ್ಯಾಳು | ಊಟವ ಉಂಡರು | ಕೈಯನು ತೊಳೆದರು | ಈಚೆಗೆ
ಬಂದರು | ವೀಳ್ಯಾವ ಮೆದ್ದರು | ಲಕ್ಕಣನೂ ಈರಣನೂ | ಕೈಯೆತ್ತಿ
ಮುಗಿದರು | 'ನಾವ್ ಹೋಗ್ತೀವಿ ಅಜ್ಜವ್ವ | ನಮಗಪ್ಪಣೆ ಕೊಡಬೇಕು'

‘ ಹಸುಳೆ ಕಂದಗಳಿರ। ನಿಮ್ಮಯ ಪಯಣಗಳು । ನೀವ್ ಎಲ್ಲಿಗೆ ಹೋದೀರೋ ?’ । ‘ ಕೇಳಿರಿ ಅಜ್ಜವ್ವ । ಹಳೆಯ ಬೀಡಿಸ್ತಾರ । ಎಪ್ಪತ್ತೇಳು ಬಸ್ತಿಗಳ। ನಾವ್ ನೋಡಿಕೊಂಡು ಬರುತೀವಿ । ನಮುಗಪ್ಪಣೆ ಕೊಡವ್ವ’। ಲಕ್ಕಣನೂ ಈರಣನೂ। ಕೈಯೆತ್ತಿ ಮುಗಿದರು। ‘ ಹಳೆಯ ಬೀಡೆಂಬೋದು। ಹಾಳಾಗಿ ಹೋಗಲಿ। ನೀವ್ ಹೋಗ್ಬೇಡಿ ಕಂದ್ಗಳಿರ। ಏಟೊಸೆ ಮಾತರಕೂ। ನೀವ್ ಹೋಗಬೇಡಿ ಕಂದ್ಗಳಿರ। ನಿಮ ತೇಜಿಯ ತಿರುಗಿಸಿ। ನಿಮ್ ಪಟ್ಣಕ್ಕೆ ಹೋಗಿರೊ। ತಾಟಗಿತ್ತಿ ತಿರುಮಲದೇವಿ। ಅವಳ್ ಕಂಡ್ರೆ ಬಿಡೋದಿಲ್ಲ। ನಿಮ್ಮ ಸೂಲಕೆ ಹಾಕಿಸುತಾಳೆ । ನೀವ್ ಹೋಗ್ಬೇಡಿ ಮಕ್ಕಳಿರ’। ಲಕ್ಕಣನೂ ಈರಣನೂ। ಕೇಳದೆ ಹೋದರು। ‘ ಅಜ್ಜವ್ವ ಅಜ್ಜವ್ವ। ಹಳೆಯ ಬೀಡಿಸ್ತಾರ। ದಿನವ್ರೂ ಒಪ್ಪತ್ತಿಗೆ। ನಾವ್ ನೋಡಿಕೊಂಡು ಬರುತೀವಿ । ನಮುಗಪ್ಪಣೆ ಕೊಡವ್ವ’ । ಅಜ್ಜವ್ವ ಏನೆಂದೋ। ‘ ಮಂಗ್ಯಾರೊಪ್ಪತ್ತಿಗೆ । ನೀವ್ ಸೂಲಕೆ ಬೀಳುತೀರಿ। ನೀವ್ ಹೋಗ್ಬೇಡಿ ಕಂದ್ಗಳಿರ’ ೧೯

ಏಟೊಸೆ ಹೇಳಿದರೂ। ಅವರು ಕೇಳಲಿಲ್ಲ। ತೇಜಿಯನೇರಿದರು। ಇಬ್ಬರೂ ಹೊರಟರು। ಅಣ್ಣನೂ ತಮ್ಮನೂ। ರಾಜಗೆರೇಗ್ಬರುತಾರೆ। ರಾಜಗೆರೇಗ್ಬಂದರು। ರಾಜಕಾರಣ ಮಾಡುತಾರೆ। ಅಲ್ಲಿಂದ ಹೊರಟರು। ಹುಲಿಕೆರೇಗ್ ಬಂದರು। ಹುಲಿಕೆರೆ ಬಾವಿಯ। ವಿಸ್ತಾರ ನೋಡಿದರು। ‘ ನಮ್ ಸೋದರ ಮಾವನ। ಪಟ್ಟಣ ನೋಡಪ್ಪ। ಹಳೆಯ ಬೀಡಿಸ್ತಾರ। ಚಂದದಿಂದ ನೋಡಪ್ಪ ’। ಸಿದ್ದಾಪುರಕೆ ಬಂದ್ರು। ಸಿದ್ದಾಪುರೆಂಬೋದು। ಶಿವದನ ಮಾರೋ ಕೇರಿ । ಲಕ್ಕಣನೂ ಈರಣನೂ। ಚಿನಾಯ್ಕನ್ಹಳ್ಳೀಗ್ಬಂದರು। ಚಿನಾಕನ ಹಳ್ಳ್ಯೆಂಬೋದು। ಚಿನ್ನಮಾರೋ ಕೇರಿ। ‘ ನಮ್ ಸೋದರ ಮಾವನ। ಐಶ್ವರ್ಯ ನೋಡಪ್ಪ ’। ಅಲ್ಲಿಂದ ಮುಂದಕೆ। ಕರಿಯ ಕಟ್ಹಳ್ಳಿಗೆ ಬಂದ್ರು। ‘ ಕರುಗಳ ಸಾಲುಗಳ। ಬೇಗದಿಂದ ನೋಡಪ್ಪ। ನಮ್ ಸೋದರ ಮಾವನ। ಪಟ್ಣವ ನೋಡಪ್ಪ ’। ಲಕ್ಕಣನೂ ಈರಣನೂ। ಹೂವಿನ ಹಳ್ಳೀಗೆ ಬಂದ್ರು। ಹೂವ್ನಹಳ್ಳ್ಯೆಂಬೋದು। ಹೂವ ಮಾರೋ ಕೇರಿ। ಹೂವನೆ ಕೊಂಡರು। ಜುಟ್ಟಿಗೆ ಸುತ್ತಿದರು। ಚಟಚಟ್ಟಿ

ಹಳ್ಳಿಗೆ| ಇಬ್ಬರೂ ಬಂದರು | ಚಟ ಚಟ್ಹಳ್ಳ್ಯೆಂಬೋದು | ಚಟ್ಟೀ ಮಾರೋ ಕೇರಿ | ರಾಮ್ನ ಹಳ್ಳಿಗೆ ಬಂದ್ರು | ರಾಮ್ನ ಹಳ್ಳಿಯೆಂಬೋದು | ನಾಮ ಮಾರೋ ಕೇರಿ| ಅಲ್ಲಿಂದ ಮುಂದಕೆ| ಕುಮರ್ಹಳ್ಳಿಗೆ ಬಂದ್ರು | ಕುಮರ್ಹಳ್ಳಿ ಯೆಂಬೋದು | ಕುಂಬಾ ಮಾರೋ ಕೇರಿ| ಅಲ್ಲಿಂದ ಮುಂದಕೆ | ಸೋಮೇನ್ಹಳ್ಳಿಗೆ ಬಂದ್ರು | ಸೋಮೆನ್ಹಳ್ಳ್ಯೆಂಬೋದು | ಗೋಣಿ ಮಾರೋ ಕೇರಿ | ಲಕ್ಕಣನೂ ಈರಣನೂ | * ಸೊಪ್ಪನ್ಹಳ್ಳಿಗೆ ಬಂದ್ರು | ಸೊಪ್ಪನ್ಹಳ್ಳ್ಯೆಂಬೋದು | ಸೊಪ್ಪು ಮಾರೋ ಕೇರಿ | ಅಣ್ಣನೂ ತಮ್ಮನೂ | ಒಂಟೆ ಮರಟೀಗ್ಬಂದ್ರು | 'ಆನೆ ಸಾಲ ನೋಡು | ಒಂಟೆ ಸಾಲ ನೋಡೋ' | ಹಳೆಯ ಬಿಡಿಸ್ತಾರ | ಚಂದದಿಂದ ನೋಡುತಾರೆ | ಹಳೆಯ ಬೀಡಿಸ್ತಾರ | 'ಎಪ್ಪತ್ತೇಳು ಬಸ್ತಿಗಳ | ಚಂದದಿಂದ ನೋಡಿ ಕೊಂಡು | ಅಣ್ಣನೂ ತಮ್ಮನೂ | ಕೆರೆಯೇರೀ ಮೇಲೆ| ತೇಜಿಯ
ಕಟ್ಯಾರು| ಎಳ್ಡಾಳೂ ಕುಂತರು ೨೦

ದನೀನ ಮಕ್ಕಳು| ಕರೀನ ಮಕ್ಕಳು | ಓಡೋಡಿ ಹೋಗುತಾರೆ | ಲಕ್ಕಣನೂ ಈರಣನೂ| ಎಳ್ಡಾಳೂ ನೋಡಿದರು | 'ಬನ್ನಿರೊ ಅಣದೀರ | ಪಟ್ಣಕ್ ಹೋಗಣ ಬನ್ನಿ' | 'ನಾವು ಬರುವೋದಿಲ್ಲ' | 'ಇಲ್ಲಿರುವಂಥ ಬಸವನು | ಬೇಗದಿಂದ ಎದ್ದೀತು | ಹಳೇ ಬೀಡ್ ಕೆರೇ ನೀರ | ಒಂದೇ ಗುಕ್ಕಿಗ್ ಕುಡಿದೀತು| ಹಳೇ ಬೀಡ್ ಗದ್ದೆ ಬಯಲ| ಒಂದೇ ಗುಕ್ಕಿಗ್ ಮೆಯ್ತಾವೆ| ಬನ್ನಿರೋ ಅಣ್ಣದಿರ| ನಿಮ್ಮ ತಿನ್ನುತಾವೆ'|' ಪಟ್ಣಕೆ ನಾವೀಗ | ಬರುವೋದೆ ಇಲ್ಲಪ್ಪ| ನಿಮ್ ಅರಮನೆಗೆ ಹೋಗಿರಿ' | ಲಕ್ಕಣನೂ ಈರಣನೂ | ಎಳ್ಡಾಳೂ ಕುಂತರು | ಅಲ್ಲಿದ್ದ ಬಸವನು | ಬೇಗನೆ ಎದ್ದಿತು | ಲಕ್ಕಣನೂ ಈರಣನೂ| ಬಸವನ ಹಿಡಿದರು | ಸಂಕೋಲೆ ಹಾಕ್ಯಾರು | ಒಂದೊಂದು ತೊಡೆಗಳ| ಬೇಗದಲ್ಲಿ ಮುರಿದರು। ಅಲ್ಲೇ
ಕುಂತಿದ್ದರು ೨೧

---

* ಇಲ್ಲಿ ಇದೇ ರೀತಿ ಈಗ ಹಳೆಯಬೀಡಿನ ಸುತ್ತಮುತ್ತ ಇರುವ ಹಳ್ಳಿಗಳನ್ನೆಲ್ಲ ಹೇಳುತ್ತಾರೆ. ಒಂದೊಂದೂ ಪಟ್ಟಣದೊಳಗೇ ಸೇರಿದ್ದ ಒಂದೊಂದು ಕೇರಿಯೆಂದು ಹೇಳುತ್ತಾರೆ.

ತಾಟ್ಗಿತ್ತಿ ತಿರುಮಲ್ದೇವೀ। ಗೌಡೀರ್ ನೀರಿಗ್ಬತ್ತಾರ್ರೆ। ಗೌಡೀರು ಬಂದರು। ಲಕ್ಕಣನ ಈರಣನ। ಚಂದದಿಂದ ನೋಡ್ಯಾರು। ಕೊಡಗಳ ಹೊತ್ತುಕೊಂಡು। ಅಂದದಿಂದ ನೋಡುತಾರೆ। ಓಡೋಡಿ ಬರುತಾರೆ। ಓಡೋಡಿ ಹೋದರು। 'ಕೇಳಿರಿ ಅಕ್ಕಯ್ಯ। ಒಂಟೀ ಮರಟೀ ಮೇಲೆ। ಒಂದು ಸೂರ್ಯ ಮೂಡುತೀತೆ। ಹಳೇಬೀಡ್ಕೆರೆ ಏರೀ ಮೇಲೆ। ಎರಡು ಸೂರ್ಯರಕ್ಕ। ನೋಡು ಹೋಗೆ ಅಕ್ಕಯ್ಯ' ೨೨

ಹಣ್ಣು ತೆಂಗಿನಕಾಯಿ। ಕರ್ಪೂರ ಸಾಂಬ್ರಾಣಿ। ಗಂಧವೆ ಚಂದ್ರುವೆ। ಎಲ್ಲವನು ತಕ್ಕೊಂಡು। ಅಕ್ಷತೆ ಅಂಗುನೂಲು। ಹೋಳಡಕೆ ಬಿಳಿಎಲೆ। ತಂಬ್ಟಾವೆ ಚಿಗಣಿಯು। ಸೆನೆಅಕ್ಕಿ ಸೆನೆಗಡಲೆ। ಎಲ್ಲವನು ತಕ್ಕೊಂಡು। ಗಂಗೆ ಪೂಜೋರ್ ಹಂಗೆ। ಇವರ್ ಹತ್ತಿರಕೆ ಬಂದಳು। 'ಗಂಗೆಯು ಪೂಜಾದು। ಗಂಧವ ಕೊಳ್ಳಿರಿ। ಅಕ್ಷತೆ ಕೊಳ್ಳಿರಿ। ಚಂದ್ರುವ ಕೊಳ್ಳಿರಿ। ಹೋಳಡಕೆ ಬಿಳಿ ಎಲೆ। ನೀವ್ ಕೊಳ್ಳಿರಿ ಕೊಳ್ಳಿರಿ'। ಲಕ್ಕಣನೂ ಈರಣನೂ। 'ನಮುಗೆ ಬೇಡ ತಾಯಿ। ನಮುಗೆ ಬೇಕಿಲ್ಲ। ನಮ್ ಸೋದರ ಮಾವಗೆ। ನೀನು ಹೆಂಡತಿ ಆಗೋಳು। ನಮುಗ್ ಹಡದ ತಾಯವ್ವ'। 'ಚಿಗಳಿಯು ಕೊಳ್ಳಿರೊ। ತಂಬ್ಟಾವ ಕೊಳ್ಳಿರೊ'। 'ಏನನು ಕೊಟ್ಟರು। ನಮುಗ್ ಬೇಡವೆ ತಾಯವ್ವ'। 'ನಾಳೆ ಮಂಗಳವಾರ। ಮದ್ಯಾನ್ದ ಒಳಗಿನ್ನು। ನಿಮ್ಮ ನಾನು ಬಿಡುವ್ವೋದಿಲ್ಲ। ನಿಮ್ಮ ಸೂಲಕೆ ಹಾಕಿಸೇನು। ನಿಮ್ಮನ್ ಹಸಿಸೂಲಕ್ ಬಿಸಿಸೂಲಕ್। ನಡಸದೆ ಬಿಟ್ಟರೆ। ತಿರುಮಲ ದೇವ್ಯಲ್ಲ' ೨೩

ಎದೆಯ ಮೇಗಳ ಸೆರಗ। ಬೇಗದಲ್ಲಿ ತೆಗೆದಳು। ಎದೆಗಳ ತಟ್ಯಾಳು। ಬೇಗದಿಂದ ಅರಮನೆಗೆ। ಬಂದಳು ತಿರುಮಲದೇವಿ। ಕದಗಳ ತೆಗೆದಳು। ತೊಟ್ಟ (ನೆ) ರವಿಕೆಯ। ಉಟ್ಟ (ನೆ) ಸೀರೆಯ। ತಟ್ಟನೆ ಹರಿದಳು। ಮೈಕೈಯನೆಲ್ಲವ। ಉಗುರಿಂದ ಗೆವರ್ಯಾಳೆ। ಪಟ್ಟೆ ಮಂಚದ ಮೇಲೆ। ಮಖಾಡೆ ಮಲಗ್ಯಾಳೆ ೨೪

ಸೋಗೇಬಲ್ಲಾಳರಾಯ। ಅಲ್ಲಿಗೆ ಬಂದನೆ। 'ನಾನು (ನೆ) ಬರುವಾಗ। ಚಿನ್ನದ ಗಿಂಡಿಲಿ । ಪನ್ನೀರ ಕೊಡುವ್ನೋಳು । ಪಾದವ ತೊಳೆವ್ನೋಳು। ಏಳು ಮಾರುದ್ದ ಮಂಡೇಲ್। ಪಾದವಸೊರಸೋಳು। ಪಟ್ಟೆ ಮಂಚದ ಮೇಲೆ। ಮಖಾಡೆ ಮಲಗ್ಯವ್ಳೆ। ಯಾವ (ನ) ಸೀಮೆಯ। ಕಾಯಿಲೆ ಬಂದ್ಯೆದಾವೆ?'।' ಏನು (ನೆ) ಹೇಳಲಿ। ನಾನ್ ಎಂತು (ನೆ) ಹೇಳಲಿ । ನಿನಗೂ (ನೆ) ಹೆಂಡತಿ। ನಿನ್ ಆಳಿಯುಗೂ ಹೆಂಡತಿ। ಕೆರೆಯ ಏರೀ ಮೇಲೆ । ಅವರೆರಡಾಳೂ ಕುಂತವ್ರೆ । ಉಟ್ಟ ಸೀರೇ ಹರಿದು। ತೊಟ್ಟ ರವಿಕೇ ಹರಿದು। ನನ ಮೈಯ ಮುಟ್ಟಿದರು । ಅವರ ಸೂಲಕ್ ಹಾಕಿಸಬೇಕು। ನಾಳೆ ಮದ್ಯಾಸ್ನೊಳಗೆ। ಅವರ ಸೂಲಕ್ಕೇರಿಸಬೇಕು' ೨೫

ಲಕ್ಕಣನ್ನೂ ಈರಣನ್ನೂ। ರಟ್ಟೆಗ್ ಹಗ್ಗಾ ಹಾಕಿ। ತರುವ್ನೋಕೆ ಬರುತಾರೆ। 'ನಿಮ್ಮಯ ಪಟ್ಣದಲ್ಲಿ। ನಾವ್ ಕಳತನ ಮಾಡಿಲ್ಲ। ನಿಮ್ ಪಟ್ಣವ ಬಾಚಿಲ್ಲ। ನಮ್ಮನು ಮುಟ್ಟಬೇಡಿ। ನೀವೆಲ್ಲಿಗೆ ಕರೆಯುತೀರಿ। ನಾವಲ್ಲಿಗೆ ಬರುತೀವಿ'। ಅಣ್ಣನ ಮುಖವನು। ತಮ್ಮನು ನೋಡುತಾನೆ। ತಮ್ಮನ ಮುಖವನು। ಅಣ್ಣನು ನೋಡುತಾನೆ। 'ಕಾಗದ ತಕ್ಕೊಳ್ಳೊ। ನಾವ್ ಕಾಗದ ಬರೆಯೋಣ'। ಅಣ್ಣನೂ ತಮ್ಮನೂ। ಓಲೆಯ ಹಿಡಿದರು। 'ನಾವ್ ತಂದೆಗೆ ಹುಟ್ಟಿದ್ರೆ। ನಾವ್ ತಾಯಿಗೆ ಬೆಳೆದಿದ್ರೆ। ನಾವು ಬರೆದ ಕಾಗದವು। ತಾಯಿ ಹರಿಯಲದೇವಿಗೆ। ಹೋಗಿ ತಲುಪಲಯ್ಯ'। ಬರೆದಂಥ ಕಾಗದವ। ಮೊಹರು ಮಾಡ್ಯಾರೆ। ಗಾಳೀಲಿ ಬಿಡುತಾರೆ ೨೬

ಇತ್ತ ಹರಿಯಲದೇವಿ। ಹೊಳೆಯ ನೀರಿಗೆ ಬಂದ್ಲು। ರನ್ನದ ಸಿಂಬಿಗಳು। ಚಿನ್ನದ ಕೊಡಗಳು। ಹೊಳೆಯ ನೀರಿಗೆ ಬಂದು। ಬಿಂದಿಗೆಯ ಮೊಗೆದಳೆ। ಕಾಗದ ಇರುವ್ನೋವು। ಗರ ಗರನೆ ಬರುತೀತೆ। ಗರಗರನೆ ಬಂದಂಥ। ಓಲೆಯ ನೂಕ್ಯಾಳೆ। ಎಂಥಾದೊ ಕಾಣೆ ಎಂದು। ಬಲದೆಯ ಕೈಯ್ಯೊಳಗೆ। ಕೊಡವನು ಹಿಡುಕೊಂಡು। ಬಂದಂಥ ಓಲೆಯ। ಕಾಗದ ತಕ್ಕೊಂಡು। ಹೊಳೆಯ ದಿಡಕೆ ಬಂದ್ಲು। ಮೊಹರ ಬಿಚ್ಚಿದಳು। 'ನಿನ್ನ (ನೆ) ಕಂಡ್ನೋಳು। ಮಂಗ್ಳಾರೊಪ್ಪತ್ತು। ಸೂಲಕೆ ಬೀಳುತಾರೆ' ೨೭

ಕಾಗದವ ಸೋಡಿಕೊಂಡು। ತಾಯವ್ವ ಅಳುತಾಳೆ। ಎಡದೆಯ ಕಣ್ಣೀರು। ಎಡದೇ ಸಾಗರವಲ್ಲೊ। ಬಲದೆಯ ಕಣ್ಣೀರು। ಬಲದೇ ಸಾಗರವಲ್ಲೊ। ತಾಯವ್ವ ಇರುವ್ವೋಳು। ಎದೆಯನೆ ಹಿಡುಕೊಂಡು। ಒಂದು ಗಾವುದ ದಾರಿ। ಎರಡೇ ದಾಪ ಮಾಡಿ। ಮೂರು....। ನಾಕು....। ಐದು....। ಆರು....। ಬಂದಳೆ ತಾಯವ್ವ। ಹಳೇಬೀಡ್ ಕೆರೆ ಒಳಗೆ। ನುಗ್ಯಾಳೆ ತಾಯವ್ವ। ಗಂಗವ್ವ ಬೇಗನೆ। ದಾರಿಯ ಬಿಟ್ಟಳೆ। ಹಳೆಯ ಬೀಡೂರೊಳಗೆ। ಹೊಕ್ಕಳೆ ತಾಯವ್ವ। ಒಕ್ಕಲಿಗರ ಕೇರಿಗೆ। ಹೊಕ್ಕಳೆ ತಾಯವ್ವ। ಒಕ್ಕಲಿಗರ ಕೇರೀಲಿ। ಕದಬಾಗಲ ಹಾಕ್ಯಾರೆ। ಕುಡಿನೀರ ಕೊಡದೆ। ಕದಗಳ ಹಾಕ್ಯಾರೆ। 'ಒಕ್ಕಲಿಗರ ಕೇರಿಗಳು। ತಟ್ಟನೆ ಹಾಳಾಗಲೇಳು'। ಉಪ್ಪಾರರ ಕೇರಿಗೆ। ಹೊಕ್ಕಳೆ ತಾಯವ್ವ। ಉಪ್ಪಾರರ ಕೇರೀಲಿ। ಬಾಕಲ ಹಾಕ್ಯಾರೆ। 'ಉಪ್ಪಾರರ ಕೇರಿಗಳು। ತಟ್ಟನೆ ಹಾಳಾಗಲೇಳು'। ಹಾರೋರ ಕೇರಿಗೆ। ಹೊಕ್ಕಳೆ ತಾಯವ್ವ। ಹಾರೋರ ಕೇರೀಲಿ। ಕದ ಬಾಕಲು ಹಾಕ್ಯಾವೆ। 'ಹಾರೋರ ಕೇರೆಂಬೋದು। ಬೆಂಕಿ ಬಿದ್ಹಾಳಾಗಲಿ'। ಅಲ್ಲಿಂದ ಮುಂದಕೆ। ಕುಂಬಾರರ ಕೇರಿಗೆ। ಹೋದಳು ತಾಯವ್ವ। ಕುಂಬಾರರ ಗುಂಡಣ್ಣ। ಬಕ್ರೀಲಿ ನೀರಿಟ್ಟು। ನೀರಿಟ್ಟು ಹೋಗಿದ್ದ। ನೀರನೆ ತಕ್ಕೊಂಡು। ತಾಯವ್ವ ಕುಡಿದಳು। ಕುಂಬಾರ ಕೇರಿಗಳು। ಊರಾಗಲೆಂದಳು। ಅಲ್ಲಿಂದ ತಾಯವ್ವ। ಬೇಗದಿಂದ ಹೋದಳು ೨೮

ಲಕ್ಕಣನ ಈರಣನ। ಸೂಲಕೇರಿಸುತಾರೆ ನೋಡಿ। ಮುತ್ತಿನ ಸೆರಗಾಗೆ। ಬೇಗದಿಂದ ಬೀಸ್ಯಾಳೆ। ಲಕ್ಕಣನೂ ಈರಣನೂ। ತಾಯಿಯ ನೋಡಿದರು। 'ನಮ್ ತಾಯಿ ಬರುತಾಳೆ। ನಮ್ ಸೂಲಕ್ ಹಾಕಬೇಡಿ'। ಮಾತಮಾತಾಡ್ತಿದ್ಹಂಗೆ। ತಾಯವ್ವ ಬಂದಳೆ। ಮಕ್ಕಳಿಗೆ ಬೀಳೋ ಶೂಲ। ತಾಯವ್ವ ಧರಿಸಿಕೊಂಡ್ಳು। ಲಕ್ಕಣನ್ನೂ ಈರಣನ್ನೂ। ತೊಡೇ ಮೇಲ್ ಕೂರಿಸಿಕೊಂಡ್ಳು। ತಾಯವ್ ಬಿದ್ದಾ ಶೂಲ। ಲಕ್ಕಣನ ಭುಜದಾಗೆ। ಬೇಗದಲ್ಲಿ ಹೊರಟಿತು ೨೯

ಅವರ (ನೆ) ಅಕ್ಕಯ್ಯ ಸುವ್ವಲಾಲೇ | ನೀರ ಹುಯ್ಕೋತಿದ್ಲು ಸುವ್ವಲಾಲೇ |
ಅವಳಿಗೆ ಹೇಳುತಾರೆ ಸುವ್ವಲಾಲೇ | ನಿನ್ನ (ನೆ) ತಮ್ಮದೀರು ,,
ಶೂಲಕೆ ಬಿದ್ರಂತೆ ,, | ಏಳು ಮಾರುದ್ದ ಮಂಡೇಲಿ ,,
ಮೈಯನು ಮುಚ್ಚಿಕೊಂಡು ,, | ಬಂದಳು ಬೇಗದಿಂದ ,,
ನೋಡಿದೇನೆ ತಾಯವ್ವ ,, | ಮರ್ಯಾದೆ ಕಮ್ಯಾದು ,,
ಲಕ್ಕಣನೂ ಈರಣನೂ ,, | ಜಾಡಿಸಿ ಒದ್ದರು ,,
ಅವರ (ನೆ) ಅಕ್ಕಯ್ಯ ,, | ಸೊಂಟ ಮುರಿದುಬಿದ್ದಳು ,,
ಲಕ್ಕಣನೂ ಈರಣಸೂ ಸುವ್ವಲಾಲೇ ೩೦

## ಟಿಪ್ಪೂಸುಲ್ತಾನನ ಬೀಳಿನ ಹಾಡು

೧

(ಇಂಗ್ಲಿಷ್ ಮೂಲದಿಂದ ಮರಳಿ ಕನ್ನಡಿಸಿದ್ದು ; ಮೂಲ. ಕನ್ನಡ)

ಎಷ್ಟು ಬೇಗ ಮಾಯವಾಯ್ತೊ ಸುಲ್ತಾನನ ದೌಲತ್ತು !
ಎಷ್ಟು ಬೇಗ ಓಡಿ ಹೋಯ್ತು ವೈಭವ ಸಂಪತ್ತು !
ಎಷ್ಟು ಬೇಗ ಶ್ರೀರಂಗಪಟ್ಣದ ಬಾವುಟ ಬಾನಾಡಿ
ಭಾಗ್ಯ ಶಿಖರದಿಂದಲುರುಳಿ ಬಿತ್ತೊ ಹುಡಿಗೂಡಿ ! ೧

ಅವನಾ ಗೆಲ್‌ಗುಡಿಸಾಲ್ ತಲೆಯೆತ್ತಿ ಗರ್ವದಿ ಹಾರಿತ್ತು
ಹಗೆಗಳ ಹೃದಯವ ನಡುಗಿಸಿ ಸೇನೆ ಬಿಂಕದಿ ನಡೆದಿತ್ತು
ಜಗದೀಶ್ವರ ತನ್ ಕೃಪೆಯ ಕಟಾಕ್ಷವ ಹಿಂದೆಗೆದಾ ಒಡನೆ
ಸಿರಿ ವೈಭವ ಜಯ ಸೇನೆಯಿವೆಲ್ಲ ಹೋಯಿತು ದಡಬಡನೆ ! ೨

ಧನ ಜನ ತುಂಬಿದ ಅವನಾ ರಾಜ್ಯ ದೆಸೆದೆಸೆಗಳ ತಬ್ಬಿ
ಕೈಗೊಳಗಾಗಿ ನೂರಾರ್ ಗಾವುದ ಹರಡಿತು ನೆರೆ ಹಬ್ಬಿ
ರಣ ಬಲ ಗರ್ವಿಗಳೆದೆದಲ್ಲಣಿಸುತ ಹುಬ್ಬನು ಗಂಟಿಕ್ಕಿ
ನೂರಾರ್ ದುರ್ಗಗಳೆಸೆದವು ಗಿರಿಗಿರಿ ಶಿಖರದಿ ಬಲು ಸೊಕ್ಕಿ ೩

ಕಾಳಗಕ್ಕೈದುವ ಅವನಾ ದಳಗಳೊ ಎಣಿಸಲ್ಕಳವಿಲ್ಲ
ಅವನಾ ಫ್ರೆಂಚರೊ ಕಳಕ್ಕೆ ನುಗ್ಗಲು ತವಕಿಸುವರು ಎಲ್ಲ
ಕುದುರೆಯ ದಂಡು ಬಿಂಕವ ಬೀರಿ ನುಗ್ಗಿತು ಮುನ್ನಡೆದು
ಎಲ್ಲಾ ಒಂದೇ ಒಂದು ಕ್ಷಣದಲಿ ಹೋಯಿತು ಹುಡಿವಡೆದು ೪

ಅವನಾ ಗಿರಿದುರ್ಗಗಳವು ಮೆರೆದವು ಕಗ್ಗಲ್ಮೈದಳೆದು
ಬೆಟ್ಟ ಬೆಟ್ಟದೊಳುಂಡೆ ಬಂಡೆಯು ಕಡೆದಿಡೆ ಬೆಳೆಬೆಳೆದು
ಅಲ್ಲೆಲ್ಲೆಲ್ಲೂ ಉರಿಬಾಣಗಳು ಹಾರಿತು ಹೊಳೆಯುತ್ತ
ಒಡನೆಯೆ ಸಿಡಿಲಿನ ಪಡೆಯುಬ್ಬರಿಸಲು ಘನದನಿಮೀರುತ್ತ ೫

ಬೆಳ್ಳಿಯ ಭರ್ಜಿಗಳಾಕಾಶದಲಿ ಹೊಳೆದವು ಕಳೆಯೆರಚಿ
ಗುಬುಟಿನ ಬಾವುಟಗಳು ಪಟಪಟಿಸುತಲೊಲೆದವು ನಲವೆರಚಿ
ಏನಿದ್ದೇನು? ಕಣ್ಣೆವೆ ಮುಚ್ಚಿ ಬಿಡುವಷ್ಟರಲೆಲ್ಲ
ರಣಸಾಧನದಾ ಗರ್ವವದೆಲ್ಲ ಬರಿದೆ ಹೋಯ್ತಲ್ಲ! ೬

ಕಾವೇರಿಯ ಹೊಳೆ ಮಂಗಳಜಲದಲಿ ಸುತ್ತಲು ಸುತ್ತಿರಲು
ಮೂರು ಸುತ್ತಿನ ಕೋಟೆಯ ಗೋಡೆ ಹೊರಹೊರ ಬಳಸಿರಲು
ಕೋಟೆಗಳೆರಡರ ನಡುವೆಡೆಯಲ್ಲಿ ಕಪ್ಪನೆ ಕಳೆಬೀರಿ
ಆಳದ ಅಗಳು ಹಬ್ಬಿತು ಹರಡಿ ಮನಸಿಗೆ ಭಯದೋರಿ ೭

ದಿಡ್ಡೀಬಾಗಿಲ ಮೇಲೆತ್ತರದಲಿ ಬಿರುದನಿ ಬೀರುತ್ತ
ದಿಗಿಲೆರಚುತ ಬಲ್‌ಬುರುಜುಗಳಿದ್ದವು ಸಜ್ಜನು ತೋರುತ್ತ
ಗೋಪುರವಿದ್ದವು ಮರ್ತ್ಯರ ಶಕ್ತಿಗೆ ಮೀರಿದವೆನೆ ಸುತ್ತ
ಎಲ್ಲಾ ಒಂದೇ ಒಂದು ಕ್ಷಣದಲಿ ಹಾಳಾಗಿ ಹೋಯ್ತುತ್ತ! ೮

ಗಡಗಡಗಡನೆದೆ ನಡುಗಿಸಿ ಕೂಗಿತು ಆನೆಯ ದಂಡು
ನಡುಗಿಸಿ ನೆಲವನು ನಡೆಯಿತು ಕುದುರೆಯ ದಳ ಸಂದಣಿಗೊಂಡು
ಚಿನ್ನದ ರನ್ನದ ಬಗೆಬಗೆ ರಾಶಿ ಭಂಡಾರವ ತುಂಬಿ
ನೆಲಮಾಳಿಗೆಗಳೊಳ್ ಬಲು ಬೆಳೆದಿತ್ತು ಶಾಂತಿಯು ಸೆರೆ ನಂಬಿ ೯

ಅವನೋ ಎಂದರೆ ನಾಯಕತಲೆಮಣಿ, ತಾನೆ ಮಹಾ ಶೂರ!
ಕಳದೊಳಗೆದುರಿಸಿ ನಿಲ್ಲುವರಿಲ್ಲ ಅವನೇ ರಣಧೀರ!
ಆದರದೇನು? ಕಣ್ಣೆವೆಮುಚ್ಚಿ ಬಿಡುವಷ್ಟರ ಒಳಗೆ
ಭೀತಿಯನರಿಯದ ನಮ್ಮಾ ವೀರನೆ ಮಡಿದುರುಳಿದ ಕೆಳಗೆ! ೧೦

ಎಣಿಕೆಗೆ ಮೀರಿದ ನವರತ್ನಗಳು ರಾಶಿರಾಶಿಯಲೊಟ್ಟಿ
ಥಳಥಳಿಸುತ್ತ ನಸುನಗೆಬೀರಿ ಮೆರೆದವು ಸಾಲ್ಗಟ್ಟಿ
ಭೂ ಮಂಡಲದಾ ಸಂಪತ್ತೆಲ್ಲ ಒಂದೂ ಬಿಡದಂತೆ
ಸುಂದರ ಮಂದಿರಗಳಲೊಟ್ಟಿದ್ದವು ನವನಿಧಿ ನೆಲೆಯಂತೆ ೧೧

ದುರ್ಲಭವೆನಿಸಿದ ಮಣಿಭೂಷಣಗಳು ಕೂಡಿದ್ದವು ನೆರೆದು
ಒಪ್ಪವ ಕೊಟ್ಟು ಪೆಟ್ಟಿಗೆಗಳಲಿಟ್ಟು ಹೆಮ್ಮೆಯೊಳ್ ನೆರೆ ಮೆರೆದು
ಆ ಕೆಲಸಕೆ ಬೆಲೆಕಟ್ಟಲುಬಹುದೇ? ಹಿಂದೆಂದೂ ಅದನು
ಕಿವಿ ಕೇಳಿಲ್ಲ, ಕಣ್ ಕಂಡಿಲ್ಲ, ಮಿಗೆ ಸೊಬಗಾ ಹದನು! ೧೨

ದೊಡ್ಡ ದೊಡ್ಡ ನೂರಾರು ಕಣಜಗಳವಿದ್ದವು ನಗರದಲಿ
ಹದಿನೆಂಟೂ ಬಗೆಯುಣಿಸಿನ ಧಾನ್ಯವನೊಳಕೊಂಡವುಗಳಲಿ
ಕಾರೊಡಲಾಯುಧಶಾಲೆಗಳಲ್ಲಿ ನೆಲಸಿದವಾದರದಿ
ರಣದ ಭಯಂಕರ ಶಸ್ತ್ರಸಮೂಹಗಳುರಿ ಬಾಯ್ ಪರಿಕರದಿ ೧೩

ಸಂಪತ್ತಿನಲೊ ಮೇಲೆನ್ನಿಸಿದಾ ರಣವೈಭವದಲ್ಲೊ
ಹೋಲಿಸಲವನೊಡನೊಳ್ಳೆಯದೃಷ್ಟದ ಮಿಗಿಲೇರಿಕೆಯಲ್ಲೊ
ಸೊಕ್ಕಿನ ದುರ್ಯೋಧನನೈಸಿರಿಯೆಷ್ಟಲ್ಪವೊ ಎನಿಸಿತ್ತು
ಎಲ್ಲಾ ಒಂದೇ ಕ್ಷಣದಲಿ ಕರಗಿ ಹಾಳಾಗಿ ಹೋಯಿತ್ತು ೧೪

## ಚರಿತ್ರೆಗೆ ಸಂಬಂಧಿಸಿದ ಪದಗಳು

ಅಳಿವಿಲ್ಲದ ವಿಖ್ಯಾತಿಯ ನಮ್ಮಾ ದೊರೆಯಿರೆ ಪೀಠದಲಿ
ಬೆಳ್ಳಿ ತುತೂರಿಗಳೆದೆಯನು ಹಿಗ್ಗಿಸಿ ಮೊಳಗಿದವೆದುರಿನಲಿ
ಜಯಜಯವೆನ್ನುತ ಬಿರುದುಗ್ಗಡಿಸಲು ವಂದಿಗಳೊಲವಿಂದ
ನೆಲ ನಡುಗಿಸಿದವು ನಗಾರಿ ನೌಬತ್ ಗುಡುಗಿನ ದನಿಯಿಂದ ೧೫

ಒಂದೊಂದಾಗಿ ಪರಿವಿಡಿಯಿಂದ ಎಂಟು ಕಾಲಗಳಲ್ಲಿ
ರಾಜರು ಹಲವರು ದಿಗ್ವಿಜಯದಲಿ ಕಪ್ಪವ ಕೈಕೊಂಡು
ಕೂಡಿಸಿದುರು ಸಿರಿಯಾತನ ಕೈಗೆ ಸೇರಿತು ಮುದಗೊಂಡು
ಆದರದೆಲ್ಲ ಹಾಳಾಯ್ತುಯ್ಯೋ, ಒಂದೇ ಕ್ಷಣದಲ್ಲಿ! ೧೬

ಎಷ್ಟು ಬೇಗ ನಿಷ್ಕರುಣಿ ಮೃತ್ಯು ತಾನೆರಗಿದನೋ ಮೇಲೆ!
ಎಷ್ಟು ಬೇಗನವ ಧ್ವಂಸ ಮಾಡಿದನೊ ಹೇಳುವರಾರ್ ಕೇಳೆ?
ಪರಲೋಕದಲಿ ಪುಣ್ಯಾಪಾಪ ವಿಚಾರಣೆ ನಡಸುತ್ತ
ಆ ಯಮಧರ್ಮನೆ ನುಡಿಯುವನಹುದುರಿಗಣ್ ಕಿಡಿಗೆದರುತ್ತ ೧೭

ನಡು ಮಧ್ಯಾಹ್ನವು ನಡುಗುತ ಬಂದಿತಮಂಗಳ ಕಳೆಬೀರಿ
ಸುಲ್ತಾನನ ಹೆಣವುರುಳಿತು ನೆಲದಲಿ ಮೌನವ ನೆರೆ ಸಾರಿ
ಆವನಾ ರಾಜ್ಯವೊ ಇರುಳಲಿ ಕಾಣುವ ಕನಸಿನ ರೀತಿಯಲಿ
ಪೂರ್ತಿಯಾಗಿ ಮಾಯವಾಯಿತು ಮಿಗಿಲಹ ಮೌನದಲಿ ೧೮

ಹೇಳು ಹೇಳು ಮತ್ತುರುಳುತಲಿದ್ದಾ ರಾಜ್ಯವ ರಕ್ಷಿಸಲು
ಯಾರು ಯಾರು ಮುನ್ನುಗ್ಗಿ ಕಾದಿದರು ಕೀರ್ತಿಯ ಮುಡಿ ಬರಲು?
ಸತ್ವಶಾಲಿಯೆಂದೆನಿಸಿದ ಮಹಿಮಾವಂತನು ಕಮ್ರುದ್ದೀನ್
ನಾಶವನರಿಯದ ಕೀರ್ತಿಯನೊಲಿಸಿದ ಶಿಸ್ತಿನ ಆ ಷೇರ್ ಖಾನ್ ೧೯

ನೆರವಿಗೆ ನಿಂತನು ಮಿಗೆ ವಿಖ್ಯಾತಿಯ ಮೀರ್ ಸಾದಕ ತಾನೂ
ಯಾವನಾದರೂ ಶೂರನಾಯಕನವನಿಗೆ ಸಮನೇನು?
ಮೀರಾ ಹುಸೇನ್ ಅವ ಹೆಂಗಳ ಕಂಗಳಿಗಾನಂದದ ನೆಲೆಯು
ಪುಷ್ಪಬಾಣನಹ ಮನ್ಮಥನಂದದಿ ಸೌಂದರ್ಯದ ಖನಿಯು ೨೦

ಸುಬ್ರಾಯಮೂರ್ತಿ, ಭೀಮ್ರಾವ್ ಬಬ್ಬರ್ ಜಂಗ್ ಬಿರುದಾತನಿಗೆ
ಕಾಳಗವೆಲ್ಲಿ ಕಠಿಣವೊ ಅಲ್ಲಿ ಅವರೇ ಮುನ್ನೆಲೆಗೆ
ನಿರ್ಭೀತಿಯ ಪೌರುಷದುತ್ಕರ್ಷಕೆ ಗುರುತವರಾ ಹೆಸರು
ದೇಶದೇಶದಲಿ ಹಬ್ಬಿಹುದವರ ರಣಪಂಡಿತವೆಸರು ! ೨೧

ಖಾನ್ ಜೆಹಾನ್ ಖಾನ್ ಏಕವೀರನವನೆಣೆ ಬೇರಾರಿಲ್ಲ
ಸೈಯದ್ ಸಾಹೇಬ್ ನೋಡವನೊಬ್ಬನೆ ದಂಡಿಗೆ ಸಮನೆಲ್ಲ
ಇಂದ್ರನ ಸಿಂಹಾಸನವನು ಬಳಸಿದ ದಿಕ್ಪಾಲಕರಲ್ಲಿ
ಆ ಪರಿಯನುಪಮ ವಿಕ್ರಮವನು ನೆರೆ ಕಾಣುವ ಬಗೆಯೆಲ್ಲಿ ? ೨೨

ಸದ್ಬ್ರಾಹ್ಮಣರ ವಂಶದಲುದಿಸಿದ ದಿವಾನ ಪೂರ್ಣಯ್ಯ
ಕದನ ನಿರ್ಭಯನಾತನಿಗೆಣೆಯನು ಕಾಣುವರಾರಯ್ಯ ?
ಮಂತ್ರಾಲೋಚನೆಯಲ್ಲಿ ಬೃಹಸ್ಪತಿಯೆನಬಹುದಾತನನು
ಎಂತು ಪಡೆಯಿತೋ ನಮ್ ಸುಲ್ತಾನನ ಪದವಿ ವಿನಾಶವನು ! ೨೩

ಆಹ ! ಬೇಗನದು ಓಡಿ ಹೋಯಿತು ! ಎಷ್ಟು ಅಲ್ಪವೋ ಆ
ರಂಜಕಕಣವದು ! ಗುಂಡನೆಷ್ಟು ಬೇಗೋಡಿಸಿತೋ ಹಾ ! ಹಾ !
ಹಿರಿ ಸಾಮ್ರಾಜ್ಯವನಾ ಕಿರುಕಣ ಧೂಳಿಗೆ ಬೀಳಿಸಿತಲ್ಲ !
ನಮ್ಮ ಶೂರ ಸುಲ್ತಾನನನೂ ಅದು ಧರೆಗುರುಳಿಸಿತಲ್ಲ ! ೨೪

ಸಿಂಹಾಸನವನು ಕಾಪಿಡಲೆಂದೆಡಬಲಗಳಲೊಗ್ಗೂಡಿ
ನಿಂದವನಾ ಕಲಿ ಮೊಗಲರು ಗರ್ವದಿ ನುಡಿವರು ದನಿಗೂಡಿ :
"ಎಂದಾದರು ಈ ಧರೆಯೊಬ್ಬೊಡೆಯನನೊಲಿದವಗಡಗಿತ್ತೆ ?
ನಿನ್ನದು, ನಿನ್ನದು ಸಾರ್ವಭೌಮ ಪದದಧಿಕಾರವು ಮತ್ತೆ" ೨೫

ದುರದೃಷ್ಟವನೊಂದಿನಿತೂ ಗಣಿಸದೆ ಮನದಲಿ ಭಯಪಡದೆ
ಅವನನು ಸುತ್ತಿ ಹಲವು ಸಾಲಿನಲಿ ಬಳಸಿದರೆಡೆಬಿಡದೆ
ಗಾಳಿಯಂತೆ ಗುರಿಯಿಲ್ಲದೆ ಅಲೆದಾ ಒಂದೆ ಒಂದು ಗುಂಡು
ಅವರೆಲ್ಲರ ನಡುವೆಯೆ ಸುಲ್ತಾನನ ಕೆಡವಿತು ಬೆಂಗೊಂಡು ೨೬

ಅಲ್ಲಾ ದೇವರ ಮಿಗೆ ವಿಖ್ಯಾತಿಯು ಬಲವೆಲ್ಲಡಗಿತ್ತು ?
ಭಗವತ್ಪ್ರೇರಣೆಯಿತ್ತೆಂದೆಯಲಾ, ಆ ಬಲವೆಲ್ಲಿತ್ತು ?
ದುರದೃಷ್ಟವ ನೆರೆ ಹೊತ್ತು ತಂದ ಆ ದುರ್ಮುಹೂರ್ತದಲ್ಲಿ
ನಿನ್ನ ಕುರಾನಿನ ಪಾವನ ಜ್ಯೋತಿ ಒಡಿಹೋದುದೆಲ್ಲಿ ? ೨೭

ವ್ಯರ್ಥವಾಯಿತಾ ಪ್ರಾರ್ಥನೆಯೆಲ್ಲ ಹಿರಿಯ ಹರಕೆಯೆಲ್ಲ
ರಂಗ ನಿನ್ನ ಕೊನೆಗಾಲವ ವಿಧಿಸಿದ ಕೂಡಲೆ ಬಯಲೆಲ್ಲ !
ಎಷ್ಟು ಸಣ್ಣ ಬಂದೂಕದ ಗುಂಡು ನಿನ್ನೆದೆಯನು ಕೊರೆಯಿತ್ತೋ !
ಎಷ್ಟು ಬೇಗ ನಿನ್ನಾ ಸಾಮ್ರಾಜ್ಯ ಹಾಳಾಗಿ ಹೋಯಿತ್ತೊ ! ೨೮

ರಾಜವಂಶಗಳಲುದಿಸಿದ ತನ್ನ ರಾಣಿಯರ ನಡುವೆ
ರಾಜ ಮನೋಹರ ರೂಪಿನ ದೊರೆಯುಡಿಯಿಟ್ಟನು ಸೊಗಸಿಂದ
ರಣವಿಕ್ರಮದುರು ಕಳೆಯೆರಚುವ ತನ್ನಾ ಮಕ್ಕಳ ನಡುವೆ
ರಣಧೀರನು ಸುಳಿದನು ನೆಲಕಿಳಿದ ದೇವತೆಯಾ ಬೆಡಗಿಂದ ೨೯

ಬಳಸಿರೆ ಮಿಗಿಲು ಪರಾಕ್ರಮದುನ್ನತ ಧೀರರ ಪರಿವಾರ
ಎಷ್ಟು ಬಿಂಕದಿ ಬೀಗಿತ್ತಾತನ ಸಾಮ್ರಾಜ್ಯಾಧಿಕಾರ !
ಕಮಲನಯನ ತನ್ನಾ ಮುಗುಳ್‌ನಗೆಯನು ಹಿಂದೆಗೆದ ಒಡನೆ
ಆ ಸಾಮ್ರಾಜ್ಯದ ವೈಭವವೆಲ್ಲ ಹೋಯಿತು ದಡಬಡನೆ ! ೩೦

ಕೊಡಗು ಕಡಪ ಮೇಣ್ ಕೊಂಕಣವೆಂಬಾ ನಾಡುಗಳಾಳುವರು,
ಒಡೆಯರು, ಹಳಮೆಯ ಕೀರ್ತಿಯ ಕುಡಿಗಳು, ನೃಪಕುಲಭೂಷಣರು,
ಕಂಡು ನಿನ್ನ ಕೈನೀಡಿದರಾಯುಧವೆಲ್ಲವ ಕೆಳಗಿಟ್ಟು
ಹುಬ್ಬುಗಂಟ ಕಂಡೊಡನೆಯೆ ಮಣಿದರು ನೆಲದಲಿ ಮೈಯಿಟ್ಟು! ೩೧

ಮಲೆನಾಡೊಡೆಯರು ಗರ್ವದ ಗಿರಿಗಳು ಎತ್ತಿದ ನಿಡುಮುಡಿಯ
ಕೆಳತಗ್ಗಿಸಿದರು ಕೇಳಲು ನಿನ್ನಾ ಶಾಸನಗಳ ನುಡಿಯ !
ನಿನ್ನೆದೆಯನು ಕೊರೆದೆಸೆದಾ ಏಟು ಅದೆಷ್ಟು ವಿಷಮವಾಯ್ತೊ !
ಎಷ್ಟು ಬೇಗ ನಿನ್ನಾ ಸಾಮ್ರಾಜ್ಯ ವಿನಾಶವಾಗಿ ಹೋಯ್ತೊ ! ೩೨

ಅಡಿಗೆರಗುತ ಭಯ ಭಕ್ತಿಯ ತೋರಲು ಭೂಮಂಡಲವೆಲ್ಲ
ಸಾಮ್ರಾಜ್ಯದ ಸಿಂಹಾಸನವೇರಿದ ದಿಲ್ಲೀಶ್ವರ ತಾನು,
ಕಟ್ಟಾವುದನೂ ಕಾಣದ ಗಣಿಸದ ಮರಾಟ ದಳವನೆಲ್ಲ
ತನ್ನೊಂದಾಳ್ಕೆಯ ಕಟ್ಟಲಿ ಕಟ್ಟಿದ ಶ್ರೀಮಂತನು ತಾನು, ೩೩

ಜನಸಂದಣಿಸಿದ ದೇಶದೇಶಗಳ ರಾಜರುಗಳು ಎಲ್ಲ,
ನಿನ್ನಾ ವಿಜಯ ಪತಾಕೆಯು ಮೇಲೆ ಹಾರುವುದನು ಕಂಡು
ಮಿಗೆ ದಿಗಿಲಿಂದ ತೊರೆದರು ತಮ್ಮ ನಾಡುಗಳವನೆಲ್ಲ !
ಎಷ್ಟು ಬೇಗ ನಿನ್ನಾ ಸಾಮ್ರಾಜ್ಯ ಹೋಯಿತೊ ಹಾಳ್ಗೊಂಡು ! ೩೪

ದೂರದಿಂದ ಸಿಂಗಳನಾಡಿಂದ ಬಂದರು ತಾವಿಲ್ಲಿ
ಆಂಗ್ಲ ಜಾತಿಯ ಜನರವರೋಡುವುದರಿಯರು ರಣದಲ್ಲಿ
ರಂಗನಾಥನ ಪಾವನ ನಾಮಕೆ ಭಯ ಭಕ್ತಿಯ ತೋರಿ
ಅವರ ರಣಧ್ವಜ ಗಗನದಿ ಹಾರಿತು ಕೆಂಪಿನ ಕಳೆ ಬೀರಿ ೩೫

ನಮ್ಮೆತ್ತರದ ಕೋಟೆ ಕೊತ್ತಳಗಳ ಕೆಡವಿದರವರ್ ನೆಲಕೆ
ತಮ್ಮ ವಿಜಯ ಭೇರಿಗಳ ಬಾಜಿಸಿದರು ನೆಗೆಯಲು ದನಿ ದಿವಕೆ
ಆಗಲೆ ಭೂಮಿಯ ಸೊಗವೊಂದೊಂದೂ ಕರಗಿ ಮಾಯವಾಯು !
ಆಗಲೆ ನಮ್ಮ ಶ್ರೀರಂಗಪಟ್ಟಣದ ವೈಭವ ಹಾಳಾಯ್ತು ! ೩೬

ಕದನ ಪಟುಗಳೆಂದೆನಿಸಿದ ನಾಯಕರೆಲ್ಲಿದ್ದರು ಅಂದು ?
ದಳವೆಲ್ಲಿದ್ದವು, ಭೀಕರ ಕಾಳಗವೊದಗಿ ಬಂದಂದು ?
ಆಹಾ ! ಕೃಷ್ಣನ ಕೃಪೆಯ ಕಟಾಕ್ಷವು ತೊಲಗಿದಾ ಒಡನೆ
ನಮ್ಮಾ ದೊರೆಯೂ ನಮ್ಮ ರಾಜ್ಯವೂ ಹೋದವು ದಡಬಡನೆ ! ೩೭

ಎಷ್ಟು ವ್ಯರ್ಥವಹ, ಸೊಕ್ಕಿನ ಮನುಜನ ಹೆಮ್ಮೆಯದೊಂ
ದೊಂದೂ !
ಎಷ್ಟು ಬರಿದೊ ಈ ಧರೆಯಧಿಕಾರದ ವೈಭವವೊಂದೊಂದೂ !
ಸೊಕ್ಕಿನ ಬಲ್‌ಗೋಟೆಗಳ್ ಮುರಿದೊರಗಿ ಸೇರುವುವೈ ಹುಡಿಗೆ
ಅವುಗಳ ಮೇಲೆ ದುರದೃಷ್ಟದ ಕರಿಮೋಡವಿಳಿಯೆ ಕಡೆಗೆ ! ೩೮

ಮುರಿದೊರಗುವುದೀ ಧರಣಿಯ ಸಂಪತ್ ಸಿಂಹಾಸನವೆಲ್ಲ !
ಮರ್ತ್ಯರ ವೈಭವ ನೆರಳ್, ಅದು ಕರಗುತ ಮರೆಯುಹುದುಳಿವಿಲ್ಲ !
ನಂಬಿಕೆಯಿಡಿ, ಇಡಿ, ವಿಷ್ಣುವಿನಾ ಪದಪಂಕಜವೊಂದರೊಳೇ !
ನಂಬಿಕೆಯಿಡಿ, ಇಡಿ, ನಾಶವನರಿಯದ ಅವನಾ ಶಕ್ತಿಯೊಳೇ ! ೩೯

ಅನುವಾದಕ : (ಕನ್ನಡಕ್ಕೆ) ಎಲ್. ಗುಂಡಪ್ಪ ೧೯೪೫

(ಇಂಗ್ಲಿಷಿಗೆ) John Leyden (ಸು) ೧೮೦೫

## ೨

(ಇಂಗ್ಲಿಷಿನಿಂದ ಕನ್ನಡಿಸಿದ್ದು : ಮೂಲ, ಹಿಂದೂಸ್ಥಾನಿ)

ಶ್ರೀರಂಗಪಟ್ಟಣದ ಭಾರಿಯ ಕೋಟೆಯ ಬಳಿಯಲ್ಲಿ
ಕ್ರೂರ ದುರ್ವಿಧಿ ಹಾರಿಸಿತಯ್ಯೋ ಗುಂಡೊಂದ !
ಬೀಳಲೆಬೇಕೊಡನೆಯೆ ನಾವೂ ನಮ್ ಸುಲ್ತಾನನ ಕೂಡೆ !
ಅಯ್ಯೋ ! ಸುಲ್ತಾನಾ—ನಮ್ಮ ಧೀರ ಸುಲ್ತಾನಾ ! ೧

ಹೆಣಗಳ ಬಣಬೆಯ ಮಧ್ಯದಿ ಸುಲ್ತಾನ್ ಕುಸಿದಂದು,
ಅವನೊಡನೆಯೆ ನಮ್ಮಾಸೆಗಳೆಲ್ಲಾ ಕುಸಿದಂದು,
ಅಂಜಿ ಹಿಂಜರಿದಾ ಬೊಡ್ಡೀಮಕ್ಕಳ ತಲೆಮೇಲೆ
ಮಣ್ಣು ಸುರಿಯಲಿ ! ಮಣ್ ಅವರೆಲ್ಲರ ತಲೆಮೇಲೆ ! ೨

ಅಜಿತನು ಸುಲ್ತಾನ್ ಮೆರೆದನು ಸಿಂಹಾಸನದಲ್ಲಿ
ಅದರ ಸತ್ವವ ಹೀರಿತು ಮೋಸ, ಬಲ್ ಮೋಸ
ಅವನೊಬ್ಬನಿಗೇ ದೊರೆತಿತ್ತಿದು, ಈ ಸೌಭಾಗ್ಯ :
ಅನ್ಯ ಪ್ರಭುವನು ಕಾಣದೆ ಬಿದ್ದನು ಸುಲ್ತಾನ ! ೩


ಹಾಳಾಗಿ ಹೋಗ, ಯೆಸ್ಲೀದನ ಆ ದ್ರೋಹಿ ಸಂತಾನ!
ನಂಬಿಕೆಗೇಡಿ! ಮಾಡಿದವನವನೇ, ಆ ನೀಚ!
ಇಟ್ಟಿರಲವನಿಗೆ ಯುಗಯುಗಗಳ ಬಲು ಶಾಪ!
ಅವನಪರಾಧಕೆ ಬಲಿಬಿದ್ದನು ನಮ್ಮ ಸುಲ್ತಾನ! ೪

ನಮ್ಮಹದಾಸೆಗಳೆಲ್ಲ ಅವನೇ ಆಗಿದ್ದ!
ನೆಲದಾ ಮಣ್ಣೀ ಅವನಿಗೆ ಸಿಂಹಾಸನವೀಗ!
ಅಯ್ಯೋ! ನಮ್ಮೆಲ್ಲರ ಬಾಯ್ಗೂ ಬಿತ್ತು ಹಿಡಿ ಮಣ್ಣು
ವೀರರ ವೀರನು ನಮ್ಮ ಸುಲ್ತಾನನು ಬಿದ್ದಾಗ! ೫

ಅನುವಾದಕ : (ಕನ್ನಡಕ್ಕೆ) ಎಲ್. ಗುಂಡಪ್ಪ
(ಇಂಗ್ಲಿಷಿಗೆ) John Leyden

# ತೆನೆ ೭

## ಬ್ರಾಹ್ಮಣರ ಹಾಡುಗಳು



## ಪರಿಚಯ

ಇದುವರೆಗೆ 'ಜನಪದ ಸಾಹಿತ್ಯ'ವನ್ನು ಸಂಗ್ರಹಿಸಿರುವವರು ಬ್ರಾಹ್ಮಣರು ಹೇಳುವ ಹಾಡುಗಳಿಗೆ ತಕ್ಕಷ್ಟು ಗಮನಕೊಟ್ಟಂತೆ ಕಾಣುವುದಿಲ್ಲ. ಬ್ರಾಹ್ಮಣರು ವಿದ್ಯೆಯಲ್ಲಿಯೂ ಸಂಸ್ಕೃತಿಯಲ್ಲಿಯೂ ಉಳಿದವರಿಗಿಂತ ಮೇಲ್ಮಟ್ಟದಲ್ಲಿರುವವರು. ಇದು ಇವರ ಹಾಡುಗಳಲ್ಲೂ ತೋರಿಬರುತ್ತದೆ. ಈ ಹಾಡುಗಳು ಪ್ರೌಢವಾದ ಕಾವ್ಯಮಾರ್ಗಕ್ಕೆ ಹೆಚ್ಚು ಹೆಚ್ಚು ಹತ್ತಿರವಾಗಿವೆ. ರಾಮಾಯಣ, ಭಾರತ, ಭಾಗವತ ಮತ್ತು ಇತರ ಪುರಾಣ ಕಥೆಗಳಿಗೆ ಸಂಬಂಧಪಟ್ಟ ಹಾಡುಗಳು ಲೆಕ್ಕವಿಲ್ಲದಷ್ಟಿವೆ. ವೇದಾಂತ ತತ್ತ್ವಗಳನ್ನು ಸಾರುವ ಹಾಡುಗಳೂ ಬೇಕಾದಷ್ಟಿವೆ. ಪುರಂದರದಾಸರೇ ಮೊದಲಾದ ಭಕ್ತಶ್ರೇಷ್ಠರ ಕೃತಿಗಳಂತೂ ಸರ್ವಸಾಮಾನ್ಯವಾಗಿವೆ. ಇಂಥ ಹಾಡುಗಳೆಲ್ಲ ಸಾಮಾನ್ಯವಾಗಿ ವಿದ್ವಾಂಸರೂ ಜ್ಞಾನಿಗಳೂ ರಚಿಸಿದವು. ಇವುಗಳಲ್ಲಿ—ಮಾತು, ಶೈಲಿ, ವಿಷಯ, ಅಲಂಕಾರ, ಎಲ್ಲದರಲ್ಲಿಯೂ—ಸಂಸ್ಕೃತದ ಪ್ರಭಾವ ಸ್ಪಷ್ಟವಾಗಿ ಕಾಣುತ್ತದೆ. ಒಂದು ವೇಳೆ ಇದೇ ಕಾರಣವಾಗಿದ್ದರೂ ಇರಬಹುದು ಈ ಹಾಡುಗಳನ್ನು ಜನತೆಯ ಸಾಹಿತ್ಯದಲ್ಲಿ ಸೇರಿಸದೆ ಇರುವುದಕ್ಕೆ.

ಈ ಹಾಡುಗಳು ಸ್ವಲ್ಪ ಮೇಲ್ಮಟ್ಟದವೆಂಬ ಕಾರಣದಿಂದ ಇವನ್ನು ನಾಡಪದಗಳ ಜೊತೆಗೆ ಸೇರಿಸದೆ ಬಿಟ್ಟುಬಿಡುವುದು ಸರಿಯಾಗಿ ಕಾಣುವುದಿಲ್ಲ. ಅಲ್ಲದೆ ಬ್ರಾಹ್ಮಣರ ಹಾಡುಗಳಲ್ಲಿ ಎಲ್ಲವೂ ಹೀಗೆ ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿ ಪ್ರೌಢವಾಗಿಲ್ಲ. ಸಾಧಾರಣ ರೀತಿಯವೂ ಇವೆ. ಕನ್ನಡದ ಗಾಯತ್ರಿಯೆನ್ನಬಹುದಾದ ತ್ರಿಪದಿ ಛಂದಸ್ಸಿನ ಹಾಡುಗಳಿಗೂ ಕೊರತೆಯಿಲ್ಲ. ತೊಟ್ಟಿಲು ತೂಗುವ ಹಾಡು ಮತ್ತು ಹಳೆಯ ಸೋಬಾನೆ ಹಾಡುಗಳಲ್ಲಿ ಬಹು ಪಾಲಿನವು ತ್ರಿಪದಿಗಳು. ಭಾಷಾ ಶೈಲಿಗಳಲ್ಲಿ ಅವಕ್ಕೂ ಒಕ್ಕಲಿಗರ ಹಾಡುಗಳಿಗೂ ಏನೂ ವ್ಯತ್ಯಾಸ ಕಾಣುವುದಿಲ್ಲ. ಈ ಸಂಗ್ರಹದಲ್ಲಿ ಕೊಟ್ಟಿರುವ 'ಗೌರಮ್ಮನಿಗೆ ಸೋಗಿಲಕ್ಕಿ ಇಕ್ಕಿದ ಹಾಡ'ನ್ನೂ ಬಸವನ ಅಷ್ಟಮಿಯ ಹಾಡುಗಳನ್ನೂ ನೋಡಿದರೆ ಈ ಸಂಗತಿ

ಸ್ಪಷ್ಟವಾಗುತ್ತದೆ. ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಸಾಂಗತ್ಯ, ರಗಳೆ ಮೊದಲಾದ ಅಚ್ಚಕನ್ನಡ ಛಂದಸ್ಸಿನ ಹಾಡುಗಳೇ ಎಲ್ಲವೂ. ಸಂಸ್ಕೃತ ಛಂದಸ್ಸು ಕಾವ್ಯ ಪ್ರಪಂಚದಲ್ಲಿ ಸರ್ವಾಧಿಕಾರ ನಡಸಿದಂತೆ ಇಲ್ಲಿ ತಾನೇತಾನಾಗಿ ಮೆರೆಯಲು ಅವಕಾಶವಿಲ್ಲ. ಈ ಹಾಡುಗಳ ಜೊತೆಗೆ ಬಗೆಬಗೆಯ ಛಂದಸ್ಸುಗಳನ್ನೊಳಗೊಂಡ ಗದ್ಯಪದ್ಯರೂಪವಾದ ಯಕ್ಷಗಾನದ ಕಥೆಗಳೂ ಹಲವಿವೆ. ಇವುಗಳಲ್ಲೆಲ್ಲ ಸಂಸ್ಕೃತದ ಮಾತು ಗಳು ಹೆಚ್ಚಾಗಿ ಬೆರೆತಿರುವುದು ನಿಜವಾದರೂ ಭಾಷೆ ವಿದ್ಯಾವಂತರಲ್ಲದ ಸಾಧಾರಣ ಜನರಿಗೂ ತಿಳಿಯುವಂತೆ ಸರಳವಾಗಿದೆ; ಕ್ಲಿಷ್ಟವಾಗಿಲ್ಲ.

ಬ್ರಾಹ್ಮಣರಲ್ಲಿ ಗಂಡಸರು ಮಂತ್ರ ಸ್ತೋತ್ರಗಳನ್ನಲ್ಲದೆ ಮತ್ತೆ ಯಾವ ಪದಗಳನ್ನೂ ಹೇಳುವುದಿಲ್ಲ. ಸಂಗೀತಗಾರರು ಹಾಡುವ ಗೀತಶ್ಲೋಕ ಗಳನ್ನೂ ಕಾವ್ಯ ಓದಿದವರು ಹೇಳುವ ಗದ್ಯಪದ್ಯಗಳನ್ನೂ ಈ ಪದಗಳ ಗುಂಪಿಗೆ ಸೇರಿಸಲಾಗುವುದಿಲ್ಲ. ನಾನು ಚಿಕ್ಕವನಾಗಿದ್ದಾಗ ಹಳೆಯ ಕಾಲದ ಮುದುಕರು ಕೆಲವರು 'ಚಿದಾನಂದರ ಕೊರಡು'* ಎಂಬ ಹೆಸರಿ ನಿಂದ

"ಬ್ರಹ್ಮನು ಮಾಡಿದ ಪ್ರತಿಮೆಗಳೆಲ್ಲಾ ದೇವರು ತಾನ್ ಹ್ಯಾಗಲ್ಲ ?
ಸುಮ್ಮನೆ ಪೂಜಿಸುವಿರಿ ನೀವ್ ಪಾಂಚಾಲ್ಮಾಡಿದ ಬೊಂಬೆಯನೆಲ್ಲ.
ಬ್ರಹ್ಮನು ನೀಚನು ಪಾಂಚಾಲುತ್ತಮ ತಿಳಿಯಿತು ನಿಮ್ಮಯ ಜ್ಞಾನ
ಬ್ರಹ್ಮ ಚಿದಾನಂದ ಸದ್ಗುರು ಆತ್ಮನ ಕಾಣುವಿರೀ ನೀವೇನ ?"

ಎಂಬಿವೇ ಮೊದಲಾದ ಕೆಲವು ಕನ್ನಡ ಪದ್ಯಗಳನ್ನು ಬಹಳ ಹುರುಡಿನಿಂದ ಹೇಳುತ್ತಿದ್ದರು. ಆದರೆ ಇದು ಕೂಡ ಪದ್ಧತಿಯಾಗಿ ನಿಲ್ಲಲಿಲ್ಲ. ಎಲ್ಲ ಕಡೆಯೂ 'ಚಿದಾನಂದರ ಕೊರಡ'ನ್ನು ಈ ರೀತಿ ಹೇಳುವುದು ವಾಡಿಕೆ ಯಿದ್ದಂತೆಯೂ ತೋರುವುದಿಲ್ಲ. ಆದ್ದರಿಂದ ಬ್ರಾಹ್ಮಣರಲ್ಲಿ ಗಂಡಸರ ಪದ ಇಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

---

* ಈ ಚಿದಾನಂದರ ಪದಗಳನ್ನು ಅಧ್ಯಾತ್ಮ ಪ್ರಕಾಶದ ಶ್ರೀಮಾನ್ ವೈ. ಸುಬ್ಬ ರಾಯರು ಪ್ರಕಟಿಸಿದ್ದಾರೆ.

ಹೆಂಗಸರು ಬೆಳಗ್ಗೆ ಎದ್ದು ಮುಖ ತೊಳೆದು ಉದಯ ರಾಗ ಹೇಳುತ್ತ ಮನೆಗೆಲಸಕ್ಕೆ ತೊಡಗುತ್ತಾರೆ. ಉದಯರಾಗದ ಹಾಡುಗಳಲ್ಲಿ ಗಣಪತಿ, ಶಿವ, ಪಾರ್ವತಿ, ಬ್ರಹ್ಮ, ವಿಷ್ಣು, ಲಕ್ಷ್ಮಿ, ಸರಸ್ವತಿ, ಸೂರ್ಯ ನಾರಾಯಣ ಮೊದಲಾದ ದೇವತೆಗಳ ಸ್ತೋತ್ರಗಳೂ, ಗೋವಿನ ಮತ್ತು ತುಳಸಿಯ ಮಹಾತ್ಮೆಗಳೂ, ಶ್ರೀಕೃಷ್ಣನ ಬಾಲಲೀಲೆಗಳೂ, ದ್ರೌಪದೀ ಮಾನಸಂರಕ್ಷಣೆ, ಗಜೇಂದ್ರಮೋಕ್ಷ, ಧ್ರುವಚರಿತ್ರೆ, ಪ್ರಹ್ಲಾದ ಚರಿತ್ರೆ, ಅನಸೂಯಾ ಚರಿತ್ರೆ ಮೊದಲಾದ ಕಥೆಗಳೂ ಬರುತ್ತವೆ. ಉದಯ ರಾಗಕ್ಕೆ ಅಳವಡಿಸಿರುವುದರ ಜೊತೆಗೆ ಈ ಕಥೆಗಳನ್ನೇ ಪ್ರತ್ಯೇಕವಾಗಿ ವಿಸ್ತಾರವಾಗಿ ವರ್ಣಿಸಿರುವ ಮೂರು ನಾಲ್ಕು ರೀತಿಯ ಹಾಡುಗಳೂ ಇವೆ. ರಾಮಾಯಣ ಭಾರತ, ಭಾಗವತಗಳ ಹಲವು ಸನ್ನಿವೇಶಗಳನ್ನು ಕುರಿತ ಹಾಡುಗಳಿವೆ. ರಾಮಾಯಣವನ್ನೇ ಪೂರ್ತಿಯಾಗಿ ಚಿತ್ರಿಸುವವಿವೆ. ಸಾವಿತ್ರೀ ಚರಿತ್ರೆ, ನಳಚರಿತ್ರೆ, ಹರಿಶ್ಚಂದ್ರೋಪಾಖ್ಯಾನ, ಸುದಾಮನ ಕಥೆ, ಮೊದಲಾದ ಪುರಾಣ ಕಥೆಗಳನ್ನೂ, ಪುರಾಣಗಳಲ್ಲಿ ಎಲ್ಲಿಯೂ ಕಾಣದ 'ಉದ್ದಾಳೀಕನ ಕಥೆ' ಮೊದಲಾದ ಅಪೂರ್ವ ಕಥೆಗಳನ್ನೂ ಹೇಳುವ ಹಾಡುಗಳಿವೆ. ಇವುಗಳ ಜೊತೆಗೆ ಮಂಗಳ ಗೌರಿಯ ಕಥೆ, ದಿಮಾಸೆಯ ಕಥೆ, ಮೊದಲಾದ ವ್ರತಕಥೆಗಳು ಬೇಕಾದಷ್ಟಿವೆ. 'ಬನದ ಹುಣ್ಣಿವೆ, ಮಾನವಮಿ' ಮೊದಲಾದ ದೇವಕಾರ್ಯಕ್ಕೆ ಸಂಬಂಧಿಸಿದ ಮತ್ತು ಮದುವೆ ಮುಂಜಿ ಮೊದಲಾದ ಸಂಸ್ಕಾರಗಳಿಗೆ ಸಂಬಂಧಿಸಿದ ಹಾಡುಗಳು ಬೇರೆ. ಗೌರಿಯ ಪೂಜೆ ತುಳಸಿಯ ಪೂಜೆ ಮುಂತಾದ ದೇವರ ಪೂಜೆಯ ಹಾಡುಗಳು, ಆರತಿ ಅಕ್ಷತೆಯ ಹಾಡುಗಳು, ಸ್ತೋತ್ರಗಳು, ಪ್ರಾರ್ಥನೆಗಳು, ಸೀತಾ ಕಲ್ಯಾಣ, ಗಿರಿಜಾ ಕಲ್ಯಾಣ ಮೊದಲಾದ ಕಲ್ಯಾಣಗಳು ಬೇರೆ. ಈ ಹಾಡುಗಳನ್ನು ಮನೆಗೆಲಸ ಮಾಡುವಾಗಲೆಲ್ಲ ಹಾಡಿಕೊಳ್ಳುತ್ತಲೇ ಇರುತ್ತಾರೆ. ಮಡಿಯಲ್ಲಿ ಕೆಲವು, ಮಡಿಯುಡುವ ಮೊದಲೇ ಕೆಲವು, ಊಟಮಾಡಿ ವಿರಾಮವಾಗಿ ಕೂತಾಗ ಕೆಲವು, ಅಂತೂ ಸದಾ ಒಂದಲ್ಲ ಒಂದು ಹಾಡು ಅವರ ಬಾಯಲ್ಲಿ ನುಡಿಯುತ್ತಲೇ ಇರುತ್ತದೆ. ಇವನ್ನೆಲ್ಲ ಸಂಗ್ರಹಿಸುವುದಕ್ಕೆ

ಇಂಥ ಹತ್ತಿಪ್ಪತ್ತು ಪುಸ್ತಕಗಳಾದರೂ ಸಾಲದು, ಈಗ ಅಂಥ ಸಾಹಸಕ್ಕೆ ಕೈ ಹಾಕದೆ, ಹಿಂದೆ ಕೊಟ್ಟಿರುವ ಒಕ್ಕಲಿಗರ ಹಾಡುಗಳಿಗೆ ಸಾಮ್ಯವಿರುವ, ಅವುಗಳೊಡನೆ ಹೋಲಿಸಬಹುದಾದ ಹಾಡುಗಳಲ್ಲಿ ಒಂದೆರಡನ್ನು ಮಾತ್ರ ಕೊಟ್ಟಿದೆ.

ಗಿರಿಜಾ ಕಲ್ಯಾಣಕ್ಕೆ ಸಂಬಂಧಿಸಿದ ಎರಡು ಸಂಗ್ರಹಗಳನ್ನು ಕೊಟ್ಟಿದೆ. ಮೊದಲನೆಯದಾದ 'ನಂಜುಂಡ ಜೋಗಿ' ಸ್ವಸಂಪೂರ್ಣ ವಾದ ಒಂದು ಖಂಡಕಾವ್ಯದಂತಿದೆ. ಶಿವ ಜೋಗಿಯ ವೇಷದಿಂದ ಹೋಗಿ ಪಾರ್ವತಿಗೆ ಬೂದಿಯೆರಚಿ ಬರುವುದು, ಅವಳು ಆ ಬೂದಿಯ ಮಹಿಮೆಯಿಂದ ಶಿವನಲ್ಲಿ ಮನಸ್ಸು ನೆಟ್ಟು ಮನೆಬಿಟ್ಟು ಹೊರಡುವುದು, ದೇಶದೇಶ ತಿರುಗಿ ಶಿವನನ್ನು ಹುಡುಕಿಕೊಂಡು ಬಂದು ಅವನನ್ನು ವರಿಸಿ ಅವನೊಡನೆ ನಂಜನಗೂಡಿನಲ್ಲಿ ನಿಲ್ಲುವುದು—ಇಷ್ಟು ಇದರ ಕಥೆ. ಪುಟ್ಟ ಪುಟ್ಟ ಪದ್ಯಗಳು, ಅಪೂರ್ವ ಛಂದಸ್ಸು; ತಿಳಿಯಾದ ಮಾತು. ೨೮ ಪದ್ಯ ಗಳಲ್ಲಿ ಈ ಪ್ರಣಯ ಕಥೆಯನ್ನು ಕವಿ ಮನೋಹರವಾಗಿ ಚಿತ್ರಿಸಿದ್ದಾನೆ. ಅವನ ದೇಶಾಭಿಮಾನದಿಂದ ಶಿವನ ಕೈಲಾಸ ನಂಜನಗೂಡಿಗೆ ಬಂದಿದೆ. ಎರಡನೆಯ ಸಂಗ್ರಹ ಬಗೆಬಗೆಯ ರಾಗಗಳಲ್ಲಿ ಹೇಳುವ ಬಹು ದೊಡ್ಡ ಗಿರಿಜಾ ಕಲ್ಯಾಣದಿಂದ ಆಯ್ದುದ್ದು. ಒಕ್ಕಲಿಗರು ಹೇಳುವ 'ಗೌರಮ್ಮನ ಮದುವೆ' ಯೊಡನೆ ಇವನ್ನು ಹೋಲಿಸಿ ನೋಡಬೇಕು. ಎರಡು ಕಡೆಯೂ ಕಥೆ ಮತ್ತು ಹೇಳುವ ರೀತಿ ಸರಿಸುಮಾರು ಒಂದೇ ಆದರೂ ಬೇರೆ ಬೇರೆ ಮಟ್ಟದ ಸಂಸ್ಕೃತಿ ಕಂಡುಬರುತ್ತದೆ.

ಜಾತಕರ್ಮ, ನಾಮಕರಣ, ಚೌಲ, ಉಪನಯನ, ಮದುವೆ, ಗರ್ಭಾಧಾನ, ಮೊದಲಾದ ಕರ್ಮಕಲಾಪಗಳನ್ನೆಲ್ಲ ಶಾಸ್ತ್ರವಿಧಾನಕ್ಕನು ಸಾರವಾಗಿ ವಿವರಿಸುವ ಹಾಡುಗಳು ಹಲವಿವೆ. ಹಳೆಯ ಸಂಪ್ರದಾಯ ವನ್ನನುಸರಿಸುವವರು ಈಗಲೂ ಇವನ್ನು ಹೇಳುವುದುಂಟು. ಸೂತ್ರ ವಿಧಿಗಳ ಪ್ರಕಾರ ನಡೆಯಲೇಬೇಕಾದ ಕರ್ಮಗಳ ಜೊತೆಗೆ ಬರಿಯ ಸಂಪ್ರದಾಯವನ್ನನುಸರಿಸಿ ನಡಸುವ ಕಾರ್ಯಗಳೆಷ್ಟೋ ಇವೆ. ಬಸಿರಿಯ ಬಯಕೆ ಸಲ್ಲಿಸುವಲ್ಲಿ, ಬಾಣಂತಿ ಮಿಾಯುವಲ್ಲಿ, ಮಗುವಿಗೆ ತೊಟ್ಟಿಲಿಕ್ಕು

ವಲ್ಲಿ, ಮದುವೆಗೆ ಅಣಿ ಮಾಡುವಲ್ಲಿ, ಬೀಗರನ್ನು ಉಪಚರಿಸುವಲ್ಲಿ—ಇಂಥ ಹಲವಾರು ಸಂದರ್ಭಗಳಲ್ಲಿ ಕೇವಲ ಪರಂಪರೆಯನ್ನನುಸರಿಸಿ ನಡಸುವ 'ಹೆಂಗಸರ ಶಾಸ್ತ್ರ'ಗಳಿಗೆಲ್ಲ ತಕ್ಕ ಹಾಡುಗಳಿವೆ. ಇವೆಲ್ಲ ಸಾಮನ್ಯವಾಗಿ ಹಳೆಯ ರೀತಿಯವು. ಇವುಗಳಲ್ಲಿ ಬಹು ಪಾಲಿನವು ತ್ರಿಪದಿಗಳು. 'ಸೋಬಾನೆ' ಹಾಡುಗಳೆಂದು ಇವನ್ನು ಹಾಡುವುದಕ್ಕೆ ಎಲ್ಲರೂ ಹಿಂಜರಿಯುತ್ತಾರೆ. ಎಷ್ಟೋ ಜನ ಈ ಹಾಡುಗಳನ್ನು ಮರತೇ ಬಿಟ್ಟಿದ್ದಾರೆ. ಆದ್ದರಿಂದ ಇವನ್ನು ಕೂಡಿಸುವುದು ಬಹು ಕಷ್ಟವಾಗಿದೆ.

ಈ ಹಾಡುಗಳ ಸ್ವರೂಪವನ್ನು ಸೂಚಿಸುವುದಕ್ಕಾಗಿ ಮದುವೆಯ ಹಾಡುಗಳಲ್ಲಿ ಒಂದೆರಡರಿಂದ ಕೆಲವು ನುಡಿಗಳನ್ನು ಇಲ್ಲಿ ಎತ್ತಿ ಬರೆದಿದೆ.

### ೧ ಅರಿಸಿನ ಕುಟ್ಟುವ ಹಾಡು

ಅರಸುವೆ ಗಣಪ ಬ್ರಹ್ಮನ ರಾಣಿ
ಶ್ರಿಹರಿಯ ಮದುವೆಗೆ ಶುಭದೇವಿ
ಅರಿಸಿನವ ಕುಟ್ಟುತ್ತ ಐವರು ಪಾಡುತ್ತ
ಹರುಷದಿ ಕುಟ್ಟಿದರರಿಸಿನಂಗಳನು—ಸುವ್ವಾಲೇ
ಸುವ್ವಿ ವರದ ಲಕ್ಷ್ಮಿಮಾ ನರಸಿಂಹಗೆ—ಸುವ್ವಾಲೇ ೧

ಬಟ್ಟು ಬಟ್ಟುರುಳಿಯ ಮಾಡ್ತೋರು
ಬಟ್ಟು ಕೆಂಬೆಣ್ಣೆಯನೆರೆವೋರು
ಅಚ್ಯುತರಾಯನ ಮಡದಿ ಮೈತೊಳೆವೋರೆ
ಮಿತ್ರೇರು ಪಾಡಿ ಕುಟ್ಟಿದರರಿಸಿನವ—ಸುವ್ವಾಲೇ........ ೨

ಸಂಕಲಿಕೆಗೆ ಬಟ್ಟ ನಿಡುವೋರು
ಮರದಂಚಿಗೆ ತಂದು ತೊಡೆವೋರು
ಯಂತ್ರವಾಹಕನ ಮದುವೆಗೆಂದೆನುತಲಿ
ಮಂತ್ರಾಕ್ಷತೆಗೆ ಕುಟ್ಟಿದರರಿಸಿನವ—ಸುವ್ವಾಲೇ........ ೩

## ೨ ಗೋಧಿಕಲ್ಲು ಶಾಸ್ತ್ರದ ಹಾಡು

ವಿಪ್ರರಾ ಕೇರೀಲಿ ಉತ್ತಮ್ಮ ಜೋಯಿಸರು
ಹೊತ್ತು ಮುಹೂರ್ತವ ನೋಡಿ ಬಿಸಗೊಳ್ಳಿರೋ
ಹೊತ್ತು........
ಉತ್ತಮ ಇಂದಿನ ದಿನ ಒಳ್ಳೇದೆನುತಲಿ
ಅರ್ತೀಲಿ ಗೋಧಿ ಕಲ್ಲಿಕ್ಕಿ ಬೇಗ—ಅರ್ತೀಲಿ........
ಉಪ್ಪರಿಗೆ ಮನೆಯೊಳಗೆ ಹತ್ತೆಂಟು ಕಲ್‌ಹೂಡಿ
ಮಿತ್ರೇರ ಮುಂದಿರಿಸಿ ವಸುದೇವನರಸಿ—ಮಿತ್ರೇರ........
ನಿಮ್ಮ ಮನೆಯ ಕೆಲಸ ನೋಡದೆ ನಮ್ಮನೆಯ
ಮದುವೆಯ ಕಾರ್ಯವನು ತೂಗಿಸುವುದು—ಮದುವೆಯ........
ಒಕ್ಕಳ ಗೋಧಿಗೆ ಹತ್ತೆಂಟು ಒಬ್ಬಟ್ಟು
ಕೊಟ್ಟೇನು ಎಂದರೆ ಈ ಗೋಧಿಯ—ಕೊಟ್ಟೇನು........
ಚಚ್ಚರದಲ್ ಬೀಸೇವು ಮೂಳಿಗ್ಗ ತುಂಬೇವು
ಅಕ್ಕತಂಗೀರು ನಾವೆಲ್ಲ ಬೇಗ—ಅಕ್ಕತಂಗೀರು........

ಇಲ್ಲಿ ಎರಡನೆಯ ಸಾಲನ್ನು ಮತ್ತೊಮ್ಮೆ ಹೇಳುವುದು ಒಕ್ಕಲಿಗರು ಕೆಲವು ಹಾಡುಗಳಲ್ಲಿ ಸಾಲುಗಳನ್ನು ಮರಳಿ ಮರಳಿ ಹಾಡುವುದನ್ನು ನೆನಪಿಗೆ ತರುತ್ತದೆ.

## ೩ ಸಂಡಿಗೆ ಇಡುವ ಹಾಡು

ಸಿದ್ಧಿವಿನಾಯಕ ಶೀಘ್ರದಲಿ ನಡಸಯ್ಯ
ಉದ್ದಿನುಂಡಲಿಗೆ ನಿನಗೀವೆ |
ನಿನಗೀವೆ ಗಣನಾಥ
ಶೀಘ್ರದಲಿ ಕಾರ್ಯ ನಡಸಯ್ಯ ೧

## ಬ್ರಾಹ್ಮಣರ ಹಾಡುಗಳು

ಕಾರ್ಯ ವಿನಾಯಕ ಕಾರ್ಯವ ನಡಸಯ್ಯ
ಕಾರೆಳ್ಳು ಕಡಲೆ ನಿನಗೀವೆ |
ನಿನಗೀವೆ ಗಣನಾಥ
ಕಾರ್ಯವನು ನೀನು ನಡಸಯ್ಯ ೧

ಎಳ್ಳು ಕರಿಯೆಳ್ಳು ಎಳ್ಳು ಬಿಳಿಯೆಳ್ಳು
ಎಳ್ಳನೇ ತೊಳೆದ ತಿಳಿನೀರ |
ತಿಳಿನೀರ ಕುಡಿ ಬಂದ
ಹಲ್ಲಿ ಹೇಳಿದವೆ ಶಕುನವ ೨

ಉದ್ದು ಕರಿ ಉದ್ದು ಉದ್ದು ಬಿಳಿ ಉದ್ದು
ಉದ್ದನೇ ತೊಳೆದ ತಿಳಿನೀರ |
ತಿಳಿನೀರ ಕುಡಿ ಬಂದ
ಹದ್ದು ಹೇಳಿದವೆ ಶಕುನವ ೩

ಒಂದು ಕೊಂಬೆಯ ಹಕ್ಕಿ ಒಂದು ಕೊಂಬೆಗೆ ಹಾರಿ
ಚೆಂದ ಚೆಂದದಲಿ ಸರಗೈವೊ |
ಸರಗೈವೊ ಆ ಹಕ್ಕಿ
ನುಡಿದವೆ ಮನದ ಶಕುನವ ೪

ಆಚೆ ಕೊಂಬೆಯ ಹಕ್ಕಿ ಈಚೆ ಕೊಂಬೆಗೆ ಹಾರಿ
ಮಾತು ಮಾತಿಗೆ ಸರಗೈವೊ |
ಸರಗೈವೊ ಆ ಹಕ್ಕಿ
ನುಡಿದವೆ ಮನದ ಶಕುನವ ೫

ಒಂದೂರ ಮಗಳಿಗೆ ಅಂದಣವ ಕಳುಹಯ್ಯ
ಹಿಂದೆ ನೂರಾರು ಕುದುರೆಯ |
ಕುದುರೆಯ ಕಳುಹಯ್ಯ
ಒಂದೂರ ಮಗಳು ಬರಬೇಕು ೬

ಈಗ ಮದುವೆಗಳಲ್ಲಿ ಬೀಗರ ಹಾಡು ಬಹು ಅಪರೂಪವಾಗಿದೆ. ಉರುಟಣೆಯ ಮಹತ್ವವೂ ತುಂಬ ಕುಗ್ಗಿ ಹೋಗಿದೆ. ಹಿಂದಿನ ಮದುವೆಗಳಲ್ಲಿ ಇವುಗಳ ಸಂಭ್ರಮ ಅಷ್ಟಿಷ್ಟಲ್ಲ. ಮದುವೆಯ ಹೆಣ್ಣು ಗಂಡನ್ನೂ ಗಂಡಿನ ಕಡೆಯವರನ್ನೂ ಹಾಸ್ಯ ಮಾಡಿ, ಆಕ್ಷೇಪಿಸಿ ಹಲವು ಹಾಡುಗಳನ್ನು ಹೇಳುತ್ತಿದ್ದಳು. ಅವಕ್ಕೆಲ್ಲ ಉತ್ತರ ಕೊಡುವ ಭಾರ ಗಂಡಿನ ಅಕ್ಕ ತಂಗಿಯರದು. ಮದುವೆಗೆ ಕೆಲವು ತಿಂಗಳು ಮೊದಲಿನಿಂದಲೂ ಎರಡು ಕಡೆಯವರೂ ಹಾಡುಗಳನ್ನು ಹವಣಿಸಿಕೊಳ್ಳುವುದರಲ್ಲಿ ತೊಡಗುತ್ತಿದ್ದರು. ಈ ಸಂದರ್ಭದಲ್ಲಿ ಎಷ್ಟೋ ಹೊಸ ಹೊಸ ಹಾಡುಗಳು ಹುಟ್ಟುತ್ತಿದ್ದವು. ಈ ಹಾಸ್ಯ ವಿನೋದಗಳಲ್ಲಿ ಉಳಿದವರೂ ಭಾಗ ತೆಗೆದುಕೊಳ್ಳುತ್ತಿದ್ದರು. ಬೀಗರು ಒಬ್ಬರನ್ನೊಬ್ಬರು ಈ ಹಾಡುಗಳ ಮೂಲಕ ಜರೆದು,ಹಾಸ್ಯಮಾಡಿ, ನಕ್ಕು ನಲಿದು, ಬಳಕೆಯನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದರು; ಪ್ರೀತಿ ವಿಶ್ವಾಸಗಳನ್ನು ಬೆಳಸಿಕೊಳ್ಳುತ್ತಿದ್ದರು. ಆದರೆ ಕಾಲಕ್ರಮದಲ್ಲಿ ತಿಳಿಹಾಸ್ಯ ಕದಡಾಗಿ, ಕೆಲವು ವೇಳೆ ಗಾಂಭೀರ್ಯದ ಮೇರೆ ಮೀರಿ ಈ ಬೀಗರ ಹಾಡುಗಳು ಪ್ರೀತಿ ವಿಶ್ವಾಸಗಳಿಗೆ ಕುಂದಕ ತರುವಂತಾದವು. ಎಷ್ಟೋ ಕಡೆ ಇದರಿಂದ ಮನಸ್ತಾಪ ಹುಟ್ಟಿ ಅಪಾರ ಸಂಕಟಕ್ಕೆ ಕಾರಣವಾಗಿದೆ. ಈ ಕಾರಣದಿಂದ ಈಗ ಸಾಮಾನ್ಯವಾಗಿ ಬೀಗರ ಹಾಡುಗಳನ್ನು ಹೇಳುವುದಿಲ್ಲ. ಹೇಳಿದರೂ ಬಹಳ ಎಚ್ಚರಿಕೆಯಿಂದಿರುತ್ತಾರೆ. ಈ ಹಾಡುಗಳನ್ನೆಲ್ಲ ಕೂಡಹಾಕಿ ಪ್ರತ್ಯೇಕ ಪುಸ್ತಕ ಮಾಡಬಹುದು. ಇದರಿಂದ ಒಂದು ಕಾಲದ ಸಮಾಜದ ಸ್ಥಿತಿಯನ್ನು ತಿಳಿಯಲು ತಕ್ಕಮಟ್ಟಿಗೆ ಸಹಾಯವಾಗುತ್ತದೆ. ಈ ಸಂಗ್ರಹದಲ್ಲಿ ಕೊಟ್ಟಿರುವ 'ಭೋಜನದ ರಗಳೆ' ಈ ಬೀಗರ ಹಾಡಿನ ಗುಂಪಿಗೆ ಸೇರಿದ್ದು. ಊಟದಲ್ಲಿ ಇದನ್ನು ಈಗಲೂ ಹೇಳುತ್ತಾರೆ. ಇದರಲ್ಲಿ ಯಾರ ಮನಸ್ಸನ್ನೂ ನೋಯಿಸದ ತಿಳಿಹಾಸ್ಯವಿದೆ.

ಬೇಗ ಬೇಗ ಮಾಯವಾಗುತ್ತಿರುವ ಬ್ರಾಹ್ಮಣರ ಈ ಹಳೆಯ ಹಾಡುಗಳ ಕಡೆಗೆ ಈಗಲೇ ಹೆಚ್ಚು ಲಕ್ಷ್ಯ ಕೊಡುವುದು ಬಹಳ ಅಗತ್ಯ.

## ನಂಜುಂಡ ಜೋಗಿ

ಹೇಮಗಿರಿ ರಾಯನ—ಮಗಳಾದ
ಭಾಮೆ ಪಾರ್ವತದೇವಿಗೆ
ಕಾಮನೊಯ್ಗ್ರಿ ಗೌರಿಗೆ—ನಂಜುಂಡ
ಪ್ರೇಮದಿಂ ಪತಿಯಾದನು ‖ ಸೂಚನೆ ‖

*　　　*　　　*

ಮುಪ್ಪುರವ ಗೆಲಿದ ದೇವಿ—ಮೊರದೊಳಗೆ
ಸುಪ್ಪಾಣಿ ಮುತ್ತ ತುಂಬಿ
ಸರ್ಪಭೂಷಣನ ರಾಣಿ—ಬೀದೀಲಿ
ಪುಷ್ಪ ಕೊಳ್ಳುತ ಬಂದಳು ೧

ನಾರಿ ರನ್ನಳೆ ಪಾರ್ವತೀ—ನೀ ನಮ್ಮ
ಮಾರೊ ಕೇರಿsಗೊಪ್ಪುವೆ
ಬಾರೆ ಪಾರ್ವತಿ ಎನುತಲೆ—ನಗುತ ಮುದ
ನಾರಿ ಕರೆದನೆ ಗೌರಿಯ ೨

ಅಸುರ ವೈರಿ ಪ್ರಿಯನೇ—ಜೋಗಿ ನಿನ್
ಹೆಸರ ಹೇಳ್ ಹೇಳೆನುತಲೆ
ಕುಸುಮಲೋಚನೆ ಪಾರ್ವತಿ—ನುಡಿದಳಾ
ನೊಸಲುಗಣ್ಣಿನ ಜೋಗಿಗೆ ೩

ನಾರಿ ಎಂಜಲ ಬಳಿ ಎನೆ—ಉಂಡೋರು
ಯಾರು ಯಾರೆಂಬ ತೆರದಿ
ಬಾರೆ ಪಾರ್ವತಿ ಜಂದರೆ—ಹೆಸರ ವೈ
ಯ್ಯಾರಿ ಕೇಳೋದ ನೋಡೆ ೪

ಕಂಜ ನೇತ್ರಳೆ ಪಾರ್ವತಿ—ಎನ್ ಹೆಸರು
ನಂಜುಂಡ ಜೋಗಿ ಕಾಣೆ
ಅಂಜದೆ ಬಾರೆನುತಲೆ—ಗೌರಿಯಾ
ಮುಂಜೆರಗ ಪಿಡಿದೆಳೆದನು ೫

ನಿಟ್ಟಿಸಳುಗಣ್ಣ ಚೆಲ್ವೇ—ನಿನಗೊಂದು
ರೊಟ್ಟಿ ಕೊಟ್ಟೇನು ಬಾರೆ
ಗಟ್ಟಿ ಮಾತಾಡಬೇಡ—ಹಾಗೆಂದು
ದುಷ್ಟ ಜೋಗಿಯು ನುಡಿದನು ೬

ಅಮ್ಮ ಗಿರಿರಾಣಿ ನೋಡೆ—ಇಲ್ಲೊಬ್ಬ
ಗುಮ್ಮ ಹಿಡುಕೊಂಡನಲ್ಲೆ
ಗುಮ್ಮ ಬಿಡು ಬಿಡು ಎನುತಲೆ—ಆದಿಪರ
ಬ್ರಹ್ಮನಂದಿನಿ ನುಡಿದಳು ೭

ಕಂಡಪುರುಷನು ಆಡುವೋ—ಕಠಿನದು
ರ್ದಂಡ ವಾಕ್ಯವ ಕೇಳುತ
ಪುಂಡರೀಕಾಯತಾಕ್ಷಿ—ಜೋಗಿಯ
ಕಂಡು ಓಡುತಲಿದ್ದಳು ೮

ಓಡುವೊ ಗಿರಿಜೆ ಮೇಲೆ—ಗರಳಾರೂಢ
ರೂಢ ಭಸ್ಮವ ಚೆಲ್ಲಿದ
ನೋಡೆನಿವಳsನೆನುತಲೆ—ನಂಜನ
ಗೂಡಿನೊಳಗವಿತುಕೊಂಡ ೯

* * *

ದಿಕ್ಕು ದಿಕ್ಕುಗಳರಸುತ—ಮಾರ್ಗದಲಿ
ಮುಕ್ಕಣ್ಣನ ಕಾಣದೆ
ಉಕ್ಕಿ ಜಲಗಳ ಸುರಿಸುತ—ಶ್ರೀ ಗೌರಿ
ಹೊಕ್ಕಳೇ ಗರಳ ಪುರಿಗೆ ೧೦

ಹೀದಿಬೀದಿಯನರಸುತ—ನಗೆಮುಖದ
ಚಾದಾಂಬನ ಕಾಣದೆ
ಮಾಧವನ ಪ್ರಿಯನ ನೆನೆಯುತ—ಶ್ರೀ ಗೌರಿ
ಹೋದಳೇ ಗರಳ ಪುರಿಗೆ ೧೧

ಸರ್ಪಭೂಷಣನ ರಾಣಿ—ಬಹು ಬಳಲಿ
ಕಪ್ಪಿನೀ ಸ್ನಾನ ಮಾಡಿ
ಮುಪ್ಪುರಾಂತಕನ ಕಂಡು—ಶ್ರೀ ಗೌರಿ
ಒಪ್ಪಿಕೊಂಡಳೆ ಜೋಗಿಯ ೧೨

ನಾಗ ಕಂಕಣದ ಜೋಗೀ—ಇಲ್ಲಿಗ್ಯಾ
ವಾಗ ಬಂದ್ಯೋ ಎನುತಲೆ
ನಾರಿ ರನ್ನಳು ಪಾರ್ವತಿ—ನಂಜುಂಡ
ಜೋಗಿ ಕ್ಷೇಮವೇ ಎಂದಳು ೧೩

ಭೂತನಾಯಕನೆ ಜೋಗೀ—ಎನ್ನ ಕೂ
ಟೇಕೆ ಮಾತಾಡ ಒಲ್ಲೆ
ಭೂತ ಮೆಟ್ಟಿತೆ ಎನುತಲೆ—ನಗುತ ಜಗ
ದೇಕ ನಾಯಕಿ ನುಡಿದಳು ೧೪

ವದನಕೆಂಪಿನ ಚೆಲ್ವಳೇ—ಎಲೆ ಹೊಳೆವೊ
ಮಧುರ ನುಡಿಗಳ ಬಾಲಕಿ
ಎದುರಿಗೆ (ನಿಂತು) ಮಾತಾಡುವ್ರೋ—ನಗೆಮುಖದ
ಚದುರೆ ನೀನಾರೆಂದನು ೧೫

ಮಾಧವನ ಪ್ರಿಯನೆ ಕೇಳೋ—ನೀನಾಗ
ಬೂದಿಯಿಟ್ಟೋಳು ನಾನು
ಯಾದ ಗಿರಿ ಮಗಳೆನುತಲೆ—ನಗುತಲಾ
ಬೋಧರಾತ್ಮಕಿ ನುಡಿದಳು ೧೬

ಆದರೇನೆಲೆ ಪಾರ್ವತಿ—ನೀ ನಮ್ಮ
ಸಾಧನೆಗಳ ಬಲ್ಲೆಯ
ಯಾದಗಿರಿ ಮಗಳಾದರೆ—ಬಂದ ವಿ
ವಾದವೇನ್ ಹೇಳೆಂದನು ೧೭

ಬಲೆಗಾರ ಗಿಳಿಯ ಹಿಡಿದು—ಎಲೆ ಜೋಗಿ
ಸಲಹಿದಂದದಿ ಎನ್ನನು
ಜಲಧರನೆ ಸಲಹೊ ಎಂದು—ಹರನ ಚರ
ಣಂಗಳಿಗೆರಗಿದಳು ೧೮

ಚರಣಕೆರಗಿದ ಸತಿಯಳ—ನಂಜುಂಡ
ಕರಕಮಲದಿಂದೆತ್ತಿದ
ತೊಡೆಯ ಮೇಲಿರಿಸಿ ಸತಿಯ—ಮುಖನೋಡಿ
ಮುಗುಳು ನಗೆಗಳ ನಕ್ಕನು ೧೯

ಗಿರಿಕುಮಾರರು ಕ್ಷೇಮವೇ—ನಿಮ್ಮಮ್ಮ
ಹಿರಿಯರೆಲ್ಲರು ಕ್ಷೇಮವೇ
ಗಿರಿಕೃಪಾಳರು ಕ್ಷೇಮವೇ—ನಗುತ ಹಿಮ
ಗಿರಿಯ ನಂದಿನಿಗೆ ನುಡಿದ ೨೦

ಕಾಮನೊಯ್ರಿ ಗೌರಿಯು—ನಂಜುಂಡ
ಪ್ರೇಮದಿಂ ಮುಖವ ನೋಡಿ
ಭಾಮೆ ನೀ ಬಂದ ಬಳಿಕ—ನಿಮ್ಮೂರ
ಕ್ಷೇಮ ನಮಗೇಕೆಂದನು ೨೧

ಹರದಿ ಹಸಿದಳು ಎನುತಲೆ—ಶೀಘ್ರದಲಿ
ತಿರಿದು ಅಂಬಲಿಯ ತಂದು
ಅಂಬುಜಾಕ್ಷಿಯನೆ ಕರೆದು—ಕುಡಿಯೆಂದು
ಜಂಬುಕೇಶ್ವರ ನುಡಿದನು ೨೨

ತುಂಬುಗುರುಳಿನ ಬಾಲಕಿ—ಜೋಗಿಟ್ಟ
ಅಂಬಲೀ ತಳಗೆ ನೋಡಿ
ಕುಂಭಕುಚಗಳು ಹೊಳೆಯುತ—ನಗುತ ಜಗ
ದಂಬ ಒಲ್ಲೆನು ಎಂದಳು ೨೩

ತಿರಿದುಂಬ ಜೋಗಿಗಳಿಗೆ—ಕೇಳ್ಳೆ
ಬರಿಯ ಅಂಬಲಿ ಯಾತಕೆ
ಕರಿಕಾಯಿಗಳು ದೊರೆಯವೆ—ಎನುತ ಹಿಮ
ಗಿರಿಯ ನಂದಿನಿ ನುಡಿದಳು ೨೪

ಇಲ್ಲದೋರಿಗೆ ಪಾರ್ವತಿ—ಪಾಯಸವು
ಎಲ್ಲಿ ದೊರಕೊಂಬುದ್ದೇಳು
ಒಲ್ಲಿದರೆ ಕುಡಿಯೆಂದನು—ಗೌರಿಯ
ಒಲ್ಲದಿರೆ ಹೋಗೆಂದನು ೨೫

ನಮ್ಮಮ್ಮ ನುಡಿದ ಮಾತು—ನಮಗೀಗ
ಬ್ರಹ್ಮವರವಾಯಿತೆಂದು
ಸುಮ್ಮನೇ ಮೂಗಳಾಗಿ—ಶ್ರೀ ಗೌರಿ
ಮಾತನಾಡದೆ ಇದ್ದಳು ೨೬

ಮುಪ್ಪುರಾಂತಕನ ಕೂಟೆ—ಶ್ರೀ ಗೌರಿ
ಸಪ್ಪೆ ಅಂಬಲಿಯುಣ್ಣುತ
ಸರ್ಪಭೂಷಣನ ಕೂಟೆ—ತುಂಬೆಯ
ಸೊಪ್ಪು ಚೆನ್ನಾಯ್ತೆಂದಳು ೨೭

ಹರನು ಪಾರ್ವತಿ ಸಹಿತಲೆ—ಶ್ರೀಘ್ರದಲಿ
ಉಂಡು ಕ್ಕೆ ತೊಳೆದುಕೊಂಡು
ಕರ್ಪುರವೀಳ್ಯವನೆ ಕೊಂಡು—ಹರಗಿರಿಜೆ
ಒಪ್ಪಿ ಕುಳ್ಳಿರ್ದರಾಗ ೨೮

# ಗಿರಿಜಾ ಕಲ್ಯಾಣದಿಂದ

## ಗಿರಿರಾಜ ಉಮೆಯರ ಸಂವಾದ

### ಗಿರಿರಾಜ

ಕೊಡಲಾರೆನೆ ಕೋಮಲೆ ಉಮೆ ನಿನ್ನನು
ಕೆಂಜಡೆಗಳ ಜಂಗಮಗೆ
ಕಿಡಿಗಣ್ಣುಗಳನು ತೆರೆದರೆ ಪಾರ್ವತಿ
ಹೆದರುವೆ ನೀನವಗೆ ೧

ಬಾಣಾಸುರನೆಂಬಸುರನ ಬಾಗಿಲ
ಕ್ಷೋಣೆಯಿಂದಲೆ ಕಾಯ್ದು
ಪ್ರಾಣ ಸಂಚರಣೆಗೆ ಅಶನವ ಕಾಣದೆ
ಹೀನರೊಡನೆ ಸವಿದ ೨

ಆರಂಬಗಳಾದರು ದುಡಿದುಂಬರೆ
ಹೋರಿ ಮತ್ತೊಂದಿಲ್ಲ
ಕ್ರೂರದ ಪಂಚಮುಖವ ಕಂಡೂರೊಳು
ಸೇರಗೊಡರು ಎಲ್ಲ ೩

ಹೊಟ್ಟೆಗಶನಗಳಿಲ್ಲದೆ ತ್ರೈಭುವನವ
ಉಳ್ಳಷ್ಟನು ತಿರಿದುಂಬ
ಕಟ್ಟಿದ ಮನೆಯಿಲ್ಲದ ಕಡು ಬಡವಗೆ
ಕಂದನ ಕೊಡಲಾರೆ ೪

### ಉಮೆ

ಜರೆಯದಿರಯ್ಯ ಶಂಕರನ—ದೇವ
ಜನನ ಮರಣವರ್ಜಿತ ಜಗದಾದಿ ಶಂಕರನ—
ಅನಾದಿ ಶಂಕರನ ॥ ಪಲ್ಲವಿ ॥

ಆದಿ ಅನಾದಿಯಾಗಿಹನ—ವೇದ
ನಾದ ವಾದ ಜಿತನಾದ ನಿರ್ಮಯನ
ಭೇದ ರಹಿತಗುಣಹರನ—ನಿಜ
ಬೋಧಾತ್ಮಕನೆಂದು ಅರಿಯದೆ ಹೀಗೆ—ಜರೆಯ ೫

ಸ್ಫಟಿಕವರ್ಣದ ಪರಶಿವನ—ತನ್ನ
ಘಟದೀಪದಂತೆ ರಂಜಿಸಿ ತೋರುವನ
ನಿಟಲಾಕ್ಷನೆನಿಸಿಕೊಂಡವನ—ಬಹು
ಪಟುಪರಾಕ್ರಮಿ ಧೂರ್ಜಟಿ ಎನಿಸಿದನ—ಜರೆಯ ೬

ಪ್ರತ್ಯಕ್ಷ ಪರಮೇಶ್ವರನ—ಸ್ವಾಮಿ
ಪ್ರತ್ಯಗಾತ್ಮ ಪರಮಾತ್ಮ ನಿರ್ಮಯನ
ಮೃತ್ಯು ರಹಿತ ಗುಣಹರನ—ನಿಜ
ತತ್ತ್ವವನರಿಯದೆ ಜರೆವೋರೆ ಹೀಗೆ ೭

## ಗಿರಿರಾಜ

ಕಲ್ಲಸ್ವರೂಪಿನ ಕಪಟ ಮಾಯಂತೆ
ಬಿಲ್ವಪತ್ರೆಯ ಸೊಪ್ಪ ಮುಡಿದಿಹನಂತೆ
ಎಲ್ಲ ಜಾತಿಗಳೊಳು ಬಂಧುತ್ವವಂತೆ
ಇಲ್ಲಿಗೆ ಕೈಲಾಸಪುರ ದೂರವಂತೆ
ಅಲ್ಲಿಗೆ ನಿನ್ನನು ಕೊಡಲಾರೆ ದೇವಿ
ನೀರೆ ನಿನ್ನನು ಕೊಡಲಾರೆನೆ ನಾನು ೮

## ಉಮೆ

ಜರೆಯದಿರು ಜರೆಯದಿರು ಜಡೆಯ ಶಂಕರನ
ಜನನ ಮರಣರಹಿತಾದಿ ಶಂಕರನ || ಪಲ್ಲ ||

ಹಿಡಿಯ ಬಲ್ಲವರ್ಯಾರು ಪನ್ನಂಗನ್ ಹೆಡೆಯ?
ಮುಡಿಯ ಬಲ್ಲವರ್ಯಾರು ಉರಿಯ ಕೆಂಜೆಡೆಯ?
ಧರಿಸಬಲ್ಲವರ್ಯಾರು ಹಣೆಗಣ್ಣಿನುರಿಯ?
ತಾಳಬಲ್ಲವರ್ಯಾರು ಸೂರ್ಯಕೋಟಿಪ್ರಭೆಯ?
ಈ ಬಲವಂತ ಶಿವನಿಗೆ ಸರಿಯಾರು ಹೇಳಯ್ಯ?—ಜರೆಯದಿರು ೯

## ಗೌರಿಯ ಕಲ್ಯಾಣ

ಕಲ್ಯಾಣಂ ಕರುಣಾ ಕಟಾಕ್ಷನಿಗೆ
ಕಲ್ಯಾಣಂ ನಮ್ಮ ಪರಶಿವಪಾರ್ವತಿಗೆ
ಕಲ್ಯಾಣಂ ಕರುಣಾ ಕಟಾಕ್ಷನಿಗೆ ‖ ಪಲ್ಲ ‖

ಉಮೆಯ ವಾಕ್ಯವ ಕೇಳಿ ಹಿಮವಂತ ಹರುಷದಿ
ಕ್ರಮದಿ ಶೃಂಗರಿಸಿ ಸಿದ್ರಾ ಪುರವ
ಅಮರರ ಋಷಿಗಳ ಅತ್ಯಂತ ಹರುಷದಿ
ಸುಮ್ಮನದಿ ಕರಸಿ, ಶುಭವೆರಸಿ—ಕಲ್ಯಾಣಂ ೧

ಗಿರಿಜೆಯನೀವೆನೆಂದು ಪರಶಿವ ನೀ ಬಾರೆಂದು
ಹರುಷದಿಂದೋಲೆಯ ಬರೆದರಾಗ
ಅದ ಕೇಳಿ ಹರುಷದಿ ನಿಬ್ಬಣ ತೆರಳಿ ಬಂದರು
ಕ್ರಮದಿ ಎದಿರ್ಗೊಂಡು ಬಿಡಾರವಿತ್ತರು—ಕಲ್ಯಾಣಂ ೨

ನಗರಾಜ ತನುಜೆಗು ಜಗದೀಶಗು ಮುದ್ದು
ಮುಗುದೆ ಬಾಲೆಯರು ಮಜ್ಜನಕೆರೆಯೆ
ಮಿಗಿಲಹ ಹರಿದ್ರ ಕುಂಕುಮ ಜಲ ಕಲಶದಿ
ಸೊಬಗಿಲ್ಲೆರೆದು ದುಕೂಲವನ್ ಹೊದ್ದಿಸೆ—ಕಲ್ಯಾಣಂ ೩

ನವಸಿರಿಯಿಂದಲೆ ನಾಂದಿಪುಣ್ಯಾವರ್ಚನೆ
ನವಗ್ರಹ ಹವನ ಬ್ರಹ್ಮ ಭೋಜನ
ಶಿವನ ಕರೆದು ಮಧುಪರ್ಕ ಪೂಜೆಯ ಮಾಡಿ
ನಗುತಲೆ ನಾಂದಿಗಳನೆ ಮಾಡಿದ—ಕಲ್ಯಾಣಂ ೪

ಮೆಟ್ಟಕ್ಕಿ ನಡೆತಂದು ಪಟ್ಟೆಯ ತೆರೆ ಹಿಡಿದು
ಇತ್ತೆರದಲಿ ಶಕುನದ ನೋಡಲು
ಬೃಹಸ್ಪತಿಯು ಮಂತ್ರದಿ ಮಂಗಳಾಷ್ಟಕವನು ಹೇಳಿ
ಚಿನ್ನದ ಗಳಿಗೆಯು ಸಮಯದಲಿ—ಕಲ್ಯಾಣಂ ೫

ಕಡಲಡಿ ತೆರೆಗಳು ನಡುವೆ ನಡೆವೋ ಕ್ರಮ
ಬಿಡದೆ ವೇದಗಳನುಗ್ಗಡಿಸುತಿರೆ
ಗುಡವ ಜೀರಿಗೆಯು ಎನ್ನೊಡೆಯಗೆ ತಳಿದರೆ
ಮೃಡ ಗೆದ್ದನೆಂದು ಪಾಡಿದರಂದು—ಕಲ್ಯಾಣಂ ೬

ಕಾನನದಲಿ ಗೌರಿದೇವಿಯಿರುವುದ ಕಂಡು
ಆಲಸ್ಯವಿಲ್ಲದಲ್ಲಿಗೆ ಬಂದು
ಆನೆಯು ಗೌರಿಯು ಹರ ಗೆದ್ದನು ಎಂದು
ಜೋಡಿನ ಕಾಳೆ ಸುವ್ವಳಿಸಿದವು—ಕಲ್ಯಾಣಂ ೭

ಒಪ್ಪಿಡಿ ನಡುವಿನ ವನಿತೆಯಾಗಬೇಕೆಂದು
ಕಪ್ಪುಗೊರಳ ಕಪಟದಿ ತಾ ಬಂದು
ಉಪ್ಪಲ ಗೌರಿಯು ಹರ ಗೆದ್ದನು ಎಂದು
ಮುತ್ತಿನ ಕಾಳೆ ಸುವ್ವಳಿಸಿದವು—ಕಲ್ಯಾಣಂ ೮

ನೀಲಕಂಠಗೆ ಗೋದಾನ ಭೂದಾನವನು
ಸಾಲಿಗ್ರಾಮ ಧಾರೆಯನೆರೆಯೆ
ಮೂಲೋಕವು ಮೆಚ್ಚೆ ಮುತ್ತಿನ ಮೆಟ್ಟಕ್ಕಿಯ
ಮೇಲೆ ಪ್ರವೇಶ ಮಂತ್ರದ ಘೋಷ—ಕಲ್ಯಾಣಂ ೯

ಧಾರೆಯನೆರೆದು ದಂಪತಿಗೆ ಕಂಕಣ ಕಟ್ಟಿ
ಪಾರಿಜಾತದ ಪುಷ್ಪ ಮಳೆಗರೆಯೆ
ಮೂರ್ ಲೋಕದೊಡೆಯ ತಾ ಲಾಜಹೋಮವ ಮಾಡೆ
ಕ್ಷೀರಾನ್ನವ ಸತಿಸಹಿತಲುಂಡ—ಕಲ್ಯಾಣಂ ೧೦

ನಗರಾಜನು ತನ್ನ ಮಗಳ ವಿವಾಹದಿ
ಮದುವೆಯ ನಾಲ್ಕು ದಿವಸದಲಿ
ವಿಧವಿಧವಾದ ಉತ್ಸವಗಳನೇ ಮಾಡಿ
ನಗುತಲೆ ನಾಗವಲಿಯ ರಚಿಸೆ—ಕಲ್ಯಾಣಂ ೧೧

ಆ ಸಮಯದಿ ಗಿರಿರಾಜ ತನ್ನಳಿಯಗೆ
ಸೂಸುವ ಜಾತಿ ಪಟ್ಟೆಯನ್ ಹೊದ್ದಿಸಿ
ಭೂಸುರಜನ ಮೆಚ್ಚೆ ಬಳುವಳಿಯ ಕೊಟ್ಟು
ಜಗದೀಶನೊಡನೆ ಕಳುಹಿದನುಮೆಯ—ಕಲ್ಯಾಣಂ ೧೨

* * *

## ಗೌರಮ್ಮನನ್ನು ಗಂಡನ ಮನೆಗೆ ಕಳಿಸಿದ್ದು

ಇಂದುವದನೆ ಸಹಿತ—ಹರ ತಾನು
ನಂದಿಯ ನಲಿದೇರಲು
ಮಂದಾರ ವದನೆ ಮೇನಕಿ ಹರುಷದಿ ಬಂದು
ಕಂದನ ಶಿರವಪ್ಪಿದೋ—ನುಡಿದೊ ೧

ಅಂಜದಿರಮ್ಮ ಬಾಲೇ—ಅಭ್ಭುತ
ಕೆಂಜಡೆ ಕಿಡಿಗಣ್ಣಿಗೆ
ನಂಜ ಧರಿಸಿಕೊಂಡು ನಲಿವೊ ಭೂತದ ಹಿಂಡು
ನಂದಿ ಭೃಂಗಿ ನವಕೋಟಿ ಸಿದ್ಧರ ದಂಡು
ನಾಗ ಕುಂಡಲನ ಕಂಡು—ಅಂಬಾ
ಅಂಜದಿರಮ್ಮ ಬಾಲೇ ೨

ನೆರೆಹೊರೆ ಇಲ್ಲವಂತೆ—ಕೈಲಾಸ
ಪುರದೊಳಗೊಬ್ಬನಂತೆ
ಪರ್ವತಾಗ್ರದಲೊಂದು ಪಟ್ಟಗದ್ದುಗೆಯಂತೆ
ಹಿರಿಯೋರು ಕಿರಿಯೋರಾಗಿ ತಾನೆ ತಾನಂತೆ
ಸರ್ವಪರಿಪೂರ್ಣನಂತೆ—ಅಂಬಾ
ಅಂಜದಿರಮ್ಮ ೩

ಗಿರಿರಾಜ ಮೇನಕೆಯು—ತಾವ್ ತಮ್ಮ
ತರಳೆಯ ಶಿರವನಪ್ಪಿ
ಕರೆಯ ಒಹೆವು ನಾಳೆ ಕಮಲವದನೆ ನಿನ್ನ
ಹರನ ತೊಡೆಯೊಳಿದ್ದು ಹರುಷದಿಂದಲಿ ಎನ್ನ
ಮರೆಯದಿರಮ್ಮ, ಎನ್ನ—ಚಿನ್ನ
ಅಂಜದಿರಮ್ಮ ೪

## ಗೌರಿದೇವಿ ತವರಿಗೆ ಹೋಗಿ ಬಂದದ್ದು

ಹರದಿ ಪಾರ್ವತಿದೇವಿ ಪರಮ ಸಂತೋಷದಲಿ
ಸರಸವಾಗುತ ತನ್ನ ಪುರುಷರೊಡನೆ
ವರಭಾದ್ರಪದ ಶುದ್ಧ ತದಿಗೆ ನಾಳೇ ದಿವಸ
ಅಸರಸರೇ ತೌರೂರಿಗ್ ಹೋಗಿ ಬರುವೆ ೧

ಇಲ್ಲಿಂದ ಹೋದರೆ ಅಲ್ಲಿ ನಿನಗ್ಯಾರುಂಟು
ಚಲ್ಲೆಗಂಗಳ ನೀರೆ ತಿಳಿದು ಪೇಳೆ
ಎಲ್ಲರ್ಯಾತಕೆ ಸ್ವಾಮಿ ಮೂರು ದಿನವಿದ್ದು ನಿ
ಮ್ಮಲ್ಲಿಡೇ ಸೇವೆಗೆ ಒದಗಿ ಬರುವೆ ೨

ಮೂರು ದಿನ ಐದು ದಿನ ಮೀರಿದರೆ ಏಳು ದಿನ
ದಾರಿ ನೋಡುಲಿರುವೆ ದೇವಿ ಕೇಳೆ
ಬಾರದಿದ್ದರೆ ನೀನು ಮೀರಿದೋಳು ಎನಗೆ
ನೀರೆ ನೀ ಪೋಗೆಂದ ನಿಜಮೂರ್ತಿಯು ೩

ಕರಿಮುಖನ ಒಡಗೊಂಡು ಕರೆವುದಕೆ ನಾ ಬರುವೆ
ತಿರುಗಿ ಉಪಚಾರವೇನುಂಟು ದೇವಿ
ತಿರಿದುಂಬರೇ ಮೂರು ಲೋಕವಿಲ್ಲವೆ ಸ್ವಾಮಿ
ಕರಿಯ ಚರ್ಮದ ಹೊದಿಕೆ ಭಸ್ಮಾಂಗವು ೪

ಮಡದಿ ಆಡಿದ ಮಾತ್ಗೆ ಮೃಡ ತಾನು ನಸುನಕ್ಕು
ಪೊಡವಿಯಲಿ ನಿಮ್ಮೋರ ಹೆಸರ ಹೇಳೆ
ಬಡತನವ ಬಿಡಿಸಿ ಬಹಳೈಶ್ವರ್ಯ ಕೊಟ್ಟರೆ
ಸಡಗರದಿ ಓಲಾಡಿ ಬೇಗ ಬರುವೆ ೫

ನಂಜ ಬಟ್ಟಲ ದಂಡೆ ದುಂಡು ಮಲ್ಲಿಗೆ ಹೂವು
ಚಂದಿರದ ಬೈತಲೆಗೆ ಮುತ್ತು ತುಂಬಿ
ರಂಬ್ನಿಮ್ಮ ಕುಡಿಹುಬ್ಬು ಕಂಗಳದಿ ಹೊಳೆಯುತಿರೆ
ನಿಂಬೆಯ ಹಣ್ಣಂತೆ ಮುಖದ ಕಾಂತಿ ೬

ನಾಗಭೂಷಣ ತಾನು ನಗುತ ಗೌರಿಯು ಕಂಡು
ಹೋಗಿ ಬಂದ್ಯಾ ನಿನ್ನ ತೌರೂರಿಗೆ
ಈಗೇನು ಕೊಟ್ಟರು ಇನ್ನೇನ ಕೊಡುವರು
ಬೇಗದಲಿ ಹೇಳು ಹೇಳೆಂದ ಹರನು ೭

ಎಂದ ಮಾತಿಗೆ ಗೌರಿ ಒಂದು ಮಾತಂದಳು
(ನಮ್) ಬಂಧು ಬಳಗವೆಲ್ಲ ಸುಖದೊಳಿಹರು
ತಂದೆ ಗಿರಿರಾಯನು ಬಹಳ ಬಡವನು ಮುದುಕ
ಇಂದೇನು ಕೊಟ್ಟರ್ಾಗೆಂದು ನುಡಿದೊ ೮

ಅಲ್ಪಸ್ವಲ್ಪವೆಂದು ಕೊಪ್ಪರಿಗೆ ಹಣವಿತ್ರು
ಎಪ್ಪತ್ತು ಆನೆ ಕುದುರೆಗಳನಿತ್ರು
ಒಪ್ಪದಲಿ ಬಳಸೆಂದು ಹೊನ್ನು ಕಲಶವನಿತ್ರು
ನಮ್ಮೋರು ಬಡವರಿನ್ನೇನೀವರು ೯

ಆರ್ ಹೇರು ಸಣ್ಣಕ್ಕಿ ಆರ್ ಹೇರು ಅರಿಸಿನ
ಆರ್ ಹೇರು ಅಡಕೆ ಒಂದಡಿಗೆ ಬೆಲ್ಲ
ಆರು ಕೊಳಗ ಮೆಣಸು ನೂರು ಕಾಯಿತ್ತರು
ನಮ್ಮೋರು ಬಡವರಿನ್ನೇನೀವರು ೧೦

ಐದು ಹರಿವಾಣಗಳು ಐದು ದೀವಿಗೆ ಕಂಬ
ಐದು ತಪ್ಪಲೆ ಹದಿನಾಲ್ಕು ಜಂಬು
ಐದು ಬಿಂದಿಗ್ಗಳು ನಾಲ್ಕು ಜಂಬತ್ತ್ರು
ನಮ್ಮೋರು ಬಡವರಿನ್ನೇನೀವರು ೧೧

ಐದು ಪಟ್ಟೇ ಸೀರೆ ಐದು ಬಣ್ಣದ್ ಸೀರೆ
ಐದು ಸಕಲಾತಿ ಮತ್ತೈದು ಶಾಲು
ಐದು ರತ್ನಗಂಬ್ಳಿ ಪಟ್ಮಂಚವಿತ್ತ್ರು
ನಮ್ಮೋರು ಬಡವರಿನ್ನೇನೀವರು ೧೨

ಕರೆವೊ ಹಸು ಹದಿನೆಂಟು ಕಾಲಾಳು ನೂರು ಜನ
ಕರೆವೊ ಎಮ್ಮೆಂಟು ಅದರ ಕರುಗಳೆಂಟು
ಕರೆದು ಕಾಸಿ ಕೊಡುವೊ ದಾಸೀರನಿತ್ತ್ರು
ನಮ್ಮೋರು ಬಡವರಿನ್ನೇನೀವರು ೧೩

ಕಡೆದ ಜೇಪರಿಸಿನ ಕಸ್ತೂರಿ ಕುಂಕುಮ
ತೊಡುವ ಕುಪ್ಪಸವು ನುಡಿವ ಗಿಣಿಯು
ಕಡಲ ಮುತ್ತೈದೇರು ಮುಡಿಲನೇ ತುಂಬೋರು
ನಮ್ಮೋರು ಬಡವರಿನ್ನೇನೀವರು ೧೪

ಇಷ್ಟದ ಮಗಳೆಂದು ಇಷ್ಟನೂ ನಿನಗಿತ್ತ್ರು ಎ
ಳ್ಳಷ್ಟನಾದರು ಎನಗೆ ಕೊಡಲಿಲ್ಲವೆ?
ಇಷ್ಟನೂ ನನಗಿತ್ತ್ರು ಎನ್ನನೇ ನಿನಗಿತ್ತ್ರು
ಸೃಷ್ಟಿಗೊಡೆಯನೆ ಕೇಳೆಂದಳಾಕೆ ೧೫

ಉತ್ತಮ ಕ್ಷೇತ್ರದಲಿ ಉತ್ತರಾಯಣಕೂಟ
ಮತ್ತಲ್ಲಿ ಕಾವೇರಿ ಹೇಮಾವತಿ
ಮತ್ತಲ್ಲಿ ನೆಲಸಿದ ಭುವನೇಶ್ವರನ ಕೆಲದಲ್ಲಿ
ಸತ್ಯವಾಗಿ ನೆಲಸು ಸತಿಯು ಕೂಟ ೧೬

## ಗೌರಮ್ಮನಿಗೆ ಸೋಗಿಲಕ್ಕಿ ಇಕ್ಕಿದ್ದು

(ಗೌರಿಯ ಹಬ್ಬದಲ್ಲಿ ಗೌರಮ್ಮನನ್ನು ಕಳಿಸುವಾಗ ಈ ಹಾಡು ಹೇಳುತ್ತಾರೆ)

ಹೊನ್ನ ರಥ ಶೃಂಗರಿಸಿ ಕನ್ನಡಿಯ ಜಿಗಿದವು
ಅಮ್ಮಾ ನಿಮ ಪಯಣ ಕಳುವಲಿ
ಅಮ್ಮಾ ನಿಮ್ಮ ಪಯಣ ಕಳುವಬೇಕೆನುತಲೆ
ಚಿನ್ನದ್ ಹೆಗ್ಗಾಳೆ ಹಿಡಿದವೆ ೧

ತೇರು ಶೃಂಗರವಾಗಿ ಬಾಗಿಲಿಗೆ ಬಂದಿದೆ
ತಾಯೇ ನಿಮ ಪಯಣ ಕಳುವ(ಲಿ)| ಬೇಕೆನುತಲೆ
ಕಾಳೆ ಸುವ್ವಾಳಿಸಿ ಹಿಡಿದವೆ ೨

ಮಿತ್ರೆ ಗೌರಮ್ಮಗೆ ಮುತ್ತ ಸೋಗಿಲಿಗ್ ಹುಯ್ದು
ಹಸ್ತವ ಮುಗಿದು ಸೆರಗೊಡ್ಡಿ| ಬೇಡುವೆ
ಬಿಚ್ಚೋಲೆಗೈದೆ ತನಗಳ ೩

ಭಾಮೆ ಗೌರಮ್ಮಗೆ ಗೋಧೀ ಸೋಗಿಲಿಗ್ ಹುಯ್ದು
ಪಾದಕ್ಕೆ ಎರಗಿ ಸೆರಗೊಡ್ಡಿ| ಬೇಡುವೆ
ತಾಳೋಲೆಗೈದೆ ತನಗಳ ೪

ಹಸ್ತಿಲನು ಇಳಿದಳು ತಾ ತಿರುಗಿ ನೋಡಿದೊ
ರಾಯ ತಮ್ಮಯ್ಯ ಪೊಡವಂಟ
ರಾಯ ತಮ್ಮಯ್ಯ ಪೊಡವಂಟೊಡ್ಡರಸಿದಳು
ಭಾಳ ಸೌಭಾಗ್ಯ ನಿನಗೆಂದು ೫

ಬಾಗಿಲ ಬಿಟ್ಟಿಳಿದಳು ತಾ ತಿರುಗಿ ನೋಡಿದೊ
ಮಂತ್ರಿ ತಮ್ಮಯ್ಯ ಪೊಡವಂಟ| (ಟೊಡ್ಡರ)ಸಿದಳು
ಅನಂತ ಸೌಭಾಗ್ಯ ನಿನಗೆಂದು ೬

ಮಿತ್ರೆ ಗೌರಮ್ಮನ ಅತ್ತೇ ಮನೆಗೆ ಕಳುಹಿ
ಇತ್ ಹ್ಯಾಗೆ ಒಳಗೆ ಇರಲಮ್ಮ | ಗೌರಮ್ಮನ
ಕೊಪ್ಪಿನ ಬೆಳಕು ಮನೆ ತುಂಬ ೭

ಭಾವೆ ಗೌರಮ್ಮನ ಮಾವನ ಮನೆಗೆ ಕಳುಹಿ
ಈಗ್ ಹ್ಯಾಗೆ ಒಳಗೆ ಬರಲಮ್ಮ | ಗೌರಮ್ಮನ
ವಾಲೆಯ ಬೆಳಕು ಮನೆ ತುಂಬ ೮

ರಂಭೆ ಗೌರಮ್ಮನ ಗಂಡನ ಮನೆಗೆ ಕಳುಹಿ
ಮತ್ ಹ್ಯಾಗೆ ಒಳಗೆ ಬರಲಮ್ಮ | ಗೌರಮ್ಮನ
ಬಂದಿಯ ಬೆಳಕು ಮನೆ ತುಂಬ ೯

## ಭೋಜನದ ರಗಳೆ

ಗಜಮುಖ ಗಣನಾಥಗೊಂದಿಪೆ ಶರಣು.
ತ್ರಿಜಗ ವಂದಿತ ಶಿವಸುತ ಶರಣು.
ಭಜಿಸುವೆ ಭಕ್ತಿಯಿಂದಲಿ ಪಶುಪತಿಯ.
ನಿಜದಲ್ಲಿ ಪಾಲಿಸು ಶಾರದೆ ಮತಿಯ.
ಇಷ್ಟ ಸಂಪದವನ್ನು ಕೊಡು ಮಹದೇವ.
ನಿಟ್ಟಿಸಿ ಪೇಳುವೆನೊಂದು ವಿನೋದವ,
ಮನುಜರ ಊಟದ ರಗಳೆಯ ಕೃತಿಯ,
ಶುಭದಿಂದ ವರ್ಣಿಪೆ ಕೊಡು ಸನ್ಮತಿಯ.

ಶೃಂಗೇರೀ ಪಟ್ಟಣದೊಳಗೊಂದು
ಮಂಗಳಕರವಾಗಿದೆ ಔತಣವಿಂದು !
ಹೋ ಹೋ ಹೋ ಹೊನಭಟ್ಟರೆ ಕೇಳಿ !
ಹೋ ಹೋ ಹೊತ್ತಾಯಿತು ಬೇಗೇಳಿ !
ತಿಮ್ಮಣ್ಭಟ್ಟರ ಮಗನೆಲ್ಹೋದ?
ಬಮ್ಮಣ್ಭಟ್ಟರ ಅಳಿಯೇನಾದ?
ಬಂದಿರುವರು ಜನ ಭಟ್ಟರು ಎಂದು

ಬೆರಸಿದ ಮಜ್ಜಿಗೆಯನ್ನೇ ತರಿಸಿ
ಔಸರದೋಗರ್ಣ ಬಡಿಸಿ.

ಬಿಗಿದಾ ಜನಿವಾರೆಲ್ಲಾ ವರಿಗೂ.
ಹೊದೆವರೆ ಭಾರಾ ದೋತ್ರದ ಸೆರಗು.
ನೆಮ್ಮದ ಗೋಡೆಯು ಸುಮ್ಮನೆ ಒರಗು
ಘುಮ್ಮನೆ ಗಂಧಾಕ್ಷತೆಯು ಕರಗೆ.

ಚಪ್ಪರದೊಳಗೊಬ್ಬ ಕೆಪ್ಪನ ನೋಡಿ
ತಪ್ಪದೆ ಮಾತಾಡಿದ ದನಿಗೂಡಿ.
ನಾಮಾಂಕಿತವೇನಯ್ಯಾ ನಿಮಗೆ ?
ಸೋಮಾರೊಪ್ಪತ್ತಯ್ಯಾ ನಮಗೆ.
ಅವಧಾನಂಗಳಿಗ್ಯಾವೂರಾಯ್ತು ?
ದವಸವು ನಮ್ಮಲ್ ಬಹು ಕ್ರಯವಾಯ್ತು.
ಹೆಂಡರು ಮಕ್ಕಳು ಎಲ್ಲಿದ್ದಾರೆ ?
ಪಂಡಿತರ್ ಔಸ್ತ್ರಿಗೆ ಕ್ರಯಗಳೆ ಬೇರೆ.
ಒಂಟಿ ಉಂಗುರ ತೋರಿಸಿದರು.
ಎಂಟು ದಿವಸಕೆ ಕಿಗ್ಗದ ತೇರು.
ಕುಟಿಲಿಗಳೆಂದರೆ ನೀವೀಗ.
ಟೋಪೀ ಕ್ರಯ ಮೂರ್ ಹಣ ಮುಪ್ಪಾಗ.
ಎಣ್ಣೊರಿಗೆಯು ತರಿಸಲೆ ನಿಮಗೆ ?
ಕನ್ನಿಕೆ ನೆರೆದೊ ಚಿನ್ನದ ಹಾಗೆ.
ಚೆನ್ನಾಗಿದೆ ನೋಡ್ ಹುಣಿಸೇ ಸಾರು.
ಚೆನ್ನಯ್ನಂಗ್ಡೀಲ್ ಕಡಮೇ ಸೇರು.
ಬಾಳೇ ಹಣ್ಣಿನ ಸೀಕರಣೆ ಬೇಕೆ ?
ಸೂಳೇರಾಟನ್ಯಾತಕೆ ನಮಗೆ ?

ಕೆಪ್ಪರ ಕೂಟಲ ಮಾತೇ ಹೀಗೆ.
ಚಪ್ಪರಕ್ ಹಾಕಿದೆ ಐನೂರ್ ಸೋಗೆ.
ಮಡಿ ಬಂದs ಹಚ್ಚಡವನ್ನೇ ತರಿಸಿ,
ಹಚ್ಚಡ ಶಾಲು ನಿಮಗೋದಿsಸಿ, ೯೫
ಪುತ್ರೋತ್ಸವವು ನಿಮಗೆಂದೆನಿಸಿ

(ಅಪೂರ್ಣ)

## ಹಬ್ಬ

ನಾಳೆ ಬೆಳಗಾಗ ನಮಗ್ ಹಬ್ಬ ಬಂತಲ್ಲ
ನಮಗ್ ಹಬ್ಬ ಬಂತಲ್ಲ
ಗೋಧಿ ಬೆಲ್ಲಗಳಿಲ್ಲ ಕಾಯಿ ಮೊದಲಿಲ್ಲ ೧

ಹಬ್ಬವೆಂಬುದು ಹಾಗಲ್ಲ ಜಾಣೇ
ಅದು ಹಾಗಲ್ಲ ಜಾಣೇ
ಉರ್ವಿಗೀಶ್ವರನ ಪೂಜೆ ಮಾಡೋದೆ ಹಬ್ಬ ೨

ಕಣ್ಣೂ ಕೈಕಾಲುಗಳೂ ಇರುವೋದೆ ಹಬ್ಬ
ನಮಗಿರುವೋದೆ ಹಬ್ಬ
ಪುಣ್ಯವಂತರ ನೋಡಿ ನಲಿವೋದೆ ಹಬ್ಬ ೩

ಸಾಲವಿಲ್ಲದ ಸಂಸಾರವೆ ಹಬ್ಬ
ಸಂಸಾರವೆ ಹಬ್ಬ
ಜೀವಕ್ಕೆ ವ್ಯಾಧಿ ಇಲ್ಲದಿರುವೋದೆ ಹಬ್ಬ ೪

ಹಂಗು ಇಲ್ಲದೆ ಉಂಬೋದೆ ಹಬ್ಬ
ತಿರಿದುಂಬೋದೆ ಹಬ್ಬ
ಕರ್ಣಂಗಳಲ್ ಹರಿಕಥೆ ಕೇಳೋದೆ ಹಬ್ಬ ೫

ಕಾಶಿಯ ಒಳಗೆ ವಾಸವೆ ಹಬ್ಬ
ನಮಗ್ ವಾಸವೆ ಹಬ್ಬ
ಮಣಿಕರ್ಣಿಕೆಯಲ್ಲಿ ಸ್ನಾನವೆ ಹಬ್ಬ ೬

ಲಕ್ಷ್ಮಣ—ಈರಣ್ಣ ... ... ೧೫೭

೩ ಟಿಪ್ಪೂ ಸುಲ್ತಾನನ ಬೀಳಿನ ಹಾಡು (೧) ... ೧೬೪

೪ ,, (೨) ... ೧೭೫

## ತೆನೆ ೭ ಬ್ರಾಹ್ಮಣರ ಹಾಡುಗಳು ೧೭೭-೨೦೬

ಪರಿಚಯ ... ... ೧೭೯

೧ ನಂಜುಂಡ ಜೋಗಿ ... ... ೧೮೭

೨ ಗಿರಿಜಾ ಕಲ್ಯಾಣದಿಂದ ೧೯೨-೧೯೭ ... ...

ಗಿರಿರಾಜ ಉಮೆಯರ ಸಂವಾದ ... ... ೧೯೨

ಗೌರಿಯ ಕಲ್ಯಾಣ ... ... ೧೯೪

ಗೌರಮ್ಮನನ್ನು ಗಂಡನ ಮನೆಗೆ ಕಳಿಸಿದ್ದು ... ೧೯೬

೩ ಗೌರಿದೇವಿ ತವರಿಗೆ ಹೋಗಿ ಬಂದದ್ದು ... ೧೯೭

೪ ಗೌರಮ್ಮನಿಗೆ ಸೋಗಿಲಕ್ಕಿ ಇಕ್ಕಿದ್ದು ... ... ೨೦೦

೫ ಭೋಜನದ ರಗಳೆ ... ... ೨೦೧

೬ ಹಬ್ಬ ... ... ೨೦೫

## ತೆನೆ ೮ ಬಸವನ ಅಷ್ಟಮಿಯ ಹಾಡುಗಳು ೨೦೭-೨೨೩

ಪರಿಚಯ ... ... ೨೦೯

೧ ನೀರು ತುಂಬಿಟ್ಟುಕೊಂಡ ಮೇಲೆ ಹೇಳುವುದು ... ೨೧೧

೨ ಬಾಗಿಲು ತಡೆಯುವ ಹಾಡು ... ... ೨೧೨

೩ ನೀರಿಡುವಾಗ ಹೇಳುವುದು ... ... ೨೧೩

೪ ಕೋಲನ್ನಾಡೋಣ ಬನ್ನಿ ... ... ೨೧೩

೫ ಹಾಲುವೂರುತ ಬಂದಳಾಕೆ ... ... ೨೧೪

೬ ಮಂದರಧರ ತಡೆದನ್ ಯಾತಕೊ ... ... ೨೧೫

೭ ಶಿವನು ಭಿಕ್ಷಕೆ ಬಂದ ನೀಡು ಬಾರೆ ... ... ೨೧೭

೮ ಕೋಲು ಸುವರ್ಣನೆ ... ... ೨೧೯

೯ ದುಡ್ಡು ಕೇಳುವ ಹಾಡು ... ... ೨೨೨

೧೦ ಹರಕೆ ... ... ೨೨೩

ಮುಡಿವು ... ... ೨೨೪

ಟಿಪ್ಪಣಿ ... ... ೨೨೫

ಅನುಬಂಧ ... ... ೨೯೯

## ಚಿತ್ರಗಳು


| | | |
|---|---|---|
| ಸುಗ್ಗಿ | | ಮುಖಚಿತ್ರ |
| ತಿ॥ ಲಿಂಗಣ್ಣಯ್ಯನವರು ಮತ್ತು ಮಾ॥ ಶ್ರೀ ಚೆನ್ನಮ್ಮನವರು | | ೩ ನೆಯ ಪುಟದೆದುರು |
| ಕೋಲಾಟ .... .... .... | ಪುಟ | ೧ |
| ತಿಂಗಳು ಮಾವನ ಪೂಜೆ .... .... | | ೪೭ |
| ರಾಗಿ ಕಲ್ಲು .... .... .... | | ೫೭ |
| ಕಲ್ಯಾಣ .... .... .... | | ೮೧ |
| ಹಚ್ಚೆ ಹುಯ್ಯುವುದು .... .... .... | | ೧೨೯ |
| ಸರ್ಜಪ್ಪನಾಯಕ .... .... .... | | ೧೪೫ |
| ಗೌರಿಯ ಪೂಜೆ .... .... .... | | ೧೭೭ |
| ಬಾಗಿಲು ತಡೆಯುವುದು .... .... | | ೨೦೭ |

# ತೆನೆ ೮

## ಬಸವನ ಅಷ್ಟಮಿಯ ಹಾಡುಗಳು



## ಪರಿಚಯ

ಒಕ್ಕಲಿಗರ ಹುಡುಗಿಯರು 'ತಿಂಗಳು ಮಾವನ ಪೂಜೆ' ಮಾಡುವ ಹಾಗೆಯೇ ಬ್ರಾಹ್ಮಣರ ಹುಡುಗಿಯರು ಬಸವನ ಅಷ್ಟಮಿಯ ಹಬ್ಬ ಮಾಡುತ್ತಾರೆ. ಈ ಹಬ್ಬ ಕಾರ್ತಿಕ ಮಾಸದಲ್ಲಿ ಬರುತ್ತದೆ. ಆಗ ದೀವಳಿಗೆಗೆ ಅಳಿಯಂದಿರೂ ಬಂದಿರುತ್ತಾರೆ. ಅವರ ನಲ್ಲೆಯರೂ ತಮ್ಮ ಅಕ್ಕ ತಂಗಿಯರೊಡನೆ ಕೋಲಾಟದಲ್ಲಿ ಸೇರಿ ಹಬ್ಬದ ನಲವನ್ನು ಹಲವು ಮಡಿ ಹೆಚ್ಚಿಸುತ್ತಾರೆ. ದೀವಳಿಗೆಗೆ ಬಂದ ಅಳಿಯಂದಿರು ಸಾಮಾನ್ಯವಾಗಿ 'ಬಸವನ ಅಷ್ಟಮಿ' ಮುಗಿಯುವವರೆಗೂ ಅತ್ತೆಯ ಮನೆಯಲ್ಲಿರುವುದು ವಾಡಿಕೆಯಾಗಿತ್ತು.

ಬಸವನ ಪೂಜೆಯೂ ದೀವಳಿಗೆಯ ದಿನವೇ ಮೊದಲಾಗುತ್ತದೆ. ಹೆಣ್ಣುಮಕ್ಕಳು ಎಣ್ಣೆ ನೀರೆರೆದುಕೊಂಡು ಹೊಸ ಸೀರೆ ಕುಪ್ಪಸ ತೊಟ್ಟು ಕಲಶ ಕನ್ನಡಿ ಹಿಡಿದುಕೊಂಡು ಕುಂಬಾರನ ಮನೆಗೆ ಹೋಗುತ್ತಾರೆ. ಕುಂಬಾರ ಅವರಿಗಾಗಿ ಮಣ್ಣಿನಲ್ಲಿ ಬಸವನನ್ನು ಮಾಡಿಟ್ಟಿರುತ್ತಾನೆ. ಅಲ್ಲೇ ಹುಲ್ಲುಗರಿಕೆ, ಹೂ ಪತ್ರೆಗಳಿಂದ ಬಸವಣ್ಣನಿಗೆ ಪೂಜೆ ಮಾಡಿ ಕೋಲಾಟ ಆಡಿ, ಬಸವನನ್ನು ತೆಗೆದುಕೊಂಡು ದಾರಿಯುದ್ದಕ್ಕೂ ಹಾಡಿಕೊಂಡು ಮನೆಗೆ ಬರುತ್ತಾರೆ. ಬಂದು ಯಾರಾದರೊಬ್ಬರ ಮನೆಯಲ್ಲಿ ಬಸವನನ್ನು ಕೂರಿಸುತ್ತಾರೆ. ದಿನದಿನವೂ ಪೂಜೆ, ಆರತಿ, ಮೊದಲಾದ ಉಪಚಾರಗಳನ್ನು ಮಾಡುತ್ತಾರೆ. ಸಂಜೆ, ಬೆಳಗ್ಗೆ ಎರಡು ಹೊತ್ತೂ ಕೆರೆ, ಹೊಳೆ ಅಥವಾ ಕೊಳಕ್ಕೆ ಹೋಗಿ, 'ಬಸವನ ಸಂಧ್ಯಾವಂದನೆ'ಗೆ ನೀರು ತರುತ್ತಾರೆ. ಸಂಜೆ ಅಥವಾ ಬೆಳಗಿನ ಹೊತ್ತು ಅನುಕೂಲವಾದಾಗ ಮನೆಮನೆಗೂ ಹೋಗಿ ಕೋಲಾಟ ಆಡುತ್ತಾರೆ. ಆಡಿ, ಹಾಡಿ, ದೊರೆತಷ್ಟು ಸಂಭಾವನೆ ತರುತ್ತಾರೆ. ಇದನ್ನು ಹಬ್ಬದ ವೆಚ್ಚಕ್ಕೆ ಉಪಯೋಗಿಸುತ್ತಾರೆ. ಅಷ್ಟಮಿಯವರೆಗೂ ಈ ಕೋಲಾಟದ ಸಡಗರ. ಕಡೆಯ ನಾಲ್ಕು ದಿನ ಬಸವನಿಗೆ ಮದುವೆ. 'ಮದವಣಿಗಶಾಸ್ತ್ರ' ಮೊದಲುಗೊಂಡು ಮದುವೆಯ ಕಾರ್ಯಗಳೆಲ್ಲ ಕ್ರಮವಾಗಿ ನಡೆಯಲೇಬೇಕು.

ಮದುವೆ ಮಾಡಿಸುವುದಕ್ಕೆ ಪುರೋಹಿತರೂ ಬರುತ್ತಾರೆ. (ಆದರೆ ಎಲ್ಲವೂ ಹುಡುಗರ ಕೆಲಸ. ದೊಡ್ಡವರಿಗೆ ಇಲ್ಲಿ ಭಾಗವಿಲ್ಲ.) ಮದುವೆಯೆಲ್ಲ ಮುಗಿದಮೇಲೆ ಅಷ್ಟಮಿಯ ದಿನ ಹಬ್ಬದೂಟ ಉಂಡು ಬಸವನನ್ನು ಹೊಲಕ್ಕೆ ಬಿಟ್ಟು ಬರುತ್ತಾರೆ.

ಈಗ ೨೫-೩೦ ವರ್ಷಗಳ ಹಿಂದೆ ಎಲ್ಲ ಊರುಗಳಲ್ಲಿಯೂ ಬಸವನ ಅಷ್ಟಮಿಯಲ್ಲಿ ಹೆಣ್ಣು ಮಕ್ಕಳು ಕೋಲುಹುಯ್ಯುವುದು ರೂಢಿಯಾಗಿತ್ತು. ಈಗ ಅದು ಪೂರ್ತಿಯಾಗಿ ನಿಂತುಹೋದಂತೆ ಕಾಣುತ್ತದೆ. ಹಬ್ಬದ ಊಟವೇನೋ ಆಗುತ್ತಿರಬಹುದು. ಹಾಡು, ಕೋಲಾಟ ಮಾತ್ರ ಮಾಯ ವಾಗಿದೆ.

ಈ ಹಾಡುಗಳಲ್ಲಿ ತ್ರಿಪದಿಗಳು ಬೇಕಾದಷ್ಟಿವೆ. ಜೊತೆಗೆ ಬೇರೆ ಮಟ್ಟಿನ ಹಾಡುಗಳೂ ಉಂಟು. ರಾಮಾಯಣ ಭಾರತ ಭಾಗವತಗಳಿಗೆ ಸಂಬಂಧಿಸಿದ ಪದಗಳು ಹಲವಿವೆ. ಬರಿಯ ವಿನೋದದ ಪದಗಳೂ ಕೆಲ ವಿವೆ. ಈ ಹಾಡುಗಳಲ್ಲಿಯೂ ಈ ಹಬ್ಬ ಮಾಡುವ ರೀತಿಯಲ್ಲಿಯೂ ಬ್ರಾಹ್ಮಣೇತರರ ಹಬ್ಬ ಮತ್ತು ಪದಗಳ ಹೋಲಿಕೆ ಸ್ವಲ್ಪ ಕಾಣುತ್ತದೆ. ನಿದರ್ಶನಕ್ಕಾಗಿ ಕೆಲವು ಹಾಡುಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ.

## ಸಂಧ್ಯಾವಂದನೆಗೆ ನೀರು ತರುವಾಗ ನೀರು ತುಂಬಿಟ್ಕೊಂಡ ಮೇಲೆ ಹೇಳುವುದು

ಎಲೆಯೋ ಎಲೆಯೋ ಎಲೆ ಕೆಂಜಡೆಯೋ
ಎಲೆ ಬಳ್ಳಿ ಮೇಲೆ ನಾಗ ಸಂಪಗೆಯೋ
ನಾಗ ಸಂಪಗೆಯೋ ನಂದನ ಬನವೋ
ನಂದನ ಬನದೊಳಗೆ ನಿಂದಿರುವೋರ್ ಯಾರೆ?
ನಿಂದಿರುವೋರ್ ಯಾರೆ? ತಂದೆ ಬಸವಯ್ಯ
ತಂದೆ ಬಸವಯ್ಯನ ಮಗನು ಕೆಂಪಯ್ಯ
ಮಗನು ಕೆಂಪಯ್ಯನ ರಾಜ ಬೀದಿಯೊಳಗೆ
ರಾಜ ಬೀದಿಯೊಳಗೆ ರತ್ನಗಂಬ್ನಿ ಹಾಸಿ
ರತ್ನಗಂಬ್ಳಿವ್ಯಾಲೆ ಕೃಷ್ಣರಾಯರ ಕುಳ್ಳಿರಿಸಿ
ಕೃಷ್ಣರಾಯರ ಕೈಲ ಜೋಟ್ ಜೋಟ್ ಕುಡುಗೋಲು
ಜೋಟ್‌ಜೋಟ್ ಕುಡುಗೋಲ್ಗೆ ಮಾರ್ ಮಾರ್ ಹಗ್ಗ
ಮಾರ್‌ಮಾರ್ ಹಗ್ಗಕ್ಕೆ ಮದ್ದಾನಂಥ ಎಮ್ಮೆ
ಮದ್ದಾನಂಥ ಎಮ್ಮೆಗೆ ಗೆಜ್ಜೆ ಕಟ್ಟಿದ ತಂಬಿಗೆ
ಗೆಜ್ಜೆಕಟ್ಟಿದ ತಂಬಿಗ್ಗೆ ಗೀರ್‌ಬೋರ್ ಹಾಲು
ಗೀರ್‌ಬೋರ್ ಹಾಲಿಗೆ ಹೆಂಟೆಹೆಂಟೆ ಮೊಸರು
ಹೆಂಟೆಹೆಂಟೆ ಮೊಸರಿಗೆ ಕಲ್ಲಿನಂಥ ಬೆಣ್ಣೆ
ಕಲ್ಲಿನಂಥ ಬೆಣ್ಣೆಗೆ ಕಸ್ತೂರಿಯಂಥ ತುಪ್ಪ
ಕಸ್ತೂರಿಯಂಥ ತುಪ್ಪಕ್ಕೆ ಹೂವಿನಂಥ ಹುಯ್ಗಡುಬು
ಹೂವಿನಂಥ ಹುಯ್ಗಡುಬ ತಿನ್ನಬಾರೊ ಬಸವಯ್ಯ ೧

ಆನೆ ಬಂತು ಅರಮನೆಗ್ ಹೋಯ್ತು
ಒಂಟೆ ಬಂತು ಮಂಟಪಕ್ ಹೋಯ್ತು
ಕುದುರೆ ಬಂತು ಚದುರಂಗಕ್ ಹೋಯ್ತು
ಆದಿಲಕ್ಷಮ್ಮ ಆರತಿಯೆತ್ತೆ
ಮಿತ್ರೆ ಗಂಗಮ್ಮ ಅಕ್ಷತೆ ತಳಿಯೆ ೨

ಮಿತ್ರೆ ಗಂಗಮ್ಮನ ಹಸ್ತಿಲೊಟ್ಟಿನ ಮೇಲೆ
ಇಪ್ಪತ್ತೊಂದರಳಿ ಮರ ಹುಟ್ಟಿ। ಕೋಲ್‌ಹುಯ್ದು
ಮಿತ್ರೇರಿಗೆಲ್ಲಾ ನೆರಳಾಯ್ತು ೩

(ಇದನ್ನು ಹೇಳಿದ ಮೇಲೆ ನೀರನ್ನು ಮನೆಗೆ ತರುತ್ತಾರೆ)

ನೀರನ್ನೂ ಗರಿಕೆಯನ್ನೂ ಮನೆಗೆ ತಂದಾಗ ಬಾಗಿಲು ತಡೆಯುತ್ತಾರೆ. ಗಂಡನ ಹೆಸರು ಹೇಳಿಸಿ ಒಳಕ್ಕೆ ಬಿಡುತ್ತಾರೆ ಮದುವೆಯಾಗದ ಹುಡುಗಿಯರು 'ಗಂಡನ ಹೆಸರು ಬಸವ' ಎಂದು ಹೇಳಬೇಕು.

## ಬಾಗಿಲು ತಡೆಯುವ ಹಾಡು

ಒಂದೆಂಬೋದು ಚಂದ್ರಮಾಲೇ ಸರ
ಎರಡೆಂಬುದೇನೆ ಸಖಿ ಹೇಳೆ*

ಎರಡೆಂಬೋದು ಗರುಡಮಾಲೇ ಸರ
ಮೂರೆಂಬುದೇನೆ ಸಖಿ ಹೇಳೆ

ಮೂರೆಂಬೋದು ಮುತ್ತಿನ ಸರ ಕಾಣೆ
ನಾಕೆಂಬುದೇನೆ ಸಖಿ ಹೇಳೆ

ನಾಕೆಂಬೋದು ಆಕಳ ಮೊಲೆ ಕಾಣೆ
ಐದೆಂಬುದೇನೆ ಸಖಿ ಹೇಳೆ

ಐದೆಂಬೋದು ಕುಯ್ದು ಮಲ್ಲಿಗೆ ಸರ
ಆರೆಂಬುದೇನೆ ಸಖಿ ಹೇಳೆ

ಆರೆಂಬೋದು ಹಾರುವ ಹಕ್ಕಿ ಕಾಣೆ
ಏಳೆಂಬುದೇನೆ ಸಖಿ ಹೇಳೆ

ಏಳೆಂಬೋದು ಏಳ್‌ಹೆಡೆ ಸರ್ಪ ಕಾಣೆ
ಎಂಟೆಂಬುದೇನೆ ಸಖಿ ಹೇಳೆ

---

* 'ಸಖಿ ಹೇಳೆ' ಎಂಬುದಕ್ಕೆ ಬದಲಾಗಿ ಕೆಲವು ಕಡೆ 'ಹೆಸರ್ ಹೇಳೆ' ಎಂದು ಉದ್ದಕ್ಕೂ ಹೇಳುತ್ತಾರೆ.

ಎಂಟೆಂಬೋದು ಕಂಠಮಾಲೇ ಸರ
ಒಂಬತ್ತೆಂಬುದೇನೆ ಸಖಿ ಹೇಳೆ
ಒಂಬತ್ತೆಂಬುದು ತುಂಬಿದ ಕೊಡ ಕಾಣೆ
ಹತ್ತೆಂಬುದೇನೆ ಸಖಿ ಹೇಳೆ
ಹತ್ತೆಂಬೋದು ಕಿತ್ತಳೆ ಬನ ಕಾಣೆ
ಹನ್ನೊಂದೆಂಬುದೇನೆ ಸಖಿ ಹೇಳೆ
ಹನ್ನೊಂದೆಂಬುದು ಹೊನ್ನಿನುಂಗುರ ಕಾಣೆ
ಇನ್ನೊಂದ್ ಹೇಳೆ ಗಂಡನ್ ಹೆಸರ
ಮತ್ತೊಂದ್ ಹೇಳೆ ಮಾವನ್ ಹೆಸರ
ಮುಚ್ಚಿ ಮುಚ್ಚಿ ಹೇಳೆ ಅತ್ತೆ ಹೆಸರ

## ಒಳಗೆ ಹೋಗಿ ನೀರಿಡುವಾಗ

ಬಸವಾ ಬಸವಯ್ಯಾ ಬಾಲ ಬೀಸಯ್ಯಾ
ಬಾಲ ಬೀಸಿದರೆ ಹಾವು ಕಚ್ಚಿತು
ಹಾವು ಕಚ್ಚಿದರೆ ಹರಿದು ಬಿದ್ದನು
ನಮ್ಮ ಬಸವಯ್ಗೆ ಚಿನ್ನದ ಕೋಡು
ನಿಮ್ಮ ಬಸವಯ್ಗೆ ಮಣ್ಣಿನ ಕೋಡು
ನಮ್ಮ ಬಸವಯ್ಯ ಆನೇನೇರಿದ
ನಿಮ್ಮ ಬಸವಯ್ಯ ಗೋಡೇನೇರಿದ
ನಮ್ಮ ಬಾಲ ಬಸವಯ್ಯನ ಸಂಧ್ಯಾವ್ನೆಗೆ ನೀರೋ ನೀರು

ಎಂದು ಎಲ್ಲಾ ಒಟ್ಟಿಗೆ ಕೂಗಿ ಬಸವನ ಮುಂದೆ ನೀರಿಡುತ್ತಾರೆ

## ಕೋಲನ್ನಾಡೋಣ ಬನ್ನಿ

ಕೋಲನ್ನಾಡೋಣಽ ಬನ್ನಿ । ಜಾಣೆಯರೆಲ್ಲಾ । ಮುದ್ದು ।
ಬಾಲೆಯರೆಲ್ಲಾ । ಮುದ್ದು । ಕೋಮಲಾಂಗ ಶ್ರೀನಿವಾಸ
ರಂಗನಽ ಮೆಲೆ॥ ಪಲ್ಲ ॥

ಕೆಂಪು ಚೆಪ್ಪು ಅರಿಸಿನ ಗಂಧ
ಇಂಪಾದ ಹರಿ ನಾಮದ ಬಟ್ಟು
ಸೊಂಪುಳ್ಳ ಹುಡುಗೀ ಬಾರೆ ಕೋಲನ್ನಾಡೋಣ ೧

ಹಾಗದ ಅಡಕೆ ಹಣವಿನ ಶಿಸ್ತು
ಸಾದಿನ ಬಟ್ಟು ಸವು ಕಟ್ಟಿನ ಸೀರೆ
ಬೀದೀಲ್ ಹೋಗೋಳೆ ಬಾರೆ ಕೋಲನ್ನಾಡೋಣ ೨

ದೊಡ್ಡ ಅಂಚಿನ ಸೀರೇನುಟ್ಟು
ದುಡ್ಡಿನಗಲ ಕುಂಕುಮವಿಟ್ಟು
ದೊಡ್ಡೋರ ಮಗಳೇ ಬಾರೆ ಕೋಲನ್ನಾಡೋಣ ೩

## ಹಾಲು ಮಾರುತ ಬಂದಳಾಕೆ

ಕೋಲು ಹವಳದ ಕೋಲು ಪವಳದ
ಕೋಲು ಚಿನ್ನದ ರನ್ನದ
ಕೋಲನ್ ಹುಯ್ದು ಪಾಡಿರಮ್ಮ
ಬಾಲನs ಗೋಪಾಲನs || ಪಲ್ಲ ||

ಹಾಲು ಮಾರುತ ಬಂದಳಾಕೆ
ಕೀಲುಕಡಗದ ಗೊಲ್ಲಿತಿ—ಆಕೆ
ಕೀಲು ಕಡಗದ ಗೊಲ್ಲಿತಿ
ಹಾಲು ಸುಂಕವ ಬೇಡಿದsರೆ
ಕೀಲು ಕಡಗವ ತೋರಿದೊ—ಆಕೆ
ಕೀಲು ಕಡಗವ ತೋರಿದೊ ೧

ಮೊಸರು ಮಾರುತ ಬಂದಳಾಕೆ
ಕುಸುರಿಕಡಗದ ಗೊಲ್ಲಿತಿ—ಆಕೆ

ಕುಸುರಿ ಕಡಗದ ಗೊಲ್ಲಿತಿ
ಮೊಸರು ಸುಂಕವ ಬೇಡಿದರೆ
ಕುಸುರಿ ಕಡಗವ ತೋರಿದೊ—ಆಕೆ
ಕುಸುರಿಕಡಗವ ತೋರಿದೊ ೨

ಬೆಣ್ಣೆ ಮಾರುತ ಬಂದಳಾಕೆ
ಸಣ್ಣ ಕಡಗದ ಗೊಲ್ಲಿತಿ—ಆಕೆ
ಸಣ್ಣ ಕಡಗದ ಗೊಲ್ಲಿತಿ
ಬೆಣ್ಣೆ ಸುಂಕವ ಕೇಳಿದರೆ
ಸಣ್ಣ ಕಡಗವ ತೋರಿದೊ—ಆಕೆ
ಸಣ್ಣ ಕಡಗವ ತೋರಿದೊ ೩

## ಮಂದರಧರ ತಡೆದನ್ ಯಾತಕೊ

ಕೋಲು ಹವಳದ................|| ಪಲ್ಲ ||

ಮಂದರಧರ ತಡೆದನ್ ಯಾತಕೊ | ಗಂಧಪರಿಮಳ ಸೊಗಸದು
ದಿವ್ಯ | ಗಂಧಪರಿಮಳ ಸೊಗಸದು
ಮಂದಿರದೊಳು ನಿಂದಿರಲಾರನೆ | ಹಾಗೆಂದು ರುಕ್ಮಿಣಿ ಚಿಂತಿಸಿ
ಕೋಲು ಹವಳದ................ ೧

ಚಕ್ರಧರನ ಚೆಲುವ ಚೆನ್ನಿಗ | ರಕ್ಕಸರ ಸಂಹಾರನ
ದೊಡ್ಡ | ರಕ್ಕಸರ ಸಂಹಾರನ
ಅಕ್ರೂರವರದನ ಕರದು ತಾರೇ | ಅಕ್ಕ ನೀ ತಡಮಾಡದೆ ೨

ಸಾಗಿ ಪೋಗಿ ಬೇಗ ದೂತಿ | ನಾಗಶಯನನಿಗೆರಗಲು
ಸ್ವಾಮಿ | ನಾಗಶಯನನಿಗೆರಗಲು
ಭೋಗದ ಸತಿ ಜರೆದಳೆನುತಲೆ | ಜಾಗು ಮಾಡದೆ ಹೊರಟನು ೩

ರಂಗ ಬಾಹಾ ಬರವ ಕಾಣುತ
ಮಂಗಳಾರತಿ ತಂದಳು—ದಿವ್ಯ
ಮಂಗಳಾರತಿ ತಂದಳು
ತುಂಗ ವಿಕ್ರಮ್ನ ಚರಣಕೆರಗಿ ಆ
ಲಿಂಗನೇಯನು ಮಾಡಿದೊ ೪

ಯಾಕೆ ತಡೆದಿರಿ ಲೋಕನಾಯಕ
ವ್ಯಾಕುಲದೊಳಗಿದ್ದೆನೆ—ನಾ......
ಅನೇಕ ಶ್ರಮದಿಂ ಬಂದೆ ರುಕ್ಮಿಣಿ
ಯಾಕೆ ಕಿಂಕರವಾದೆಯೆ ೫

ಕೃಷ್ಣರಾಡಿದ ಮಾತ ಕೇಳಿ
ಲೆತ್ತ ಪಗಡೆಯ ತಂದಳು—ಬೇಗ.......
ಎತ್ತಿ ಹಸೆ ಚೌಕ ಮೂಲೆ
ಮುತ್ತಿನ ಗದ್ದುಗೇನಿಟ್ಟಳು ೬

ಪೊಡವಿಗೊಡೆಯನು ಒಡನೆ ಕುಳಿತಿರೆ
ಮಡದಿ ರುಕ್ಮಿಣಿ ಕುಳ್ಳಿರೆ—ಅಲ್ಲಿ.......
ಪಿಡಿದ ತಾಂಬೂಲ ಗುಟುಕಿತ್ತು
ಮುಡಿಗೆ ಮಲ್ಲಿಗೆ ಮುಡಿಸಿದೊ ೭

(ಆಮೇಲೆ ಸರಸವಾಗಿ ಮಾತಾಡುತ್ತ ಲೆತ್ತವಾಡುತ್ತಾರೆ. ರುಕ್ಮಿಣಿ ಗೆಲ್ಲುತ್ತಾಳೆ. ಕೃಷ್ಣ ಅದು ಕಳ್ಳಾಟವೆಂದು ಆಕ್ಷೇಪಿಸುತ್ತಾನೆ. ರುಕ್ಮಿಣಿ, 'ನನ್ನದು ಕಳ್ಳಾಟವಲ್ಲ. ನೀವು ಬಾಯಿ ಬಡಿಯುತ್ತೀರಿ. ಇದು ನ್ಯಾಯವೆ?' ಎನ್ನುತ್ತಾಳೆ. ಕೃಷ್ಣ ಮುನಿದು ಮುಸುಗಿಟ್ಟು ಮಲಗುತ್ತಾನೆ. ಆಗ)

ಚೆಲ್ವೆ ಬಂದು ತಾನು ಕುಳಿತು
ಒಲ್ಲಿ ಮುಸುಕನು ತೆಗೆದಳು—ಹೊದ್ದೊಲ್ಲಿ.......
ಸಲ್ಲದು ನಿನ್ನಾಟ ಸೊಗಸದು
ಎದ್ದು ಆಟವ ಕೆಡಿಸಿದೊ ೮

ಆಟದಿಂದಲೆ ಕ್ರೋಧವ್ಯಾತಕೆ
ಪಾಂಡವರಿದನಾಡಿ ಕೆಟ್ಟರು—ಪಂಚ
ಪಾಂಡವರು ಆಡಿ ಕೆಟ್ಟರು
ಆಟದೊಳು ನಿಷ್ಠೂರವ್ಯಾತತೆ
ಯಾಕೆ ಕಿಂಕರವಾದಿರಿ ೯

ಅಂದ ಮಾತನು ಕೇಳುತಾಕ್ಷಣ
ಮುಂಗುರುಳ ತಾ ತಿದ್ದುತ—ಸ್ವಾಮಿ........
ಚೆಂದದಿಂ ತೊಡೆಯೊಳಗೆ ಕುಳಿತಳು
ಮಂದಗಮನೆ ರುಕ್ಮಿಣಿ ೧೦

ಸಪ್ತರಾಗಗಳಿಂದ ಪಾಡುತ
ಮುತ್ತಿನಾರತಿಯೆತ್ತುತ—ತಾ........
ಕೃಷ್ಣರುಕ್ಮಿಣಿ ಸಹಿತಲಿದ್ದರು
ಪಟ್ಟೆ ಮಂಚದಿ ಹರುಷದಿ ೧೧

## ಶಿವನು ಭಿಕ್ಷಕೆ ಬಂದ ನೀಡು ಬಾರೆ

ಶಿವನು ಭಿಕ್ಷಕೆ ಬಂದ ನೀಡು ಬಾರೆ ತಂಗಿ
ಇವನಂಥ ಚೆಲುವರಿಲ್ಲ ನೋಡು ಬಾರೆ || ಪಲ್ಲ ||

ಒಂದೆ ಕೈಲಜನ ಕಪ್ಪೋಲ ಕಾಣೆ | ಬೆನ್
ಹಿಂದೆ ಕಟ್ಟಿರುವ ತ್ರಿಶೂಲ ಕಾಣೆ
ನಂದಿಯ ಕೋಲು ಪತಾಕಿ ಕಾಣೆ | ಮತ್
ಒಂದು ಪಾದದ ಗೆಜ್ಜೆ ಶಂಭು ಕಾಣೆ—ಶಿವನು........ ೧

ಅಲ್ಲಿಗಲ್ಲಿಗೆ ಮೃಗದ ಝಲ್ಲಿ ಸಾಲೆ | ಎದೆ
ದಲ್ಲಣ ಪಂಚ ಶಿಖೆ ಪಾಶ ಕಾಣೆ
ಹುಲ್ಲೆಯಂದದಿ ಹುಸಿಯಲ್ಲ ಕಾಣೆ | ಮತ್
ಎಲ್ಲ ಪಾದದ ಗೆಜ್ಜೆ ಶಂಭು ಕಾಣೆ ೨

ಹೆಗಲಲ್ಲಿ ಮಾತಿನರಗಿಣಿಯು ಕಾಣೆ | ಕೆಮ್
ಮುಗಿಲಂತೆ ಕಾವಿಯು ವಲ್ಲಿ ಕಾಣೆ
ನಗೆಮುಖ ಮುಂಬಲ್ಲೆಲ್ಲ ಚಿನ್ನ ಕಾಣೆ | ಗೆರೆ
ಬರದಾ ವಿಭೂತಿ ಕಪ್ಪುಗೊರಳ ಕಾಣೆ ೩

ಮೈಯೆಲ್ಲ ಹಾವಿನ ಮೊತ್ತ ಕಾಣೆ | ಬಲದ
ಕೈಯಲ್ಲಿ ಪಿಡಿದ ನಾಗ(ರ) ಬೆತ್ತ ಕಾಣೆ
ವೈಯಾರ ಮೂರು ಲೋಕಕ್ಕರ್ಥ ಕಾಣೆ | ತಕ್ಕ
ಥೈಯಾ ಥೈಯೆನ್ನೋದೊಂದರ್ಥ ಕಾಣೆ ೪

ಬಾಗಿದ ಬಿಲ್ಲು ಶಿಂಗಡಿ ಕಾಣೆ | ಆತ
ತೂಗಿಸಿ ನಡೆವ ನೋಟ ಅಂಬು ಕಾಣೆ
ಸೋಗೆಯ ನವಿಲಂತೆ ಕೊರಳು ಕಾಣೆ | ವೈಯು
ಜಗ್ಗಿಸಿ ನಡೆವ ನೋಟ ಅಂಬು ಕಾಣೆ ೫

ನಕ್ಷತ್ರ ಪೂವಿನ ಮಾಲೆ ಕಾಣೆ | ಎಡದ
ಕಕ್ಷದೊಳಿಟ್ಟ ಜೋಳಿಗೆ ಕಾಣೆ
ಭಿಕ್ಷುಕನಾಗಿ ಬಂದನಂತೆ ಕಾಣೆ | ರು
ದ್ರಾಕ್ಷಿಯ ಕೊರಳಲ್ ಧರಿಸ್ಯಾನು ಕಾಣೆ ೬

ಮನೆ ಮನೆ ದಪ್ಪಲೆ ದಿಮ್ಮಿ ಸಾಲೆ | ಆತ
ಹಣವನ್ನು ಕೊಟ್ಟರೊಲ್ಲನಂತೆ ಕಾಣೆ
ತನಿ ಹಣ್ಣು ನೀಡಬೇಕಂತೆ ಕಾಣೆ | ಗೌರಿ
ಮನಸ ಬಿಟ್ಟಿರಲಾರನಂತೆ ಕಾಣೆ ೭

ಕಣ್ ಹೊತ್ತ ಮೂರು ಕೆಂಡ ಕಾಣೆ | ಸು
ವರ್ಣದಂಥ ಬೆಟ್ಟ ಶರೀರ ಕಾಣೆ ೮

ಅಬ್ಬರಿಸುವ ರುಂಡ ಮಾಲೆ ಕಾಣೆ | ದೊಡ್
ಹೆಬ್ಬುಲಿ ಚರ್ಮದ ಪ್ರಸಿದ್ಧ ಕಾಣೆ
ಒಬ್ಬಳೆ ನೋಡಲಂಜುವೆ ಕಾಣೆ | ದೊಡ್
ಹೆಬ್ಬಾವು ಊರೊಳಗೆ ಅಂತೆ ಕಾಣೆ ೯

ಕಳಕಳಿಸುವ ರುಂಡ ಮಾಲೆ ಕಾಣೆ | ಮುಂದ್
ಹೊಳೆವೋ ಜಾಗಟೆ ಮುನ್ನೂರು ಕಾಣೆ ೧೦

ತೋರಬಾರದ ಹಣ್ಣಂತೆ ಕಾಣೆ | ಫ
ಲಾರಕ್ಕೆ ಆಗಬೇಕಂತೆ ಕಾಣೆ
ಆರತಿನೆತ್ತಬೇಕಂತೆ ಕಾಣೆ | ಉಪ
ಚಾರಂಗಳ ಮಾಡಬೇಕಂತೆ ಕಾಣೆ ೧೧

ಕಟ್ಟಾಣಿ ಮುತ್ತಿನ ಕಂತೆ ಕಾಣೆ | ಅಳ
ವಟ್ಟ ಯೌವನವಾದ ರೂಪು ಕಾಣೆ
ಬಿಟ್ಟ ಕೆಂಜಡೆ ಕೆಮ್ಮೀಸೆ ಕಾಣೆ | ಆತ
ಕೊಟ್ಟ ನಂಬಿಗೆ ಸ್ಥಿರವಂತೆ ಕಾಣೆ ೧೨

ಗುರುಹಿರಿಯುಂಗಳ ಒಡೆಯು ಕಾಣೆ | ಸಿರಿಯು
ಕರದು ಕರದು ಈವನಂತೆ ಕಾಣೆ
ಕರುಣಾ ಸಾಗರ ಮಹದೇವ ಕಾಣೆ | ನಮ್ಮ
ಗುರುಮೂರ್ತಿ ನಜುಂಡ ಲಿಂಗ ಕಾಣೆ ೧೩

## ಕೋಲು ಸುವರ್ಣನೆ

ಕೋಲು ಮುತ್ತಿನ ಕೋಲೆ ಕೋಲು ಚಿನ್ನದ ಕೋಲೆ
ಕೋಲು ಶ್ರೀ ಹರಿಯ ಬಲಗೊಂಬೆ || ಪಲ್ಲ ||

ಕೋಲು ಸುವರ್ಣನೆ ಭೂಲೋಕದೊಡೆಯನೆ
ಲೋಲ ಕುಂಕುಮದ ಪ್ರವೃಥನೆ | ಬಸವಯ್ಯ
ಲೋಲಾ ಕೊಡೆನೆಗೆ ಮುತಿಗಳ ೧

ಮತಿಯು ಕೊಟ್ಟರೆ ಸರಸ್ವತಿಯನು ಬಲಗೊಂಬೆ
ಅತಿಶಯದಿಂದ ಬಸವನ| ಪಾದಕ್ಕೆ
ರತಿಸುವೆ ಹೊನ್ನ ಹುರಿಗೆಜ್ಜೆ—ಕೋಲು....... ೨

ಹುರಿಗೆಜ್ಜೆ ಸರಗೆಜ್ಜೆ ಸರಕೆ ಸಾವಿರ ಗೆಜ್ಜೆ
ಒಕ್ಕಳ ಗೆಜ್ಜೆ ಹೊನ ಗೆಜ್ಜೆ | ಒಪ್ಪಿದರೆ
ಚಿಕ್ಕೋನೆ ಚೆನ್ನ ಬಸವಯ್ಯ—ಕೋಲು ೩

*  *  *

ಬಸವಣ್ಣ ಬರುವಾಗ ದೆಸೆಯು ತಲ್ಲಣಿಸಿತು
ಹಸಿಯು ಕಲ್ಲೊಡೆದು ಸಿಗುರೆದ್ದು | ಇದು ನಮ್ಮ
ಬಸವಣ್ಣ ಬರುವ ಸಡಗರ— ಕೋಲು ೪

ಈರಣ್ಣ ಬರುವಾಗ ದಾರಿ ತಲ್ಲಣಿಸಿತು
ಗೋರಿ ಕಲ್ಲೊಡೆದು ಸಿಗುರೆದ್ದು | ಇದು ನಮ್ಮ
ಈರಣ್ಣ ಬರುವ ಸಡಗರ—ಕೋಲು ೫

ಹೆಬ್ಬಾಗಿಲುದ್ದಕ್ಕೆ ಹಬ್ಬಿದವೆ ರಥಬಳ್ಳಿ
ಗುಬ್ಬಿ ನುಸುಳುವರೆ ತೆರಪಿಲ್ಲ| ಈ ವೂರ
ಹೆಬ್ಬಾಗಿಲ್ ತೆಗೆಯೋ ತಳವಾರ—ಕೋಲು ೬

ಊರ್‌ಬಾಗಿಲುದ್ದಕ್ಕೆ ಏರಿದವೆ ರಥಬಳ್ಳಿ
ಗೋರಿ ನುಸುಳುವರೆ ತೆರಪಿಲ್ಲ| ಈವೂರ
ಊರ್‌ಬಾಗಿಲ್ ತೆಗೆಯೊ ತಳವಾರ—ಕೋಲು ೭

ಊರ್‌ಬಾಗಿಲ್ ತೆಗೆಯೆಲೊ ಜಾಣ ತಳವಾರ
ಶಾರೇಲಿ ಅಡಕೆ ಬಿಳಿ ಎಲೆ| ಕೊಟ್ಟೇನು
ಊರ್‌ಬಾಗಿಲ್ ತೆಗೆಯೋ ತಳವಾರ—ಕೋಲು ೮

ಹೆಬ್ಬಾಗಿಲ್ ತೆಗೆಯೆಲೊ ಗುಬ್ಬಿ ತಳವಾರ
ಚಿಬ್ಲಲ್ಲಿ ಅಡಕೆ ಬಿಳಿ ಎಲೆ| ಕೊಟ್ಟೇನು
ಹೆಬ್ಬಾಗಿಲ್ ತೆಗೆಯೊ ತಳವಾರ—ಕೋಲು ೯

*  *  *

ಆಕಾಶದ್ ವ್ಯಾಗಣ ಧೂಪದ ಗಮುವೇನೆ
ಆತ ಬಸವಣ್ಣನ ಶಿವಪೂಜೆ| ಯಾಗುವಾಗ
ಆಕಾಶದ್ ಘಂಟೆ ಘಣಿರೆಂದೊ—ಕೋಲು ೧೦

ಅಂಬರದ್ ವ್ಯಾಗಣ ಗಂಧದ ಗುಮುವೇನೆ
ತಂದೆ ಬಸವಯ್ಯನ ಶಿವಪೂಜೆ | ಯಾಗುವಾಗ
ಅಂಬರದ್ ಘಂಟೆ ಘಣಿರೆಂದೊ—ಕೋಲು ೧೧

* * *

ಈರಣ್ಣನ ಮಕ್ಕಳಿರ ಹಾಲೋಗರುಣಬನ್ನಿ
ಸೀಳುಗೇದಿಗೆಯ ಮುಡಿ ಬನ್ನಿ | ಬಸವಯ್ಯನ
ರಾಗೀ ಹೊಲದಿಂದ ಕರತನ್ನಿ—ಕೋಲು ೧೨

* * *

ನಿಂಬೆ ಹಣ್ಣಿನ ಮೇಲೆ ತುಂಬಿ ಬಂದಳೆ ಗಂಗೆ
ಇಂಬಿಲ್ಲವೆಂದು ಮುನಿದಽಳೆ | ಪಟ್ಟಣದ
ರಂಗನ ಸುತ್ತಿ ಹರಿದಳೆ—ಕೋಲು ೧೩

ಬಾಳೆಹಣ್ಣಿನ ಮೇಲೆ ಬಾಗಿ ಬಂದಳೆ ಗಂಗೆ
ಸ್ಥಳವಿಲ್ಲವೆಂದು ಮುನಿದಽಳೆ | ಪಟ್ಟಣದ
ರಂಗನ ಸುತ್ತಿ ಹರಿದಽಳೆ—ಕೋಲು ೧೪

* * *

## ದುಡ್ಡು ಕೇಳುವ ಹಾಡು

ತಿರುಗಿ ತಿರುಗಿ ನಮ್ಮ ಬರಿಗಾಲು ನೊಂದವು*
ತಿರುಗೇವು ಎಂದ್ರೆಽ ಬಹು ಬಿಸಲು
ತಿರುಗೇವು ಎಂದ್ರೆಽ ಬಹು ಬಿಸಲಣ್ಣಯ್ಯ
ಹರದೇರಿಗ್ ಹಣವ ಕೊಡಿಸಯ್ಯ ೧

ಬಂದು ಬಂದು ನಮ್ಮ ಅಂಗಾಲು ನೊಂದವು
ಬಂದೇವು ಎಂದ್ರೇ ಬಹು ಬಿಸಲು | (ಲ)ಣ್ಣಯ್ಯ
ರಂಭೇರಿಗ್ ಹಣವ ಕೊಡಿಸಯ್ಯ ೨

ಕೊಟ್ಟೆ ಕೊಟ್ಟೇನೆಂದು ವಸ್ತ್ರವ ಬಿಚ್ಚಿದ
ವಸ್ತ್ರದ ಒಳಗೆ ಹಣವಿಲ್ಲ | ಭಾವಯ್ಯ
ಹಿತ್ತಲ ಸಂದೀ(ಲ್) ನುಸ್ದ್ ಹೋದ ೩

ತಂದೆ ತಂದೆಽ ಎಂದು ಅಂಗಿಯ ತೋರಿಸ್ದ
ಅಂಗಿಯ ಒಳಗೆ ಹಣವಿಲ್ಲ | ಅಣ್ಣಯ್ಯ
ಬಾಗಿಲ ಸಂದೀ ನುಸ್ದ್ ಹೋದ ೪

ಅಡ್ಡದ ಕಾಸ್ ಕೊಟ್ರೆ ದೊಡ್ಡ ತಿಪ್ಪೆಗೆ ಹಾಕಿ
ದೊಡ್ಡ ಮಳೆ ಬಂದು ಚಿಗುರೀತು | ಅಣ್ಣಯ್ಯ
ಅಡ್ಡದ ಕಾಸು ನಿಮಗಿರಲಿ ೫

ಹಾಗದ ಕಾಸ್ ಕೊಟ್ರೆ ಹಾಳು ತಿಪ್ಪೆಗೆ ಹಾಕಿ
ಬೇಗ ಮಳೆ ಬಂದು ಚಿಗುರೀತು | ಭಾವಯ್ಯ
ಹಾಗದ ಕಾಸು ನಿಮಗಿರಲಿ ೬

---

* 'ನಡೆದು ನಡೆದು ನಮ್ಮ ಅಡಿಗಳು ನೊಂದವು' ಎಂದೂ 'ದುಗ್ಗಾಣಿ ಕಾಸ್ ಕೊಟ್ರೆ ದೊಡ್ಡ ತಿಪ್ಪೆಗೆ ಹಾಕಿ' ಎಂದು ಮೊದಲಾಗಿಯೂ ಬದಲಾಯಿಸಿಕೊಂಡು ಹೇಳುತ್ತಾರೆ. 'ಅಣ್ಣಯ್ಯ, ಭಾವಯ್ಯ, ಮಾವಯ್ಯ' ಮೊದಲಾದ ಮಾತುಗಳನ್ನು ಸಮಯಕ್ಕೆ ತಕ್ಕಂತೆ ಹೊಂದಿಸಿಕೊಂಡು ಹೇಳುತ್ತಾರೆ.

## ಹರಕೆ

ಉದ್ದು ಉದ್ದಾಗಲಿ ಉದ್ದಿನ ಕಾಯಾಗ್ಲಿ
ಉದ್ದಿನವೇಳು ಗೊನೆಯಾಗ್ಲಿ
ಉದ್ದಿನವೇಳು ಗೊನೆಯಾಗಲಣ್ಣಯ್ಯ*
ಮುದ್ದಾಡುವಂಥ ಮಗನಾಗ್ಲಿ ೧

ಹೆಸರು ಹೆಸರಾಗಲಿ ಹೆಸರಿನ ಕಾಯಾಗ್ಲಿ
ಹೆಸರಿನವೇಳು ಗೊನೆಯಾ(ಗ್ಲಿ)ಗಲಣ್ಣಯ್ಯ
ಹೆಸರ್ ಹೇಳುವಂಥ ಮಗನಾಗ್ಲಿ ೨

ರಾಮ ಲಕ್ಷ್ಮಣರಂತೆ ನಾಲ್ವರಣತಮ್ಮದಿರು
ಸೀತಾಂಗ್ನೇರಂಥ ಮಡದೀ(ರು)ರಣ್ಣಯ್ಯಗೆ
ಸಂತೋಷದ್‌ಲಕ್ಷ್ಮಿ ಒಲಿಯಲಿ ೩

ಅರ್ಜುನ ಭೀಮರಂತೆ ಐವರಣತಮ್ಮದಿರು
ಸೌಭದ್ರೇರಂಥ ಮಡದೀ(ರು)ರಣ್ಣಯ್ಯಗೆ
ಭಾಗ್ಯದ ಲಕ್ಷ್ಮಿ ಒಲಿಯಲಿ ೪

ಒಂದು ಸಾವಿರವಾಗ್ಲಿ ನಂದನ ವನವಾಗ್ಲಿ
ತಂಗೀರಿಗ್ ತೌರು ಮನೆಯಾ(ಗ್ಲಿ)ಗಲಣ್ಣಯ್ಯ
ಹಿಂಡೊಕ್ಕಲಾಗಿ ಸುಖಿಯಾಗು ೫

ಹತ್ತು ಸಾವಿರವಾಗ್ಲಿ ಕಿತ್ತಲೆ ಬನವಾಗ್ಲಿ
ಅಕ್ಕಂದ್ರಿಗ್‌ತೌರು ಮನೆಯಾ(ಗ್ಲಿ)ಗಲಣ್ಣಯ್ಯ
ಹೆಚ್ಚೊಕ್ಕಲಾಗಿ ಸುಖಿಯಾಗು
(ಹತ್ತೊಕ್ಕಲಾಗಿ ಸುಖಿಯಾಗು) ೬

---

* ಸಂದರ್ಭಕ್ಕೆ ತಕ್ಕಂತೆ 'ಅಣ್ಣಯ್ಯ, ತಮ್ಮಯ್ಯ' ಎಂಬವನ್ನು ವ್ಯತ್ಯಾಸಮಾಡಿ ಹಾಡುತ್ತಾರೆ.

## ಮುಡಿವು

ಸಣ್ಣ ಹಳ್ಳಿಯ ಮೂವರಣ್ಣತಮ್ಮದಿರಾವು
ಹೆಣ್ಣುಮಕ್ಕಳ ಪದಗಳ |ನಾಲಿಸಿ
ಕಣ್ಣನರಳಿಸಿ ತಣಿದೆವು

ಕೈಯ ಕೋಲಿನ ಕುಣಿತ ಬಾಯ ಪದದ ನುಡಿತ
ಮೈಯೊಲೆತ ಕಣ್ಣು ಕಿವಿ ತುಂಬಿ | ಕೋಲಾಟ
ಅಯ್ಯ, ಮೈ ಮನವ ಮರಸಿತು

ಹೊಲಮನೆ ಕೆಲಸದಲಿ ಹಲವು ಹಬ್ಬಗಳಲ್ಲಿ
ನಲವೊಲವು ನೋವು ಬರುವಲ್ಲಿ | ಜನ ನುಡಿವ
ಕೆಲಕೆಲವೆ ಹಾಡು ಇಹವಿಲ್ಲಿ

ಹಳ್ಳಿ ಮಕ್ಕಳು ನಾವು ಹಳ್ಳದ ದಂಡೇಲಿ
ಒಳ್ಳೆ ಹೂವುಗಳನಾದೆವು
ಒಳ್ಳೆ ಹೂವುಗಳನಾದು ಮಾಲೆ ಕಟ್ಟಿ
ಕೊಳ್ಳಿರೆಂದೆನುತ ತಂದೆವು
ಕೊಳ್ಳಿರೆಂದೆನುತ ತಂದೆವು ಕೈಕೊಂಡು
ಒಳ್ಳಿತ ಕಂಡು ನಲಿವುದು

ನಾಡೆಲ್ಲ ನಲಿಯಲಿ ಬೀಡೆಲ್ಲ ಬೆಳಗಲಿ
ನಾಡುನುಡಿ ಹಬ್ಬಿ ಹರಡಲಿ | ನಾಡೊಡೆಯ
ನಾಡೊಲವುಗೊಂಡು ಬಾಳಲಿ

ಜಯವಕ್ಕೆ ಭಾರತಕೆ ಜಯವಕ್ಕೆ ಜನಹಿತಕೆ
ಜಯವಕ್ಕೆ ಸತ್ಯಶರಣರ್ಗೆ | ಕನ್ನಡದ
ಜಯಗುಡಿವಿಡಿದ ಕಲಿಗಳ್ಗೆ

---

ಮೋದಿ ಪವರ್ ಪ್ರಿಂಟಿಂಗ್ ವರ್ಕ್ಸ್, ಬೆಂಗಳೂರು ಸಿಟಿ

# ಟಿಪ್ಪಣಿ

## ತೆನೆ ೧ — ಕೋಲಾಟದ ಪದಗಳು

### ಬೆನವಣ್ಣ

ಪಲ್ಲವಿ|| ಮುದಲು=ಮೊದಲು ಬೆನವ: 'ವಿನಾಯಕ' ಕನ್ನಡದಲ್ಲಿ ಬೆನಕ, ಬೆನವ, ಎಂದು ರೂಪಾಂತರ ಹೊಂದಿದೆ.

೧ ಸುಟಿಗೇ ಕಾಳಿಂಗ: ಸುಟಿಯಾಗಿರುವ, ಚಟುವಟಿಕೆಯಾಗಿರುವ ಕಾಳಿಂಗ. 'ಸುಟಿಗೆ' ಎಂಬುದೊಂದು ಊರಿನ ಹೆಸರಾಗಿದ್ದರೂ ಇರಬಹುದು. ಕಾಳಿಂಗ = ಕೃಷ್ಣಸರ್ಪ. ದಂಡೆಯ ನಾಯ್ಕು : ಹೂವು ಮೊದಲಾದ ಅಲಂಕಾರದ ದಂಡೆಗಳನ್ನು ಧರಿಸಿರುವ ನಾಯಕ. 'ದಂಡಿನ ಮುಂದಾಳು' ಎಂದರ್ಥವಿರಬಹುದೆ, 'ಗಣನಾಯಕ' ಎಂಬ ಮಾತಿಗೆ ಹೊಂದಿಕೆಯಾಗಿ ? ಇನಿಯಂಕ=ವಿನಾಯಕ. 'ದಂಡೆಯ ನಾಯ್ಕೊಂದಿನಿಯಂಕ' ಇಲ್ಲಿ 'ಒಂದು' ಎಂಬ ಮಾತಿಗೆ ಅರ್ಥವಿಲ್ಲ. ಅಲ್ಲಲ್ಲಿ ಹೀಗೆ ಅರ್ಥವಿಲ್ಲದ ಮಾತುಗಳನ್ನು ಸೇರಿಸುವುದು ಈ ಹಾಡುಗಳಲ್ಲಿ ಬಹು ರೂಢಿ.

೨ 'ಕಿತ್‌ಹುಲಿನೇಕೆರೆ' ಇಲ್ಲಿ 'ನೇ' ಎಂಬ ಅಕ್ಷರವೂ ಅರ್ಥವಿಲ್ಲದೆ ಸೇರಿದ ಹೆಚ್ಚಕ್ಷರ. ಕಿತ್ + ಹುಲಿಕೆರೆ = ಚಿಕ್ಕ ಹುಲಿಕೆರೆ. ಹುಲಿಕೆರೆಯೆಂಬುದೊಂದು ಊರು. 'ಕಿರು' ಶಬ್ದಕ್ಕೆ ಸ್ವರಾದಿಯಾದ ಶಬ್ದ ಪರವಾಗಿ ಬಂದು ಸಮಾಸವಾದಾಗ ಮಾತ್ರ ಅದು 'ಕಿತ್' ಎಂದು ರೂಪಾಂತರವಾಗುವುದೆಂದು ವ್ಯಾಕರಣ ನಿಯಮ (ಉದಾ. ಕಿತ್ತಡಿ). ಇಲ್ಲಿ ಈ ನಿಯಮಕ್ಕೆ ಭಂಗಬಂದಿದೆ. ಬೆಳ್ಳೀದೇವ: ಬೆಳ್ಳಿಯ ಬೆಟ್ಟದಲ್ಲಿ, ಕೈಲಾಸದಲ್ಲಿ, ಇರುವ ದೇವ ಎಂದರ್ಥವಿರಬಹುದು. ಬೆಳ್ಳಿಯಿಂದ ಮಾಡಿರುವ ಗಣಪತಿಯೆಂದೂ ಆಗಬಹುದು.

೩ ಓರೇಲಿ = ಓರೆಯಲ್ಲಿ, ಪಕ್ಕದಲ್ಲಿ. ಇರುವೋನೆ = ಇರುವವನೆ. ಭಾರಾದ=ಭಾರ+ಆದ, ತೂಕವಾದ. ತಿರುಳಿಲ್ಲದ ಜಳ್ಳುಪದ ಅವರಿಗೆ ಬೇಕಿಲ್ಲ.

೪ ಹೆಬ್ಬಾಕಲು=ಹೆಬ್ಬಾಗಿಲು. ಕಬ್ಬಲ್ಲಬೆನವ= ಕಪ್ಪುಹಲ್ಲಿನ ಬೆನಕ. 'ಗಣಪತಿಯ ಹಲ್ಲು ಕಪ್ಪು' ಎನ್ನುವುದು ಹೊಸ ಮಾತು. 'ಉಬ್ಬಲ್ಲು (ಉಬ್ಬುಹಲ್ಲು), ಹೆಬ್ಬಲ್ಲು (ದೊಡ್ಡ ಹಲ್ಲು)' ಎಂದರೆ ಚೆನ್ನಾಗಿ ಒಪ್ಪುತ್ತದೆ. ಅಥವಾ, ಕಬ್ಬು ಅಗಿಯುತ್ತಿರುವ 'ಕಬ್ + ಹಲ್ಲು' ಎಂದು ಅಭಿಪ್ರಾಯವಿರಬಹುದೆ ?

೬ ದೊಳ್‌ಹೊಟ್ಟೆಬೆನವ=ದೊಡ್ಡ ಹೊಟ್ಟೆಯ ಗಣಪತಿ ; ಲಂಬೋದರ.

## ಜಗಜಗದ ಒಡೆಯನೆ

ಈ ಪದದಲ್ಲಿ ಹಿಂದೆ ಮುಂದೆ ಹೊಂದಿಕೆಯಿಲ್ಲದ, ಸರಿಯಾಗಿ ಅರ್ಥವಾಗದ ಮಾತುಗಳು ಬಹಳ ಇವೆ. ಹೇಳುವವರ ಮರವಿನಿಂದಲೂ ಬಾಯಿ ತಪ್ಪಿನಿಂದಲೂ ಹೀಗಾಗಿರಬೇಕು. ಆದರೂ ಐದ್ವೈದು ಮಾತ್ರೆಯ ನಾಲ್ಕು ಗಣಗಳುಳ್ಳ ಹತ್ತು ಹತ್ತು ಸಾಲುಗಳಾಗುವಂತೆ ಹೊಂದಿಸಿಕೊಂಡುಬಿಟ್ಟಿದ್ದಾರೆ. ನಮ್ಮೂರ ಕೋಲಾಟದವರು ನೆನಪಿಟ್ಟುಕೊಂಡಿರುವಷ್ಟನ್ನು ಇಲ್ಲಿ ಕೊಟ್ಟಿದೆ. ಅರ್ಥ ಹೊಂದಲಿ, ಹೊಂದದಿರಲಿ ಪದ್ಯದ ಓಟ ಚೆನ್ನಾಗಿದೆ. ಶ್ರೀ ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ—ಹಳ್ಳಿಯ ಹಾಡು' ಮತ್ತು ಶ್ರೀ|| ಗೊರೂರು ರಾಮಸ್ವಾಮಿ ಐಯಂಗಾರರ 'ಹಳ್ಳಿಯ ಬಾಳು'—ಇವುಗಳಲ್ಲಿ ಈ ಪದ ಹಲವು ಹೆಚ್ಚು ಸಾಲುಗಳನ್ನೊಳಕೊಂಡು ಬೇರೆಯ ರೂಪದಲ್ಲಿ ದೊರೆಯುತ್ತದೆ. ಅಲ್ಲಿ ದೊರೆಯ ವಿಜಯ ಯಾತ್ರೆಯಂತೆ ತೋರುತ್ತದೆ. "ಕಬ್ಬು ಹುಟ್ಟುವುದಣ್ಣ"—ಮೊದಲಾದ ಕೆಲವು ಸಾಲುಗಳು ಅಲ್ಲಿ ಇಲ್ಲ.

೧ ಪುಟ್ಟಳಿಯ್ಯನೆ: ಹುಟ್ಟಳಿಯೋನೆ, ಹುಟ್ಟನ್ನು ಅಳಿಯುವವನೆ. 'ಪುಟ್ಟು' ಎಂದು ಪಕಾರವನ್ನೆ ನುಡಿಯುತ್ತಾರೆ. ಮರೆತು ಕೂಡ 'ಹುಟ್ಟು' ಎನ್ನುವುದಿಲ್ಲ. ಕುಂತವ್ನೆ = ಕುಂತು ಅವನೆ, ಕೂತಿದ್ದಾನೆ. ಅವ್ನೆ = ಅವನೆ, ಇದ್ದಾನೆ. ಹಂಗೆ=ಹಾಗೆ. ನಾಗಾರೆ=ನಗಾರಿ. ನುಡಿದಾತೆ=ನುಡಿದಿತ್ತು. ಏಗ=ಯೋಗ.

೩ ಭೂಮಿದ್ದಲ್ಲಿ: 'ಭೂಮಿಯಿದ್ದಲ್ಲಿ' ಎಂದು ಯಕಾರಾಗಮವಾಗ ಬೇಕಾಗಿತ್ತು. ರೂಢಿಯ ಮಾತಿನಲ್ಲಿ ಲೋಪಸಂಧಿಯಾಗಿದೆ. ಉಬ್ಬೆ=ಬೇಗೆ, ಸೆಕೆ, ತಾಪ. ಹರಿಯುವುದು=ಪರಿಹಾರವಾಗುವುದು. ಜಲಕರಡೆ = ನೀರಿನ ಪಾತ್ರೆ (ಕರಡೆ=ಕರಂಡ ?); ಜಲಾಶಯ. ನ್ಯಾಯ=ವ್ಯವಹಾರ, ವ್ಯಾಜ್ಯ.

## ಬೇಲೂರು ಚೆನ್ನಯ್ಯನ ತೇರು

ಚನ್ನಯ್ಯ = ಚೆನ್ನಕೇಶವಸ್ವಾಮಿ.

೧ ಡೊಂಕಣೆ=ಡೆಂಕಣಿ; ಕೋಟೆಯ ಮೇಲೆ ಬಾವುಟ ಹಾರಿಸುವ ಕಂಬ. ಹುಲಿಮುಖ=ಕೋಟೆಯಲ್ಲಿರುವ ಹುಲಿಮುಖದ ಆಕಾರದ ಕಂಡಿ.

೨ ಭಸುಮ=ಭಸ್ಮ, ವಿಭೂತಿ. ಬೇಲೂರಿನ ಚೆನ್ನಕೇಶವನನ್ನು ಶಿವನೆಂದೇ ಇವರು ಭಾವಿಸಿದ್ದಾರೆ. ಜನ ಸಾಮಾನ್ಯರಲ್ಲಿ ಹರಿಹರ ಭೇದವಿಲ್ಲ. ಬೇಲೂರು ದೇವ ಸ್ಥಾನದಲ್ಲಿ ಕೇಶವನ ಜೊತೆಯಲ್ಲಿ ಶಿವನನ್ನೂ ಪ್ರತಿಷ್ಠೆ ಮಾಡಿದ್ದಂತೆ ಶಾಸನವಿದೆ. ಈಚೆಗೆ ಮಣ್ಣಿನಲ್ಲಿ ಹೂತಿದ್ದ ಲಿಂಗವೂ ಸಿಕ್ಕಿದೆ. ಶಿವನಿಗೂ ವೈಭವದಿಂದ ಪೂಜೆ ಉತ್ಸವ ಗಳು ನಡೆಯುತ್ತಿದ್ದ ಕಾಲದಲ್ಲಿ ಈ ಹಾಡು ಕಟ್ಟಿದ್ದಿರಬಹುದು. ಅಂಥ ಕಾಲದಲ್ಲಿ ಈ ಬಗೆಯ ಅಭೇದ ದೃಷ್ಟಿಗೆ ಅವಕಾಶ ಹೆಚ್ಚು.

ಟಿಪ್ಪಣಿ

೪ ವಾಲೆ=ಓಲೆ, ಪತ್ರ, ಕಾಗದ. ದೂರಲ=ದೂರದ. ಪರುಸೆ=ಪರಿಷೆ, ಜಾತ್ರೆಗೆ ನೆರೆಯುವ ಜನ (ಸಂ. ಪರಿಷತ್).

೫ ಹತ್ತಿರಲ=ಹತ್ತಿರದ

೭ ಬಿದುರೂರು=ಬಿದನೂರು, ಈಗಿನ ನಗರ (?). ಗವಿದವೆ=ಕವಿದವು. 'ಎ' ಅವಧಾರಣಾರ್ಥದ ಪ್ರತ್ಯಯ.

೯ ಮುಗುದೇವೆ=ಮುಗಿದವು.

## ಮಲ್ಲಯ್ಯ

ಮಲ್ಲಯ್ಯ ಎಂಬುದು ನಮ್ಮೂರ ದೇವರ ಹೆಸರು. 'ಮಲ್ಲೇದೇವರು, ಮಲ್ಲೇಶ್ವರ' ಎಂದೂ ಕರೆಯುತ್ತಾರೆ. 'ಮಲೆಯ ಅಯ್ಯ, ಬೆಟ್ಟದ ದೇವರು' ಎಂದು ಇದರ ಅರ್ಥ. ಈ ಸಂಬಂಧದಲ್ಲಿ 'ಸಂಭಾವನೆ' ಗ್ರಂಥದಲ್ಲಿರುವ 'ಮಲ್ಲಿಕಾರ್ಜುನ-ಒಂದು ಊಹೆ' ಎಂಬ ಲೇಖನವನ್ನು ನೋಡಿ.

೧ ತಿರುಶೂಲ=ತ್ರಿಶೂಲ. 'ತಿರಿಶೂಲ' ಎಂಬುದು ಹೆಚ್ಚು ಸಮರ್ಪಕವಾದ ತದ್ಭವ.

೨ ಸೀಗೇ ಗುಡ್ಡ ಬೇಲೂರಿಗೆ ಆಗ್ನೇಯದಲ್ಲಿ ೧೮-೨೦ ಮೈಲಿ ದೂರದಲ್ಲಿದೆ. ಬಸವನಹಳ್ಳಿ ಬೇಲೂರಿಗೆ ಉತ್ತರಕ್ಕೆ ಸುಮಾರು ೧೫ ಮೈಲಿ ದೂರದಲ್ಲಿದೆ. ನಡುಗುಡ್ಡದೊಳಗಿನ ತ್ರಿಶೂಲ, ಅದ್ಭುತವಾದ ಈ ಶ್ರೀಗಂಧದ ಮರ—ಇವುಗಳ ವಿಷಯ ಏನೆಂದು ತಿಳಿಯದು.

೩ ಸೂರೀಪಾನ=ಸೂರೇಪಾನ; ದೇವರ ಮುಂದೆ ಛತ್ರಿಯ ಜೊತೆ ಎತ್ತಿ ಹಿಡಿದುಕೊಂಡು ಹೋಗುವ ದೊಡ್ಡ ಬೀಸಣಿಗೆಯಾಕಾರದ ಒಂದು ಅಲಂಕಾರ ಸಾಧನ. ಬಿಸುಲು=ಬಿಸಿಲು. ಜನರ ಬಾಯಲ್ಲಿ ಇಕಾರಕ್ಕೆ ಬದಲು ಉಕಾರ ನುಡಿಯುವುದು ರೂಢಿ. ಮುತ್ತು ಚೆಲ್ಲಿಸಿದ ಮುಗಿಲಿಗೆ: ಛತ್ರಿ, ಸೂರೇಪಾನ, ಮೊದಲಾದವಕ್ಕೆ ಅಲಂಕರಿಸಿರುವ ಮುತ್ತು ಆಕಾಶಕ್ಕೇ ಮುತ್ತು ಚೆಲ್ಲಿದಂತಿತ್ತು ಎಂದು ಭಾವ.

೪ ಆಯ್ವಳಿ=ಆಯವಳಿ. ಅತಿಶಯವಾದವನು. ಆಯ್ಕೆಯ ರೀತಿಯನ್ನು ಬಲ್ಲವನು (?). ಸುತ್ತಣ ಆರು ಊರುಗಳಲ್ಲಿ ಇಂಥ ಶ್ರೇಷ್ಠದೇವರಿಲ್ಲವೆಂದು ಅಭಿಪ್ರಾಯ. 'ಆರೂರಿಗಿಂತ=' ಎಂದಿರಬಹುದೆ ? ಆದ=ಆಯ್ದ.

೬ ಏರೀಮ್ಯಾಲ್ = ಏರಿಯ ಮೇಲೆ. ಕರದೊ=ಕೆರೆದೆಯೊ ? ತರುವೋಕೆ=ತರುವುದಕ್ಕೆ.

೭ ಹಗಲುಜೋತಿ=ಹಗಲು ಹೊತ್ತು ಹಿಡಿಯುವ ಪಂಜು, ದೀವಟಿಗೆ. ಹೀಗೆ ಹಗಲುದೀವಟಿಗೆ ಹಿಡಿಯುವುದು ಗೌರವ ಸೂಚಕ. ಐಭೋಗ=ವೈಭವ.

೮ ಗೆಣೆಯರು = ಗೆಳೆಯರು.

೯ ಬೇಳುವೆಕಾರ=ಬಿಂಕದವನು ; ಜಂಬಗಾರ. ಕಳುವಿದರೆ=ಕಳಿಸಿದರೆ.

೧೦ ಗಮ್ಮೆಂದೊ=ಗಮ್ಮೆಂದವು; ಸುವಾಸನೆ ಬೀರಿದವು. ಕೆಂಚಿಯೊಳಗೆ: ಸಂಚಿಯೊಳಗೆ (ಚೀಲದಲ್ಲಿ) ಎಂದಿರಬಹುದೆ? ಈಬೂತಿ=ವಿಭೂತಿ. ತೀರುತ=ತೀರ್ಥ.

## ಬಿಳಿಗಿರಿ ರಂಗಸ್ವಾಮಿ

೧ ಮೂಡಲಿಂದ ಸ್ವಾಮಿ ರಥವೇರಿ ಬರುತಾನೆ: ಸ್ವಾಮಿ= ಸೂರ್ಯ. ವಜ್ಜುರ=ವಜ್ರ. ಚವ್ವುಲ=ಚಾಮರ.

೨ ಶಂಖು=ಶಂಖ. ಪಯಣ=ಪ್ರಯಾಣ.

೩ ಬೆಂಡಿನ್ ಬಾಚಣಿಗೆ: (?) ಅಲಂಕಾರಕ್ಕಾಗಿ ಕೈಯಲ್ಲಿ ಬೆಂಡಿನ ಬಾಚಣಿಗೆ ಹಿಡಿಯುವ ರೂಢಿಯಿತ್ತೋ ಏನೋ ?

೪ ತಂದರೆ ತರಹೇಳು.... ಇದು ತುಳಸಮ್ಮನ ಮಾತೆಂದು ತೋರುತ್ತದೆ.

೫ ತಳಿಗ್ಯಾವು = ತಂಗಿದವು. ಸಾಕೆಂಬೊ='ಸಾಕು' ಎನ್ನುವಷ್ಟು ; ಸಮೃದ್ಧಿಯಾಗಿ.

೬ ಸರಮುತ್ತಿನ ಕಡಗೋಲು : ಮುತ್ತಿನ ಸರ ಕಟ್ಟಿರುವ ಕಡಗೋಲು. ವಜ್ರನಾಟಕದ ಗುದಿಗಣ್ಣಿ=ಗೊಂಚಲು ಗೊಂಚಲು ವಜ್ರ ಕಟ್ಟಿರುವ (ಕಡೆಯುವ) ಹಗ್ಗ. ಇಲ್ಲಿ 'ನಾಟಕದ' ಎಂದರೇನೊ ಗೊತ್ತಿಲ್ಲ. ಗುಜ್ಜಾರಿಬೆಣ್ಣೆ: ಸಣ್ಣ ಸಣ್ಣ ಉಂಡೆ ಬೆಣ್ಣೆ (?) 'ಗುರ್ಜರ ಎಂದರೆ ಗುಜರಾತಿನ ಎಮ್ಮೆಯ ಹಾಲಿನಲ್ಲಿ ದೊರೆಯುವಂಥ ಬೆಣ್ಣೆ' ಎಂದು ಅಭಿಪ್ರಾಯವಿರಬಹುದೆ ? ರಂಗಸ್ವಾಮಿಯ ಬೆಟ್ಟದಲ್ಲಿ 'ಗುಜ್ಜಾರಿ' ಎಂಬ ಒಂದು ಪರಿವಾರ ದೇವತೆಯಿದೆಯೆಂದೂ ಆ ದೇವತೆಗೆ ಬೆಣ್ಣೆಯನ್ನು ನಿವೇದಿಸುವುದು ವಾಡಿಕೆಯೆಂದೂ ಹೇಳುತ್ತಾರೆ. ಒಳಗಿರುವೊ ಮಹಲಿಂಗ: ಗುಡಿಯೊಳಗೆ, ಅಥವಾ ಹೃದಯದೊಳಗೆ ಇರುವ ಮಹಾಲಿಂಗಸ್ವಾಮಿ. ಇಲ್ಲಿ ಕೂಡ ಹರಿಹರ ಅಭೇದದೃಷ್ಟಿ ಎದ್ದು ಕಾಣುತ್ತದೆ.

೭ ಎಡೆಯದೊ=ಎಡೆಯಾಯಿತು ; ನೈವೇದ್ಯವಾಯಿತು.

## ಚನ್ನಯ್ಯ ಸೂಳೆಯ ಮನೆಗೆ ಹೋದದ್ದು

ಪಲ್ಲವಿ|| ಮೆರವಳಿಗೆ=ಮೆರವಣಿಗೆ. (ಮೆರೆವ+ಅಣಿಗೆ). ನೀಲಗುದುರೆ : ಉತ್ತಮವಾದ ಕುದುರೆ ; ನೀಲಿಬಣ್ಣದ್ದಲ್ಲ. 'ನೀಲ' ಎಂದರೆ ತುಂಟಕುದುರೆ (vicious horse) ಎಂದು ನಿಘಂಟು.

## ಟಿಪ್ಪಣಿ

೧ ಹೊಳೆಯನೆ=ಹೊಳೆಯಣ ; ಹೊಳೆಯ. ಆಲದೆಲೆಂಬೊ=ಆಲದೆಲೆಯೆಂಬ. ಇಲ್ಲಿ 'ಯ' ಆಗಮವಾಗಬೇಕಾಗಿತ್ತು; ಲೋಪಸಂಧಿ ಮಾಡಿದ್ದಾರೆ. ವಾಲಾಡಿ=ಓಲಾಡಿ.

೨ ಯಾವ ಗೆಣೆಯಗೆ ಶನಿವಾರ=ಯಾರಿಗೋಸ್ಕರ ಉಪವಾಸಲಾಗಿದ್ದೀಯ ?

೩ ಸೇರೂಪಾವಡಕೆ ಬಿಳಿ ಎಲೆ: ನಲ್ಲನಲ್ಲೆಯರು ಸೇರುವ ಸಂದರ್ಭಗಳಲ್ಲೆಲ್ಲ ಈ ಹಾಡುಗಳಲ್ಲಿ ಹೀಗೆಯೆ ವರ್ಣಿಸಿದೆ. 'ನಂಜಪ್ಪ'ನ ಹಾಡು ನೋಡಿ.

## ಗಂಧದ ನೆರಿಗ್ಯೋಳೆ

ಇದು ಶಿವಪಾರ್ವತಿಯರ ಒಲವಿನ ಸಂಭಾಷಣೆಯೆಂದು ತೋರುತ್ತದೆ ಕೊನೆಯ ನುಡಿಯನ್ನು ನೋಡಿದರೆ, ಗಂಡನುಳ್ಳವಳನ್ನು ಒಲಿಸಹೋದ ಒಬ್ಬನಿಗೂ ಆ ಗರತಿಗೂ ನಡೆದ ಮಾತಿನ ಹಾಗೆ ಕಾಣುತ್ತದೆ. ಪದ ಪೂರ್ತಿಯಾಗಿ ಸಿಕ್ಕಿಲ್ಲ.

೧ ಹೂವಿನೊನಮಾಲೆ: ಹೂವಿನ ವನಮಾಲೆ. ಒನಮಾಲೆ ಎಂದು ಸ್ವರಾದಿಯಾಗಿ ಪ್ರಯೋಗವಾಗಿದೆ.

೨ ತೊಳಸು=ಕುಟ್ಟಿ ಶುಭ್ರಮಾಡು ; ಬೆಳ್ಳಗಾಗುವಂತೆ ಮಾಡು (ತೊಳೆ+ಇಸು)

೪ 'ನಾನ್ ಬಿಡದಿ ಹೆಣ್ಣಲ್ಲ ಕಾಣೊ': ಇದೊಂದು ಹೆಚ್ಚು ಸಾಲು. ಹೀಗೆಯೆ ಹೆಚ್ಚು ಮಾತುಗಳನ್ನೂ ಸೇರಿಸುತ್ತಾರೆ. ಹೇಳುವಾಗ ಹೇಗೋ ಧಾಟಿಗೆ ಸರಿಮಾಡಿಕೊಂಡು ಬಿಡುತ್ತಾರೆ. ಬಿಡದಿ ಹೆಣ್ಣು : ಅತಿಥಿಗಳು ಇಳಿದುಕೊಳ್ಳುವಲ್ಲಿ ಉಪಚರಿಸಲು ಇರುವ ಹೆಂಗಸು. ಹೋಗಯ್ಯ ಹರಿಯುವ ಜಲಧಿಗೆ: ಪ್ರಣಯಿಗಳ ಸಂಭಾಷಣೆಯಲ್ಲಿ ಹೆಣ್ಣು ಮುನಿದಾಗ ಈ ಮಾತು ಅನೇಕ ವೇಳೆ ಬರುತ್ತದೆ. ('ನಂಜಪ್ಪ'ನ ಹಾಡು ನೋಡಿ). 'ಮಾವನ ಮಗಳೇ' ಎಂಬ ಪದದಲ್ಲಿ, 'ಜಲಧಿಗೆ' ಎಂಬುದಕ್ಕೆ 'ಹೊಳೆಗೆ' ಎಂದು ಬದಲು ಬಂದಿದೆ. "ನನ್ನ ತಂಟೆಗೆ ಬರಬೇಡ. ಎಲ್ಲಾದರೂ ಹೋಗು" ಎಂದು ಇದರ ತಾತ್ಪರ್ಯ.

೫ ಮುದಿ ಎತ್ತೊಂದು: ಶಿವನ ಬಸವ. ಅವನಿಗಿರುವುದು ಒಂದೇ ಎತ್ತು. ಗಿರಿಜಾ ಕಲ್ಯಾಣದ ಹಾಡಿನಲ್ಲಿ ಗಿರಿರಾಜನ ಆಕ್ಷೇಪಣೆಯನ್ನು ನೋಡಿ. 'ಮುದ್ದೆತ್ತೊಂದ್' ಎಂದೂ ಹಾಡುವುದುಂಟು.

೬ ಮುದ್ರಿಕಾದೊ=ಮುದ್ರಿಕೆ ಆದವು. "ಮುದ್ರೆಮಾಡಿ ಆಗಿದೆ. ಕೊಡುವುದಕ್ಕೆ ಸಾಧ್ಯವಿಲ್ಲ" ಎಂದು ಭಾವ. 'ಬೇಕಾದ ಮುತ್ತ ಬೆಲೆಮಾಡೆ' ಎಂಬ ಮಾತು ಪ್ರಣಯಿ ಬಯಸುವ ಮುತ್ತಿಗೂ ಅನ್ವಯಿಸುತ್ತದೆ.

## ಕುಣಿಗಲು ಕೆರೆ

ಇದೊಂದು ಸೊಗಸಾದ ವರ್ಣನೆ. ಇದೇ ಪದ 'ಹಳ್ಳಿಯ ಹಾಡುಗಳು' ಎಂಬ ಸಂಗ್ರಹದಲ್ಲಿ "ಮೂಡಲ್ ಮುತ್ತದ ಕೆರೆ" ಎಂದು ಅಚ್ಚಾಗಿದೆ. 'ತುಂಬಿದ್ ಮದು ಗದ ಕೆರೆ' ಎಂದು ಮುಂದಾಗಿ ಈ ಪದದ ಅನುಕರಣರೂಪವಾದ ಒಂದೆರಡು ಪದಗಳಿವೆ. ಎಷ್ಟಾದರೂ ಅವು ಅನುಕರಣಗಳೇ !

೧ ಅಂತಂತ್ರಿಸಿ ನೋಡೋರ್ಗೆ: ಅಂತರಿಸಿ ಅಂತರಿಸಿ, ದೂರದಲ್ಲಿ ಹತ್ತಿರ ದಲ್ಲಿ ಬೇರೆ ಬೇರೆ ಎಡೆಗಳಿಂದ, ನೋಡುವವರಿಗೆ ಕೆರೆಯ ಸೊಗಸು ಚೆನ್ನಾಗಿ ತಿಳಿಯುತ್ತದೆ.

೨ ಬಾಳೆಯ........ಕೆರೆ: ಕೆರೆಯ ಏರಿ ಒಂದೇ ನೇರಕ್ಕಿರುವುದಿಲ್ಲ. ನೀರಿನ ಒತ್ತಡದಿಂದ ಅಪಾಯವಾಗದಿರುವುದಕ್ಕಾಗಿ ಡೊಂಕಾಗಿ ಬಾಗಿಸಿ ಕಟ್ಟುತ್ತಾರೆ. ಭಾವ ತಂದನೆ ಬಣ್ಣದ್ ಸೀರೆ: ಕೆರೆ ತುಂಬಿದಾಗ, ಹೊಳೆ ಉಕ್ಕಿದಾಗ, ಸೀರೆ ರವಿಕೆ ತಂದು 'ಗಂಗೇಪೂಜೆ' ಮಾಡುವುದು ವಾಡಿಕೆ.

೪ ಶಿವಮುಗ್ಗಿ ಕಬ್ಬಕ್ಕಿ ಬಾಯ ಬಿಡುತಾವೆ: ಶಿವಮುಗ್ಗಿಯ ತುಂಗಾನದಿ ಯಲ್ಲಿರುವ ಕಬ್ಬಕ್ಕಿಗಳು ಈ ಕೆರೆಯ ಹರವನ್ನು ಕಂಡು ಬಯಸಿ ಬಯಸಿ ಬಾಯಿ ಬಿಡು ತ್ತವೆ. ಅದರ ಅಂದವನ್ನು ನೋಡಲು ಶಿವನೇ ಬಂದ ಮೇಲೆ ಕಬ್ಬಕ್ಕಿ ಬಾಯಿಬಿಡುವು ದೇನು ಹೆಚ್ಚು ?

೫ ಹೊಂಬಾಳೆ = ಬಿಚ್ಚಿಕೊಳ್ಳದೆ ಇರುವ ಅಡಕೆಯ ಹೂಗೊನೆ. ಹೊಂಬಾಳೆ ನಡುಗ್ಯಾವೆ: ಆನಂದದಿಂದ ಮೈ ಅದುರಿಸುತ್ತವೆ. ಕೆರೆಯ ಆಸರೆ ಯಲ್ಲಿರುವ ತೋಟಗಳಲ್ಲಿನ ಮರಗಳೆಲ್ಲ ಪುಲಕಿತವಾಗಿ ನಲಿಯುವುವೆಂದು ಭಾವ. ಇಬ್ಬೀಡ: ಇಬ್ಬೀಡು ಎಂಬ ಊರಿನ. ಅಥವಾ, 'ಎರಡನೆಯ ಸಲ ಬಿಟ್ಟ' ಎಂದೂ ಅರ್ಥಮಾಡಬಹುದು.

೬ ಆರುಗೋಲು, ಊರುಗೋಲು: ತೆಪ್ಪ ನಡಸುವ ಹುಟ್ಟು, ಗಳು, ಕೋಲುಗಳು. ಈ ಎರಡು ಪದಗಳಲ್ಲಿ, ತೆಪ್ಪದ ಮೇಲೆ ಹೋಗುವಾಗ ಕಾಣುವ ಸೊಗ ಸನ್ನು ಸೂಚಿಸಿದೆ.

## ಗೀಜಗನ ಗೂಡು

ಗೀಜಗ ಅಂದವಾದ ಒಂದು ಸಣ್ಣ ಹಕ್ಕಿ, ಪಂಜರದಲ್ಲಿಟ್ಟು ಸಾಕುತ್ತಾರೆ. ಪ್ರೀತಿ ಯಿಂದ ಸಾಕಿದ ಹಕ್ಕಿ ಸತ್ತದ್ದಕ್ಕೋ, ಕಷ್ಟಪಟ್ಟು ಗೂಡುಕಟ್ಟಿ ಅದರಲ್ಲಿ ಸುಖವಾಗಿ ವಾಸಮಾಡಲು ಅದೃಷ್ಟವಿಲ್ಲದೆ ಹೋದ ಕಾಡಿನ ಹಕ್ಕಿಯೊಂದನ್ನು ನೋಡಿಯೊ, ಮರುಗಿ ಹಾಡಿದ ಪದವಿರಬಹುದು. ಅಥವಾ ಹಕ್ಕಿಯನ್ನೂ ಅದರ ಗೂಡನ್ನೂ ಮೆಚ್ಚಿ ಹಾಡಿ ದ್ದಾದರೂ ಆಗಿರಬಹುದು. ಈ ಪದ ಪೂರ್ತಿ ಸಿಕ್ಕಿಲ್ಲ.

೨ ಬಾಗಾಡಿ ಭಾಗಮಾಡಿ (?). ನೇದ್ಯಲ್ಲೊ=ನೆಯ್ದಿಯಲ್ಲೊ.

೫ ಬಾಯಾಡಿ=ಗೂಡುನೇಯುವಾಗ ನಡುನಡುವೆ ಸ್ವಲ್ಪ ಸ್ವಲ್ಪ ತಿಂದು.

೬ ತುತ್ತಾಡಿ=ತುತ್ತು ತುತ್ತಾಗಿ ತಿಂದು.

## ವಿಧಿ

ಕಿನ್ನೂ್ರಡಿ, ಕಿನ್ನುಡಿ: ಕಿನ್ನಡಿ, ಕಿನ್ನರಿ (ಒಂದು ಬಗೆಯ ತಂತಿವಾದ್ಯ). ಕುಂತಿ ಕೊಟ್ಲ ಕುಟ್ಟಿದ ಸಂಗತಿ ಯಾವ ಭಾರತದಲ್ಲೂ ಇಲ್ಲ. ಗತಿಯಿಲ್ಲದೆ ಅಲೆದು ಕಷ್ಟಪಟ್ಟದ್ದನ್ನು ಹೀಗೆ ವರ್ಣಿಸಿದೆ.

೧ ಬಂದೊ=ಬಂದವೊ ! ''ಎಂಥವರಿಗೆ ಎಂಥ ಕಾಲ ಬಂತೊ''. ಕಾದೊ= ಕಾದರು.

೨ ಹಂತಿ=ಪಂಕ್ತಿ. ಉಳ್ಳೊ=ಉಳ್ಳ. ಮೆಲ್ಲೋ- ಮೆಲ್ಲುವ, ತಿನ್ನುವ. ಹೋಗವ್ರೆ=ಹೋಗಿದ್ದಾರೆ. 'ಪಾಂಡವರು ಅವರೆ ಬಿತ್ತಿ ಹೋಗಿದ್ದಾರೆ' ಎಂಬುದರ ಅಭಿಪ್ರಾಯವೇನು ?

## ಕರಿಯವ್ವ

ಇದು ಅಂತರಗಟ್ಟೆಯ ಮಾರಮ್ಮನ ಮಹಿಮೆಯನ್ನು ಕುರಿತ ಪದ ; ಕೊಬ್ಬಿದ ಕೋಣಬೇಗಾಡನನ್ನು ಕೊಂದ ಕಥೆ. 'ಕೋಗಿಲೇ' ಎಂಬ ಪಲ್ಲವಿ ಮೃದು ; ಆದರೆ ಒಳಗಿನ ವಿಷಯ ಭಯಂಕರವಾಗಿದೆ.

ತ್ರಿಪದಿಯಾಗಿ ಬರೆದಿರುವ ಪದ್ಯಗಳನ್ನೂ ಮೊದಲನೆಯದರಂತೆಯೇ ನಾಲ್ಕು ನಾಲ್ಕು ಪಂಕ್ತಿಯಾಗಿ ಹಿಗ್ಗಿಸಿ ಹೇಳಬೇಕು.

೧ ಕೋವೆ=ಬಿಲ. ಹುಟ್ಯಾಳೆ= ಹುಟ್ಟಿದ್ದಾಳೆ. ಅಂದಲ= ಅಂದಳ, ಅಂದಣ, ಪಲ್ಲಕ್ಕಿ. ಕಳುವ್ಯಾನೆ=ಕಳುಹಿದನು, ಕಳಿಸಿದನು. 'ಎ' ಉಚ್ಚಾರಣೆಯ ಸೌಕರ್ಯಕ್ಕೆ ಸೇರಿದ್ದು. ಕೆಲವು ಕಡೆ ಅವಧಾರಣೆಯನ್ನು ಸೂಚಿಸುತ್ತದೆ.

೨ ಈ ಪದ ಬರೆದ ಕಾಲದಲ್ಲಿ 'ಸೀರ್ಯದ ಮಗ್ಗ' ಪ್ರಸಿದ್ಧವಾಗಿತ್ತೆಂದು ಕಾಣುತ್ತದೆ.

೩ ಕಾಗಿನ ಸೀರೆ=ಕಪ್ಪು ಸೀರೆ. ತರಿಯ ಕೆರೆಯೆಂಬೊ ದೊರೆಗಳು : ಒಂದು ಕಾಲದಲ್ಲಿ ತರೀಕೆರೆಯ ಪಾಳೆಯಗಾರರು 'ದೊರೆಗಳು' ಎನ್ನಿಸಿಕೊಳ್ಳುವಷ್ಟು ಪ್ರಬಲರಾಗಿದ್ದಿರಬೇಕು. ಬಣ್ಣ=ಒಳ್ಳೆಯ ಬಣ್ಣದ ಸೀರೆ; ಪಟ್ಟೆಯ ಸೀರೆ. ಶಿವದಾರ=ಲಿಂಗ ಇಡುವ ಕರಡಿಗೆಯನ್ನು ಕಟ್ಟಿಕೊಳ್ಳುವ ದಾರ (?). ಬ್ರಾಹ್ಮಣರ ಜನಿವಾರದಂತೆ ಪವಿತ್ರವಾದ್ದು.

೪ ಗುಡುಗನಾಡು=ಗುಡುಗಾಡು, ಅಬ್ಬರಿಸುತ್ತ ಓಡಾಡು. ದೊರೆ ದೇವಿ=ದೊರೆತನಮಾಡುವ ದೇವಿ ; ಬಹು ದರ್ಪದ ದೇವತೆ.

೫ ಹೊರಟೊ=ಹೊರಟಳು. ಒಲವುತ=ಒಲಿಯುತ್ತ. ಜಡೆ ಉದ್ದವಾಗಿರುವುದೆಂದು ಸಾಮಾನ್ಯವಾಗಿ ವರ್ಣಿಸುತ್ತಾರೆ. ಇಲ್ಲೀಕೊ ಕಿರುಜಡೆ ಬೆನ್ನಮೇಲೆ ಆಡುತ್ತಿತ್ತೆಂದು ಹಾಡುತ್ತಾರೆ. ಕೆಂಗಾಡು=ಕೆಂಪು ಮಣ್ಣಿನ ಕಾಡು, ಬಯಲು.

೬ ಕೊಣಬೇಗೌಡನ ಕಥೆ ಬಹು ಪ್ರಸಿದ್ಧವಾದ್ದು. ಅವನು ತುಂಬ ಸಿರಿವಂತ. ಲೋಭಿಯಾಗಿ ಸುಳ್ಕಾಡಿ ಹಾಳಾದನಂತೆ. ಹಾಸನದ ಬಳಿಯ 'ಸೀಗೇ ಗುಡ್ಡ' ಅವನು ಬೆಳೆದ ಹುಲ್ಲಿನ ಬಣಬೆಯೆಂದೂ ಅದರ ಹತ್ತಿರದಲ್ಲಿ ಇರುವ 'ರಾಶಿ ಗುಡ್ಡ' ಅವನು ಒಕ್ಕಿದ್ದ ರಾಗಿಯ ರಾಶಿಯೆಂದೂ ಜನ ಹೇಳುತ್ತಾರೆ. ಭಿಕ್ಷಕ್ಕೆ ಬಂದ ದಾಸಯ್ಯನನ್ನು ಪೀಡಿಸಿದ್ದರಿಂದ ಅಷ್ಟು ದೊಡ್ಡ ಹುಲ್ಲು ಬಣಬೆಯೂ ರಾಗಿಯ ರಾಶಿಯೂ ಮಣ್ಣುಗುಡ್ಡೆಯಾಯಿತಂತೆ.

ಕೂರಿಗೆ=ಬಿತ್ತುವ ಸಲಕರಣೆ. ಕುಡ=ಕುಳ, ಕೈಕೆಳಗಿನ ಒಕ್ಕಲು ; ಆಳು ಕಾಳು.

೭ ಕೊಣಬೇಗೌಡನಿಗೆ ಆರಂಬದೆತ್ತು ಐನೂರಿದ್ದರೂ, ಮಾರಿಗೆ ಬಿಟ್ಟಿದ್ದ ಕೊಬ್ಬಿದ ಕೋಣನನ್ನು ಹಿಡಿದು ತಂದು ಅದರ ಮೇಲೆ ಗೊಬ್ಬರ ಹೇರಿದನಂತೆ. ಇದರಿಂದ ಮಾರಿ ಮುನಿದು ಅವನನ್ನು ಧ್ವಂಸಮಾಡಲು ಹೊರಟಳು. ಇದರ ಜೊತೆಗೆ ಅವನ ಲೋಭಿತನ ಮತ್ತು ಕ್ರೌರ್ಯವೂ ಕಾರಣವಾಯಿತು. (೧೬ನೆಯ ಪದ್ಯ ನೋಡಿ)

೮, ೯ ಮನೆಯಲ್ಲಿ ಕಲ್ಲು ಮುಳ್ಳು ಎಳಸುವುದು ಅದನ್ನು ಪೂರ್ತಿ ಹಾಳು ಮಾಡಿದ್ದಕ್ಕೆ ಗುರುತು.

೧೦ ಬವನಾಸಿ=ಭಿಕ್ಷದ ಪಾತ್ರೆ (ಸಂ. ಭವನಾಶಿ ; ಹುಟ್ಟುಸಾವಿನ ಕೋಟಲೆಯನ್ನು ತಪ್ಪಿಸುವಂಥದು ; ವೈರಾಗ್ಯಸೂಚಕವಾದ ಭಿಕ್ಷಾಪಾತ್ರೆ). ದಾಸಯ್ಯ ಬವನಾಸಿ ಕಳಕೊಂಡ: ಈ ಸಂಬಂಧದಲ್ಲಿ ಜನ ಹೀಗೆ ಕಥೆ ಹೇಳುತ್ತಾರೆ :—ಒಂದು ಸಲ ಸುಗ್ಗಿಯಲ್ಲಿ ಒಬ್ಬ ದಾಸಯ್ಯ ಕೊಣಬೇಗೌಡನ ಕಣಕ್ಕೆ ಭಿಕ್ಷಕ್ಕೆ ಬಂದ. ರಾಶಿ ರಾಶಿ ರಾಗಿಯಿದ್ದರೂ ಅವನಿಗೆ ಒಂದು ಕಾಳನ್ನೂ ಕೊಡಲಿಲ್ಲ. ಮನೆಯ ಹೆಂಗಸರು ಹಿಟ್ಟು ತರುತ್ತಿದ್ದವರು ಹೊಸಬನನ್ನು ಕಂಡು ಅವನಿಗೆಲ್ಲಿ ಇಕ್ಕಬೇಕಾಗುವುದೋ ಎಂದು ಹಿಟ್ಟನ್ನು ಒಂದು ಕಡೆ ಮುಚ್ಚಿಟ್ಟು ಬರಿಗೈಯಲ್ಲಿ ಕಣಕ್ಕೆ ಬಂದರು. ದಾಸಯ್ಯ ಹೊರಟುಹೋದಮೇಲೆ ಹೋಗಿ ನೋಡಿದರು. ಹಿಟ್ಟು ಇರಲಿಲ್ಲ ; ನಾಯಿ ತಿಂದು ಬಿಟ್ಟಿತ್ತು. ಆಗ ಕೊಣಬೇಗೌಡ ಸಿಟ್ಟಿನಿಂದ ದಾಸಯ್ಯನನ್ನು ಹಿಡಿತರಿಸಿ ಹೊಡೆದು ಬಡಿದು ಅವನ ಬವನಾಸಿಯನ್ನೂ ಕಿತ್ತುಕೊಂಡು ಅಟ್ಟಿಬಿಟ್ಟನು. ಇದರಿಂದ ಮಾರಿ ಅವನ ಮನೆ ಹಾಳುಮಾಡಿದಳು. ಮಾರಿಯೇ ದಾಸಯ್ಯನ ವೇಷದಲ್ಲಿ ಬಂದಿದ್ದಳೆಂದೂ ಕೆಲವರು ಹೇಳುತ್ತಾರೆ.

## ಲಕ್ಕವ್ವ

ಇದೂ ಮಾರಿಯನ್ನು ಕುರಿತ ಪದ.

೨ ಉಟ್ಟುಕೊಳ್ಳಿ, ತೊಟ್ಟುಕೊಳ್ಳಿ, ಹೊತ್ತುಕೊಳ್ಳಿ ಎಂಬ ಮಾತುಗಳನ್ನು ಉಚ್ಚರಿಸುವಾಗ ಒತ್ತಕ್ಷರವಿಲ್ಲದಿದ್ದರೆ ಹೇಗೋ ಹಾಗೆ ತೇಲಿಸಿ ಹೇಳುತ್ತಾರೆ.

೩ ಮುಂಗೊಂಡನ್ ಹಾಯೋ ಮಗ: ಮುಂಗೊಂಡವನ್ ಹಾಯುವ ಮಗ ಮಾರಿಯ ಗುಡಿಯ ಮುಂದೆ ಗುಂಡಿಯಲ್ಲಿ ಕೆಂಡ ಮಾಡಿ ಅದನ್ನು ತುಳಿದುಕೊಂಡು ನಡೆಯುವುದು ಕೆಲವು ಕಡೆ ವಾಡಿಕೆ. ಎಲ್ಲರಿಗಿಂತ ಮುಂದಾಗಿ ಕೊಂಡ ಹಾಯುವವನು 'ಮುಂಗೊಂಡ ಹಾಯುವ ಮಗ.' ಈಗಲೂ ಕೊಂಡ ಹಾಯುವುದಾಗಿ ಮಾರಿಗೆ ಹರಸಿ ಕೊಳ್ಳುವುದುಂಟು.

೪ ಪಿಲ್ಲಿ=ಕಾಲಿನ ಒಂದು ಒಡವೆ ; ಒಂದು ಬಗೆಯ ಉಂಗುರ.

೫ ನೋಡಾರಂತೆ=ನೋಡಿಯಾರಂತೆ. ಜನ ನೋಡಲು ಅವಕಾಶವಾಗುವಂತೆ ನಿಂತುಕೊ ಎಂದು ಪ್ರಾರ್ಥನೆ.

೬ ಬಿಂಗರದ=ಬಂಗಾರದ. ಚಿನ್ನದ ಪಟ್ಟಿ ಹಾಕಿಕೊಂಡ ಸೊಂಟ. ಅಸನೋಡಿ=ಹಸವನ್ನು, ಚೆನ್ನಾದ ಸ್ಥಿತಿಯನ್ನು ಕಂಡು (ಹಸ=ಹದ).

## ಕಾಳಗದ ಪದ

ಈ ಪದದ ಛಂದಸ್ಸು ಕಾಳಗದ ಬಿರುಸುಚಲನಕ್ಕೆ ಚೆನ್ನಾಗಿ ಹೊಂದುತ್ತದೆ. ವರ್ಣನೆ ವೀರರ ದಂಡು ಕಣ್ಣಿಗೆ ಕಟ್ಟುವಂತಿದೆ. ಮಾತು ಮನಮುಟ್ಟುವಂತಿದೆ (ಉದಾ. ಪದ್ಯ, ೨, ೪). ಇದು ವೀರಜೀವನ ನಾಡಿನಲ್ಲಿ ಬದುಕಿದ್ದಾಗ ಕಟ್ಟಿದ ಹಾಡು.

೧ ಊರಚಂಗಿ=ಊರಸಂಗಿ, ಬಹುಸಂಗಿ. ಎಲ್ಲರಿಗೂ ಬೇಕಾದವಳು ; ಎಲ್ಲರಲ್ಲೂ ಪ್ರೀತಿಯುಳ್ಳವಳು.

೨ ಕಡುಗತ್ತಿ=ಕಡಿಯುವ ಕತ್ತಿ ; ಮಚ್ಚು. ನಟ್ಟಕತ್ತಿ=ಉದ್ದನೆಯ ಕತ್ತಿ ; ಈಟಿ, ಭರ್ಜಿ (?). ಬಗಲು=ಕಂಕುಳು. ಕಟ್ಯಾರಣ್ಣ=ಕಟ್ಟಿದರಣ್ಣ. ಎಳ್ಡು=ಎರಡು. ಆಯ್ದ=ಅಯುಧ.

೩ ಬಲ್ಲೀರಣ್ಣ=ಬನ್ನಿರಣ್ಣ. ಜಬ್ಲುಪೇಟೆ=ಜಬ್ಬಲ್‌ಪುರ (?)

೫ ಕಿಳ್ಯಾವ=ಕಿಲ್ಲೆಯನ್ನು. ಆಗ ಮೈಸೂರಲ್ಲಿ 'ಗಾಜಿನ ಕಿಲ್ಲೆ' ಎಂದೊಂದು ಕಿಲ್ಲೆಯಿತ್ತೇನೊ (ಮೈಸೂರು ಕಿಲ್ಲೆಯನ್ನು ಗೆಲ್ಲಬೇಕೆಂದು ಹೊರಟರೆಂದು ಸೂಚನೆ)

೭ ಸರಿಯಾಗಿ ಅರ್ಥವಾಗುವುದಿಲ್ಲ. ಮದಕೆರೆ ನಾಯಕನಿಗೂ ಮೈಸೂರಿನ ಹೈದರಲ್ಲಿಗೂ ನಡೆದ ಒಂದು ಕದನವನ್ನು ಕುರಿತದ್ದಾಗಿರಬಹುದು, ಈ ಪದ. "ಸಾಬರ

ನ್ನೆಲ್ಲ ಯುದ್ಧಕ್ಕೆ ಬನ್ನಿ ಎಂದು ಕರೆದು, ಮದಕೆರೆ ನಾಯಕನನ್ನು ನಾವು ಕಾಪಾಡುತ್ತೇವೆ ಎಂದು ಹಟ ತೊಟ್ಟರು''. ಮೂರನೆಯ ಪಂಕ್ತಿಯ ಅಭಿಪ್ರಾಯ ತಿಳಿಯುವುದಿಲ್ಲ. ಶ್ರೀ ಅರ್ಚಕ ರಂಗಸ್ವಾಮಿಯವರ ಸಂಗ್ರಹದಲ್ಲಿ ಇದೇ ಪದ್ಯ ಈ ಕೆಳಗಿನ ರೂಪದಲ್ಲಿದೆ:

'' ತುರ್ಕರಿಗೆಲ್ಲ ಗೆಲ್ಲದ ರಂಗು
ಮದಕೇರಪ್ಪನ್ ಕಾವೀ ರಂಗು
ಜಾಡಿ ಸುಳ್ಳು ಮಾಡಿದರಣ್ಣ ಜವದೊರ್ ಪೇಟೇಲಿ ''

ಇಲ್ಲಿ ಕೂಡ, 'ಜಾಡಿ' 'ಚಾಡಿ' ಎಂಬುದಕ್ಕೆ ಬದಲಾಗಿ ಅಚ್ಚಾಗಿರಬಹುದು. ಯಾವುದೊ ಚಾಡಿಯನ್ನು ಕೇಳಿ ತುರುಕರ ದಂಡು ಮುತ್ತಿದಂತೆಯೂ, ಮದಕೆರೆ ನಾಯಕನ ವೀರರು ಆ ಚಾಡಿಯ ಮಾತನ್ನು ಸುಳ್ಳುಮಾಡಿದಂತೆಯೂ ಇದರಿಂದ ಸೂಚನೆ ಬರುತ್ತದೆ.

೮ ನುಲ್ದಾಡಿ=ನುಲಿದಾಡಿ. ಸಂವರ=ಸಂಹಾರ.

೯ ಚಾಕಲ್ ಮುತ್ತು=ಒಳ್ಳೆಯ, ಉತ್ತಮವಾದ ಮುತ್ತು.

ಶ್ರೀ|| ಅರ್ಚಕ ರಂಗಸ್ವಾಮಿಯವರ ಸಂಗ್ರಹದಲ್ಲಿ ಈ ಹೆಚ್ಚಿನ ಪದಗಳೂ ಇವೆ—

ಹಿಂದಲ್ ಜನವ ಕರೆದನಣ್ಣ
ನಂದಿ ದುರ್ಗ ಸೇರ್ದನಣ್ಣ
ಮುಂದೆ ಹೋಗಿ ಮುರಾರಿಗಸ್ವಾಮಿ ದರವ ಬೇಡಿದ |
ಶೀರ್ಯದ ಬಾಗಿಲ ತಂಕ ಶೀಗೆಬೇಲಿ ಕೊಯ್ಸಿದಾ—
　　ಭೂಪ ಶೀಗೆಬೇಲಿ ಕೊಯ್ಸಿದಾ ||

ಅವ್ರ ಕೇಳಿ ಇವ್ರ ಕೇಳಿ
ಚಿಕ್ಕಪ್ಪ ಚಿನುವಾಯಿ ಕೇಳಿ
　　ಎದ್ದು ಬನ್ನಿರಣ್ಣಾ ರಾತ್ರೆ ಹೆದ್ದನ್ ಪೇಟೆಗೆ ||

ಚಿತ್ರಕಲ್ಲು ದುರ್ಗದಾಗೆ
ಕಂಚಿನ್ ಕಾಳೆ ನಾದ ಕೇಳಿ
　　ಪಂಚಗುಂಡ್ಗೆ ಪರ್ವಾದಾರಿ ದಂಡ ಕೂಡಿದ ||

## ಸುಲ್ತಾನನ ದೌಲತ್ತು ಹೋದದ್ದು

ಪಲ್ಲವಿ|| ದೌಲತ್ತು=ಅಧಿಕಾರ.

೧ ಪಟ್ಟಣ........ರಂಗಸ್ವಾಮಿ: ಎಲ್ಲೆಲ್ಲೂ ತಾನೇತಾನಾಗಿ ವ್ಯಾಪಿಸಿರುವ ರಂಗನಾಥಸ್ವಾಮಿ. ಪಟ್ಟಣಕ್ಕೆ ರಂಗಸ್ವಾಮಿಯೇ ರಕ್ಷನಾಗಿದ್ದರೂ ಪಟ್ಟಣ ಶತ್ರುಗಳ ಕೈಸೇರಿತಲ್ಲ ಎಂದು ವ್ಯಸನ.

## ಟಿಪ್ಪಣಿ

೨ ವಸ್ತ್ರವ ಬೀಸಿದ: ಹೀಗೆ ವಸ್ತ್ರ ಬೀಸಿ ಮೋಸ ಮಾಡಿದವರು ಯಾರು, ಮೋಸದ ವಿವರ ಏನು, ಎಂಬುದು ಸ್ಪಷ್ಟವಾಗಿಲ್ಲ. ವಿಶ್ವಾಸಘಾತಕನ ದ್ರೋಹವನ್ನು ಸೂಚಿಸುತ್ತಿರಬಹುದು. ಹಸ್ರು=ಹಸುರು.

೩ ಹದ್ದು ಹಾರಿದ್ಹಂಗೆ: ಹದ್ದು ಹಾರಿಹೋದ ಹಾಗೆ; ತಟ್ಟನೆ; ಬಹು ಬೇಗ.

೪ ಹೆಂಗಸರಿಗೆಲ್ಲ ಹೆಚ್ಚಿನ ಕಾರುಬಾರು ಬಂತು: ಇಂಗ್ಲಿಷರ ಆಳಿಕೆಯಲ್ಲಿ ಹೆಂಗಸರಿಗೆ ಅಧಿಕಾರ ಹೆಚ್ಚುವುದೆಂದು ವಿಷಾದ ಪಡುತ್ತಾರೆ.

## ಜವರಾಯ

ಬಾಳಿನಲ್ಲಿ ಸಾವು ಹುದುಗಿಕೊಂಡೇ ಇದೆ. ಹುಟ್ಟಿದವನು ಎಂದಾದರೊಂದು ದಿನ ಸಾಯಲೇಬೇಕೆಂಬ ಗೊತ್ತು. ಆದರೆ ಅದು ಬರುವವರೆಗೂ ಯಾರಿಗೂ ಅದರ ಯೋಚನೆಯೇ ಇರುವುದಿಲ್ಲ. ಅಲ್ಲದೆ ಸಾವು ಸಾಕೆ ಬಯಸಿದಾಗ ಬರದೆ ಬೇಡದಿದ್ದಾಗ ಸ್ವಲ್ಪವೂ ಸುಳಿವು ಕೊಡದೆ ಬಂದು ಮೇಲೆರಗಿ ಒಳ್ಳೊಳ್ಳೆಯ ಜೀವಗಳನ್ನು ಚಿವುಟಿಕೊಂಡು ಹೋಗುತ್ತದೆ. ಈ ಅನುಭವವನ್ನು ಹಳ್ಳಿಯವರು ಈ ಪದದಲ್ಲಿ ಚಿತ್ರಿಸಿದ್ದಾರೆ.

ಪಲ್ಲವಿ|| ಜವರಾಯ=ಯಮರಾಯ. (ಕೊಡಲಿ+ಒಂದು)

೨ ನಡೆ=ನಡೆ, ಹೊರಡು

೩ ಮುಳಿಗೆ=(ಮುಡಿ ಮಾಡಿ ಮುಡಿಸಿರುವ) ಮುಡಿಕೆ. ಮುಂಡಾಸು=ರುಮಾಲು.

೪ ದುಂಡೀರೇರು=ದುಂಡಿಯರು; ದುಂಡುದುಂಡಾದ ಶರೀರ ಪುಷ್ಟಿಯುಳ್ಳ ಹೆಂಗಸರು.

೫ ಬಾನ=ಬೋನ; ಅನ್ನ.

೬ ಕಟ್ಟಾಣೆ=ಕತ್ತಿನ ಸರ. ಇಕ್ಕಲಿಲ್ಲ=ಇಟ್ಟುಕೊಳ್ಳಲಿಲ್ಲ; ಕೊರಳಿಗೆ ಹಾಕಿಕೊಳ್ಳಲಿಲ್ಲ.

೮ ವಾಲೆಯು+ಒಂದು+ಅರಘಳಿಗೆ.

೯ ಹಟ್ಟಿ=ಬೀದಿ.

೧೦ ಮಾಡ=ಗೂಡು. 'ಗೋಡೆಯ ಪಕ್ಕ, ಮನೆಯ ಹತ್ತಿರ' ಎಂದೂ ಅರ್ಥವಾಗುತ್ತದೆ.

## ಕಾರಣ

ಇದೊಂದು ಕಳ್ಳೊಲವಿನ ಕಥೆ. ಅತಿಯಾಗಿ ಮಳೆ ಹುಯ್ದು ಹೊಳೆ ಉಕ್ಕಿ ಪಟ್ಟಣಸೆಟ್ಟಿಯ ಮಗ ಕೊಚ್ಚಿ ಹೋಗುತ್ತಾನೆ. ಅವನೊಡನೆ ಹಲವು ವರ್ಷಗಳಿಂದಲೂ

ಗುಟ್ಟಾಗಿ ಸುಖಪಡುತ್ತಿದ್ದ ಅವನ ನಲ್ಲೆ ಹೊಳೆಯ ನೀರಿಗೆ ಬಂದಿದ್ದಾಗ ಆ ಸುದ್ದಿ ಕೇಳು ತ್ತಾಳೆ. ಅವಳ ಸಂಕಟಕ್ಕೆ ಮಿತಿಯಿಲ್ಲ. ಆದರೂ ಅತ್ತು ದುಃಖ ಹೊರಹಾಕುವು ದಕ್ಕೆ ಗತಿಯಿಲ್ಲ. ಆಗ ಒಂದು ಉಪಾಯ ಮಾಡುತ್ತಾಳೆ. ಹೊತ್ತಿದ್ದ ಗಡಿಗೆಯನ್ನು ಎತ್ತಿ ಹಾಕಿ, 'ಅತ್ತೆ ಮಾವ ಕಾಣದಂತೆ ಒಪ್ಪವಾಗಿ ಬಳಸಿದ್ದ ಹರವಿ ಚೂರಾಯಿತು' ಎಂದು ಅಳುತ್ತಾಳೆ. ಸುಳ್ಳಾಡದೆ, ತನ್ನ ಗುಟ್ಟು ಬಿಟ್ಟುಕೊಡದೆ ಕಣ್ಣೀರು ಕರೆಯುತ್ತಾಳೆ. ನೋಡಿದವರು ಅವಳು ಮಣ್ಣು ಮಡಕೆಗಾಗಿ ಅಳುತ್ತಾಳೆಂದೇ ತಿಳಿದಿರಬೇಕು.

೧ ಬೇಲೂರು—ಬೆಳವಾಡಿ—ಜಾವಗಲ್ಲು-ಬಾಣಾವಾರ ಈ ಸ್ಥಳಗಳ ನೆಲದ ಏರಿ ಳಿತವನ್ನು ನೋಡಿದರೆ ಒಂದು ಕಡೆಯ ನೀರು ಒಂದು ಕಡೆಗೆ ಹರಿಯುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಬೇಲೂರ ಮೇಲೆ ಹುಯ್ದ ಮಳೆಯಿಂದ ಬೆಳವಾಡಿಯ ಕೆರೆಗೆ ನೀರು ಬರುವುದಿಲ್ಲ. ಬೆಳವಾಡಿಯ ಕೆರೆ ಬಹು ದೊಡ್ಡದು. ಆ ಕೆರೆ ತುಂಬುವಷ್ಟು ಮಳೆ ಬಂದರೆ ಜಾವಗಲ್ಲಿನಲ್ಲಿ ಒರತೆ ಎದ್ದರೂ ಏಳಬಹುದು. ಜಾವಗಲ್ಲಿನ ನೀರು ಬಾಣಾ ವಾರಕ್ಕಂತೂ ಹೋಗುವುದೇ ಇಲ್ಲ. ಹೀಗೆ ಅಸಾಧ್ಯವಾದ್ದನ್ನು ವರ್ಣಿಸಿರುವುದು ಬಹು ಭಾರಿ ಮಳೆ ಬಂತೆಂದು ಒತ್ತಿ ಹೇಳುವುದಕ್ಕೆ ಮಾತ್ರ.

ಬಳಸ್ಯಾಳೆ=ಬಳಸಿದಳು.

೨ ಪಟ್ಟಣಸೆಟ್ಟಿ: ಹಿಂದಿನ ಕಾಲದಲ್ಲಿ ಬಹು ದೊಡ್ಡ ವರ್ತಕನಿಗೆ ರಾಜ ರಿಂದ ದೊರೆಯುತ್ತಿದ್ದ ಒಂದು ಗೌರವದ ಪದವಿ.

## ಭಾವನಾದಿನಿಯರ ಸರಸ

ಈ ಸಂವಾದದಲ್ಲಿ ಭಾವ ಆಡಿದ ಮಾತುಗಳಿಗೆಲ್ಲ ನಾದಿನಿ ಬಹು ಚಮತ್ಕಾರವಾಗಿ ಬೇರೆ ಬೇರೆ ಅರ್ಥಕಲ್ಪಿಸಿ ಉತ್ತರ ಕೊಡುತ್ತಾಳೆ. ಅವಳ ಚಮತ್ಕಾರಕ್ಕೆ ಭಾವ ಸೋತು ಬೆರಗಾಗುತ್ತಾನೆ; ಕಡೆಗೆ ಮೆಚ್ಚಿ ಸಂತೋಷಪಡುತ್ತಾನೆ. ಭಾವ-ನಾದಿನಿ ಸಂಬಂಧವುಳ್ಳ ವರಿಗೆ ಮದುವೆಯಾಗುವುದೂ ಉಂಟು. ಹಾಗೆ ಭಾವಿಸಿದರೆ, ಇದರ ಸ್ವಾರಸ್ಯ ಇನ್ನೂ ಹೆಚ್ಚುತ್ತದೆ.

ಪಂಕ್ತಿ ೪ ಮೆಟ್ಟಲೆ ಕುಯ್ಯೆ: ಮೆಟ್ಟಿ ಎಲೆ....

೬ ಇಕ್ಕು=ಇಡು, ಹಾಕು, ಹಾಕಿಕೊ.

೧೦ ಕಡಿ=ಕಚ್ಚು; ತಿನ್ನು; ಕತ್ತರಿಸು.

೧೨ ಮೆಲ್ಲು=ತಿನ್ನು.

೧೪ ಬೆಲ್ಲ ಆಡಿಸು=ಆಲೆ ಆಡಿಸಿ ಹಾಲು ಕಾಸಿ ಬೆಲ್ಲ ಮಾಡು.

೧೮ ಚಬುಕ್‌ಗಾರ್ ಹೆಣ್ಣು = ಚಬುಕುಗಾತಿ; ಬುದ್ಧಿ ಚಮತ್ಕಾರ ವುಳ್ಳವಳು.

೧೯ ಚಬುಕು=ಕುದುರೆಯ ಚಾವಟ; ವೇಗ.

೨೦, ೨೧ ಕದ್ರುಗಾರ್ ಹೆಣ್ಣು=ಕಾಂತಿಯುಳ್ಳ ಹೆಣ್ಣು. ಕದ್ರು= ಕದಿರ್, ಕಾಂತಿ; ನೂಲುತೆಗೆದು ಸುತ್ತುವ ಸಲಕರಣೆ, ಕದುರು

## ಚಿಂತಾಮಣಿಯ ರಾಜಕುಮಾರ

ಈ ಪದ ಪೂರ್ತಿ ಸಿಕ್ಕಿಲ್ಲ. ಇದರ ಕಥೆ ಸರಿಯಾಗಿ ಗೊತ್ತಾಗುವುದಿಲ್ಲ. ಕೋಲಾಟದವರು ಹೇಳುವಷ್ಟು ಕಥೆಯನ್ನು ಇಲ್ಲಿ ಕೊಟ್ಟಿದೆ: "ಚಿಂತಾಮಣಿಯಲ್ಲಿ ಒಬ್ಬ ದೊರೆ. ಅವನು ಬಹು ಧರ್ಮಿಷ್ಟ. ದಯಮಾರನೆಂಬುವನು ಅವನ ಜ್ಞಾತಿ. ಅವನು ಅಧಿಕಾರವನ್ನು ಆಕ್ರಮಿಸಿ ನಿಜವಾದ ದೊರೆಯನ್ನು ಹೆಸರಿಗೆ ಮಾತ್ರ ದೊರೆಯಾಗುವಂತೆ ಮಾಡುತ್ತಾನೆ. ದೊರೆಯ ಮಕ್ಕಳಿಬ್ಬರು ದಯಮಾರನನ್ನು ಅಡಗಿಸುವುದಕ್ಕೆ ಪ್ರಯತ್ನಿಸುತ್ತಾರೆ. ಅವರನ್ನು ಕುರಿತ ಹಾಡು ಇದು. "ನಿಮಗೆ ರಕ್ಷಣೆಯಾಗಿ ಕಾಪಾಡಿದ ಕೋಟೆಯೇ ಕಲಕಿ ಹಾಳಾದೀತು ಜೋಕೆ!" ಎಂಬ ಎಚ್ಚರಿಕೆಯ ಮಾತು ಪಲ್ಲವಿಯಲ್ಲಿ ಕಾಣಬರುತ್ತದೆ. ಉಳಿದ ವಿವರ ಕೋಲಾಟದವರಿಗೂ ತಿಳಿಯದು.

ಮೈಗಾದ= (ಮೈ+ಕಾದ) ಮೈಯನ್ನು ಕಾಪಾಡಿದ.

೧ ಹಟ್ಟೀಲಿ ಮೆಟ್ಟುಗಾಲಲ್ಲಿ ಹೋಗದಿರು: ಮನೆಯ ಎದುರು ಬೀದಿಯಲ್ಲಿ ಕಾಲಿಗೆ ಮೆಟ್ಟು ಮೆಟ್ಟಿಕೊಂಡು ನಡೆಯಬೇಡ. ಇದು ಗೌರವ ಸೂಚಕ ನಡವಳಿಕೆ. ಕೆಲವು ಕಡೆ ಇದು ಈಗಲೂ ವಾಡಿಯಲ್ಲಿದೆ. ದೇವಸ್ಥಾನ, ಕುಲಸ್ಥರ ಸಭೆ ಸೇರುವ ಚಾವಡಿಗಳ ಮುಂದೆ ಮೆಟ್ಟುಗಾಲಲ್ಲಿ ಹೋಗುವುದು ಅಪರಾಧವೆಂದು ಗಣಿಸುತ್ತಾರೆ.

೨ ಬತ್ತಿದ ಕೆರೆ ತುಂಬುವುದೂ, ಸತ್ತ ಕೋಗಿಲೆ ಬದುಕಿ ಸ್ವರಗೈಯುವುದೂ ಆ ರಾಜನ ಧರ್ಮಪರತ್ವವನ್ನು ಎತ್ತಿ ತೋರಿಸುತ್ತವೆ.

೩ ದರಬಲದ ಗಿಡ=ದರ್ಭೆ (?). ಹೂವೆ—ಒಂದು ಹಕ್ಕಿ.

## ಚೆಲುವಯ್ಯ ಚೆಲುವೋ

ಒಬ್ಬ ಹೆಣ್ಣು ಒಬ್ಬ ಚೆಲುವನನ್ನು ಕಂಡು ಮನಸೋತು ಅವನು ತನ್ನ ಮನೆಗೆ ಬರಬೇಕೆಂದು ಹಂಬಲಿಸುತ್ತಾಳೆ. ಅವನಿಗೆ ತನ್ನೊಲವನ್ನು ಹೇಳಿಕೊಂಡು ತನ್ನ ಮನೆಯ ಗುರುತು ತಿಳಿಸಿ ಮನೆಗೆ ಬರುವಂತೆ ಬೇಡಿಕೊಳ್ಳುತ್ತಾಳೆ. ಅವನ ಚೆಲುವಿಗೆ ಸೋತು, ದನಿಯ ಇಂಪಿಗೆ ಮರುಳಾಗಿ ಇಬ್ಬರೂ ಒಟ್ಟಿಗೆ ಸೇರಲು ಉಪಾಯ ಹೇಳಿ ಕೊಡುತ್ತಾಳೆ. ಬಳಿಕ ಆ ಚೆಲುವ ಶೃಂಗಾರ ಮಾಡಿಕೊಂಡು ನಲ್ಲೆಯ ಬಳಿಗೆ ಹೊರಡುತ್ತಾನೆ. ನಾಯಿ ತಳವಾರರ ಕಾವಲನ್ನು ತಪ್ಪಿಸಿಕೊಂಡು ಹೋಗಲಾರದೆಯೂ ತನ್ನ ಮೆಚ್ಚಿನ ಮುತ್ತಿನಂಥ ಹೆಣ್ಣನ್ನು ಬಿಡಲಾರದೆಯೂ ಸಂಕಟಪಡುತ್ತಾನೆ. ಕಣ್ಣತ್ತಲೆ ಕವಿಯುತ್ತದೆ. ಕಥೆ ಮುಂದೆ ಸಾಗುವುದೋ ಏನೋ!

೧ ಲೋಲ=ಲೋಲ; ಮನಸ್ಸು ಸೆಳೆಯುವ, ಮುದ್ದಾದ.

೩ ಗದ್ದಿಗೆ=ಪೀಠ. ಕಂಬಳಿ ಗದ್ದಿಗೆ ಮರ್ಯಾದೆಯ ಕುರುಹು; ಸಾಧಾರಣರಿಗೆ ಈ ಗೌರವ ಸಿಕ್ಕುವುದಿಲ್ಲ. ವೀಳ್ಯ=ವೀಳ್ಯ; ತಾಂಬೂಲ.

೬ ಒಜಾರಿಮರ; ಒಂದು ಜಾತಿಯ ಮರ.

೭ ಸುರಗಿ ಪಾನ=ಸುರಗಿ ಪಾನ, ಒಂದು ಬಗೆಯ ಹೂವಿನ ಗಿಡ. ಸುಂಗ್ರದ್ ತ್ವಾಟ—ಶೃಂಗಾರದ ತೋಟ ಬಾಕ್ಲ=ಬಾಗಿಲು.

೯ 'ಆಗು ಲೋಸ ಭೋಗಗುದೋನೆ' ಎಂದು 'ಗು' ಹೇಳುತ್ತಾರೆ. 'ಆಗದೊ ನೆ' ಎಂಬುದು ಸರಿ ಇರಬಹುದು. 'ಅಂಗ ಭೋಗದಾನೆ' ಎಂಬುದರ ಅಪರೂಪವಾಗಿರಬಹುದೆ? ಸತಿಗಿರಿಸ ಪಕ್ಕಿಸೆ ಗಿರೀಸ: ಈ ಮಾಗಿಸಿದ ಇದು ಶಿವನನ್ನು ಕುರಿತ ಪದ ಎಂದರೂ ಎನ್ನಬಹುದು. ಆಗ ಬಿಲಸು ಹಂಬಲಿಸುವ ಹೆಣ್ಣು ಸಾಮಾನ್ಯವಾಗಿ ಊರ ಹೊರಗಿರುವ ಮಾರಮ್ಮ (ಗೌರಿಯ ಒಂದು ರೂಪ) ಎಂದು ಸಮಂಜಸ ಮಾಡಬಹುದು. ಪಲ್ಲವಿಯಲ್ಲಿ ಬರುವ 'ನನ್ನಯ ಗಿರಿಪೇ' ಎಂಬ ಸಂಬೋಧನೆಯೂ ಈ ಊಹೆಗೆ ಬೆಂಬಲವಾಗಿದೆ. ಕೋಗಿಲ್ಹಂಗೆ=ಕೋಗಿಲೆಯ ಹಾಗೆ; ಕೋಗಿಲೆಯಂತೆ.

೧೦ ಬೇವಿನ ಮರ ಮಾರಿ ಗುಡಿಯ ಹತ್ತಿರ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಸಂಜೇಲ್=ಸಂಜೆಯಲ್ಲಿ ನ ಜಾಲ್=ಮುಂಜಾವದಲ್ಲಿ.

೧೧ ಅಂತ=ಎನ್ನುತ್ತ, ಎಂದು. ಒಕ್ಕೀನಿ=ಬರುತ್ತೇನೆ.

೧೨ ಸಾಧಾರಣವಾಗಿ ಎತ್ತು ಕಾಯುವವರು ಗಂಡಸರು, ಎಮ್ಮೆ ಕಾಯುವವರು ಹೆಂಗಸರು. ಶಿವನ ವಾಹನ ಎತ್ತು; ಮಾರಿಗೆ ವಿಶಾಲು ಎಮ್ಮೆ (ಕೋಣ). ಕುಂತು= ಕುಳಿತು, ಕೂತು.

೧೩ ಕಟ್ಯಾನ್=ಕಟ್ಟಿದನು. ಇಕ್ಯಾನ್=ಮೆಟ್ಟಿಕೊಂಡನು. ಮುರವಿನ ಜೋಡು=ಮೊರೆಯುವ ಮೆಟ್ಟು.

೧೬ ತುರಾಯಿನೋಳು=ತುರಾಯಿಯವಳು; ತುರಾಯಿ ಧರಿಸಿದವಳು. ಕತ್ತಲ್ ಕವಿದವೆ ಕಣ್ಣಿಗೆ: ಕತ್ತಲೆ ಏಕವಚನವಾದರೂ ಬಹುವಚನದ ಕ್ರಿಯೆ ಪ್ರಯೋಗವಾಗಿದೆ. ಇದು ಈ ಹಾಡುಗಳಲ್ಲಿ ಬಹು ಬಳಕೆ.

## ಬರಹೇಳಕ್ಕಯ್ಯ

ಇದು ಕೂಡ ಗಂಡಿನ ಅಂದಕ್ಕೆ ಮರುಳಾಗಿ ಮನಸೋತ ಒಬ್ಬ ಹೆಣ್ಣಿನ ಹಂಬಲಿಕೆ. ಗೆಳತಿಯೊಬ್ಬಳಿಗೆ ತನ್ನ ಮೆಚ್ಚಿನ ನಲ್ಲನ ಗುರುತು ಹೇಳಿ ಅವನನ್ನು ಕರತರುವಂತೆ ಕೇಳಿಕೊಳ್ಳುತ್ತಾಳೆ.

## ಟಿಪ್ಪಣಿ

೧ ಗಂಧಾಸು ರಾಣಿ : ಗಂಡನ ರಾಣಿ ಎಂದಿರಬಹುದೆ? ಗಂಡನುಳ್ಳ ಗರತಿ ಚೆಲುವನಿಗೆ ಮನಸೋತ ಕತೆಯುಂಡು ತೋರುತ್ತದೆ. ಪವಿತ್ರ[illegible]—ಹೇಳಬೇಕಾದ ಒಂದು ಸಂಗತಿಯಿದೆ; ಕೆಲವಿವೆ ಐ[illegible]=ಇವೆ.

೨ ಜೊತ್ತಿ ನ[illegible]ತ್ತ=[illegible] ಮಾನ್ಯ (ಜೊತಿ=ಜೋತಿ; ಬೆಳಕು). [illegible]=ಅವನ ಆ[illegible] ಮಾಡುವಾಗ [illegible] ಕಾಲದಲ್ಲಿ [illegible]ವಿಯೋನ್' ಎಂದು ನುಡಿಯುತ್ತಾರೆ [illegible] ಪಿಯೊ ಳ್' ಎಂದರೆ [illegible]ತ್ತದೆ

೩ ಗಂಧಮಾದಿ[illegible] : ಈ [illegible]ರದ [illegible]ಬಹುದು 'ಗಂಗವಾಡಿ' ಎಂಬುದು ಹೀಗೆ [illegible]ವಾಗಿದ್ದರೂ ಇರಬಹುದು. ಗ[illegible] [illegible]ಡಾಸಿನ ನಿಲುವಂಗಿ=ಗುಂಡಿಯುಳ್ಳ ನಿಲುವಂಗಿ ಮತ್ತು ಮುಂಡಾಸು ಎರಡೂ ಅವನ ಅಲಂಕಾರ.

## ಎಳ್ಳೂರು ಬಣಜಿಗ

ಇದೂ ಮುಂದಿನದೂ ಹೆಣ್ಣಿಗೆ ಗಂಡು ಮನಸೋತು ನೋಯಿಸಿ ಬಂದ ಸಂದರ್ಭವನ್ನು ವರ್ಣಿಸುವ ಪದಗಳು. ಇಲ್ಲಿ, ತಾನು ಒಲಿದ ಹೆಣ್ಣು ಒಬ್ಬಳೇ ಇರುವಾಗ ಎಳ್ಳು ಕೊಳ್ಳುವ ವರ್ತಕನ ವೇಷದಲ್ಲಿ ಬಂದು ಒಬ್ಬ ಗಂಡು ಮಾತಿಗೆ ತೊಡಗುತ್ತಾನೆ. ಅವನ ಮನಸ್ಸನ್ನು ತಿಳಿದ ಹುಡುಗಿ ಅವನ ಒಲವನ್ನು ಒಪ್ಪಿಕೊಳ್ಳದೆಯೂ ಊರಿಗೆ ಹೆದರಿಯೂ ಅವನನ್ನು ಬೆದರಿಸುತ್ತಾಳೆ. ಒಲಿದ ಹುಡುಗ 'ನನ್ನನ್ನು ಶೂಲಕ್ಕೆ ಹಾಕಿಸಿದರೂ ಸರಿಯೇ, ನಿನ್ನನ್ನು ಬಿಡಲಾರೆ' ಎಂದು ತನ್ನ ಒಲವಿನ ಆಳವನ್ನು ಹೊರದೋರುತ್ತಾನೆ.

೧ ಬಣಜಿಗ=(ವಣಿಜ) ವರ್ತಕ, ವ್ಯಾಪಾರಿ. ಹಣಿಗೆ=(ಹಣವು+ಇಗೆ) ಹಣಕ್ಕೆ.

೩ ದಶರಥರಾಯನ ಹಿರಿಯಣ್ಣ : 'ದಶರಥರಾಯನಂತೆ ಬಹು ಗಟ್ಟಿಗ, ಪ್ರಭಾವಶಾಲಿ ಮತ್ತು ಸತ್ವವಂತ' ಎಂದು ಭಾವ. ಹೊಸದು ಶೂಲ=ಬೇರೆ ಯಾರಿಗೂ ಉಪಯೋಗಿಸಿರದ ಹೊಸಾಹೊಸ ಶೂಲ (?)

೫ ಬಂದಿ=ತೋಳ ಬಳೆ.

## ಮಾವನ ಮಗಳೆ

೨ ಹೋಗಯ್ಯ ನನಿಯೋ ಹೊಳೆಗಾಗಿ : 'ಎಲ್ಲಾದರೂ ಹೋಗು; ನನ್ನ ತಂಟೆಗೆ ಬರಬೇಡ' ಎಂದು ಅಭಿಪ್ರಾಯ

೩ ಕುಲದಾಗೆ ದಂಡ ಬರುತ್ತೈತೆ : ಕುಲದವರು ಹಾಕುವ ದಂಡ ಮೇಲೆ

ಬರುತ್ತದೆ. ಇವನು ಬೇರೆ ಕುಲದ ಹೆಣ್ಣನ್ನು ಮೆಚ್ಚಿದ್ದನೆಂದು ತೋರುತ್ತದೆ. ಕುಲ ಬೇರೆಯಾದ್ದರಿಂದಲೇ ಹುಡುಗಿ ಹಿಂಜರಿಯುತ್ತಿರಬಹುದು. ಬರುತ್ತೈತೆ=ಬರುತ್ತದೆ.

೫೫ ದಂಡ ಕೊಟ್ಟ್ರುದರೂ ಅವಳನ್ನೇ ಪಡೆಯಬೇಕೆಂಬಷ್ಟು ಮಿತಿಮೀರಿದ ಒಲವು ಹುಡುಗನಿಗೆ. ಬದುಕ ಕಳುಹೇನ್ : (ಜೀವನಕ್ಕೆ ಆಧಾರವಾದ) ಸಾಮಗ್ರಿಗಳನ್ನು ಕಳಿಸೇನು.

## ಕುಂಜರದ ಬೊಂಬೆ ಕೇಳೆ

ಹೆಣ್ಣು ಗಂಡುಗಳು ಒಂದನ್ನೊಂದು ಮೆಚ್ಚಿ ಬೆಂಬತ್ತಿ ಅಲೆಯುವ ಒಲವಿನ ಕಣ್ಣು ಮುಚ್ಚಾಲೆಯಾಟ ಈ ಪದದಲ್ಲಿ ಸೊಗಸಾಗಿ ಮೂಡಿ ಬಂದಿದೆ. ಹೀಗೆ ಒಬ್ಬರನ್ನೊಬ್ಬರು ಅರಸಿ ಒಲಿಸಿಕೊಳ್ಳುವ ಈ ಬೇಟ ಸದಾ ನಡೆಯತಕ್ಕದ್ದೇ? ಇಂಥ ಒಂದು ಚಿತ್ರ ಶ್ರೀ ಜಿ. ಪಿ. ರಾಜರತ್ನಂ ಅವರ 'ರತ್ನನ ಪದಗಳಲ್ಲೂ' ಬಂದಿದೆ. ಇಲ್ಲಿ ಕೊಟ್ಟಿರುವುದು ಮೊದಲಿನಿಂದಲೂ ನಮ್ಮ ಕಡೆ ಹಳ್ಳಿಗಳಲ್ಲಿ ಪ್ರಚಾರದಲ್ಲಿದ್ದ ಪದ.

೧ ಕಟ್ಟೇ ಕಲ್ಲಾಗ್ಬಂದು=ಕಟ್ಟೆಯ ಕಲ್ಲು ಆಗಿ ಬಂದು. ಮುಂದೆಲ್ಲ ಸೌಕರ್ಯಕ್ಕಾಗಿ 'ಆಗಿ' ಎಂಬ ರೂಪವನ್ನೇ ಬರೆದಿದೆ.

೪ ಅಡ್ಡೇರಿನಾಗಿ=ಅಡ್ಡವಾದ ಏರಿಯಾಗಿ. ಇಂಥ ಕಡೆಗಳಲ್ಲಿ '....ನಾಗಿ, ಎಂದೇ ಆಟಗಾರರ ಬಾಯಲ್ಲಿ ನುಡಿಯುತ್ತದೆ (ಉದಾ —ಹೆಬ್ಬುಲಿತನಾಗಿ). ಮೀನಾಗಿ ಮಿಂಚಿದ್ದಳ್ ಹುಡುಗಿ : ಮೀನು ಮಿಂಚುವ ಅಂದವನ್ನು ಕಂಡು ತಿಳಿಯಬೇಕು.

೬ ಲ್ಯಾವ್ಗ=ನೀರಮೇಲೆ ಆಡುತ್ತಿದ್ದು ಮೀನು ಹಿಡಿಯುವ ಒಂದು ಬಗೆಯ ಸಣ್ಣ ಹಕ್ಕಿ.

೯ ಗೊನೆಕಾರ=ಅಡಕೆ ಮರ ಹತ್ತಿ ಗೊನೆ ಕತ್ತರಿಸುವವನು.

೧೧ ಬೇಟ್ಗಾರ=ಬೇಟೆಗಾರ.

## ಕೆಂಗಪ್ಪ

ಕೆಂಗಪ್ಪ ರಸಿಕ, ಸೊಗಸುಗಾರ; ಆದರೂ ಕುಲ ಮರ್ಯಾದೆಯನ್ನು ವಿಚಾರದ ನೀತಿವಂತ. ಯಾವ ಕಾರಣದಿಂದಲೊ ಅವನು ಮುನಿದು ಮನೆಬಿಟ್ಟು ಹೊರಡುತ್ತಾನೆ. ಆಗ ಏಳು ಜನ ಸೂಳೆಯರು ಅವನನ್ನು ಒಲಿಸಿಕೊಳ್ಳಲು ಹಲವು ಬಗೆಯಲ್ಲಿ ಯತ್ನ ಮಾಡುತ್ತಾರೆ. ಕೆಂಗಪ್ಪ ಸೋಲುವುದಿಲ್ಲ. ಇಂಥವನು ಕಡೆಗೆ ಒಬ್ಬ ಬೇಡರ ಹುಡುಗಿಗೆ ಮರುಳಾಗುತ್ತಾನೆ. 'ಅದು ತರವಲ್ಲ' ಎಂಬ ಎಚ್ಚರಿಕೆಯ ಮಾತಿನಿಂದ ಹಾಡು ಮುಗಿಯುತ್ತದೆ.

ಈ ಪದದಲ್ಲಿ, 'ಜಾಣ, ಓ ಜಾಣ' ಎಂದು ಅಡಿಗಡಿಗೂ ಸೇರಿಸಿಕೊಳ್ಳುತ್ತಾರೆ. ಇದನ್ನು ಅಡಕಮಾಡದೆ ಆಟಗಾರರು ಹೇಳುವಂತೆಯೆ ಬರೆದಿದೆ.

## ಟಿಪ್ಪಣಿ

೧ ಗದ್ದುಗೇಲಿದ್ರೆ=ಗದ್ದುಗೆಯಲ್ಲಿದ್ದರೆ. ಶಿವಸಾಣೋ ಜಾಣ=ಶಿವ ಸಾಣೆ ಓ ಜಾಣ. ಹೀಗೆಯೆ ಎಲ್ಲ ಕಡೆಯೂ ಸಂಧಿ ಬಿಡಿಸಿಕೊಳ್ಳಬೇಕು. ಅಳ್ಳಿ=ಅರಳಿ.

೨ ಬ್ಯಾಡ=ಬೇಡ.

೩ ಎಳಕಿನ=ಎಳಕಾದ, ಎಳೆಯ. ಮಕ್ಕೆ=ಮುಖಕ್ಕೆ. ನೀಲಗುದುರೆ=ನೀಲಿ ಮೇಲಾದ ಕುದುರೆ. ಹತ್ಯಾನು=ಹತ್ತಿದನು. ಕೊಡವ್ಹಾಸೋ ಜಾಣ: ಕೊಡವಿ+ಹಾಸಿ+ಓ ಜಾಣ. ಮಾಡಾನು=ಮಾಡಿದನು.

೪ ಹಳ್ಳಿಕಾರ=ಹಳ್ಳಿಯವನು. ಹಾದಿಕಾರ=ದಾರಿಹೋಕ. ಭದ್ರೆ= ಮಂಗಳಕರಳಾದವಳು. ತನ್ನ ತಾಯಿಯ ವಿಷಯವಾಗಿ ಬಹು ಗೌರವದಿಂದ ಮಾತಾಡು ತ್ತಾನೆ. ಅವಳಿಗೆ ತಕ್ಕ ಮಗನಾಗಿ ತಾನು ಉತ್ತಮ ನಡತೆಯುಳ್ಳವನಾಗಬೇಕೆಂದು ಸೂಚಿಸುತ್ತಾನೆ.

೫ ಹೋಗೋವ=ಹೋಗೋಣ.

೬ ತರವೆ=ತಕ್ಕದ್ದೆ, ಯೋಗ್ಯವೆ.

೮ ಮೋರೆಗೆ ಒಡುಕೊಳ್ಳೆ=ಮುಖಕ್ಕೆ ಬಳಿದುಕೊ. ತಿರಸ್ಕಾರದಿಂದ ಹೇಳುವ ಮಾತು.

೯ ಹತ್ತು ಕಾಲೇಣಿ=ಹತ್ತು ಮೆಟ್ಟಲಿರುವ ಬಹು ದೊಡ್ಡ ಏಣಿ. ಇದು ಹೂವಿನ ಸಮೃದ್ಧಿಯನ್ನು ಸೂಚಿಸುತ್ತದೆ. ಕುಯಿದೀಯೋ=ಕುಯ್ಯುತ್ತೀಯೋ ? ಕುಯದಿರು=ಕುಯ್ಯದಿರು ; ಕುಯ್ಯಬೇಡ.

೧೦ ಉಪ್ಪು ಚೆಲ್ಯಾರು ನಿನ ಮೇಲೆ=ಉಪ್ಪು ಚೆಲ್ಲುವುದು ಏನೋ ಕೇಡು ಸೂಚಿಸುವುದೆಂದು ಕಾಣುತ್ತದೆ. ಹೆಣ ಹೂಳುವಾಗ ಮೇಲೆ ಉಪ್ಪು ಹಾಕುವರಾದ್ದರಿಂದ ನಿನ್ನನ್ನು ಕೊಂದು ಹಾಕಿಯಾರು' ಎಂಬ ಎಚ್ಚರಿಕೆಯಿರಬಹುದು.

## ಹಸೇನ್ಹುಸೇನ

ನಮ್ಮ ಹಳ್ಳಿಗರಲ್ಲಿ ಹರಿಹರ ಭೇದಭಾವನೆಯಿಲ್ಲವೆಂಬುದಕ್ಕೆ ನಿದರ್ಶನವನ್ನು ಈಗಾಗಲೆ ಕಂಡಿದ್ದೇವೆ. ಅದೇ ರೀತಿ ಅವರಲ್ಲಿ ಹಿಂದೂಮುಸಲ್ಮಾನ ಭೇದವೂ ಇಲ್ಲ. ಮೊಹರಂ ಹಬ್ಬಕ್ಕೆ ಸಂಬಂಧಿಸಿದ ಈ ಕಥೆಯನ್ನು ಕೋಲಾಟದಲ್ಲಿ ಹೇಳುತ್ತಾರೆ. ಮೊಹರಂ ಕಾಲದಲ್ಲಿ ಉತ್ಸವದ ಮುಂದೆ ಈ ಪದ ಹಾಡಿಕೊಂಡು ಕೋಲು ಹುಯ್ಯು ವುದೂ ಉಂಟು.

ಇಲ್ಲಿ ಕೊಟ್ಟಿರುವುದು ಬೇರೆ ಬೇರೆ ಎರಡುತಂಡದವರಿಂದ ಸಂಗ್ರಹಿಸಿರುವ ಪದ. ಒಂದಕ್ಕೊಂದು ಪೂರಕವಾಗಿದೆ. ಆದರೂ ಕಥೆ ಪೂರ್ತಿ ತಿಳಿಯುವುದಿಲ್ಲ. ತಪ್ಪುಗಳೂ

ಬಹಳ. ಇದನ್ನು ಅರ್ಥಮಾಡಿಕೊಳ್ಳಲು ಅನುಕೂಲಿಸುವಂತೆ ಮೂಲಕಥೆಯನ್ನು ಅನುಬಂಧದಲ್ಲಿ ಕೊಟ್ಟಿದೆ.

೧

೧ ಮೌಲಾಲಿ : ಇದು ಪಟ್ಟಣವಿರಲಾರದು, 'ಮೌಲಾನ' ಎಂಬ ಪದದ ಅಪಭ್ರಂಶ. 'ಮೌಲಾನ ಅಲಿ' ಎಂಬುದರ ಹ್ರಸ್ವರೂಪವಾಗಿದ್ದರೂ ಇರಬಹುದು.

೨ ಶರಣ : ಭಕ್ತ. ದುಸುಮಾನ=ದುಶ್ಮನ್, ಶತ್ರು.

೫ ಸೈನಾ ಸೈನಾ=?

೬ ಕಣ್ಣಿಗ್ ಮೂಗಿಗ್ ಒತ್ತಿಕೊಂಡು : ಇದು ಗೌರವ ಸೂಚಿಸುತ್ತದೆ.

೭ ದಂಡಿಗಾದ್ರು=ದಂಡಿಗಾದರೂ. ಕೊಡವ್ಮಾ+ಅಪ್ಪಣೆಯ : ಸಂಧಿ ಮಾಡಿಬಿಟ್ಟಿದ್ದಾರೆ.

೮ ಸೋಸ್ಯಾರು=ಹುಡುಕಿದರು.

೧೦-೧೧ ಬಾಣಬಿಡುವ ಸದ್ದಿನ ಅನುಕರಣ

೧೨ ಸುದ್ದೀನ=ಸುದ್ದಿಯನ್ನು.

೧೩ ಕಾಲ್ಯಾವ್ದೊಳ್ಗೆ=ಕಾಲುವೆಯೊಳಗೆ. ತೇಲ್ಯಾವು=ತೇಲುವುವು.

೧೪ ರಣದ ಸುದ್ದೀನ=ಯುದ್ಧದ ಗೊಡವೆಗೆ.

೧೫ ಮಾಡ್ತ=ಮಾಡುತ್ತ. ಕುಂತಳ=ಕೂತಳು.

೧೬ ಅರಿಸಿನದ ಮೈನಾಗೇ=ಇನ್ನೂ ಮದವಣಿಗನಾಗಿರುವಾಗಲೆ.

೨

೧ ಕತ್ತಲ್‌ರಾತ್ರಿ=ಕತ್ತಲೆ ರಾತ್ರಿಯ.

೨ ಘೋಂ.... ಅನುಕರಣ ಶಬ್ದಗಳು. ಹಾರ್ತಾವ್=ಹಾರ್ತಾವೆ; ಹಾರುತ್ತವೆ.

೫ ಕರಬಲ್‌ಕೋಗಿಲ್=ಕರ್ಬಲದ ಕೋಗಿನಲ್ಲಿ. ಕರ್ಬಲ : ಹಸರತ್ ಹುಸೇನರು ಬಲಿದಾನವಾದ ಮರಳು ಕಾಡಿನ ಹೆಸರು. ಕೋಗು= ? ರಣ ಗಂಬ್ಹೂಡಿ=ರಣಗಂಬವನ್ನು ನಿಲ್ಲಿಸಿ.

೧೦ ಆ ಮರಳುಗಾಡಿನಲ್ಲಿ ಬಿಸಿಲಿನ ಬೇಗೆ, ಅನ್ನ ನೀರಿಲ್ಲದ ಸಂಕಟ ಇವಕ್ಕೆ ಸಿಕ್ಕಿಯೆ ಎಲ್ಲರೂ ಹತರಾದರು.

೧೧ ದಂಡಿಗ್ಗಿಂಡಿ=ದಂಡಿಗೆಯುಳ್ಳ ಗಿಂಡಿಯೆ ? ಮಾತು ಆಟಗಾರರ ಬಾಯಲ್ಲಿ ಸರಿಯಾಗಿ ಹೊರಡುವುದಿಲ್ಲ. ರೂಪ ಗುರುತಿಸಲಾರದಷ್ಟು ವಿಕಾರವಾಗಿದೆ.

೧೨ ಮುಸೂತಿ=ಮಸೀದಿ. ಬನಾ=ವನವನ್ನು.

೧೪ ಕಾಡ್ಹತ್ತಿಹೋಗೊ=ಕಾಡು ಹತ್ತಿ ಹೋಗುವ ; ನಾಶವಾಗಿ ಹೋಗುವ.

೧೫ ಬಳಿದು=ಒರಸಿ.

೧೬ ಜೈತುಂಬನಾ='ಜೈತುಂಬಿ' ಎಂದಿರಬಹುದು.

## ಸೋಬಾನದಿಂದ ಸುಖದಿಂದ

ಈ ಪದ ಹೆಂಗಸರು ಹೇಳುವ ಮದುವೆಯ ಪದ. ಅದನ್ನ ಕೋಲಾಟಕ್ಕೂ ಉಪಯೋಗಿಸಿಕೊಳ್ಳುತ್ತಾರೆ. ಇದನ್ನೂ ಮುಂದಿನ ನಾಲ್ಕೈದು ಸಣ್ಣ ಸಣ್ಣ ಪದಗಳನ್ನೂ 'ರಂಗಸ್ವಾಮಿ' ಮೊದಲಾದ ತೊಡಕಿನ ಧಾಟಿಯ ಪದಗಳನ್ನು ಹಾಡಿ ಆಡಿ ಆಯಾಸವಾದಾಗ ನಡುನಡುವೆ ಎತ್ತಿಕೊಳ್ಳುತ್ತಾರೆ. ಸುಲಭ ರೀತಿಯ ಈ ಪದಗಳಿಂದ ದಣಿವಾರಿ ಮತ್ತೆ ತೊಡಕಿನ ಪದಗಳನ್ನು ಪ್ರಾರಂಭಿಸಲು ಅನುಕೂಲವಾಗುತ್ತದೆ. ಇವುಗಳಲ್ಲಿ ಪ್ರತಿ ಮಾತಿಗೂ ಅರ್ಥ ಹುಡುಕುತ್ತ ಹೋದರೆ ಸಿಕ್ಕಲಾರದು. ತಿಳಿದಷ್ಟು ಭಾವವನ್ನು ಗ್ರಹಿಸಬೇಕು.

೧ ಬರುವ್ರೋನು=ಬರುವವನು. ಎಂಬುತಲಿದ್ದೆ=ಎನ್ನುತ್ತಿದ್ದೆ. ಮದುವಣ್ಣ=ಮದುವಣಿಗ (ಇದರ ಮೂಲ : ಮರು+ವಳ, ಮರು+ಅಣುಗ ಅಥವಾ ಮರು+ಅಣ್ಣ)

೨ ಬಂಟ=ಶೂರ.

## ಎತ್ತೆಲ್ ಕಾದೊ ಬುತ್ತೆಲ್ ಉಂಡೊ

೧ ಎಲ್=ಎಲ್ಲಿ. ಬುತ್ತಿ+ಎಲ್ಲಿ+ಉಂಡೊ. ಕಾದೊ, ಉಂಡೊ....ಇಲ್ಲಿ ಪ್ರಶ್ನಾರ್ಥಕ. ನನ್ನೈ=ನನ್ನಯ್ಯ (ನನ್ನ ಅಯ್ಯ)

೨ ಆವು=ಹಸು, ದನ.

## ಚಿತ್ತ್ರಲಾರದ ಗೊಂಬೆ

ಇದು ಗಂಡು ಹೆಣ್ಣಿನ ಸಂವಾದ. ಗಂಡು ಹೆಣ್ಣನ್ನು ಸಲಿಗೆಯಿಂದ ಮಾತಾಡಿಸ ಹೋಗುತ್ತಾನೆ. ಹೆಣ್ಣು ಆ ಸಲಿಗೆಗೆ ಅವಕಾಶ ಕೊಡದೆ 'ನಿನ್ನ ಚಿಂತೆ ನನಗಿಲ್ಲ' ಎಂದು ಸ್ಪಷ್ಟವಾಗಿ ಹೇಳಿಬಿಡುತ್ತಾಳೆ.

೧ ಚಿತ್ತ್ರಲಾರದ ಗೊಂಬೆ; ಚಿತ್ತಾರದ ಬೊಂಬೆ: ತುಂಬ ಚೆಲುವೆ. ಎತ್ತ ಮುಂದಲಾದರಮಾ=ಎತ್ತ ಮುಂದಲಾದಿರಮ್ಮಾ; ಎತ್ತ ಹೊರಟೆ? 'ಅಮ್ಮಾ' ಎಂಬುದು ಬರಿಯ ಉಚ್ಚಾರಣೆಯ ಸೌಕರ್ಯಕ್ಕಾಗಿ ಸೇರಿದ್ದಿರಬಹುದು. ಅರ್ಥ ಇರುವ ಪಕ್ಷದಲ್ಲಿ, 'ಅಮ್ಮ, ಅಪ್ಪ' ಎಂದು ಗಂಡು ಹೆಣ್ಣುಗಳಿಬ್ಬರಿಗೂ ಹೊಂದುವಂತೆ ಹೇಳಬೇಕು. ಹಿಂದೆ 'ಅಮ್ಮ' ಎಂಬ ಪದಕ್ಕೆ 'ಅಪ್ಪ' ಎಂದೂ ಅರ್ಥವಿತ್ತು. ಅದು ಈ ಹಾಡು ಕಟ್ಟಿದವರಿಗೆ ಗೊತ್ತಿತ್ತೆಂದು ಹೇಳುವುದು ಹೇಗೆ?

೨ ರೂವಲಾರದ=ರೂಪಿಸಲಾರದ; ರೂಪ ಬರೆಯಲು, ಕಡೆಯಲು ಸಾಧ್ಯವಿಲ್ಲದ. ತರ=ರೀತಿ. ಗ್ಯಾನ=ಜ್ಞಾನ.

## ಕೆದರದಿರು ಕೇದಿಗೆ

೧ ಕೇದಿಗೆ=ತಾಳೆಯ ಹೂವು. ಮಲ್ಲಿಗೇ ಮಳೆ: ಮಳೆ ಹನಿಗಳನ್ನು ಮಲ್ಲಿಗೆ ಮೊಗ್ಗಿಗೆ ಹೋಲಿಸಿದೆ. ಕೇದಿಗೇಕೆರೆ=ಕೇದಿಗೆಯೆಂಬ ಊರಿನ ಕೆರೆಯಿರಬಹುದು. ಅಥವಾ ಕೇದಿಗೆ ಹೆಚ್ಚಾಗಿ ಬೆಳೆದಿರುವ ಕೆರೆಯಿರಬಹುದು. ಕೆರೆ ಕಟ್ಟಲು= ಕೆರೆ ಕೋಡಿ ಬಿದ್ದು ದಾಟುವುದಕ್ಕೆ ಆಗದಂತಾಗಲು. ಕೆದರದಿರು=ಅರಳಬೇಡ.

೨ ದಿಬ್ಬ=ದಿಣ್ಣೆ, ಮೇಡು. ದಿಬ್ಬದಾಗಳ=ದಿಬ್ಬದಾಗಣ; ದಿಬ್ಬದಲ್ಲಿನ; ಮೇಡಿನ ಮೇಲಿರುವ.

೩ ಅಳ್ಳದಿರು=ಅರಳದಿರು

## ಹುಬ್ಬಳ್ಳಿಂದ ತರಿಸಿಕೊಡುವೆ

ಇದು ಸೂಳೆಯ ಸಹವಾಸದಿಂದ ಬರಿಗೈಯಾಗಿ ಕಷ್ಟಕ್ಕೆ ಸಿಕ್ಕಿದವನೊಬ್ಬನ ಚಿತ್ರ. ಈ ಪದ ಇನ್ನೂ ದೊಡ್ಡದಾಗಿ ತುಂಬ ರಂಜಕವಾಗಿತ್ತು. ನಾವು ಇದನ್ನು ಬರೆದುಕೊಳ್ಳುವಂತಾಗುವ ಹೊತ್ತಿಗೆ ಜನರ ನೆನಪಿನಿಂದ ಅಳಿಸಿಹೋಗಿ ಇಷ್ಟಕ್ಕಿಳಿದಿತ್ತು.

ಕಾಗಿನ್‌ಕಣ=ಕಪ್ಪುಬಣ್ಣದ ರವಿಕೆಯ ಬಟ್ಟೆ. ಚಿಲ್ಕಿಪಲ್ಕಿ....ಇದರ ಅಭಿಪ್ರಾಯ ಏನೋ!

## ಪಗಡೆಯ ಜೂಜು

ಇದು ಕೋಲಾಟದಲ್ಲಿ ಹೇಳುವ ಭಾರತದ ಕಥೆ.

೧ ಕರಿಯಪುರ=(ಆನೆಯ ಪಟ್ಟಣ) ಹಸ್ತಿನಾವತಿ. ಒತ್ತೆಯಿಟ್ಟು= ಪಣವೊಡ್ಡಿ.

೨ ಪಾಪಿಕೇಡಿ: ಕೋಲಾಟದವರು 'ಪಾಪಗೇಡಿ' ಎಂದು ಹೇಳುತ್ತಾರೆ. ಅದಕ್ಕೆ 'ಪಾಪವನ್ನು ಕೆಡಿಸುವವನು' ಎಂದರ್ಥ. ಅದು ಹೊಂದುವುದಿಲ್ಲವಾದ್ದರಿಂದ 'ಪಾಪಿ. ಕೇಡಿ' ಎಂದು ತಿದ್ದಿದೆ. ದಾತನು=ಕೊಡುವವನು. ಸ್ವಲ್ಪವೂ ಅಳುಕದೆ ಸರ್ವಸ್ವವನ್ನೂ—ದ್ರೌಪದಿಯನ್ನೂ—ಒಡ್ಡಿದ್ದರಿಂದ ಅವನನ್ನು 'ದಾತ' ಎಂದು ವ್ಯಂಗ್ಯವಾಗಿ ಕರೆದಿದ್ದಾರೆ.

೩ ದೂತರಟ್ಟಿ=ದೂತರ+ಅಟ್ಟಿ. 'ದೂತರನಟ್ಟಿ' ಎಂದಿರಬೇಕಾಗಿತ್ತು. ಅಟ್ಟು=ಓಡಿಸು. ಬದುಕು=ಬಾಳು, ಜೀವನ. ಇಲ್ಲಿ ಜೀವನ ಸಾಧನಗಳು ಪದಾರ್ಥಗಳು.

೪ ಭೂಮಿಕಾಣಿ: ಕಾಣಿ: ಕೇವಲ ಅನುಕರಣ ಶಬ್ದವೆ? 'ಕಾಣುವ ವಸ್ತು', ಎಂದು ಅರ್ಥವಿರಬಹುದಲ್ಲವೆ?

೫ ಎಂದ್ರೆ=ಎಂದರೆ.

## ಕೃಷ್ಣರಾಯ

ಗೋಪಿಯರು ಬಾಲಕೃಷ್ಣನ ಚೇಷ್ಟೆಗಳನ್ನು ವರ್ಣಿಸುವ ಹಾಗಿದೆ ಈ ಪದ. ಪಲ್ಲವಿ ಹೀಗಿರಬಹುದು :

"ಇಂದು ಬರೋ ರಾಯ ಗೋ | ವಿಂದ ಯಾತಕೊ ಬಾರನು
ಬಾರನು, ಹಕ್ಕೆ ಸಾರನು | ಧೀರ ಕೃಷ್ಣರಾಯನು".

ಪಲ್ಲವಿ : ಹಕ್ಕಿ ಸಾರನೇ : ಹಕ್ಕೆ ಸಾರನು. ಹಕ್ಕೆ=ಪಶುಗಳು ಮಲಗುವ ಸ್ಥಳ ; ಇಲ್ಲಿ, ಕೊಟ್ಟಿಗೆ.

೩ ದನವಿನೊಳಗೆ : ದನದೊಳಗೆ. 'ದನವು' ಎಂಬ ರೂಪವನ್ನು ಪ್ರಕೃತಿಯಾಗಿಟ್ಟುಕೊಂಡಿದೆ.

೪ ಮಾಯಿ=ಮಾಯೆಯೊಡೆಯ. 'ಮಾಯಾವಿ' ಎಂಬುದು ಕೃಷ್ಣನಿಗೆ ಒಂದು ಬಿರುದು. ತಮಿಳಿನಲ್ಲೂ 'ಮಾಯವನ್' ಎಂಬುದು ವಿಷ್ಣುವಿಗೇ ಸಲ್ಲುವ ಹೆಸರು.

## ಕೊನೆಯ ಪದ

ಪಲ್ಲವಿ : ರತುನ=ರತ್ನ.

೧ ವ್ಯಾಗಳ=ಮೇಗಣ ; ಮೇಲಿನ. (ಮೇಗು+ಅಣ). ನೆತ್ತೀ ವ್ಯಾಗಳ ನಾರಾಯ್ಣ=ನೆತ್ತಿಯ ಮೇಲಿರುವ ಸೂರ್ಯನಾರಾಯಣ. ಈಟ್ ಹೊತ್ತಿಗೆ : ಈಟು=ಇಷ್ಟು.

೨ ಎಲ್ಲೋರ=ಎಲ್ಲರನ್ನೂ. ಮುಗುದೆವೆ=ಮುಗಿದೆವು.

## ತೆನೆ ೨—ತಿಂಗಳು ಮಾವನ ಪದಗಳು

೧ ತಿಂಗ್ಳು=ತಿಂಗಳು ; ಚಂದ್ರ. ತಿಂಗಳು ಮಾವ = ಚಂದ್ರ. ಗರುಡನ ಪೂಜೆ : ಗರುಡನಿಗೂ ಈ ಪೂಜೆಗೂ ಸಂಬಂಧವೇನೋ ತಿಳಿಯುವುದಿಲ್ಲ. ಗರುಡನಿಗೆ ಸಂಬಂಧಪಟ್ಟ ಯಾವ ಆಚರಣೆಯೂ ಇದರಲ್ಲಿ ಕಾಣಬರುವುದಿಲ್ಲ. ಗನಪೂಜೆ : ಘನವಾದ ಪೂಜೆ. 'ಗಣಪೂಜೆ' ಎಂದೂ ಕೆಲವರು ಹೇಳುತ್ತಾರೆ. ದೇವರು ಮೈದುಂಬಿದಾಗ 'ಗಣಬಂತು' ಎನ್ನುತ್ತಾರೆ. ಗಣಪೂಜೆಯೆಂದರೆ ಹಾಗೆ ಮೈದುಂಬಿದ ದೇವರ ಪೂಜೆ ಎಂದಾಗಬಹುದು. ಅಥವಾ ಶಿವಗಣಗಳ, ಭಕ್ತರ ಪೂಜೆಯೆಂದೂ ಆಗಬಹುದು. ದಿಡ=ದಡ.

೨ ತಂಗೆ=ತಂಗಿ. ಈ ರೂಪ ಈಗ ಸಾಮಾನ್ಯವಾಗಿ ಬಳಕೆಯಲ್ಲಿಲ್ಲ. ಕಾವ್ಯಗಳಲ್ಲೂ ಧಾರವಾಡದ ಪ್ರಾಂತದಲ್ಲೂ ಪ್ರಯೋಗದಲ್ಲಿದೆ. ತಿಂಗ್ಳುಮಾವನ ತಂಗೇರೇಳು ಮಂದಿ : ವಾರದ ಏಳು ದಿನಗಳೆಂದು ತೋರುತ್ತದೆ. 'ಬಂಗಾರ ದೋರು ಒಳೆಯೋರು' ಎಂದೂ ಹೇಳುತ್ತಾರೆ. ಮಂಗಳಾರತಿ ಒಂದ್ ಹದಿನೈದು=ಪಕ್ಷದ ಹದಿನೈದು ತಿಥಿಗಳೆಂದು ಕಾಣುತ್ತದೆ.

ಪಂಜಾಗೆ=ಪಂಜಿನಲ್ಲಿ.

೩ ಐಗೊಳಗ = ಐದು ಕೊಳಗ. ಹೆಂಗ್ = ಹೆಂಗೆ, ಹೇಗೆ. (ಎ+ಪಾಂಗು+ಎ=ಎಂಬುದನ್ನು ಮೂಲವಾಗಿಟ್ಟುಕೊಂಡರೆ, 'ಹೆಂಗೆ' ಎಂಬ ರೂಪ ಶುದ್ಧವೆಂದೇ ಹೇಳಬಹುದು). ತರ್ವಾನ=ತರೋಣ. ಎಳ್ಡು=ಎರಡು.

೪ ನಾಗೊಳಗ=ನಾಲ್ಕು ಕೊಳಗ.

೫ ಹಟ್ಟೀಲಿ = ಹಟ್ಟಿಯಲ್ಲಿ. ಹಟ್ಟಟ್ಟಿಗೆಲ್ಲ = ಹಟ್ಟಿಹಟ್ಟಿಗೆಲ್ಲ. ಅಗಸ್ಯ್ಯಾರೆ=ಅಗೆಯಿಸಿದರು. 'ಅಗಸು' ಎಂದೇ ನುಡಿಯುತ್ತಾರೆ. 'ಹರಿದವೆ, ಅಗಸ್ಯಾರೆ' ಮೊದಲಾದ ಕಡೆಗಳಲ್ಲಿ ಕಡೆಯ 'ಎ' ಅವಧಾರಣಾರ್ಥದ್ದು. ಮಗೆ= ಮೊಗೆ; ತುಂಬಿಕೊ. ಮಡಗು=ಇಡು. ಪ್ಮಾಳಿಗೆ=ತಾಂಬಾಳೆ; ಅರಕಿನ ಚಟ್ಟ (ಪದಾರ್ಥಗಳನ್ನು ತುಂಬಿಡುವ ಒಂದು ಹಿತ್ತಾಳೆಯ ಪಾತ್ರೆ). ಹಣವಡ್ಡ=ಹಣ ಮೇಲೆ ಅಡ್ಡ (ಅಡ್ಡ=ಅರ್ಧ); ಒಂದೂವರೆ ಹಣ.

೬ ಚಿಕ್ಕೇರೀ=ಚಿಕ್ಕ+ಕೇರಿಯ. ಬರುವ್ರೊ=ಬರುವ. ಬೆಳದಿಂಗ್ಳಪ್ಪ =ಬೆಳದಿಂಗಳು ಕೊಡುವಾತ, ಚಂದ್ರ: ಅಚ್ಚಕನ್ನಡದ ಈ ಹೆಸರು ಎಷ್ಟು ಮುದ್ದಾಗಿದೆ:

೭ ತಳಿಮಂಚ: 'ಸೆಳೆ'ಮಂಚವಿರಬಹುದೆ? ಮಂಚಾನ್ ಹಾಪಲಿ= ಮಂಚವನ್ —. ಸುವ್ವರದ=ಸುಸ್ವರದ.

೮ ರನ್ನ=ರತ್ನ. ನವರತ್ನ: 'ರವರತ್ನ' ಎಂದು ಉಚ್ಚರಿಸುತ್ತಾರೆ. ಮದಲಿಂಗ=ಮದುವಣಿಗ.

೯ ಚಿಬ್ಲು=ಚಿಬ್ಬಲು. ಬಿದಿರಿನ ಸಣ್ಣ ಮೊರ.

೧೦ ಸೂತುಕನಾಗಿ=ಸೂತಕವಾಗಿ; ಮುಟ್ಟಾಗಿ. ಗುಡುಲು=ಗುಡಿಲು, ಗುಡಿಸಲು. ಮೊದಲನೆಯ ಸಲ ಮುಟ್ಟಾದಾಗ ತುಂಬೆ, ಹಿಪ್ಪೆ, ಮೊದಲಾದ ಕೆಲವು ಹೂ ಸೊಪ್ಪುಗಳನ್ನು ತಂದು ಗುಡಿಸಲು ಹಾಕಿ ಅದರಲ್ಲಿ ಕೆಲವು ದಿನ ವಾಸಮಾಡಿಸುವುದು ವಾಡಿಕೆ. ಮ್ಯಾಯಾನ=ಮಿಾಯೋಣ; ಸ್ನಾನ ಮಾಡೋಣ. ತಾವು=ಸ್ಥಳ; ಎಡೆ. ಹೋಗಯ್ಯ ಮುಗಿಲ ಸೆರಗಿಗೆ: ಮುಗಿಲಿನ ಸೆರಗಿನ ಹಿಂದೆ ಅಡಗಿ ಮರೆಯಾಗು. ಆಗ ತಂಗಿ ಅಕ್ಕ ನಿಸ್ಸಂಕೋಚವಾಗಿ ಸ್ನಾನಮಾಡುತ್ತಾರೆ. 'ಮುಗಿಲ ಸೆರಗು' ಬಹು ಮುದ್ದಾದ ಮಾತು.

೧೨ ಅಳ್ಳೀಮರ=ಅರಳಿಯ ಮರ.

೧೩–೧೪: ಇವೂ ಮುಂದಿನ ಪದಗಳೂ ಪೂರ್ತಿ ಅರ್ಥವಾಗುವುದಿಲ್ಲ. ಆದರೂ ಗತ್ತಿನಲ್ಲಿ ಹೇಳುವಾಗ ಒಂದು ರೀತಿಯ ನಾದಮಾಧುರ್ಯದಿಂದ ತುಂಬಿ ಹಿತವಾಗಿರುತ್ತವೆ.

೧೫ ಹೊಂದೇರ್‌ಪಕ್ಕಿ : 'ಹೊಂದೆರೆ ಹಕ್ಕಿ' ಎಂದಿರಬಹುದೆ? ತೆರೆತೆರೆಯಾಗಿ ಹಬ್ಬುವ ಬೆಳದಿಂಗಳು, ಆಕಾಶದಲ್ಲಿ ತೇಲುತ್ತಿರುವಂತೆ ಕಾಣುವ ನಕ್ಷತ್ರಗಳು, ಬಿಳಿಮೋಡದೊಳಹೊಕ್ಕು ಹೊರಬರುವ ಚಂದ್ರ—ಇವನ್ನೆಲ್ಲ ಚಿತ್ರಿಸುವಂತಿದೆ ಈ ಪದ.

ಕೊನೆಯ ಎರಡು ಪಂಕ್ತಿಗಳು ಎಷ್ಟು ಇಂಪಾಗಿವೆ! ಎಷ್ಟು ಮುದ್ದಾಗಿವೆ! 'ನಮ್ಮೂರ ಹಾಲಿನಂಥ ಬೆಳದಿಂಗಳೇ' ಎಂದು ಕರೆಯುವಲ್ಲಿ ಸುಖಾನುಭವದ ಜೊತೆಗೆ, ಸ್ವಾಭಿಮಾನ ಎಷ್ಟುಮಟ್ಟಿಗೆ ಉಕ್ಕುತ್ತಿದೆ!

೧೬ ತೆಂಡ್ಯೆ=ತೆಂಡೆ; ಕಂತೆ; ಗೊಂಚಲು, ಗುದಿ.

೧೭ ಮೆಟ್ಟ್ಯೆ=ಮೆಟ್ಟಲು. ಶಣದೋರು=ಒಗೆದವರು. (ಸೆಣೆ : ಸೆಳೆ). ಆಡುತಿದ್ವು = ಆಡುತ್ತಿದ್ದವು.

### ತೆನೆ ೩—ರಾಗಿ ಕಲ್ಲಿನ ಪದಗಳು

## ರಾಗಿಕಲ್ಲಿನ ಮಹತ್ವ

೧ ತಿರುಗ್ಯಾರೆ=ತಿರುಗಿದರು. ಸಂಪನರ=ಸಂಪನ್ನರ.

೩ ಗೆರಸಿ=ಸುತ್ತಲೂ ಎತ್ತರವಾದ ಅಂಚುಳ್ಳ ದೊಡ್ಡ ಬಿದುರು ತಟ್ಟೆ. ಹಿಟ್ಟು ನೆಲಕ್ಕೆ ಬೀಳದಿರಲೆಂದು ರಾಗಿಕಲ್ಲನ್ನು ಇದರೊಳಗೆ ಹೂಡುತ್ತಾರೆ. ಮುಕ್ಕಣ್ಣೇಶ್ವರ=ಮುಕ್ಕಣ್ಣ ಈಶ್ವರ; ಮೂರು ಕಣ್ಣುಳ್ಳ ಈಶ್ವರ(ತ್ರಿನಯನೇಶ್ವರ).

೫ ಮದನಾರಿನೆಂಬೊ=ಮದನಾರಿಯೆಂಬ. ಇಲ್ಲಿ 'ಯ' ಕಾರಕ್ಕೆ ಬದಲಾಗಿ 'ನ' ಕಾರ ಆಗಮವಾಗಿದೆ. ಹೀಗೆ 'ನ' ಕಾರವನ್ನುಚ್ಚರಿಸುವುದೇ ಇವರಿಗೆ ಹೆಚ್ಚು ಬಳಕೆ. ಎರಡನೆಯ ಸಾಲನ್ನು ಮತ್ತೊಂದು ಸಲ ಹಾಡಿ ಮುಂದಿನ ಮಾತು ಕೂಡಿಸಿಕೊಳ್ಳುವಾಗ 'ಹಿಡಿ ಗೂಟಾನ್ ಹಿಡುಕೊಂಡು' ಎಂದು ಹೇಳುತ್ತಾರೆ. ಗೂಟವನ್' ಎಂಬುದು ಕುಗ್ಗಿ ಈ ರೂಪವಾಗಿರಬೇಕು.

## ಪ್ರಾರ್ಥನೆ

೧ ಕಲ್ಯಾಣದಯ್ಯ : ಕಲ್ಯಾಣಪಟ್ಟಣದಲ್ಲಿದ್ದ ಬಸವಣ್ಣನವರು. 'ಮಂಗಳವನ್ನುಂಟುಮಾಡುವವನು' ಎಂದು ರಂಗಸ್ವಾಮಿಯ ಪರವಾಗಿಯೂ ಅರ್ಥಮಾಡಬಹುದು. ಬಿದಿರೆ' ನಮ್ಮೂರಿಗೆ ೮-೧೦ ಮೈಲಿ ದೂರದಲ್ಲಿದೆ. ಸೊಲ್ಲು=ಮಾತು; ನುಡಿ; ಚರಣ.

೩ ಮನೆಯಾಗೆ=ಮನೆಯಲ್ಲಿ. ಸ್ಯಾವೆ=ಸೇವೆ.

೪ ಈಗನೇ=ಈಗಲೇ. 'ಮಲ್ಲಯ್ಯ' ನಮ್ಮೂರ ದೇವರ ಹೆಸರು. ಈ ಹೆಸರಿಗೆ ಬದಲಾಗಿ ಊರ ಗೌಡನ, ತಮ್ಮ ದಣಿಯ ಅಥವಾ ತಮ್ಮ ಉಪಕಾರಿಯ ಹೆಸರನ್ನು ಸೇರಿಸುವುದೂ ಉಂಟು. ಒಬ್ಬಾಕೆ ತನ್ನ ಗಂಡನ ಹೆಸರು ಸೇರಿಸಿ ಹಾಡಿದ್ದನ್ನೂ ಕೇಳಿದ್ದೇನೆ.

೫ ಗ್ರಾಮದ ಗರತಿ=ಗ್ರಾಮದೇವತೆ. ಊರಿಗೆಲ್ಲ ಹಿರಿಯಳಾಗಿ ಎಲ್ಲರ ಗೌರವವನ್ನೂ ಪಡೆದ ಹೆಂಗಸಾದರೂ ಆಗಬಹುದು.

೬ ಎದ್ದೊನೆ=ಎದ್ದೊಡನೆ. ಗ್ಯಾನ=ಜ್ಞಾನ. ಸಿದ್ದ=ಸಿದ್ಧ.

೭ ಸಂಗನ ಬಸವ=ಸಂಗಮೇಶ್ವರನ ಭಕ್ತ ಬಸವಣ್ಣನವರು.

೮ ವಾಲ್ಗ=ಓಲಗ. 'ಓಲಗದ ಸದ್ದಿಗೆ ಒದಗುವವಳು' ಎಂದರೆ ಮಂಗಳಕ್ಕೆ ನೆರವಾಗುವವಳು.

೧೦ ಈ ಪದ ಕೋಲಾಟದಲ್ಲೂ ಬರುತ್ತದೆ. ಅಲ್ಲಿ ಹೇಳುವ ಧಾಟಿಯೇ ಬೇರೆ.

೧೧ ಬೀಸುವಾಕೆಗೆ ರಾಗಿಕಲ್ಲೆ ಹಿರಿಯಕ್ಕ; ಕಲ್ಲಿನ ಹಾಡಿಗೆ ತಾನೂ ದನಿಗೂಡಿಸಿ ಹಾಡುತ್ತಾಳೆ. ಮೇಗಲ್ಲು=ಮೇಲುಗಡೆಯ ಕಲ್ಲು. ಅಡಿಗಲ್ಲು=ಕೆಳಗಡೆಯ ಕಲ್ಲು.

೧೨ ಒಡೆಗಲ್ಲು=ಒಡೆಯುವ ಕಲ್ಲು. ಸಟ್ಟಿ=ಸೆಟ್ಟಿ; ಶೆಟ್ಟಿ, ಮುಖಂಡ; ಯಜಮಾನ; ಹಿರಿಯ.

೧೩ ರಾಜಾನ=ರಾಜಾನ್ನ; ಒಂದು ಬಗೆಯ ಧಾನ್ಯ. ರಾಜಬೀದಿಗೆ ದನಿದೋರೆ: ತಮ್ಮ ದನಿ ಬೀದಿಯಲ್ಲೆಲ್ಲ ಮೊಳಗಬೇಕು, ಎಲ್ಲರೂ ಕೇಳಿ ನಲಿಯಬೇಕು ಎಂದು ಅವರಿಗೆ ಆಸೆ.

೧೪ ಜಲ್ಲಜಲ್ಲನೆ=ಹಗುರವಾಗಿ; ಬೇಗಬೇಗ. ನೆಲ್ಲಕ್ಕಿ=ಬತ್ತದ ಅಕ್ಕಿ. ಸಾವೆ, ನವಣೆ, ಮೊದಲಾದವಕ್ಕಿಂತ ಬತ್ತದ ಅಕ್ಕಿ ಶ್ರೇಷ್ಠವೆಂದು ಭಾವನೆ.

೧೬ ತೆರೆಹುಯ್ಯಿ: ಬೀಸಿದ ಹಿಟ್ಟು ತೆರೆತೆರೆಯಾಗಿ ಸುರಿಯುವುದನ್ನು 'ತೆರೆ ಹುಯ್ಯುವುದು' ಎನ್ನುತ್ತಾರೆ. ಕದಲಿಯ ಕಟ್ಟಿಸುವೆ: ಇದು ಬಾಳೆಯ ಹಣ್ಣನ್ನು ಕಟ್ಟುವುದಲ್ಲ. ಬಾಳೆಯ ಕಂಬವನ್ನು ಸಿಗಿದು ಪಟ್ಟೆಗಳನ್ನು ತಂದು ಅಲಂಕಾರ ಮಾಡುವುದು.

"ತಾಯಿ ನೀ ತೆರೆಹುಯ್ಯೆ, ತಾಯವ್ವ ತೆರೆಹುಯ್ಯೆ
ತಾಯಿ ಹೊಂಬಾಳೆ........" ಎಂದು ಬೇರೊಂದು ರೀತಿಯಲ್ಲೂ ಹೇಳುತ್ತಾರೆ.

೧೭ ಅಕ್ಕಮಾದೇವಿ: ಪ್ರಸಿದ್ಧ ಶಿವಶರಣೆ ಮಹಾದೇವಿಯಕ್ಕ. ಕೆಂಚಮ್ಮ ಯಾರೋ ಅವಳ ಐವರು ಮಕ್ಕಳು ಯಾರೋ ತಿಳಿಯದು. ಕೆಂಚಮ್ಮನ ಹೊಸಕೋಟೆಯ ಕೆಂಚಮ್ಮ ಇರಬಹುದೆ? ಅಥವಾ ಐವರು ಮಕ್ಕಳುಳ್ಳ ಕುಂತ್ಯಮ್ಮ ಇರಬಹುದೆ?

## ಅಕ್ಕ-ತಂಗಿ—ಅಣ್ಣ-ತಮ್ಮ

೧ ಕರೆಯಾಕೆ=ಕರೆಯೋಕೆ, ಕರೆಯುವುದಕ್ಕೆ. ಚಿಕ್ಕರು=ಚಿಕ್ಕವರು. ಸುಂಗಾರ=ಸಿಂಗಾರ, ಶೃಂಗಾರ. ಹೀಗೆಯೆ 'ಬಿಸುಲು, ಮಡುಲು, ಹಿಡುಕೊ,

ಎಂದು ಮುಂತಾಗಿ ಉಕಾರಾಂತವಾಗಿ ಹೇಳುವುದು ಹಳ್ಳಿಯವರ ರೂಢಿ. ತೇಜಿ= ಕುದುರೆ.

೨ ಆಚಿಕೆ=ಆಚೆಗೆ. ಕೋಗಲು=ಕೋಗಿಲು. ಕೋಗಿಲೆ (?) ತಲೆಗಿಂಬು=ತಲೆದಿಂಬು. ಬಾಣತಿ=ಬಾಣಂತಿ.

೩ ಮುಂದ್ಯಾಕ್ಹೋಗುತ್ತೀಯೆ : ಮುಂದೆ ಯಾಕೆ (ಏಕೆ) ಹೋಗುತ್ತೀಯೆ? ಜವಳಿ : ಜೊತೆ ಜೊತೆಯಾಗಿರುವ ಬಟ್ಟೆ (ಸಂ. ಯಮಳ). ಈಗ ಜೋಡಿ, ಒಂಟಿ ಎಂಬ ಭೇದವಿಲ್ಲದೆ ಸಾಧಾರಣವಾಗಿ 'ಬಟ್ಟೆ' ಎಂಬರ್ಥದಲ್ಲಿ ಈ ಮಾತನ್ನು ಬಳಸುತ್ತಾರೆ.

೪ ನಾಡಮೇಗಲ=ನಾಡಿನಲ್ಲಿ ರೂಢಿಯಾಗಿರುವ (ಮೇಗಲ=ಮೇಗಣ). ಆಡಿಕೊಂಬೋರು=ಆಡಿಕೊಳ್ಳುವರು ; ಹಾಸ್ಯ ಮಾಡುವರು

೬ ಮ್ಯಾಗೆ=ಮೇಲೆ. ದೇವ್ಗನ್ನೆ=ದೇವಕನ್ಯೆ.

೭ ರಾಮಣ್ಣಾನೆಂಬೊ ಕ್ಕೆ : ಅಭಿಪ್ರಾಯ ತಿಳಿಯದು.

೮ ಅಕ್ಕೀಲು=ಅಕ್ಕಿಯಲ್ಲಿ. 'ಅಲ್ಲಿ' ಎಂಬ ಪ್ರತ್ಯಯಕ್ಕೆ ಬದಲಾಗಿ 'ಅಲ್ಲು' ಎಂದು ಉಪಯೋಗಿಸುವುದು ಬಳಕೆಯಲ್ಲಿದೆ. 'ಸನ್ ೧೯—ರಲ್ಲು' ಎಂದು ಪತ್ರಗಳಲ್ಲಿ ಬರೆಯುವುದನ್ನೂ 'ಎಂಟಾರಲು ಆರುಮೂರಲು' ಎಂದು ಮೊದಲಾಗಿ ಮಗ್ಗಿಯಲ್ಲಿ ಹೇಳುವುದನ್ನೂ ಗಮನಿಸಿ.

೯ ಕೆಂದಿ=ಕೆಂಬಣ್ಣದ ಹಸು. ಮುಂಜೆರಗು=(ಮುನ್+ಸೆರಗು) ಮುಂದುಗಡೆಯ ಸೆರಗು.

೧೦ ಹಂಡಿ=ಕೆಂಪು, ಕಪ್ಪು, ಬಿಳುಪು, ಮೊದಲಾದ ಬಣ್ಣಗಳು ಚಿತ್ರಚಿತ್ರವಾಗಿ ಸೇರಿರುವ ಹಸು. ಈ ಪದ್ಯಗಳಲ್ಲಿ ಅಕ್ಕ ತಂಗಿ ಅಣ್ಣ ತಮ್ಮಂದಿರ ಪ್ರೀತಿಯನ್ನು ಚಿತ್ರಿಸಿದೆ.

೧೧ ದೂರಲಿಂದ=ದೂರದಿಂದ.

೧೨ ಆನ್ಯೊಂದು, ಕುದುರ್‍ಯೊಂದು : ಆನೆಯೊಂದು, ಕುದುರೆಯೊಂದು. ಗಡಿನಿಲ್ಲ=ಗಡಿಯಿಲ್ಲ ; ಮಿತಿಯಿಲ್ಲ.

೧೩ ಬಾಳೆಯನಾಚೆ=ಬಾಳೆಯಣ ಆಚೆ ; 'ಬಾಳೆಯಾಚೆಯಣ' ಎಂದಿರಬೇಕು. ಈ ಪದ್ಯದಲ್ಲೂ, ೧೨ನೆಯದರಲ್ಲೂ ಒಂದೊಂದು ಸಾಲು ಬಿಟ್ಟುಹೋಗಿದೆ ಇನ್ನೂ ಕೆಲವು ಕಡೆ ಹೀಗೆಯೆ ಆಗಿದೆ.

೧೪ ಅಣ್ಣನ ದಂಡಿನ ವೇಗ ಪರಾಕ್ರಮಗಳನ್ನು ಅಭಿಮಾನದಿಂದ ವರ್ಣಿಸುವ ರೀತಿ. ತಮ್ಮನ ವಿಷಯದಲ್ಲಿಯೂ ಹೀಗೆಯೇ. ತೆಗ್ಯೋ ಹೊತ್ಗೆ—ತೆಗೆಯುವ ಹೊತ್ತಿಗೆ ; ತೆಗೆಯುವಷ್ಟರಲ್ಲಿ.

## ತವರು ಮನೆಯ ಹಂಬಲು

೧ ಗೌರಿಯ ಕಾಯ್ ಹ್ಯಾಗೆ ಒಡೆದೊ: ಗೌರಿಯ ಹಬ್ಬದಲ್ಲಿ ನೆಂಟರಿಷ್ಟರನ್ನೆಲ್ಲ ಮನೆಗೆ ಕರಸಿಕೊಳ್ಳುವುದು ವಾಡಿಕೆ 'ನನ್ನನ್ನು ಕರಸಿಕೊಳ್ಳದೆ ದೇವರಿಗೆ ಕಾಯಿ ಒಡೆಯಲು ನಿನಗೆ ಹೇಗೆ ಮನಸ್ಸು ಬಂತು?' ಎಂದು ಅಕ್ಕ ತಮ್ಮನನ್ನು ಆಕ್ಷೇಪಿಸುತ್ತಾಳೆ.

೨ ಗಂಗೆಲಿ=ಗಂಗೆಯಲ್ಲಿ; ನೀರಿನಲ್ಲಿ. ಧೀರ್ಯೆಸಿಕೊಂಡೆ=ಧೀರಯಿಸಿಕೊಂಡೆ; ಧೈರ್ಯ ತಂದುಕೊಂಡೆ; ಮನಸ್ಸಮಾಧಾನಮಾಡಿಕೊಂಡೆ.

೩ ಧೀರ್ಯೆಸನಾರೆ=ಧೀರ್ಯೆಸಲಾರೆ. ರೂಢಭಾಷೆಯಲ್ಲಿ ಹೀಗೆ 'ಲ' ಕಾರ 'ನ' ಕಾರವಾಗುವುದು ಸಾಮಾನ್ಯ. ದೀರ್ವ್ಯಾವುದ: ಧೈರ್ಯವಂತನಾದ ಎಂದರ್ಥವೆ? ಸೀರ್ವ್ಯಾವುದ,' (ಸೀರ್ಯದ) ಎಂಬುದು ತಪ್ಪಾಗಿ ಹೀಗೆ ರೂಪಾಂತರ ಹೊಂದಿರಬಹುದೆ?

೪ ಪಾರಿವಾಣ=ಪಾರಿವಾಳ. ಮಳೆ ಬಿಟ್ಟರು............:ಅನುಭವದ ಮಾತು. ಗಾದೆಯಂತಿದೆ

## ತವರು ಮನೆಯ ಉಡುಗೊರೆ

೧ ಕಕ್ಕರುಗೋಡು=ಕೊಕ್ಕರೆಗೋಡು; ಸೊಟ್ಟಸೊಟ್ಟಾದ ಕೋಡು. ಹೊಕ್ಕಳುಗೋಡು=ದುಂಡಗೆ ಸುರುಳಿಸುತ್ತಿಕೊಂಡಿರುವ ಕೋಡು. ನೆಂಬಿ=ನಂಬಿ. 'ನೆಮ್ಮಿ' ಎಂದೂ ಆಗಬಹುದು.

೨ ರಾಡಗೋಡು=ಅಗಲವಾಗಿ ಹರಡಿಕೊಂಡಿರುವ ದೊಡ್ಡ ಕೋಡು. ನಾಗೊಳಾಲಿನೆಮ್ಮೆ=ನಾಗೊಳಗ (ನಾಲ್ಕು ಕೊಳಗ) ಹಾಲು ಕರೆಯುವ ಎಮ್ಮೆ. ದೊಂಡಿ: ದನ ತಪ್ಪಿಸಿಕೊಂಡು ಹೋಗದಂತೆ ತಡೆಯಾಗಿ ನೆಲದ ಮೇಲೆ ಎಳೆದಾಡುವ ಹಾಗೆ ಕೊರಳಿಗೆ ಕಟ್ಟುವ ಮರದ ತುಂಡು.

೩ ಮೊಸರ: ಮುಸರ ಎಂದು 'ಮು' ಕಾರವನ್ನೆ ನುಡಿಯುತ್ತಾರೆ.

೪ ಕೊಟ್ಟ್ಯೊ=ಕೊಟ್ಟೆಯೊ? ಉಣ್ಣೊ=ಉಣ್ಣುವ, ಊಟ ಮಾಡುವ.

## ಅಗಲಿಕೆಯ ದುಃಖ

೧ ಬಂಟ=ಆಳು. ಆ ಹೆಸರಿನ ಎತ್ತಾದರೂ ಆಗಬಹುದು.

೨ ಸಮುರಂತೆ=ಸಮುರ ಹಾಗೆ; ನೆರೆಯುವರ ಹಾಗೆ. ಸಂತ್ರಿಟ್ಟು=ಸಂತವಿಟ್ಟು; ಸಮಾಧಾನಪಡಿಸಿ ಕಳುವ್ಯಾಳು=ಕಳುಹಿಸಿಯಾಳು.

೩ ಹನ್ನೆಳ್ಡು=ಹನ್ನೆರಡು. ರೂವ=ರೂಪವನ್ನು.

೫ ಬಾರೆ=ಬೋರೆ. ನೆತ್ತೀ ಮೇಲಿರುವ್ನೊ ಶಿವ : ಹಾವು ನೆತ್ತಿಯಮೇಲೆ ಇರುವ ಶಿವ. 'ಹೆಣ್ಣು ಮಕ್ಕಳ ಅಗಲಿಕೆಯ ದುಃಖ ಹಾವಿನ ವಿಷದ ಹಾಗೆ ತೀವ್ರ' ಎಂದು ಭಾವ.

## ತಾಯಿಲ್ಲದ ತವರು

೧ ಹೋಗ್ಬರುವೆ=ಹೋಗಿ ಬರುತ್ತೇನೆ.

೨ ಹೊನ್ನೋಲೆ=ಚಿನ್ನದ ಓಲೆ ಇಟ್ಟಿರುವ.

೩ ಅಂದಲ=ಅಂದಣ ; ಪಲ್ಲಕ್ಕಿ.

೪ ಕರಿ=ಕರೆ. 'ಇ' ಕಾರಾಂತವಾಗಿ ಹೇಳುವುದೇ ರೂಢಿ.

೫ ಅಂದಿದ್ಲು=ಅಂದು+ಇದ್ಲು (ಇದ್ಲು=ಇದ್ದಳು) ; ದೂಷಿಸಿದ್ದಳು.

೬ ತಾಟಗಿತ್ತ್ಯವಳ್ಳೆ : ಅವಳೆ=ಇದ್ದಾಳೆ.

೭ ನೋಡಿದೆ ತಮ್ಮನೆದೆ ಭುಜವ : ತಮ್ಮ ಆರೋಗ್ಯವಂತನಾಗಿ ದೃಢ ಕಾಯನಾಗಿ ಇರುವುದನ್ನು ಕಂಡೆ. 'ತಮ್ಮನ ಪರಾಕ್ರಮವೆಷ್ಟೆಂದು ತಿಳಿದುಕೊಂಡೆ' ಎಂದರೂ ಹೊಂದುತ್ತದೆ.

## ಅಣ್ಣನ ಮನೆಗೆ ಹೆಣ್ಣಿಗೆ ಹೋದದ್ದು

೧ ಕಣ್ಣ ತಿರುವ್ಯಾಳೆ=ಕಣ್ಣು ಸನ್ನೆ ಮಾಡಿದಳು.

೨ ಅನ್ನಿಗರು=ಅನ್ಯರು ; ಬೇರೆಯವರು.

೩ ಇಚ್ಛ್ಯೆ=ಇಚ್ಛೆಯೆ ? ನಾದುನಿ=ನಾದಿನಿ. ಬೆಸಗೊಳು=ಕೇಳಿಕೊ.

೮ ಬರುತೀನಿ=ಬರುತ್ತೇನೆ. ಮಲ್ಲಿರು=ಮನೆಯಲ್ಲಿರು. ಕೊಡುವಂತೆ=ಕೊಡುವೆಯಂತೆ. ಮಾತು ಉಳ್ಳೋರು=ಮಾತು ಬಲ್ಲವರು ; ಮಾತಿಗೆ ಬೆಲೆ ಇರುವವರು.

೯ ಹೊನ್ನು=ಚಿನ್ನ (ಪೊನ್) ; ಹಣ. ಚೆನ್ನ=ಚೆಲುವೆ.

೧೧ ಅತಿಗಮ್ನ=ಅತ್ತಿಗಮ್ಮನನ್ನು.

೧೪ ಆಕಿ=ಆಕೆ (ಮಗಳು) (ಆಕಿ ಎಂಬ ಇಕಾರಾಂತ ರೂಪ ಧಾರವಾಡದ ಕಡೆ ಹೆಚ್ಚು ಬಳಕೆ). ಬಾನುಣ್ಣೋಳು=(ಬಾನ=ಬೋನ) ಅನ್ನ ಉಣ್ಣುವವಳು. ದೂರಲ=ದೂರದ (ದೂರ+ಅಣ) ಕೊಡಲಾರೆ : ಹಾಡುವಾಗ : 'ಕೊಡುನಾರೆ' ಎನ್ನುತ್ತಾರೆ.

೧೬ ಮೊಗದಾಡೋಳು=ಮೊಗೆದು ಆಡುವವಳು (ಮೊಗೆ=ತುಂಬಿಕೊ).

೧೮ ಅರುವೆ=ಅರಿವೆ ; ಬಟ್ಟೆ. ಹೊಚ್ಚಿದ್ದೆ=ಹೊದಿಸಿದ್ದೆ ಒಂದೊರುಷ=ಒಂದು ವರುಷ.

೧೯ ಆಗ್ಯಾಕೆ ಬರಲ್ದೋದೆ=ಆಗ ಯಾಕೆ (ಏಕೆ) ಬರದೆ ಹೋದೆ. ಆಗಲಾರ=ಆಗಲಾದರೂ. ಅವಳ : ಹೆಂಡತಿಯ ತೌರೋರು=ತವರು ಮನೆಯವರು. ಬಂಗಾರ ಹರಿಸ್ಯಾರು=ಬಂಗಾರ ಹೊರಿಸಿದರು ಹೆಣ್ಣು ಗೊತ್ತುಮಾಡಿಕೊಂಡು ಹಣ, ಒಡವೆ ಮೊದಲಾದ್ದನ್ನು ಕೊಟ್ಟು ಹೋದರು.

೨೦ ಮನ್ಯಾಕೆ=ಮೊನ್ನೆಯೇಕೆ. ಮಲೆನಾಡರು=ಮಲೆನಾಡಿನವರು. ಬಂದಿ=ತೋಳಿನ ಒಂದು ಒಡವೆ.

೨೧ ಮದಿವೆ : ಮದುವೆ ಈಳ್ಯಾವ=ವೀಳ್ಯವನ್ನು, ತಾಂಬೂಲವನ್ನು.

೨೨ ಆಶುವಂತ=ಆಯುಷ್ಯವಂತ

## ಹೆಣ್ಣು ಹೇಗಿರಬೇಕು

೧ ಚಂದರಗಿರಿ=ಚಂದ್ರಗಿರಿ. ಚಂದ್ರಾಮ=ಚಂದ್ರಮ, ಚಂದ್ರ.

## ಅಕ್ಕನ ಮನೆಯಲ್ಲಿ ತಂಗಿ

ಮದುವೆಯಿಲ್ಲದ ತಂಗಿ ತನ್ನ ಅಕ್ಕನ ಸಂಗಡ ಭಾವನ ಮನೆಗೆ ಬಂದಿದ್ದಾಗ ಭಾವನಿಗೂ ನಾದಿನಿಗೂ ಸ್ನೇಹ ಬೆಳೆಯುತ್ತದೆ. ಅದರ ಫಲವಾಗಿ ಅವಳು ಬಸುರಿಯಾಗುತ್ತಾಳೆ ಅಕ್ಕ ಸಂಗತಿಯನ್ನರಿತು ಉಪಾಯವಾಗಿ ತಂಗಿಗೆ ಮದುವೆ ಮಾಡಿಸಿ ತೊಡಕನ್ನು ಪರಿಹರಿಸುತ್ತಾಳೆ. ಈ ಪ್ರಣಯ ಕಥೆ ಈ ಪದದಲ್ಲಿದೆ.

೧ ಅಂಗ್ಳ=ಅಂಗಳ. ತೊಳಸು=ಶುಭ್ರಮಾಡು, ಕುಟ್ಟು.

೨ ಗಜಗೋಪುರಗೊಡದಿರು : ಗುಜುಗುಂಪಲು ಮಾಡದಿರು ; ಎಲ್ಲರೂ ಗುಜುಗುಟ್ಟುವಂತೆ ಸುದ್ದಿ ಹರಡಬೇಡ. ಅರಿಸಿನವ ಮಿಂದಿದಿನಿ=ಅರಿಸಿನ ತೊಡೆದುಕೊಂಡು ಮೈ ತೊಳೆದಿದ್ದೇನೆ. ವಿಜಯನಗರದ ಅರಿಸಿನ ಉತ್ತಮವಾದದ್ದೆಂದು ಭಾವ.

೩ ಎರಗೋರೆ=ಎರಗುವರೆ ; ಮೇಲೆ ಬೀಳುವುದಕ್ಕೆ. ಗದ್ದಲಿಸಿ=ಗದ್ದಲ ಮಾಡಿ, ಆರ್ಭಟ ಮಾಡಿ. 'ಮೋಡ ಏಳದೆ ಸಿಡಿಲು ಮೊಳಗದೆ ಮಳೆ ಹುಯ್ಯದೆ ರಾಜಾನ್ನವನ್ನು ಯಾರು ಬಿತ್ತಿ ಬೆಳೆದರು ?' "ಬಂಧು ಬಳಗದ ಸಡಗರವಿಲ್ಲದೆ ವಾದ್ಯ ಮೊಳಗದೆ ಧಾರೆಯಾಗದೆ. ಹೀಗೆ ಮಾಡಿದವರು ಯಾರು ?" ಇದೇ ರೀತಿ ಮುಂದಿನ ಮಾತುಗಳಿಗೂ ಭಾವಕಲ್ಪನೆ ಮಾಡಬಹುದು. ರಾಜಾನ್ನ ಕುಟ್ಟುವ ಅಕ್ಕ ತಂಗಿಯರು ಅದನ್ನೆ ನೆಪಮಾಡಿಕೊಂಡು ಗುಟ್ಟು ಮಾತಾಡುತ್ತಾರೆ.

೨೪ ಹೊಡೆಯಾದೊ=ಹೊಡೆಯಾಯಿತು. ಅಗತಾನೆ ಹೊರಬರುತ್ತಿರುವ ತೆನೆಗೆ ಹೊಡೆಯೆಂದು ಹೆಸರು.

೬ ಹಣ್ಣಾಡಿಕ್ಹಾಸುಮಂಚ = ಹಣ್ಣಡಿಕೆ + ಹಾಸುಮಂಚ (ಅಡಕೆ). ಚೆಮ್ಮಾಳಿಗೆ= ಸೊಗಸಾದ ಮಾಳಿಗೆ ; ಕೆಂಪು ಬಣ್ಣದ ಮಾಳಿಗೆಯೆನ್ನಲೂ ಬಹುದು.

೭ ಯಾರಿಗ್ಹೇಳಲಿ ಬೇಡ=ಯಾರಿಗೂ ಹೇಳಬೇಡ. ಹೋಗ್ಬಾರೆ = ಹೋಗಿ ಬಾರೆ ತನ್ನ ಗಂಡನೇ ಆ ಬಸುರಿಗೆ ಕಾರಣವೆಂದು ತಿಳಿದು, ತಂಗಿಯನ್ನು ತವರು ಮನೆಗೆ ಕಳಿಸಿ ಮುಂದೆ ಹೇಗಾದರೂ ತೊಂದರೆಯನ್ನು ಪರಿಹರಿಸೋಣವೆಂದು ಅಕ್ಕನ ಯೋಚನೆ.

೮ ಹೋಗ್ತೀನಿ= ಹೋಗುತ್ತೇನೆ. ಸಂಪಂಗಿ = ಸಂಪಿಗೆ. ನಾಗಸಂಪಿಗೆ ಮರದ ಮುಟ್ಟು ಉಪಯೋಗಿಸಿ ಕಟ್ಟದ ನಡುಮನೆ 'ಅಥವಾ ನಾಗಸಂಪಿಗೆ ಮರದ ಹತ್ತಿರ ಇರುವುದು.'

೯ ಹೊನ್ನಾಲೆ—ಹೊನ್ನ ಓಲೆ ; ಚಿನ್ನದ ಓಲೆಯನ್ನಿಟ್ಟಿರುವ. 'ಹೊನ್ನಾಳಿ ಎಂಬ ಊರಿರಬಹುದೆ ?

೧೧ ಭಾವನಿಗೆ ನಾದಿನಿ ಮತ್ತೆ ಬರಬೇಕೆಂಬ ಆಸೆ. ಆದರೆ ಅವಳು 'ಗಂಡು ಮಗನನ್ನು ಕರೆದುಕೊಂಡು ಪಾಲಿಗೆ ಬರುತ್ತೇನೆ' ಎಂದದ್ದು ಕೋಪ ಕೆರಳಿಸಿತು. ನೋಡೊ= ನೋಡುವ ನಿನಗ್ಹಂಗೆ= ನಿನಗೆ+ಹೆಂಗೆ (ಹೇಗೆ)

೧೨ ಈ ರೀತಿ ಸರಸ ವಿರಸವಾಗುವಷ್ಟರಲ್ಲಿ ಒಬ್ಬಾತ ಹೆಣ್ಣು ಕೇಳಲು ಬಂದ. ಇದರಿಂದ ಪರಿಸ್ಥಿತಿ ಹದಕ್ಕೆ ಬಂದಂತೆ ಕಾಣುತ್ತದೆ.

ಎಳೆಬಾಳೆಯೊಳಗೆ ಸುಳಿಬಾಳೆ ಇರುವ್ಹೋದ: ತಾನು ಬಸುರಿಯಾಗಿರುವ ಸಂಗತಿಯನ್ನು. ತಿಳಿಹೇಳು= ತಿಳಿಯ ಹೇಳು, ತಿಳಿಯುವಂತೆ ಹೇಳು. ಈ ಗುಟ್ಟು ತಿಳಿದರೆ ಎಲೆಯೂರ ಗೌಡ ಸುಮ್ಮನೆ ಹಿಂದಿರುಗುವನೆಂದು ತಂಗಿ ಹೀಗೆ ಹೇಳುತ್ತಾಳೆ.

೧೩ ನಾರಿ: ಇಲ್ಲಿ, ಅಕ್ಕ. ತನ್ನ ಗಂಡನಿಗೆ ಆಕೆ ಬಸುರಾಗಿರುವಳೆಂದು ತಿಳಿದು ತಂಗಿಯನ್ನು ತನ್ನ ಗಂಡನೇ ಮದುವೆಯಾಗುವಂತೆ ಒಡಂಬಡಿಸುತ್ತಾಳೆ. ಅಲ್ಲದೆ ಅವನಿಗೂ ಅವಳು ಬೇರೊಬ್ಬನ ಕೈಗೆ ಸಿಕ್ಕುವ ಸಂಭವ ತೋರಿದಾಗ, ಸಿಟ್ಟು ಕರಗಿ ಮೊದಲಿನ ಮೋಹವೇ ತಲೆಯೆತ್ತಿರಬೇಕು. ಆಗ ಅಕ್ಕ, ತಂಗಿಗೂ ಗಂಡನಿಗೂ ಬೇಗ ಧಾರೆ ಎರಸಿ ಮದುವೆಮಾಡಿಸಿ ಬಿಡುತ್ತಾಳೆ.

೧೨—೧೩ ನೆಯ ಪದ್ಯಗಳಿಗೆ ಬೇರೆ ರೀತಿಯಾಗಿಯೂ ಕೆಲವರು ಅಭಿಪ್ರಾಯ ಪಡುತ್ತಾರೆ.

ಎಲೆಯೂರ ಗೌಡನಿಗೆ ತಾನು ಬಸುರಿಯೆಂಬ ಸಂಗತಿಯನ್ನು ತಿಳಿಸಬೇಕೆಂದು ತಂಗಿ ಇಷ್ಟಪಟ್ಟಳು. ಅದು ತಿಳಿದ ಮೇಲೂ ಆತ ಅವಳನ್ನು ಮದುವೆಯಾಗಲು ಒಪ್ಪಿದ. ಆಗ

ಅಕ್ಕ. ತಡಮಾಡದೆ ಆತನಿಗೆ ತಂಗಿಯನ್ನು ಧಾರೆಯೆರೆದು ಕೊಟ್ಟು ಬಿಟ್ಟಳು. ಗುಟ್ಟಾಗಿ ಮದುವೆ ನಡೆದು ಹೋಯಿತು.

ಹೀಗೆ ಆಗುವುದೂ ಅಲ್ಲಲ್ಲಿ ಕಾಣಬರುತ್ತದೆ. ಆದರೆ ಇಂಥ ಮದುವೆ ಮೇಲ್ದರ್ಜೆಯದೆಂದು ಯಾರೂ ಭಾವಿಸುವುದಿಲ್ಲ.

## ಕಾವಲಿಯ ಹಾಡು

೧ ದೀವ್ಳಿಗ್ಗೆ = ದೀವಳಿಗೆಗೆ (ದೀವಳಿಗೆ = ದೀಪಾವಳಿ). ಸಂಪುಳಿಗೆ ಕದರಿದ್ದೆ = ಉದುಗು ಹಾಕಿದ್ದೆ. ದೋಸೆಯ ಮತ್ತು ಕಡುಬಿನ ಹಿಟ್ಟಿನಲ್ಲಿ ಉದುಗು ಬರಿಸುವುದಕ್ಕಾಗಿ ಉದ್ದು, ಮೆಂತೆಯ ಮೊದಲಾದುವನ್ನು ಸಣ್ಣಗೆ ತಿರುವಿ ಬೆರಸುತ್ತಾರೆ. ಹೀಗೆ ತಿರುವಿದ ಮೇಲಿನ ಹಿಟ್ಟಿಗೆ 'ಸಂಪುಳಿಗೆ' ಎಂದು ಹೆಸರು. ಆ ಹಿಟ್ಟಿನಿಂದ ದೋಸೆ ಬಿಡಲು ಕಾವಲಿ ಬೇಕಾಗಿ ನಾದಿನಿಯನ್ನು ಕೇಳುತ್ತಾಳೆ. ಹೊನ್ನುಕಾವಲಿ: ಕಾವಲಿ ಚಿನ್ನದ್ದಲ್ಲ. 'ಹೊನ್ನಿನಂತೆ ಶ್ರೇಷ್ಠವಾದ್ದು'

೨ ನಿನ್ನೊಬ್ಳು = ನಿನ್ನ + ಒಬ್ಬಳು. ಕೊಂಡ್ ಹೋಗಿ = ಕೊಂಡು ಹೋಗಿ. ಸಿಡಿಸ್ಯಾಳೆ = ಸಿಡಿಸಿದಳು.

೩ ಪಾಗು = ರುಮಾಲು. ಚುಂಗು = ಕುಚ್ಚು. ಕಿರುದಮ್ಮ = ಕಿರಿಯ ತಮ್ಮ. ಕೊಡಲೊಲ್ಲೋ = ಕೊಡಲೊಲ್ಲೆಯೊ, ಕೊಡಲೊಲ್ಲಳೊ.

೪ ತೊಗೆ = ತೊವ್ವೆ. ಹೆಂಡತಿಗೆ ಹೇಳಿ ಕಾವಲಿ ಕೊಡಿಸುವುದಕ್ಕಾಗದೆ, ಅಕ್ಕನಿಗೆ ಈ ಉಪಾಯ ಹೇಳುತ್ತಾನೆ, ತಮ್ಮ. ಕೊಡದೋಳಿಗೆ = ಕೊಡದವಳಿಗೆ.

೭ ತುರುಬ್ನೋಳ್ ಬಾರೆ = ತುರುಬಿನವಳೆ ಬಾರೆ.

೮ ಬರುವ್ಹೋಕೆ = ಬರುವುದಕ್ಕೆ. ಜಂಬರ = ಹಬ್ಬ. ನಾನು ಹೊರಟರೆ ಬೀದಿ ಬೆಳಗಾದೊ: 'ನಾನು ತುಂಬ ಚೆಲುವೆ. ಹೊರಹೊರಟರೆ ಸೂರ್ಯ ಮೂಡಿದಂತೆ ಬೀದಿಯೆಲ್ಲ ಬೆಳಕಾಗುತ್ತದೆ' ಎಂದು ಅವಳ ಬಿಂಕದ ನುಡಿ. ಸೂಲಿಗರಾಯ = ಸೂರ್ಯ. ತಾನು ಕಾವಲಿ ಕೊಡದಿದ್ದರೂ ಅತ್ತಿಗೆ ದೋಸೆಮಾಡಿ ತನ್ನನ್ನು ಹಂಗಿಸಲು ಕರೆದಳಲ್ಲಾ ಎಂಬ ಕಿಚ್ಚಿನಿಂದ 'ಹಬ್ಬ'ವೆಂಬ ನೆವಹೇಳಿ ಹಸಿವಿಲ್ಲವೆಂದು ತಪ್ಪಿಸಿಕೊಳ್ಳುತ್ತಾಳೆ.

## ಬಳೆಗಾರ

೧ ಇನ್ನೆಲ್ಲಿ ನೋಡಲಿಂಥ ಬಳೆಯ: ಬಳೆ ಬಲು ಚೆನ್ನಾಗಿದೆಯೆಂಬ ಮೆಚ್ಚಿಕೆಯ ಮಾತು. ಅಂಥ ಬಳೆಯನ್ನು ತನ್ನ ತವರಿನವರೂ ತೊಟ್ಟುಕೊಳ್ಳಲೆಂದು ಅಲ್ಲಿಗೆ ಹೋಗುವಂತೆ ಹೇಳುತ್ತಾಳೆ.

## ಟಿಪ್ಪಣಿ

೩, ೪ ತವರೂರಿನ ಸಮೃದ್ಧಿಯ ವರ್ಣನೆ. ಪಾಲೆವಾಣದ್ದಕ್ಕಿ ಪಗಡೆಯಾಡುತಾವೆ: ಅಭಿಪ್ರಾಯ ತಿಳಿಯದು. ಪಾಲೆವಾಣದ ಹಕ್ಕಿ = ಹಾಲಿಹಕ್ಕಿ, ಇದೊಂದು ಶಕುನದ ಹಕ್ಕಿ.

೫ ಅಕ್ಕರೆಯ ತಂಗಿ ಬಳೆಗಾಗಿ ಅಣ್ಣನನ್ನು ಒತ್ತಾಯಮಾಡಿ ಕೇಳುವ ಚಿತ್ರ ಇದು. ಸೀವಿಂದ=ಶೀವೆ+ಇಂದ (ಇಲ್ಲಿ ಆಗಮವಾಗಬೇಕಾಗಿತ್ತು). ಸೆಟ್ಟಿ=ಸಾವುಕಾರ; ಶ್ರೀಮಂತ.

## ಬಿಡಿ ಪದ್ಯಗಳು

ಹಿಂದಿನ ಪದ್ಯಗಳಹಾಗೆ ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿರದೆ ಬೇರೆ ಬೇರೆ ಭಾವಗಳನ್ನು ಚಿತ್ರಿಸುವ ಒಂಟಿ ಪದ್ಯಗಳನ್ನು ಇಲ್ಲಿ ಕೂಡಿಸಿದೆ.

೧ ಸುಕುಮಾರಿ ತಂಗಿ ಮೈ ಬಗ್ಗಿಸಿ ಕೆಲಸ ಮಾಡಲಾರದೆ ಅಣ್ಣನಿಗೆ ಹೇಳುವ ಮಾತು. ಕುಸುಮಾಲೆ : ಹೂವಿನಂತೆ ಮೃದುವಾದವಳು ನಾನು ಕುಟ್ಟುವಂಥ ಒರಟು ಕೆಲಸ ಮಾಡಲಾರೆ ಎಂದು ಅಭಿಪ್ರಾಯವಿರಬಹುದು. ಬ್ಯಾಸರಿಕೆ=ಬೇಸರಿಕೆ; ಬೇಸರ. ಶಖೆ=ಸೆಕೆ. ಗಟ್ಟಿಂದ=ಗಟ್ಟದಿಂದ. ಗೌಡೇರ=ಗೌಡಿಯರನ್ನು ದಾಸಿಯರನ್ನು.

೨ ಸುಮ್ಮೆಂದರೆ............=ಮೆಲ್ಲಗೆ ಪೆಟ್ಟು ಹಾಕಿದರೆ ನುರಿಯುವುದಿಲ್ಲ. ಆನೆಯು... ....ಆನೆ ತುಳಿದರೂ, ಎಂದರೆ ಎಷ್ಟು ಬಲವಾಗಿ ಎಟು ಹಾಗಿದರೂ, ನುರಿಯುವುದಿಲ್ಲ.

೩ ಎಳಗಂದಿ=ಎಳೆಯ ಕರುವಿನದು. ಒದುಕು=ಕೆಲಸ. ಎಮ್ಮೆ ಕರು ಹಾಕಿದ್ದು, ತಾಯಿ ಬಾಣಂತಿಯಾಗಿ, ಅತ್ತಿಗೆ ತವರೂರಿಗೆ ಹೋಗಿದ್ದರೆ, ಆಗ ತಾನು ಸರ್ವಸ್ವತಂತ್ರವಾಗಿ ಸುಖವಾಗಿರಬಹುದಾದ್ದರಿಂದ ಮಗಳಿಗೆ ತವರು ಮನೆಗೆ ಹೋಗುವ ಅಕ್ಕರೆ ಹೆಚ್ಚುತ್ತದೆ.

೫ ಮರುಗ್ಯಾನು=ಮರುಗಿದನು.

೬ 'ಹೆಣ್ಣುಜನ್ಮ ವ್ಯರ್ಥ' ಎಂದು ಸಂಕಟಪಟ್ಟಾಕೆಯ ನುಡಿ. ಹೆಣ್ಣಾಗಿ.... ಹುಟ್ಟಲೆ=ಹೆಣ್ಣಾಗಿ ಹುಟ್ಟುವುದಕ್ಕಿಂದ ಮಣ್ಣಾಗಿ ಹುಟ್ಟುವುದು ಮೇಲು (ಹುಟ್ಟಲಿ+ಎ). ಕೂರರಿಗೆ=ಕೂರೋರಿಗೆ, ಕೂರುವವರಿಗೆ. ನೆರಳಾದೊ=ನೆರಳಾಯಿತು.

೭ ಇಕ್ಯಾಗ=ಇಕ್ಕುವಾಗ; ಊಟಕ್ಕೆ ಬಡಿಸುವಾಗ. ಅಡವ್ಯೆಲ್ಲ=ಅಡವಿಯೆಲ್ಲ. ಹಡೆದವ್ವ ಪಡದೋರ ಗುರುತ ಮರತಳು : ತಾಯಿಯ ಪ್ರೀತಿ ಎಲ್ಲಕ್ಕಿಂತ ಹೆಚ್ಚು. ಕಷ್ಟಕಾಲದಲ್ಲಿ ಯಾರು ಕೈಬಿಟ್ಟರೂ ತಾಯಿ ಕೈ ಬಿಡುವುದಿಲ್ಲ; ತನ್ನ ಪ್ರಾಣವನ್ನಾದರೂ ಕೊಟ್ಟು ಮಕ್ಕಳನ್ನು ಕಾಪಾಡುತ್ತಾಳೆ. ಇಂಥ ಮಮತೆಯ ತಾಯಿ ಹಡೆದವರ ಗುರುತನ್ನು ಮರೆಯುವಳೆಂಬುದು ನಂಬುವುದಕ್ಕೆ ಸಾಧ್ಯವಿಲ್ಲ. ಅದು ತಾಯ್ಗ

ರುಳ ಹಿಂದೆಗೆ ಸಲ್ಲದು. ಆದರೂ ವಾಸ್ತವ ಪ್ರಪಂಚದಲ್ಲಿ ಅಪ್ಪಿ ತಪ್ಪಿ ಹೀಗೂ ನಡೆಯುಬಹುದು.

೮ ಗೆಣೆಕಾತಿ=ಗೆಳತಿ, ಸ್ನೇಹಿತೆ. ಬಣಜಗಿತಿ: ಬಣಜಿಗ+ಇತಿ. ಗಂಡನ ಪ್ರೇಮದಲ್ಲಿ ತಮ್ಮನ್ನು ಮರೆತಳೆಂದು ಗೆಳತಿಯರ ಭಾವನೆ.

೧೦ ನನ್ನರು=ನನ್ನೋರು, ನನ್ನವರು. ಅಳಿದವು = ಬಿಚ್ಚಿಹೋಯಿತು. 'ಸೀರೆ ಅಳಿದವು' ಎಂದರೆ, ಮೈನೆರೆದಳೆಂದು ಭಾವ. ಮೈನೆರೆಯುವ ಮೊದಲೆ ಮದುವೆ ಮಾಡುವುದು ಕೆಲವು ಪಂಗಡಗಳಲ್ಲಿ ರೂಢಿಯಿದೆ.

೧೧ ಗಳಿಗೆಮಾಡಿಸಿ=ಒಗೆದು ಮಡಿಮಾಡಿಸಿ.

೧೨ ತೌರೋರು=ತವರಿನವರು. ಕನಕಮುತ್ತಿನೋರು=ಚಿನ್ನ, ಮುತ್ತು ಉಳ್ಳವರು. ಐಶ್ವರ್ಯವಂತರು. ಅಣ್ಣಯ್ಯೋಗಳು = ಅಣ್ಣಯ್ಯಗಳು; ಅಣ್ಣಂದಿರು. ವಾಲೆ = ಓಲೆ, ಪತ್ರ.

೧೪ ಮೇಲುಕಟ್ಟು=ಮೇಲುಗಡೆ ಕಟ್ಟುವ ಕಸೆ (?). ಪಯಣ=ಪಯಣ, ಪ್ರಯಾಣ. ಕರಿಯಾಕೆ=ಕರೆಯೋಕೆ; ಕರೆಯುವುದಕ್ಕೆ.

## ತೆನೆ ೪

## ಕಥೆ ಮತ್ತು ಶಾಸ್ತ್ರದ ಹಾಡುಗಳು

## ಸುವ್ವಿಯ ಹಾಡು

ಅಣ್ಣನ ಮನೆಗೆ ತಂಗಿ ಬಂದಳು. ಅತ್ತಿಗೆ ಕಾಯಿಲೆಯೆಂದು ನಟಿಸುತ್ತ ಮಲಗಿದಳು. ತಂಗಿ ಒಬ್ಬಳೇ ಕೆಲಸಮಾಡಿ ಸಾಕಾದಳು. ಹೆಂಡತಿಯ ಮೇಲಿನ ಪ್ರೀತಿಯಿಂದ ಅಣ್ಣ ತಂಗಿಗೆ ನೆರವಾಗಲೇ ಇಲ್ಲ. ಕಠಿನವಾಗಿ ಮಾತಾಡಿ ನಿನ್ನ ಮನೆಗೆ ಹೊರಟು ಹೋಗೆಂದು ಕಳಿಸಿ ಬಿಟ್ಟನು. ಆಕೆ ದಾರಿಯ ಕಷ್ಟಗಳನ್ನು ತಡೆಯಲಾರದೆ ನಿಟ್ಟುಸುರು ಬಿಟ್ಟು 'ಸಾಕಣ್ಣಾ ನಿನ್ನ ಮನೆ ಮಾರು' ಎಂದು ನೊಂದು ನುಡಿದು ಬಿಟ್ಟಳು.

ಇತ್ತ ತಂಗಿ ಹೊರಟುಹೋದ ಮರುದಿನವೆ ಹೆಂಡತಿಗೆ ನಿಜವಾಗಿಯೂ ಕಾಯಿಲೆ ಬಂತು. ಅಣ್ಣ ದೇವರನ್ನು ಕೇಳಿದ. ಹೆಣ್ಣುಮಗಳನ್ನು ನೋಯಿಸಿದ್ದರ ಫಲವೆಂದು ತಿಳಿಯಿತು. ಆಗ ಅವನು ತಂಗಿಯ ಮನೆಗೆ ಹೋಗಿ ಬಹಳ ಉಪಚಾರಮಾಡಿ, 'ಮಗನ ಮದುವೆ; ಬರಬೇಕು' ಎಂದು ಕರೆದನು. ಮನಸ್ಸೊಡೆದ ತಂಗಿ, 'ಅಪ್ಪ ಅಮ್ಮ ಇಲ್ಲದ ಮನೆಗೆ ಬರಲಾರೆ. ಬಂದರೂ ಅಂಗಳದಲ್ಲಿ ನಿಂತು ಕಂದನಿಗೆ ಧಾರೆಯೆರೆದು ಹಿಂದಿರುಗುತ್ತೇನೆ' ಎಂದಳು. ಈ ದುಗುಡದ ಕಥೆಯನ್ನು ಈ ಕುಟ್ಟುವ ಹಾಡಿನಲ್ಲಿ ಚಿತ್ರಿಸಿದೆ.

## ಟಿಪ್ಪಣಿ

೧ ಸುವ್ವಿ : ಕುಟ್ಟುವಾಗ ಹಾಡುವ ಪಲ್ಲವಿನುಡಿ. ಸುವ್ವಂಗ ನಾಡೋಳು=ಸುವ್ವಂಗ(ವ)ನಾಡುವಳು ; ಬೂಟಾಟಿಕೆ ಆಡುತ್ತಾಳೆ ; ಬಡಿವಾರ ಮಾಡುತ್ತಾಳೆ.

೨ ಬಂದಿಬ್ಬೆ=ಒಂದೊಬ್ಬೆ (ಒಬ್ಬೆ=ಒಂದು ಸಲ ಕುಟ್ಟುವಷ್ಟು. ರೂಢಿಯಲ್ಲಿ 'ಇಬ್ಬೆ' ಎನ್ನುತ್ತಾರೆ). ಒಬ್ಬಿಗೆ=ಒಬ್ಬಳಿಗೆ. ಮಡದಿ=ಹೆಂಡತಿ.

೩ ಅರನಿದ್ದೆ=(ಅರೆ+ನಿದ್ದೆ) ಅರ್ಧನಿದ್ದೆ. ಆದಾವು: 'ಆದೀತು ಎಂಬರ್ಥದಲ್ಲಿ ಬಹುವಚನ ಪ್ರಯೋಗ. ಹಣಿ=ಕುಟ್ಟು.

೪ ಕಡಿನುಚ್ಚು=ಎರಡು ತುಂಡಾಗಿ ಕತ್ತರಿಸಿದ ನುಚ್ಚು. 'ಕಡು ನುಚ್ಚು ಎಂದಿದ್ದರೂ ಇರಬಹುದು. ಕುರಡಕ್ಕಿ=ಬತ್ತದ ಮೇಲಿನ ಸಿಪ್ಪೆ ಮಾತ್ರ ಸುಲಿದು ಚೆನ್ನಾಗಿ ನುರಿಯದಿರುವ ಅಕ್ಕಿ.

೫ ಹಳಿಬ್ಯಾಡ=ಹಳಿಯಬೇಡ, ಹೀನಯಿಸಿ ಆಡಬೇಡ.

೬ ಜೇನವ=ಜೇನನ್ನು, 'ಜೇನು' ಎಂಬುದಕ್ಕೆ ಬದಲಾಗಿ 'ಜೇನ' ಎಂದು ಅಕಾರಾಂತವನ್ನು ಇಲ್ಲಿ ಮೂಲರೂಪವಾಗಿಟ್ಟುಕೊಂಡಿದೆ.

೭ ನಡಿ=ನಡೆ. 'ನಡಿ' ಎಂದು ಇಕಾರಾಂತ ರೂಪವೆ ರೂಢಿ.

೮ ಕಕ್ಕೇಹಣ್ ತಿಂದು........ತಂಗಿ ತನ್ನೂರಿಗೆ ಹೋಗುವಾಗ ಅಣ್ಣ ಜೊತೆಗೆ ಯಾರನ್ನೂ ಕಳಿಸಲೂ ಇಲ್ಲ ; ದಾರಿಗೆ ಬೇಕಾದ ಬುತ್ತಿಯನ್ನೂ ಕೊಡಲಿಲ್ಲ. ಆಕೆ ಹಸಿದು ಆಯಾಸಪಟ್ಟು ಕಾಡು ಹಣ್ಣು ತಿಂದು ನೀರು ಕುಡಿದು ಕಷ್ಟ ಪಟ್ಟುಕೊಂಡು ಹೋದಳು.

ಕಾಕರುಗಲ್ಲು=ಮೂಲೆಮೂಲೆಯಾಗಿರುವ ಚೂಪುಕಲ್ಲು. ಆ ಕಲ್ಲಿನ ಮೇಲೆ ನಡೆದು ಅಡಿವೊತ್ತಿತು ; ಕೂತು ಮಲಗಿ ನಡು (ಸೊಂಟ) ಒತ್ತಿತು. 'ಅಡಿವೊತ್ತಿ ನಡುವೊತ್ತಿ' ಎಂದಿದ್ದರೆ ಚೆನ್ನ. ಸಾಕಣ್ಣಾ ನಿನ್ನ ಮನೆಮಾರು: 'ನಿನ್ನ ಮನೆಯ ತಂಟೆ ನನಗೆ ಇನ್ನು ಬೇಡವೇ ಬೇಡ' ಎಂದು ಭಾವ.

೯ ತಂಗ್ಹೋಯ್ದ=ತಂಗಿ ಹೋದ. ತಂಗಿ ತನ್ನೂರಿಗೆ ಹೊರಟುಹೋದ ಮರುದಿನ ಹೆಂಡತಿಗೆ ನಿಜವಾಗಿಯೂ ಕಾಯಿಲೆ ಬಂತು. ದೇವರ್ನ ಕೇಳ ಹೊರಟನು : ಕಷ್ಟ ಬಂದಾಗ ದೇವರ ಗುಡಿಗೆ ಹೋಗಿ ಪ್ರಾರ್ಥನೆಮಾಡಿ ಮನಸ್ಸಿನಲ್ಲಿ 'ಕುರಿತುಕೊಂಡು' ಪ್ರಸಾದ ಕೇಳುವುದು ಈಗಲೂ ರೂಢಿಯಿದೆ. ಇದೂ ಅಲ್ಲದೆ, ದೇವರು ಮೈದುಂಬಿ ಬಂದಾಗ ಕೇಳಿ ತಿಳಿದುಕೊಳ್ಳುವುದೂ ಉಂಟು.

೧೦ ದೇವ್ರಲ್ಲ ದಿಂಡ್ರಲ್ಲ : ದೇವರಲ್ಲ ದಿಂಡರಲ್ಲ. 'ದಿಂಡರು' ರೂಢಿಯ ಪುನರಾವೃತ್ತಿಯ ರೂಪ, ಏನೂ ಅರ್ಥವಿಲ್ಲ. ದೈವಲ್ಲ=ದೆವ್ವವಲ್ಲ. ಹೆಣ್ಮಾಗಳುಸುರು : ಹೆಣ್ಣುಮಗಳು ನೊಂದು ನಿಟ್ಟುಸಿರು ಬಿಟ್ಟದ್ದರ ಫಲ ಇದು.

೧೧ ತಂದಿದಿನಿ=ತಂದಿದ್ದೇನೆ (ಇದೀನಿ=ಇದ್ದೇನೆ). ಹಿಂದೆ ತನ್ನ ಮನೆಯಲ್ಲಿದ್ದಾಗ ಬೇಕೆಂದು ಮಾಡದೆ ಬಿಟ್ಟ ಉಪಚಾರಗಳನ್ನೆಲ್ಲ ಈಗ ಮಾಡಲು ಸಿದ್ಧನಾಗಿದ್ದಾನೆ ಅಣ್ಣ. ಬರಬೇಕೇ=ಬರಬೇಕಮ್ಮಾ.

೧೨ ಅಂಗ್ಳ, ಗಂಗ್ಳ=ಅಂಗಳ, ಗಂಗಳ (ಊಟದ ತಳಿಗೆ, ತಟ್ಟೆ).

೧೩ ತೇಜಿ=ಕುದುರೆ.

೧೪ ಮಳೆಯಾರ, ಹೊಳೆಯಾರ=ಮಳೆಯಾದರೂ, ಹೊಳೆಯಾದರೂ.

೧೫ ಹುಟ್ಹಾಕಿ=ಹುಟ್ಟುಹಾಕಿ. (ಹುಟ್ಟು=ದೋಣಿ ನಡಸುವ ಏಾಟುಗೋಲು. ಹುಟ್ಟುಹಾಕು=ಅದರಿಂದ ಏಾಟಿ ಮುಂದೆ ನಡಸು) ಜೋಕೇಲ=ಜೋಕೆಯಿಂದ, ಎಚ್ಚರಿಕೆಯಿಂದ.

೨೦ ತಂಗಿ ಯಾವ ಉಪಚಾರಕ್ಕೂ ಒಪ್ಪದೆಹೋದ್ದನ್ನು ಕಂಡು ತಂದೆ ತಾಯಿಗಳ ನೆನಪುಮಾಡಿ ಅವರಿಗೋಸ್ಕರವಾಗಿಯಾದರೂ ಬರುವಂತೆ ಕೇಳಿಕೊಳ್ಳುತ್ತಾನೆ

೨೧-೨೨ ಅಪ್ಪ ಅಮ್ಮ ಇದ್ದರೆ ತನ್ನನ್ನು ಅವರು ಎಷ್ಟೋ ಅಕ್ಕರೆಯಿಂದ ಕಾಣುತ್ತಿದ್ದರೆಂದೂ ಅವರಿಲ್ಲವಾದಮೇಲೆ ಆ ಮನೆ ತನಗೆ ಬೇಕಿಲ್ಲವೆಂದೂ ಸ್ಪಷ್ಟವಾಗಿ ಹೇಳಿಬಿಡುತ್ತಾಳೆ. ಕಳುಹೋಳೆ=ಕಳುಹುವಳೆ, ಕಳಿಸುತ್ತಿದ್ದಳೆ?

೨೩ ಆದರೂ ಕಡೆಗೆ, ಅತ್ತಿಗೆ ಅಣ್ಣ ತಪ್ಪುಮಾಡಿದರೂ ಅವರ ಮಗನ ಮೇಲಿನ ಮಮತೆಯಿಂದ ಮದುವೆಗೆ ಬರಲು ಒಪ್ಪುತ್ತಾಳೆ. ಆಗಲೂ ಮನೆಯೊಳಕ್ಕೆ ಬರಲೂ ಅಲ್ಲಿರಲೂ ಸಮ್ಮತಿಸುವುದಿಲ್ಲ.

೨೪ ಶಾವಂತ್ಗೆ=ಸೇವಂತಿಗೆ. ತಕ್ಕದ್ದಲ್ಲದ ಮಾತಾಡಿದ್ದರಿಂದ ಈ ರೀತಿ ಪಾಡುಪಡಬೇಕಾಯಿತೆಂದು ಭಾವ. ಪ್ರಾಣೇಶ=ಹನುಮಂತರಾಯ, ಆಂಜನೇಯ. ಈ ಮಾತಿನಿಂದ 'ಈ ಹಾಡು ಬ್ರಾಹ್ಮಣರು ಕಟ್ಟಿದ್ದಿರಬಹುದೇ?' ಎಂದು ಊಹಿಸಲು ಅವಕಾಶವಿದೆ

## ಉತ್ತರದೇವಿಯ ಹಾಡು

'ಉತ್ತರೆದೇವಿ' ಎಂಬುದು ರೂಢಿಯಲ್ಲಿ 'ಉತ್ತರದೇವಿ' ಎಂದಾಗಿದೆ. ಇದೊಂದು ಕರುಣ ಕಥೆ. ಉತ್ತರದೇವಿಯ ಅತ್ತೆ ಮಗನಿಗೆ ಚಾಡಿ ಹೇಳಿ ಸೊಸೆಯನ್ನು ಮನೆಬಿಟ್ಟು ಹೊರಡಿಸುತ್ತಾಳೆ. ಅವಳು ಚಿಕ್ಕ ಚಿಕ್ಕ ಮಕ್ಕಳನ್ನೂ ಕರೆದುಕೊಂಡು ಅಪ್ಪನ ಮನೆಗೆ ಬರುತ್ತಾಳೆ. ಅವನು ಮಗಳನ್ನು ಮನೆಗೆ ಸೇರಿಸಿಕೊಳ್ಳುವುದಿಲ್ಲ. ಕದವನ್ನೂ ತೆಗೆಯದೆ ಹಿಂದಕ್ಕೆ ಕಳಿಸಿಬಿಡುತ್ತಾನೆ. ಅಣ್ಣ, ತಮ್ಮ, ಅಕ್ಕ, ತಂಗಿ—ಯಾರೂ ಆದರಿಸುವುದಿಲ್ಲ. ಅಳೆ, ಕಂಗೆಟ್ಟು ಕಡೆಗೆ ತಾಯ ಬಳಿ ಹೋಗುತ್ತಾಳೆ. ತಾಯಿ ತನ್ನ ಗತಿ ಮಗಳಿಗೂ ಬಂದದ್ದಕ್ಕಾಗಿ ಮರುಗಿ ಸಮಾಧಾನ ಹೇಳುತ್ತಾಳೆ. ಆಗ ಮಗಳು ತಾಯ ಸಲಹೆಯಂತೆ

'ಉತ್ತರೆ ಮಳೆ' ಯಾಗಿ ಹೋಗುತ್ತಾಳೆ. 'ಸುಯ್ಯೋ' ಎಂಬ ಪಲ್ಲವಿ ನೋಂದ ಉತ್ತರೆಯ ನಿಟ್ಟುಸಿರಿನ ಅನುಕರಣೆಯಂತಿದೆ.

೧ ಹಿತ್ಲಾಗೆ=ಹತ್ತಲಲ್ಲಿ ; ಹಿತ್ತಿಲಿನಲ್ಲಿ (ಪಿಂತು+ಇಲ್, ಪಿಂತಿಲ್, ಪಿತ್ತಿಲ್, ಹಿತ್ತಿಲು=ಮನೆಯ ಹಿಂದಣ ಪ್ರದೇಶ). ಏಕಾಂತ=ಗುಟ್ಟುಮಾತು. ಇಲ್ಲಿ 'ಜಗಳ' ಎಂಬ ಅಭಿಪ್ರಾಯ. ಅಥವಾ ಅತ್ತೆ ಸೊಸೆಯಲ್ಲಿ ತುಂಬ ಪ್ರೀತಿಯಿರುವಂತೆ ನಟಿಸುತ್ತಿದ್ದಳೆಂದು ಬೇಕಾದರೂ ಭಾವಿಸಬಹುದು. ಮಗ್ಗೆ=ಮಗನಿಗೆ. (ಮಗ+ಗೆ). ಉತ್ರಾಜಿ=ಉತ್ತರಾಜಿ. 'ಉತ್ತರೆ' ಎಂಬುದಕ್ಕೆ ಬದಲಾಗಿ ಮುದ್ದಿಗಾಗಿ, ಮರ್ಯಾದೆಗಾಗಿ ಕರೆಯುವ ಹೆಸರು. ಎಂಬೋ=ಎಂಬುವ ; ಎಂಬ.

೨ ಮಗ ಹೆಂಡತಿಯನ್ನು ಬಿಡಲಾರದೆ, ಬಿಡದಿರುವುದಕ್ಕೆ ಕಾರಣ ಹುಡುಕಿ ಹೇಳತೊಡಗುತ್ತಾನೆ. ಬಿಡುವ್ರೋಕೆ = ಬಿಡುವುದಕ್ಕೆ. ಎಮ್ಮೈಲ್ಲ = ಎಮ್ಮೆಯಲ್ಲ. ಒಂದೊರ=ಒಂದು ವರ, 'ವರಹ' (ನಾಣ್ಯ). ಮುಟ್ಟೆ=ಕಗುಲಿ, ಖರ್ಚಾಗಿ. ತ್ರೆರ=ಮದುವೆಯಲ್ಲಿ ಹೆಣ್ಣಿಗಾಗಿ ಕೊಡುವ ಹಣ (ತೆರ ಮುಟ್ಟ=ತೆರ ವೆಚ್ಚವಾಗಿ). ಬಂದೋಳ=ಬಂದವಳನ್ನು. ಮಿತ್ರೇ=ಮಿತ್ರೆಯನ್ನು, ಗೆಳತಿಯಾಗಿರುವವಳನ್ನು.

೩ ಬಂದಿ : ಒಂದು ಬಗೆಯ ಒಡವೆ. ರಾಣೀ=ರಾಣಿಯನ್ನು. ತಾಯಿ ಆಗುವ ವೆಚ್ಚವನ್ನೆಲ್ಲ ತಾನೇ ಒದಗಿಸಿಕೊಳ್ಳುವುದಾಗಿಯೂ ಬೇರೊಬ್ಬ 'ರಾಣಿ'ಯನ್ನು ತಂದು ಮದುವೆ ಮಾಡುವುದಾಗಿಯೂ ಮತ್ತೆ ಮತ್ತೆ ಒತ್ತಿ ಹೇಳಿ ಸೊಸೆಯನ್ನು ಹೊರ ಹೊರಡಿಸುವಂತೆ ಪ್ರೇರಿಸುತ್ತಾಳೆ.

೪ ಎಳ್ಡೊರ=ಎರಡು ವರಹ.

೫ ಮೂಗ್ತಿ=ಮೂಗುತಿ.

೬ ಅತ್ತೆ ಬಹು ಪ್ರೀತಿಯಿರುವವಳಂತೆ ನಟಿಸುತ್ತ ಸೊಸೆಗೆ ಉಪಚಾರ ಹೇಳುತ್ತಾಳೆ. ಸೊಸೆ, ಅವಳ ಅಂತರಂಗವನ್ನು ತಿಳಿದು ಮೂದಲಿಸುತ್ತಾಳೆ. ನೆಲೀನ ಮ್ಯಾಗಿರುವ್ರೋ=ನೆಲುವಿನ ಮೇಲಿರುವ. ನೆಲು : ಹಾಲು, ಮೊಸರು, ಮೊದಲಾದುವನ್ನಿಡುವುದಕ್ಕಾಗಿ ನೇತುಬಿಟ್ಟಿರುವ (ಹುರಿ, ಹಗ್ಗದಿಂದ ಹೆಣೆದ) ಒಂದು ಸಲಕರಣೆ (ನೇಲುವ ವಸ್ತು). ನೆಲ್ಲಕ್ಕಿ=ಬತ್ತದ ಅಕ್ಕಿ (ಸಾವೆ ಮೊದಲಾದ ಬೇರೆ ಧಾನ್ಯದ್ದಲ್ಲ). ಉಂಡಾರ=ಉಂಡಾದರೂ (ಆರ=ಆದರೂ). ಸೊಸೆಮುದ್ದೆ=ಮುದ್ದಿನ ಸೊಸೆಯೇ.

೯ ಇಕ್ಕು=ಉಣಲಿಕ್ಕು ; ಬಡಿಸು. ಬರೊವಳಿಗೆ=ಬರುವವಳಿಗೆ. ಮಡಗಿರು=ಇಟ್ಟಿರು.

೧೦ ಚಟ್ಟಿ : ಚಟ್ಟಿಯಾಗಿರುವ ಒಂದು ಬಗೆಯ ಪಾತ್ರೆ. ಗಟ್ಯಾದ=ಗಟ್ಟಿಯಾದ.

೧೨ ಕುಡುದಾರ=ಕುಡಿದಾದರೂ. 'ಕುಡುದಾರ' ಎಂದು 'ಉ' ಕಾರಾಂತವಾಗಿಯೆ ನುಡಿಯುತ್ತಾರೆ.

೧೪ ತೊಟುಕೊ=ತೊಟ್ಟುಕೊ. ಮಗಸಿಗಾರ ತೊಡಿಸು: ಸ್ವಂತ ಬುದ್ಧಿಯಿಲ್ಲದೆ ಅವ್ವನ ಮಾತು ಕೇಳಿಕೊಂಡು ಕಾರಣವಿಲ್ಲದೆ ಹೆಂಡತಿಯನ್ನು ಮನೆಬಿಟ್ಟು ಹೊರಡಿಸುವವನು ರವಿಕೆ ತೊಡುವುದಕ್ಕೇ ತಕ್ಕವನೆಂದು ಅವಳ ಆಶಯವಿರಬಹುದು.

೧೬ ಹಿಡುಕೊಂಡು=ಹಿಡಿದುಕೊಂಡು. ಗೆಜ್ಜೆವಜ್ಜರನ: ಗೆಜ್ಜೆಯನ್ನು ಕಟ್ಟಿರುವ ವಜ್ರನೆಂಬ (ಅಥವಾ ವಜ್ರದಂಥ; ಮೆಚ್ಚಿನ) ಮಗನನ್ನು.

೧೭ ಬಾಗಲು: ಬಾಗಿಲು. ಹಳ್ಳಿಯವರ ಬಾಯಲ್ಲಿ 'ಬಾಗಲು, ಬಾಕಲು' ಎಂದು 'ಗ, ಕ' ನುಡಿಯುವುದೇ ಹೆಚ್ಚು.

೧೮ ಬಾಳೆ ಗಿಡಗಳಿಗೂ ಉತ್ತರೆಯನ್ನು ಅಗಲಿರಲು ವ್ಯಸನ. ಅವಳಂತೆ ತಮಗೆ ನೀರು ಹುಯ್ದು ಆರೈಕೆ ಮಾಡುವವರು ಯಾರೆಂದೂ ತಮ್ಮ ಹಣ್ಣು ತಿಂದು ಆನಂದಿಸುವವರು ಯಾರೆಂದೂ ಅವಕ್ಕೆ ಆತಂಕ. ಮೆಲುವ್ರೋರು=ಮೆಲ್ಲುವವರು; ತಿನ್ನುವವರು.

೧೯ ತನಗಿಂತ ಜಾಣೆಯಾಗಿ, ಮನೆಯಲ್ಲೇ ಇರುವ ತನ್ನತ್ತಿಗೇ ಅದೆಲ್ಲ ಸೇರಿದ್ದೆಂದು ಉತ್ತರದೇವಿಯ ಉತ್ತರ. ಅವಳೆ=ಇದ್ದಾಳೆ.

ಕಿತ್ತಿಳೆ, ಮಲ್ಲಿಗೆ ಮೊದಲಾದವುಗಳ ವಿಷಯದಲ್ಲಿಯೂ ಹೀಗೆಯೆ.

೨೦ ಹಿತ್ತಲು, ಕಿತ್ತಳೆ: ಹಿತ್ತಿಲು, ಕಿತ್ತಿಳೆ.

೨೬ ಸೊಸೆಯನ್ನು ಮನೆಯಿಂದ ಹೊರಡಿಸುವಾಗ ಅವಳ ಸ್ವಂತ ಪದಾರ್ಥಗಳನ್ನು ಅತ್ತೆ ಅವಳಿಗೆ ಕೊಡುವುದಾಗಿ ಹೇಳಿ, ಯಾವು ಯಾವುದನ್ನೋ ಕೊಡುತ್ತಾಳೆ. ಸೊಸೆ, ಅದು ತನ್ನದಲ್ಲವೆಂದೂ ತನ್ನದನ್ನು ಕೊಡಬೇಕೆಂದೂ ಹಟಮಾಡಿ ಕೇಳುತ್ತಾಳೆ.

೨೮ ಹೊಗ್ತಾಳೆ=ಹೋಗುತ್ತಾಳೆ. (ಹೋದಳು ಎಂದು ಅಭಿಪ್ರಾಯ). ತಡದರೆ=ತಡೆದರು ('ತಡದು' ಎಂದು 'ದ' ಉಚ್ಚಾರ ರೂಢಿ). ಕೇಳ್ಯಾರಲ್ಲೆ: ಕೇಳಿದರಲ್ಲೆ. ಚಿಕ್ಕ ಮಕ್ಕಳನ್ನು ಕರೆದುಕೊಂಡು ಹೋಗುತ್ತಿರುವ ಒಂಟಿ ಹೆಣ್ಣನ್ನು ತಡೆದು ಯೋಗಕ್ಷೇಮವನ್ನು ವಿಚಾರಿಸಿದನು.

೨೯ ಅತ್ಯಮ್ಮ: ಅತ್ತೆ+ಅಮ್ಮ. ಉರಿಸ್ಯಾಳು=ಉರಿಸಿದಳು; ಕಾಡಿಗೋಳು ಹುಯ್ದುಕೊಂಡಳು. ಕಳುವ್ಯಾಳು=ಕಳುಹಿದಳು, ಕಳಿಸಿದಳು.

೩೦ ಕದಾ ತೆಗಿಯೊ=ಕದವನ್ನು ತೆಗೆಯೊ. 'ತೆಗೆ' ಎಂಬುದಕ್ಕೆ ಬದಲಾಗಿ 'ತೆಗಿ' ಎಂದು ನುಡಿಯುತ್ತಾರೆ.

೪ ಮೂಡ್ಲಿಂದ=ಪೂರ್ವದಿಂದ. ನಮ್ಮ ಊರಿನ ಪೂರ್ವಕ್ಕೆ ಗುಡ್ಡವಿದೆ; ಅಲ್ಲಿ ಬಿದ್ದ ಮಳೆಯ ನೀರೆಲ್ಲ ಗುಡ್ಡದ ಬುಡದಲ್ಲಿ ಇರುವ ಕೆರೆಗೆ ಬರುತ್ತದೆ. ಕೋಡೀಲಿ=ಕೋಡಿಯಲ್ಲಿ. ಕೆರೆಯ ಕೋಡಿಯಲ್ಲಿ ಶಿವನ ದೇವಸ್ಥಾನವಿರುವುದು. ಈ ದೇವರಿಗೆ 'ಕೋಡಿಯ ಮಲ್ಲೇಶ್ವರ' ಎಂದೂ ಹೆಸರು. ಅದಕ್ಕೇ 'ನಮ್ಮ ಕೆರೆ' ಎನ್ನುವುದು. ಆಳ್ಳೀಮರ ತೂಬು=ಕೆರೆಯ ತೂಬಿನ ಬಳಿ ಒಂದು ದೊಡ್ಡ ಅರಳಿಯ ಮರವಿದೆ.

೫ ಮದ್ಯಾನ್ಕೆ=ಮಧ್ಯಾಹ್ನಕ್ಕೆ. ಇಬ್ನಿಗೆ=ಇಬ್ಬನಿಗೆ. ನಮ್ಮ ಕೆರೆ ಬಹು ದೊಡ್ಡದು; ಇಬ್ಬನಿಗೆ (ಸಣ್ಣ ಮಳೆಗೆ) ತುಂಬುವಷ್ಟು ಚಿಕ್ಕದಲ್ಲ. ಏಕೆ ಹೀಗೆ ಹೇಳಿದ್ದಾರೊ ತಿಳಿಯದು. ಸಮಸಂದೊ=ಸಮವಾಗಿ ಸಂದಿತು; ಚೆನ್ನಾಗಿ ನಡೆಯಿತು.

೬ ಮಧ್ಯಾನ್ದ ಮಲ್ಲಿಗೆ: ಮಧ್ಯಾಹ್ನದ ಹೊತ್ತಿಗೆ ಅರಳುವ ಒಂದು ಬಗೆಯ ಮಲ್ಲಿಗೆ. ರುದ್ರ ಶಾವಂತಿಗೆ: ಒಂದು ಬಗೆ ಸೇವಂತಿಗೆ ಹೂವು. ಮರುಗವೆ: ಮರುಗವು. ಇಲ್ಲಿ ಕೊನೆಯಲ್ಲಿ ಸೇರಿರುವ 'ಎ'ಗೆ ಅರ್ಥವಿಲ್ಲ. ಉದ್ದಕ್ಕೂ ಎಷ್ಟೋ ಕಡೆ ಹೀಗೆ 'ಎ'ಕಾರ ಸೇರಿಸಿಬಿಡುತ್ತಾರೆ. (ಉದಾ : ಮುಂದಿನ ಪದ್ಯದಲ್ಲಿ 'ಇಪ್ಪತ್ತೆ')

೭ ತೆಪ್ಗಣ=ತೆಪ್ಪಗಣ (ಗಣ=ಗಳ, ಗಳು); ತೆಪ್ಪ, ಅದನ್ನು ವಿಹಾರ ನಡಸುವ ಗಳು ಎರಡನ್ನೂ ಸೇರಿಸಿ 'ತೆಪ್ಗಣ' ಎನ್ನುತ್ತಾರೆ. 'ತೆಪ್ಗಣಕೆ' ಎಂದರೆ ತೆಪ್ಪ ಆಡುವುದಕ್ಕೆ ಎಂದರ್ಥ. ಹಿಡಿಗುದುರೆ: 'ಭಟರು ಪಕ್ಕದಲ್ಲಿ ನಿಂತು ಹಿಡಿದಿರುವ ಕುದುರೆ' ಎಂದು ಭಾವವಿರಬಹುದು. ಹೋಗೋ=ಹೋಗುವ.

೮ ಒಕ್ಕಾಲ........=ಒಂದು ಕಾಲಿಗೆ ಹುರಿಗೆಜ್ಜೆ; ಒಂದು ಕಾಲಿಗೆ ಕಿರುಗೆಜ್ಜೆ. ಹಾಡುವಾಗ 'ಒಕ್ಕಾಳ' ಎಂದು ಹೇಳುತ್ತಾರೆ. 'ಒಕ್ಕಳ' ಎಂದರೆ 'ಒಂದು ಕೊಳಗ' ಎಂದರ್ಥ. ಮುಂದಿನ ಪದ್ಯದಲ್ಲೂ 'ನಾಗಾಳ' (ನಾಗಳ=ನಾಲ್ಕು ಕೊಳಗ) ಎಂದು ಹೇಳುತ್ತಾರೆ. ಕೊಳಗದಳತೆಯಲ್ಲಿ ಗೆಜ್ಜೆ ಕಟ್ಟದೆಯೆನ್ನುವುದಕ್ಕಿಂತ ಕಾಲಿಗೆ ಕಟ್ಟದೆ ಯೆನ್ನುವುದು ಸಾಧುವೆಂದು ಹೀಗೆ ತಿದ್ದಿದೆ. ಹುರಿಗೆಜ್ಜೆಯೆಂದರೇನು? ಚೊಕ್ಕ ಬೆಳ್ಳಿ=ಶುದ್ಧವಾದ ಬೆಳ್ಳಿ. ಮಕುರಂಬ=ಮುಖವಾಡ. ಪೌಜು=ದಂಡು, ಸೇನೆ.

೯ ನಾಗಬೆಳ್ಳಿ: ಇದು ನಿರ್ದಿಷ್ಟ ಗುಣವುಳ್ಳ ಒಂದು ಬಗೆ ಬೆಳ್ಳಿಯೋ ಮಾತಿನ ಸರಣಿಯಲ್ಲಿ ಪ್ರಾಸದ ಸೌಕರ್ಯಕ್ಕಾಗಿ ಹಾಕಿದ ಪದವೊ ತಿಳಿಯದು.

೧೦ ಹಲ್ವಾಣ=ಹಲ್ಲಣ. ನಿಂಬೆಯ ಹಲ್ವಾಣ=ನಿಂಬೆಯಹಣ್ಣಿಟ್ಟು ಅಲಂಕಾರ ಮಾಡಿದ ಹಲ್ಲಣ.

೧೧ ಕುಣಿಗಾಲ ಕುದುರೆ: ಸುಮ್ಮನೆ ನಿಲ್ಲಲಾರದೆ ಕುಣಿಯುತ್ತಿರುವ ಮೇಲಾದ ಕುದುರೆ. 'ಕುಣಿಗಲ ಕುದುರೆ' ಯೆಂದೂ ಅರ್ಥ ಮಾಡಬಹುದು,

## ನಾಡ ಪದಗಳು

೪ ಮೂಡ್ಲಿಂದ=ಪೂರ್ವದಿಂದ. ನಮ್ಮ ಊರಿನ ಪೂರ್ವಕ್ಕೆ ಗುಡ್ಡವಿದೆ; ಅಲ್ಲಿ ಬಿದ್ದ ಮಳೆಯ ನೀರೆಲ್ಲ ಗುಡ್ಡದ ಬುಡದಲ್ಲಿ ಇರುವ ಕೆರೆಗೆ ಬರುತ್ತದೆ. ಕೋಡೀಲಿ=ಕೋಡಿಯಲ್ಲಿ. ಕೆರೆಯ ಕೋಡಿಯಲ್ಲಿ ಶಿವನ ದೇವಸ್ಥಾನವಿರುವುದು. ಈ ದೇವರಿಗೆ 'ಕೋಡಿಯ ಮಲ್ಲೇಶ್ವರ' ಎಂದೂ ಹೆಸರು. ಅದಕ್ಕೇ 'ನಿಮ್ಮ ಕೆರೆ' ಎನ್ನುವುದು. ಅಳ್ಳೀಮರ ತೂಬು=ಕೆರೆಯ ತೂಬಿನ ಬಳಿ ಒಂದು ದೊಡ್ಡ ಅರಳಿಯ ಮರವಿದೆ.

೫ ಮದ್ಯಾನ್ನೆ=ಮಧ್ಯಾಹ್ನಕ್ಕೆ. ಇಬ್ನಿಗೆ=ಇಬ್ಬನಿಗೆ. ನಮ್ಮ ಕೆರೆ ಬಹು ದೊಡ್ಡದು; ಇಬ್ಬನಿಗೆ (ಸಣ್ಣ ಮಳೆಗೆ) ತುಂಬುವಷ್ಟು ಚಿಕ್ಕದಲ್ಲ. ಏಕೆ ಹೀಗೆ ಹೇಳಿದ್ದಾರೊ ತಿಳಿಯದು. ಸಮಸಂದೊ=ಸಮವಾಗಿ ಸಂದಿತು; ಚೆನ್ನಾಗಿ ನಡೆಯಿತು.

೬ ಮಧ್ಯಾನ್ನ ಮಲ್ಲಿಗೆ: ಮಧ್ಯಾಹ್ನದ ಹೊತ್ತಿಗೆ ಅರಳುವ ಒಂದು ಬಗೆಯ ಮಲ್ಲಿಗೆ. ರುದ್ರ ಶಾವಂತಿಗೆ: ಒಂದು ಬಗೆ ಸೇವಂತಿಗೆ ಹೂವು. ಮರುಗವೆ: ಮರುಗವು. ಇಲ್ಲಿ ಕೊನೆಯಲ್ಲಿ ಸೇರಿರುವ 'ಎ'ಗೆ ಅರ್ಥವಿಲ್ಲ. ಉದ್ದಕ್ಕೂ ಎಷ್ಟೋ ಕಡೆ ಹೀಗೆ 'ಎ'ಕಾರ ಸೇರಿಸಿಬಿಡುತ್ತಾರೆ. (ಉದಾ : ಮುಂದಿನ ಪದ್ಯದಲ್ಲಿ 'ಇಪ್ಪತ್ತೆ')

೭ ತೆಪ್ಗಣ=ತೆಪ್ಪಗಣ (ಗಣ=ಗಳ, ಗಳು); ತೆಪ್ಪ, ಅದನ್ನು ಮಾಟ ನಡಸುವ ಗಳು ಎರಡನ್ನೂ ಸೇರಿಸಿ 'ತೆಪ್ಗಣ' ಎನ್ನುತ್ತಾರೆ. 'ತೆಪ್ಗಣಕೆ' ಎಂದರೆ ತೆಪ್ಪ ಆಡುವುದಕ್ಕೆ ಎಂದರ್ಥ. ಹಿಡಿಗುದುರೆ: 'ಭಟರು ಪಕ್ಕದಲ್ಲಿ ನಿಂತು ಹಿಡಿದಿರುವ ಕುದುರೆ' ಎಂದು ಭಾವವಿರಬಹುದು. ಹೋಗೋ=ಹೋಗುವ.

೮ ಒಕ್ಕಾಲ........=ಒಂದು ಕಾಲಿಗೆ ಹುರಿಗೆಜ್ಜೆ; ಒಂದು ಕಾಲಿಗೆ ಕಿರುಗೆಜ್ಜೆ. ಹಾಡುವಾಗ 'ಒಕ್ಕಾಳ' ಎಂದು ಹೇಳುತ್ತಾರೆ. 'ಒಕ್ಕಳ' ಎಂದರೆ 'ಒಂದು ಕೊಳಗ' ಎಂದರ್ಥ. ಮುಂದಿನ ಪದ್ಯದಲ್ಲೂ 'ನಾಗಾಳ' (ನಾಗಳ=ನಾಲ್ಕು ಕೊಳಗ) ಎಂದು ಹೇಳುತ್ತಾರೆ. ಕೊಳಗದಳತೆಯಲ್ಲಿ ಗೆಜ್ಜೆ ಕಟ್ಟಿದೆಯೆನ್ನುವುದಕ್ಕಿಂತ ಕಾಲಿಗೆ ಕಟ್ಟಿದೆಯೆನ್ನುವುದು ಸಾಧುವೆಂದು ಹೀಗೆ ತಿದ್ದಿದೆ. ಹುರಿಗೆಜ್ಜೆಯೆಂದರೇನು? ಚೊಕ್ಕ ಬೆಳ್ಳಿ=ಶುದ್ಧವಾದ ಬೆಳ್ಳಿ. ಮಕುರಂಬ=ಮುಖವಾಡ. ಪೌಜು=ದಂಡು, ಸೇನೆ.

೯ ನಾಗಬೆಳ್ಳಿ: ಇದು ನಿರ್ದಿಷ್ಟ ಗುಣವುಳ್ಳ ಒಂದು ಬಗೆ ಬೆಳ್ಳಿಯೋ ಮಾತಿನ ಸರಣಿಯಲ್ಲಿ ಪ್ರಾಸದ ಸೌಕರ್ಯಕ್ಕಾಗಿ ಹಾಕಿದ ಪದವೊ ತಿಳಿಯದು.

೧೦ ಹಲ್ಯಾಣ=ಹಲ್ಲಣ. ನಿಂಬೆಯ ಹಲ್ಯಾಣ=ನಿಂಬೆಯಹಣ್ಣಿಟ್ಟು ಅಲಂಕಾರ ಮಾಡಿದ ಹಲ್ಲಣ.

೧೧ ಕುಣಿಗಾಲ ಕುದುರೆ: ಸುಮ್ಮನೆ ನಿಲ್ಲಲಾರದೆ ಕುಣಿಯುತ್ತಿರುವ ಮೇಲಾದ ಕುದುರೆ. 'ಕುಣಿಗಲ ಕುದುರೆ' ಯೆಂದೂ ಅರ್ಥ ಮಾಡಬಹುದು,

೧೨ ಮ್ಯೆಸ್ಯಾವೆ=ಮ್ಯೆಸೇವೆ, ಮ್ಯೆತಿಕ್ಕುವ ಸೇವೆ. ಹಿಡಿಹೊನ್ನು=ಹಿಡಿ ತುಂಬ ಹೊನ್ನು, ಹಣ. ನಾಣ್ಯದ ರಾಶಿಯಿಂದ ಹಿಡಿಯಲ್ಲಿ ಹಿಡಿದು ಬಂದಷ್ಟನ್ನೂ ಹಾಕುವುದಕ್ಕೆ 'ಹಿಡಿಹೊನ್ನು ಹಾಕುವುದು' ಎನ್ನುತ್ತಾರೆ.

೧೩ ಸುಂಗರವಾಗಿ=ಶೃಂಗಾರವಾಗಿ, ಅಲಂಕಾರವಾಗಿ. ಐದಾವೆ=ಇದ್ದಾವೆ, ಇವೆ. ಐದಿ (ಬಂದು) ಇವೆ ಎಂದೂ ಆಗುತ್ತದೆ. ದೋಣು=ದೋಣಿ ಲಾಲಿಸಿ: 'ಲಾಗಿಸಿ' ಎಂದೂ ಹೇಳುತ್ತಾರೆ. ಕರದವೆ=ಕರೆದವು 'ರ' ಕಾರವೆ ಜನ ಸಾಮಾನ್ಯದ ಉಚ್ಚಾರ.

೧೪ ಬಂಟ=ಶೂರ.

೧೬ ಜಾತರೆ=ಜಾತ್ರೆ. ಜೋತುರುಟ್ಟಿದಾರೆ=ಧೋತ್ರವನ್ನು ಉಟ್ಟಿದ್ದಾರೆ. ಜಾತಿಮುತ್ತು=ಚಿಪ್ಪಿನಲ್ಲಿ ಹುಟ್ಟಿದ ಉತ್ತಮವಾದ ಮುತ್ತು, ಕೃತಕವಾದ್ದಲ್ಲ. ಇಳಿಲ್ಹಾಕಿ=ಇಳಿಯ ಬೀಳುವಂತೆ ನೇತುಹಾಕಿ. ನಡಸ್ಯಾರೆ=ನಡಸಿದ್ದಾರೆ.

೧೭ ಮಾರನೋಮಿ=ಮಾರ್ನೋಮಿ, ಮಹಾನವಮಿ.

೧೮ ಹಾಲಿಗಕ್ಕಿಹಾಕಿ: ದೇವರ ನೈವೇದ್ಯಕ್ಕಾಗಿ ನೀರಿಗೆ ಬದಲಾಗಿ ಹಾಲಿಗೇ ಅಕ್ಕಿ ಹಾಕಿ ಅನ್ನ ಮಾಡುವುದುಂಟು. 'ಮಲ್ಲಯ್ಯನನ್ನು ನೋಡುವ ಸಡಗರದಲ್ಲಿ ಮರೆತು ಹಾಲಿಗೆ ಅಕ್ಕಿ ಹಾಕಿಬಿಟ್ಟೆ' ಎಂದರೂ ಹೊಂದುತ್ತದೆ. ಆಲದ ಮರದ ನೆರಳಾಗೆ: ಗುಡ್ಡದ ಬುಡದಲ್ಲಿ ಕೆರೆಯ ದಡದಲ್ಲಿರುವ 'ಮಲ್ಲಯ್ಯನ' ದೇವಸ್ಥಾನದ ಮುಂದೆ ಒಂದು ಆಲದ ಮರವಿದೆ. ಎತ್ತರವಾದ ಆ ಸ್ಥಳ ಕೆರೆಯ ಈಚೆಯ ದಡದ ಮೇಲಿನ ಬೋರೆಯಲ್ಲಿರುವ ಊರಿಗೆ ಚೆನ್ನಾಗಿ ಕಾಣುತ್ತದೆ. ದಳ=ದಂಡು.

೧೯ ಸತ್ತಿಗೆ=ಛತ್ರಿ.

೨೦ ಅಂದಲ: ಅಂದಣ; ಪಲ್ಲಕ್ಕಿ. ರಂಗಳಿಸಿ=ಬಣ್ಣಬಣ್ಣವಾಗಿ ತೋರುತ್ತ. ಅಂಬು=ಬಾಣ. ಅರುಗಾಗು=ಪಕ್ಕಕ್ಕೆ ಸರಿ; ದಾರಿ ಬಿಡು. ಆರುತಿ=ಆರತಿ. 'ಆರತಿ ಬೆಳಗು' ಎನ್ನುವುದೆ ಬಳಕೆ ನುಡಿ.

೨೩ ಚಿಕ್ಕವೇಳುಲಿಂಗ=ದೇವರ ಮೇಲೆ ಅಲಂಕಾರಕ್ಕಾಗಿ ಚಿಕ್ಕ ಲಿಂಗಗಳನ್ನು ಇಳಿಯಬಿಡುತ್ತಾರೆ. 'ಏಳು ಲಿಂಗ' ಎಂಬುದರ ವಿಶೇಷವೇನೊ ಗೊತ್ತಿಲ್ಲ. ಚಿಕ್ಕನು=ಚಿಕ್ಕೋನು; ಚಿಕ್ಕವನು. ಹೆಣಾತೆ=ಹೆಣಿಗೆ,

೨೪ ಒಡ್ಯಾಣ=ಒಡ್ಯಾಣ.

೨೫ ಬೀರದ=ವೀರದ; ಪರಾಕ್ರಮದ. 'ವೀರ ಲಿಂಗೇಗೌಡ' ಮೊದಲಾಗಿ ವೀರಲಿಂಗ ಎಂದು ಬರುವ ಹೆಸರುಗಳು ರೂಢಿ. ಮಲ್ಲಿಗ್ ಹೂವು=ಮಲ್ಲಿಗೆ ಹೂವು. 'ಮಲ್ಲಿಗೆ ಹೂವು (ಕೊಡು) ಎಂದು ಸೆರಗೊಡ್ಡಿ ಬೇಡುವೆ.'

೨೬ ತಾಳು=ತಡೆ; ನಿಂತುಕೊ. ತಾಳೆ ಹೂವೆಂದು: ತಾಳೆ ಹೂವು ಶಿವನ ಪೂಜೆಗೆ ಅರ್ಹವಲ್ಲವೆಂದು ಪ್ರತೀತಿ. ಸೀಳಿ ಪೂಜಿಸುವುದು ಆಚರಣೆ. ತಾಳಿಸು= ನಿಲ್ಲಿಸು.

೨೭ ಹೇರುಕಾರರ ಕೂಟೆ ಓಡಿಬಂದ ಮಲ್ಲಯ್ಯ: ಹಿಂದೆ ಮುಖ್ಯ ವ್ಯಾಪಾರ ಮಾರ್ಗ ನಮ್ಮೂರ ಮೇಲೆ ಹೋಗುತ್ತಿತ್ತಂತೆ. ಸುಂಕದ ಕಟ್ಟೆಯಿದ್ದ ಸ್ಥಳ ವನ್ನು ಹಳಬರು ತೋರಿಸುತ್ತಿದ್ದರು. ಒಂದು ಸಲ ಕೆಲವು ವ್ಯಾಪಾರಿಗಳು ತಮ್ಮ ಹೇರು ಗಳೊಡನೆ ಬಂದು ಈಗ ದೇವಸ್ಥಾನವಿರುವ ಬಳಿ ತಂಗಿದರು. ಕಲ್ಲುಗುಂಡುಗಳನ್ನು ಒಲೆ ಹೂಡಿ ಅಡಿಗೆ ಮಾಡಿ ಉಂಡು ಮಲಗಿದರು. ಒಲೆ ಹೂಡಿದ ಕಲ್ಲುಗಳಲ್ಲೊಂದು ಲಿಂಗ. ಬೆಂಕಿಯಲ್ಲಿ ಅದು ಸಿಡಿಯಿತು. ವ್ಯಾಪಾರಿಗಳ ಕನಸಿನಲ್ಲಿ ಶಿವ ತೋರಿ ನಟನದ ಅಪಚಾರ ವನ್ನು ತಿಳಿಸಿದನಂತೆ ಅವರು ಬೆದರಿ ಹರಸಿಕೊಂಡು, ಅಲ್ಲಿ ಲಿಂಗವನ್ನು ಹುಡುಕಿ ಗುಡಿ ಕಟ್ಟಿದರಂತೆ. ದೇವಸ್ಥಾನದ ಒಂದು ಕಂಬದಲ್ಲಿ ಕೈಮುಗಿದು ನಿಂತಿರುವ ಒಂದು ವಿಗ್ರಹ ವನ್ನು ಹೇರುಕಾರರ ಯಜಮಾನನದೆಂದು ಈಗಲೂ ತೋರಿಸುತ್ತಾರೆ ತ್ರಿಟ್ಟು=ಮೇಡು; ಎತ್ತರವಾದ ಸ್ಥಳ. ನೆಲಸ್ಯಾನೆ=ನೆಲಸಿದನು.

೨೮ ಒದರ್ಯಾರು=ಒದರಿದರು; ಕೊಡವಿದರು. 'ಶಿವ ಮಿಂದು ಜಡೆಯನ್ನೊ ದರುವಾಗ ಉದುರುವ ಹನಿಯೆ ಮಳೆ' ಎಂದು ಕಲ್ಪನೆ.

೨೯ ಒಂದು ಪಟ=ಒಂದು ಸಲ (ಪಟ, ಪಟ್ಟು). ಅರ್ತಿ=ಪ್ರೀತಿ; ಸಂತೋಷ; ಉತ್ಸವ; ಹಬ್ಬ (ಆರ್ತಿ).

೩೦ ಕಂಡೊ=ಕಂಡೆವು.

## ನಂಜಪ್ಪ

ನಂಜಪ್ಪ: ನಂಜನಗೂಡಿನ 'ನಂಜುಂಡೇಶ್ವರ' (ನಂಜು+ಉಂಡ+ಈಶ್ವರ). 'ನಂಜ, ನಂಜಪ್ಪ' ಎಂಬಿವು ಇದರ ಹ್ರಸ್ವರೂಪ

೧ ನಂಜುಬಟ್ಟಲ ಹೂವು: ಇದನ್ನು 'ನಿಂದಿಬಟ್ಟಲ ಹೂವು' ಎಂದೂ ಕರೆಯುತ್ತಾರೆ.

ಮಲ್ಲಯ್ಯ: ಇದು ಶಿವನ ಮತ್ತೊಂದು ಹೆಸರು (ಮಲೆಯ+ಅಯ್ಯ; ಬೆಟ್ಟ ದೊಡೆಯ ಸಂ. ಗಿರೀಶ.) ಚೆಲುವಯ್ಯ=ಚೆಲುವರಾಯಸ್ವಾಮಿ, 'ದವನವ' ಎಂದು ನುಡಿಯುತ್ತಾರೆ.

೨ ನಂಜನಗೂಡು: ನಂಜಪ್ಪ ನೆಲಸಿರುವ ಸ್ಥಳ. ಹಾದೀಲಿ=ಹಾದಿ ಯಲ್ಲಿ; ದಾರಿಯಲ್ಲಿ. ತೋಲ=ತೋರ; ದಪ್ಪ. ಬಿತ್ತ್ಯಾನೆ=ಬಿತ್ತಿದ್ದಾನೆ. ನಂಜಪ್ಪ ಸೂಸಿ ಬಿತ್ತ್ಯಾನೆ ದವನವ: ದಾರಿ ಬಹು ಮೃದುವಾಗಿ ಹಿತವಾಗಿದೆ ಯೆಂದು ಭಾವ ಭಕ್ತನಿಗೆ ತನ್ನ ಇಷ್ಟದೇವತೆಯ ಬಳಿ ಹೋಗಲು ಪರಮಸಂತೋಷ.

# ಟಿಪ್ಪಣಿ

೩ ದೇವೆರೇ ನಂಟ, ಇಷ್ಟ, ಎಲ್ಲ. ಅವನಿರುವಲ್ಲಿ ಬೇರೆ ಬಾಂಧವರು ಲೆಕ್ಕಕ್ಕೆ ಇಲ್ಲ. ಮನೆಸ್ವಾಮಿ : ಮನೆದೇವರು ; ಕುಲದೇವತೆ.

೪ ನಂದೀಕೋಲು : ವೀರಶೈವರು ದೇವರ ಉತ್ಸವದ ಮುಂದೆ ಮೆರಸುವ ಅಲಂಕರಿಸಿದ ಒಂದು ಕಂಬ. ವ್ಯಾಸರು ವಿಷ್ಣುವೇ ಸರ್ವೋತ್ತಮನೆಂದು ತೋಳೆತ್ತಿ ನುಡಿದದ್ದರಿಂದ ನಂದಿ ಮುನಿದು, ಶಿವನ ಹೆಚ್ಚಿಗೆಯನ್ನು ಸ್ಥಾಪಿಸುವುದಕ್ಕಾಗಿ ಆ ತೋಳನ್ನು ಕತ್ತರಿಸಿದನೆಂದೂ 'ನಂದೀ ಕೋಲು' ಅದರ ಪ್ರತಿನಿಧಿಯೆಂದೂ ಕೆಲವರು ಹೇಳುತ್ತಾರೆ. ಸಾವಿರಾರು ವರ್ಷಗಳ ಹಿಂದೆ ಉತ್ಸವ ಕಾಲದಲ್ಲಿ 'ಶಕ್ರ ಧ್ವಜ' ವೆಂಬ ಒಂದು ಅಲಂಕರಿಸಿದ ಧ್ವಜಗಂಬವನ್ನು ಹೊತ್ತು ಕುಣಿಸುತ್ತಿದ್ದುದಾಗಿ ಪ್ರಾಚೀನ ಗ್ರಂಥಗಳಲ್ಲಿ ಸೂಚನೆಯಿದೆ. ಆ ಶಕ್ರಧ್ವಜವೇ ವೀರಶೈವ ಯುಗದಲ್ಲಿ 'ನಂದೀಕೋಲು' ಎಂದು ರೂಪಾಂತರ ಹೊಂದಿರಬಹುದು. ಪಟ=ಬಾವುಟದ ಬಟ್ಟೆ, ಅಥವಾ ಚಿತ್ರಪಟ. ಗೊಂಬೆ=ಬೊಂಬೆ ಕಳಸ್ಕೈದು : ಕಳಸ+ಐದು (ಸಂಧಿಯಾಗಿಲ್ಲ.)

೫ ಮುಡಿಯುಟ್ಟು=ಮಿಂದು ; ಸ್ನಾನಮಾಡಿ ಸೇರುಪಾವಡಕೆ ಬಿಳಿಯೆಲೆ ತಕ್ಕೊಂಡು : ಪ್ರೇಮಿಗಳು ಸೇರುವಾಗಲೆಲ್ಲ ಹೀಗೆ ವರ್ಣಿಸುತ್ತಾರೆ 'ಸಮೃದ್ಧಿಯಾಗಿ ಎಲೆಅಡಿಕೆ ತೆಗೆದುಕೊಂಡು' ಎಂದು ಅಭಿಪ್ರಾಯವಿರಬಹುದು. 'ಚನ್ನಯ್ಯ ಸೂಳೆ ಮನೆಗೆ ಹೋದದ್ದು' ಎಂಬ ಪದ ನೋಡಿ. ಭೋಗದ ನಂಜಯ್ಯ: ಸುಖಭೋಗಕ್ಕಾಗಿ ಒಲಿದಿರುವ (ಮದುವೆಯಾದವನಲ್ಲ) ನಂಜಯ್ಯನನ್ನು.

೬ ಸೂಳೆಮನೆಗ್ಹೋಗ್ವಾಗ : ಸೂಳೆಯ ಮನೆಗೆ ಹೋಗುವಾಗ.

೭ ಹೋದರೆ, ನಿಂದರೆ : ಹೋದರು+ಎ, ನಿಂದರು+ಎ.

೮ ತೆಗೆದಳು+ಎ, ಮುಗಿದಳು+ಎ. ಬೆಳಗ್ಯಾಳೆ=ಬೆಳಗಿದಳು ; ತೊಳೆದಳು. ಒರಸ್ಯಾಳೆ=ಒರಸಿದಳು.

೯ ಕೊಡವ್ಹಾಸಿ=ಕೊಡವಿ ಹಾಸಿ. ರಚಿಸಿಟ್ಟು : 'ರಚಿಸಿಟ್ಟು' ಎಂದು ನುಡಿಯುತ್ತಾರೆ ದಾಯ : ಆರು ಕಾಯಿಗಳನ್ನಿಟ್ಟುಕೊಂಡು ಕವಡೆಗಳಿಂದ ಆಡುವ ಒಂದು ಆಟ.

೧೧ ಹೀನಾಯ=ಮಾನಕ್ಕೆ ಕಡಮೆ ; ಅವಮಾನ.

೧೨ ಕೇಳ್ಹೊತ್ತಿಗೆ=ಕೇಳುವ ಹೊತ್ತಿಗೆ ; ಕೇಳಿದ್ದರಿಂದ. ಸ್ವಾಮಿಯಾನೆ ನಂಜಯ್ಯ : ಸ್ವಾಮಿ ನಂಜಯ್ಯ. 'ನೆ' ಅರ್ಥವಿಲ್ಲದ ಹೆಚ್ಚಕ್ಷರ.

೧೩ ನಮ್ಮೊರಕೆ : 'ನಮ್ಮರಕೆ' ಎಂದು ಹಾಡುತ್ತಾರೆ. ಅದು ಅರ್ಥವಾಗುವುದಿಲ್ಲ. 'ಒ' ಕಾರ ಅವರ ಬಾಯಲ್ಲಿ 'ಅ' ಕಾರವಾಗುವುದು ಸಾಮಾನ್ಯ (ಉದಾ : ನೋಡನ ಬನ್ನಿ). ಇಲ್ಲಿ, 'ಸ್ವಾಮಿ, ನಮ್ಮ ಮನೆಗೆ ದಯಮಾಡಿ ಬಾ' ಎಂದು ಅಭಿಪ್ರಾಯ. ಒರಕೆ, ಒರೆಗೆ' ಎಂದರೆ ಅರ್ಥವಾಗುತ್ತದೆ. ಒರೆ=ಸ್ಥಳ ಈ ವಾಸಸ್ಥಳ [ಉದಾ : ಕತ್ತಿಯ ಒರೆ(=ಇಡುವ ಸ್ಥಳ.) (ತಮಿಳಿನಲ್ಲಿ) ಉರೈ=ವಾಸಸ್ಥಳ]

೧೬ ಗಿಲಿಗಿಲಿಮಂಚ : ಗೆಜ್ಜೆ ಮಣಿಗಳಿಂದ ಅಲಂಕರಿಸಿರುವ ಅಲುಗಿದರೆ ಮೆಲುದನಿ ಕೊಡುವ ಸೊಗಸಾದ ಮಂಚ ತಟ್ಟೇಲೀಳ್ಯಾವ=ತಟ್ಟೆಯಲ್ಲಿ ವೀಳೆಯವನ್ನು. ತಲವಂಗ : ಸರಸ (?)

೧೭ ದೇಪೀರು=ದೇವಿಯರು ; ಅಮ್ಮನವರು. ಶಕುನವ ಕೇಳ್ಯಾರು : ಹಲ್ಲಿ ನುಡಿವದ್ದನ್ನು ಕೇಳಿರಬಹುದು.

೧೮ ಬಾಗಿಲಲ್ಲಿರುವ ಬಸವ, ಉಗ್ರಾಣದಲ್ಲಿರುವ ವೀರಭದ್ರ (ಈರಯ್ಯ), ಮಲ್ಲನ ಮೂಲೆಯ ಜಲ್ಲಿಗ— ಇವರೇ ಹಿಂದಿನ ಪದ್ಯದಲ್ಲಿ ಸೂಚಿಸಿರುವ 'ಮೂರು ಜನ ಮಕ್ಕಳು' ಮಲ್ಲನ ಮೂಲೆಯೆಂಬುದು ನಂಜನಗೂಡಿಗೆ 'ಒಂದು ಮೈಲಿ ದೂರದಲ್ಲಿ ಕಪಿನಿಯ ಒಂದು ತಿರುವಿನಲ್ಲಿರುವ ಸ್ಥಳ. ಜಲ್ಲಿಗ : ಅಲ್ಲಿರುವ ಶಿವನ ಪರಿವಾರದ ಒಬ್ಬ ದೇವರಾಗಿರಬೇಕು.

೧೯ ಮುಟ್ಟಿತೆ=ಕೇಳಿಸಿತು. ಬೆದರಾನೆ=ಬೆದರಿದನು. ಏಸಿತ್ತಿರಿ= ಏನು ಇತ್ತು ? ಸಂಗತಿಯೇನು ? ಇದು ಚಾಮುಂಡಿಯ ಪ್ರಶ್ನೆ. ಮಠದಾಗೆ=ಮಠದಲ್ಲಿ. ನಂಜನಗೂಡಿನ ಗುಡಿಯಲ್ಲಿ. ಶಿವ ಜಂಗಮನೆಂದೂ ಅವನು ನೆಲಸಿರುವ ಗುಡಿ ಜಂಗಮನ ಮಠವೆಂದೂ ಈ ಹಾಡುಕಟ್ಟಿದವರ ಭಾವನೆ.

೨೦ ಶಿವ ನಿಜವಾದ ಕಾರಣವನ್ನು ಹೇಳುವುದಿಲ್ಲ. ಗಂಟೆ ನುಡಿದವು= ಗಂಟೆಗಳು ಧ್ವನಿ ಮಾಡಿದವು. ತಿಂಗ್ಳಾರ=ಒಂದು ತಿಂಗಳಾದರೂ. ನಮುಕೂಟೆ= ನಮ್ಮ ಕೂಡ, ನಮ್ಮ ಸಂಗಡ

೨೧ ಸಣ್ಣಕ್ಕಿಯಂಥ ಸುಳಹಲ್ಲಿ : ಸಣ್ಣಕ್ಕಿಯ ಹಾಗೆ ಸಣ್ಣವೂ ಶುಭ್ರವೂ ಆಗಿರುವ ಹಲ್ಲುಳ್ಳವಳು (ಸುಳಹಲ್ಲಿ : ಉಜ್ಜಿ ತೊಳೆದು ಶುಭ್ರ ಮಾಡಿದ ಹಲ್ಲುಳ್ಳವಳು. 'ಸುಲಿಪಲ್' ಎಂಬ ಕಾವ್ಯ ಪ್ರಯೋಗದೊಡನೆ (ಹೋಲಿಸಿ) ತಾವರೆ ಮೈನೋಳೆ ; ಸಣ್ಣಕ್ಕಿಯಂಥ ಸುಳಹಲ್ಲಿ—ಮುದ್ದಾದ ಸಂಬೋಧನೆಗಳು !

೨೨ ಕಂಚಿನ ಗಾಲಿ=ಕಂಚಿನಿಂದ ಮಾಡಿದ ತೇರ ಗಾಲಿ. (ಈಗ ನಂಜನಗೂಡು ತೇರಿಗೆ ಕಂಚಿನ ಗಾಲಿಯಿಲ್ಲ). ಕಸವ ಹೊಡ=ಕಸವನ್ನು ಗುಡಿಸು. ಹೊರಸ್ಯಾಳ=ಹೊರಿಸಿಯಾಳು ; ಹೊರಿಸದೆ ಬಿಡುವುದಿಲ್ಲ. ಒಗಸ್ಯಾಲು : ಒಗೆ+ ಇಸು 'ಒಗಸು' ಎಂದೇ ನುಡಿಯುತ್ತಾರೆ ದಯವಾಗೊ : ನನ್ನ ಮೇಲೆ ಅನುಗ್ರಹ ಮಾಡು. ದಯಮಾಡಿ ನನ್ನನ್ನು ಬರುವಂತೆ ಬಲವಂತ ಮಾಡಬೇಡ

೨೩ ಬಸವನೇರಿ=ಬಸವನ+ಏರಿ ; ಬಸವನ ಮೇಲೆ ಹತ್ತಿಕೊಂಡು. ಮೇಲೆ=ಮೈಮೇಲೆ. ಬಸುಮ=ಭಸ್ಮ ; ಬೂದಿ ; ವಿಭೂತಿ ಸಸಿಮಾವಿನೊಳಗೆ= ಎಳೆಯ ಮಾವಿನ ಮರದ ತೋಪಿನಲ್ಲಿ. ಬರುವ್ರೋರು=ಬರುವರು, ಬರುತ್ತಾರೆ. ದುಸುಮಾನರು=(ದುಷ್ಮನ್+ರು) ದುಷ್ಟಮನುಷ್ಯರು, ಶತ್ರುಗಳು. ಅರುಗಾಗಿ= ದಾಂಬಿಟ್ಟು ಸರಿಯಿರಿ. ಇದು ಶಿವನ ಹರಿಕಾರದ ಎಚ್ಚರಿಕೆಯ ನುಡಿ.

## ಟಿಪ್ಪಣಿ

೨೫ ಸವಣಿಲ್ಲ=ಹವಣಿಲ್ಲ; ತೆರಪಿಲ್ಲ. **'ಹೋಗಿರಿ ಹರಿಯೊ ಜಲಧಿಗೆ':** 'ಗಂಧದ ನೆಂಗ್ಯೋಳೆ' ಎಂಬ ಪದದ ಟಿಪ್ಪಣಿಯನ್ನು ನೋಡಿ.

೨೬ ಕಂತೆ=ಕಂಥೆ; ಹಲವು ಪದರ ಬಟ್ಟೆ ಸೇರಿಸಿ ಹೊಲಿದ ಬಟ್ಟೆ; ದಟ್ಟಿ. ವನದೇಶ=ವನ ಪ್ರದೇಶಕ್ಕೆ, ಕಾಡಿಗೆ. ನಾಗಬೆತ್ತ: ಒಂದು ಜಾತಿಯ ಬೆತ್ತ; 'ಹಾವೆಂಬ ಬೆತ್ತ' ಎಂದೂ ಹೇಳಬಹುದು.

೨೭ ದೇವಿ ಶಿವನನ್ನು ಪರೀಕ್ಷಿಸಲಪೇಕ್ಷಿಸಿದ ಕೆಲವು ರೀತಿಗಳು: ೧ ಕಂದನನ್ನು ಕೈಯಲ್ಲಿಟ್ಟುಕೊಂಡು ಪ್ರಮಾಣ ಮಾಡುವುದು; ೨ ಬೊಗಸೆ (=ಬಗಸೆ) ಯಲ್ಲಿ ಕೆಂಡ ಹಿಡಿದುಕೊಳ್ಳುವುದು (ಆಡಿದ್ದು ಸತ್ಯವಾದರೆ ಸುಡುವುದಿಲ್ಲವೆಂದು ಭಾವನೆ); ೩ ನೀರಿನಲ್ಲಿ ನಿಂತು ಪ್ರಮಾಣಮಾಡುವುದು. ಕೆಂಡದ ಪರೀಕ್ಷೆಯೊಂದು ಹೊರತು ಉಳಿದೆರಡು ಈಗಲೂ ಬಳಕೆಯಲ್ಲಿವೆ.

೨೯ ಗಂಗೇದಿಡದಾಗಿಲ್ಲ...... : (ದಿಡ=ದಡ) ಹೆಂಡತಿ ಮುನಿಸಿಕೊಂಡ ಮೇಲೆ ನಂಜಪ್ಪ ಮನೆಯಲ್ಲಿರಲಾರದೆ ದೇಶಾಂತರ ಹೋದನೆಂದು ಸೂಚನೆ. ನಂಜಪ್ನ=ನಂಜಪ್ಪನ.

೩೦ ಮಂಡೆ=ತಲೆ. ಈಡಾಡು=ಚೆಲ್ಲಾಡು, ಎರಚಾಡು. ಗಂಡುಳ್ಳ =ಪರಾಕ್ರಮವುಳ್ಳ.

೩೧ ಉಂಡೇ=ಉಂಡೆಯನ್ನು. ದೇವಿಯರಿಗೆ ತಿಂಗಳ ಮಗನಾದರೆ ಚಾಮುಂಡಿಗೆ ವರ್ಷದ ಮಗ.

## ಗೌರಮ್ಮನ ಮದುವೆ (೧)

ಇದು ನಮ್ಮ ಒಕ್ಕಲಿಗರು ಹೇಳುವ ಗಿರಿಜಾಕಲ್ಯಾಣ ಗಿರಿಜಾ ಕಲ್ಯಾಣ ಬಹು ದೊಡ್ಡ ಕಥೆ ದಿನವೆಲ್ಲ ಹೇಳಿದರೂ ಮುಗಿಯುವುದಿಲ್ಲ. ಅದರಿಂದ ಸ್ವಲ್ಪ ಭಾಗವನ್ನು ಆಯ್ದು ಇಲ್ಲಿ ಕೊಟ್ಟಿದೆ.

೧ ಶಿವ ಗೌರಿಯನ್ನು ತನಗೆ ಮದುವೆಮಾಡಿಕೊಡಬೇಕೆಂದು ಕೇಳಿದಾಗ ಅವಳ ತಾಯಿತಂದೆಗಳು ಈ ಮಾತು ಆಡುತ್ತಾರೆ ನಡುವ್ರೋರು=ನೆಡುವವರು 'ನಡು' ಎಂಬ ಗ್ರಾಂಥಿಕರೂಪವೇ ಕೇಳಬರುತ್ತದೆ ಅತ್ತಿಲ್ಲದ=ಅತ್ತೆಯಿಲ್ಲದ (ಇಲ್ಲಿ ಲೋಪಸಂಧಿ ಮಾಡಿದ್ದಾರೆ) 'ಗೌರಿ' ಎಂಬ ಮಾತನ್ನು 'ಗವುರಿ' ಎಂಬಂತೆ ಉಚ್ಚರಿಸುವುದೇ ಹೆಚ್ಚು. ಒಪ್ಪ=ಕೆಲಸದ ಅಣಿ; ಅಚ್ಚುಕಟ್ಟು ಇನ್ನು ಯಾರು ಕಲಿಸುವವರು?

೨ ಇದು ಶಿವನ ಉತ್ತರ. ನಾನೇಯ=ನಾನೇ (ಇನ್ನೂ ಒತ್ತಿ ಹೇಳುವುದಕ್ಕಾಗಿ 'ಅ' ಎಂದು ಹೊಸ ಪ್ರತ್ಯಯ ಸೇರಿಸಿ ಈ ರೂಪ ಮಾಡಿದ್ದಾರೆ. ನಾನೇ+

ಅ=ನಾನೇಯ 'ನಾನೇವೇಯೆ' ಎಂದು ಕೆಲವರು ಮಾತಿನಲ್ಲಿ ಬಳಸುವುದನ್ನು ಹೋಲಿಸಬಹುದು.)

೨ ಮಾವಿಲ್ಲದ=ಮಾವ+ಇಲ್ಲದ; ಮಾವನಿಲ್ಲದ. ಆಯಾ=ಆಯುವನ್ನು; ಅಚ್ಚುಕಟ್ಟನ್ನು.

೩ ಚಿಕ್ಕಳು=ಚಿಕ್ಕವಳು. ಇದು ಇನ್ನೊಂದು ಕಾರಣ, ಕೊಡುವುದಿಲ್ಲವೆನ್ನುವುದಕ್ಕೆ. ಪಟ್ಟೆ=ರೇಷ್ಮೆ ಬಟ್ಟೆ. ಗೌರೀ=ಗೌರಿಯನ್ನು. ಕೊಡಬೈದು=ಕೊಡಬಹುದು.

೬ ಬಾಲ್ಯಾದರೆ = ಬಾಲೆಯಾದರೆ. ನಮ್ಮನೆಗೆ = ನಮ್ಮ ಮನೆಗೆ. ನಮ್+ಮನೆ. (ಇಂಥ ಪ್ರಯೋಗ ಬಳಕೆ ಮಾತಿನಲ್ಲಿ ಬಹಳ. ಗ್ರಂಥಸ್ಥ ಭಾಷೆಯಲ್ಲಿ ವ್ಯಾಕರಣಕಾರರು ಒಪ್ಪುವುದಿಲ್ಲ. ತಮಿಳಿನಲ್ಲಿ ಗ್ರಂಥಗಳಲ್ಲಿಯೂ ಪ್ರಯೋಗಿಸುತ್ತಾರೆ).

೭ ಹರಿವಾಣ=ತಟ್ಟೆ. ಬೆಳಗೋದ=ಬೆಳಗುವುದನ್ನು.

೯ ಮೇಲೋಕದ=ಮೇಲಿನ ಲೋಕದ. ಇಪ್ಪತ್ತೆ ಜಡೆಯ=ಇಪ್ಪತ್ತು ಜಡೆಯುಳ್ಳ.

೧೦ ಗೌರಿಯ ಮನಸ್ಸನ್ನು ತಿರುಗಿಸಲು ತಂದೆ ತಾಯಿಗಳು ಅವಳಿಗೆ ಹೀಗೆ ಹೇಳುತ್ತಾರೆ. ಉಣ್ಣೋರು=ಉಣ್ಣುವವರು; ಊಟಮಾಡುವವರು. ಒರಗೋರು=ಮಲಗುವವರು. ತ್ಯಾಗದೆಲೆ=ತೇಗದ ಎಲೆ. 'ವೈರಾಗ್ಯವೆಂಬ ಎಲೆ' ಎಂದೂ ಧ್ವನಿಯಿರಬಹುದು. ಉಣ್ಣೋ=ಉಣ್ಣುವ. ಸಿರಿಗೌರಿ=ಶ್ರೀ ಗೌರಿ. ಮನಸಾದಾ=ಮನಸ್ಸಿಟ್ಟೆಯಾ.

೧೧ ಮೇಲಿನ ಆಕ್ಷೇಪಣೆಗೆ ಗೌರಿಯ ಉತ್ತರ. ಹಾದ್ಯವ್ರ=ಹಾದಿ ಅವರ. ಬೀದ್ಯವ್ರ=ಬೀದಿ ಅವರ. ಪಡಸಾಲೆ=ಪಡುವಶಾಲೆ. ಕೂರಲು=ಮಲಗಲು ಒದಗುವಂತೆ ಚಾವಣಿ ಹಾಕಿರುವ ಮನೆಯ ಮುಂದಿನ ಭಾಗ; 'ವರಾಂಡ' (ಪಡು=ಮಲಗು). ಹ್ಯಾಗಿದ್ದರೂ=ಹೇಗಿದ್ದರೂ.

೧೨ ಅವ್ವಯ್ಯ: ತಾಯಿಯನ್ನು ಪ್ರೀತಿಯಿಂದ ಸಂಬೋಧಿಸುವ ರೀತಿ. ಹನ್ನೆಳ್ಡೆ=ಹನ್ನೆರಡು. ಇಲ್ಲಿ, ಹನ್ನೆರಡು, ಇಪ್ಪತ್ತು ಮೊದಲಾದವು ನಿರ್ದಿಷ್ಟ ಸಂಖ್ಯೆಯನ್ನು ಸೂಚಿಸುವುದಿಲ್ಲ. 'ಹೆಚ್ಚು' ಎಂಬ ಭಾವನೆಯನ್ನು ಮಾತ್ರ ಕೊಡುತ್ತವೆ.

೧೩ ಆಕಾಶೆಂಬೋದು=ಆಕಾಶವೆಂಬುದು. ಕಾಣೋದಿಲ್ಲ=ಕಾಣುವುದಿಲ್ಲ. ಸುಳುವು=ಸುಳಿವು.

೧೬ ಕಾಣತೀತೆ=ಕಾಣುತ್ತದೆ

೧೯ ಇಂಬಕೆ=ಅಗಲಕ್ಕೆ (ಇಂಬು=ಅವಕಾಶ) ಹಾಕ್ಯಾರು=ಹಾಕಿದರು. ಮಾಡ್ಯಾರು=ಮಾಡಿದರು.

## ಟಿಪ್ಪಣಿ

೨೦ ಪುಷ್ಪನ ಗಿರಿ=ಪುಷ್ಪಗಿರಿ. ಹಳೆಯ ಬೀಡಿನ ಹತ್ತಿರ ಇರುವ ಒಂದು ಬೆಟ್ಟ. ['ಪುಷ್ಪನ ಗಿರಿ' ಯೆಂಬ ಮೊದಲಿನ ಹೆಸರೇ ಈಗ 'ಪುಷ್ಪಗಿರಿ' ಎಂದು ಆಗಿರಬಹುದು. 'ದೋರ ಸಮುದ್ರ' ದ್ವಾರ ಸಮುದ್ರವಾಗಿಯೂ, 'ಉತ್ತಮುಂದು' ಉದಕಮಂಡಲವಾಗಿಯೂ ಏರ್ಪಟ್ಟಂತೆ.] ಪರ್ವತ=ಚಂದ್ರದ್ರೋಣ ಪರ್ವತ. ಅಲ್ಲಿ ಶಿವಕ್ಷೇತ್ರಗಳು ಕೆಲವಿವೆ. ಇಪತ್ತೆಳ್ಡೊಳ್ಳೀ ದಡದಿಂದ=ಇಪ್ಪತ್ತೆರಡು ಹೊಳೆಗಳ ದಡದಿಂದ. 'ಅನೇಕ ಕಡೆಗಳಿಂದ' ಎಂದು ಅಭಿಪ್ರಾಯ. ಬಂದಿರುವ್ರೊ=ಬಂದಿರುವ. ಹೀಗೆ 'ಒ' ಕಾರಾಂತವಾಗಿ ನುಡಿಯುವುದು ರೂಢಿ. ಕರತನ್ನಿ=ಕರೆದು ತನ್ನಿ.

೨೧ ತಾನ=ಸ್ನಾನ. ಬಾಲವ್ನ=ಬಾಲವ್ವನ, ಗೌರಿಯ.

೨೩ ಕೊಪ್ಪ=ಒಂದು ಒಡವೆ. ಮರುಗ್ಯಾರೆ=ಮರುಗಿದರು. ಮದುಗ=ಸಕ್ಕರೆ ಪಟ್ಟಣದ ಹತ್ತಿರದ ಒಂದು ಊರು. ಇಲ್ಲಿನ ಕೆರೆ ಬಹು ದೊಡ್ಡದು. ಏರೀ ಮ್ಯಾಲೆ=ಏರಿಯ ಮೇಲೆ.

೨೪ ತಂದೀವಿ=ತಂದಿದೀವಿ, ತಂದಿದ್ದೇವೆ. ಬಂದ್ವು=ಬಂದೆವು. ಅಪ್ಗೊಂದು ಮಾತ=ಅಪ್ಪನಿಗೆ ಒಂದು ಮಾತನ್ನು. ತಿಳೀಹೇಳು=ತಿಳಿಯ ಹೇಳು. ಶಿವನ ಮದುವೆಯಲ್ಲೂ ಒಡವೆ ವಸ್ತುಗಳ ವಿಷಯದ ತಿಕ್ಕಾಟ ಅಸಮಾಧಾನ, ಮಧ್ಯಸ್ಥರ ಸಮಾಧಾನ ಎಲ್ಲ ಕಂಡುಬರುತ್ತದೆ.

೨೫ ವಾಲೆ=ಓಲೆ (ಕಿವಿಯ ಒಡವೆ)

೨೬ ಚಳತುಂಬು=ಓಲೆಗೆ ಸೇರಿಸಿ ಇಳಿಯಬಿಡುವ ಒಂದು ಒಡವೆ. ಅವ್ಗೊಂದು=ಅವ್ವಗೆ ಒಂದು.

೨೮ ಯಾತಕು=ಏತಕ್ಕೂ ಮಾತಿಗೆ=ಒಂದು ಕಾರ್ಯಕ್ಕಾಗಿ. ಕರೀ ಬಂದ್ವು=ಕರೆಯ ಬಂದೆವು.

೨೯ ಮರತುಂಬ=ಮೊರದ ತುಂಬ.

೩೧ ಸೂರಿಟ್ಹಂಗೆ=ಸೂರೆಯಿಟ್ಟ ಹಾಗೆ, ಚೆಲ್ಲಾಡಿದ ಹಾಗೆ. ಗೆಣತೇರು=ಗೆಳತಿಯರು. ಸಾಲೀ ಸೆರಗೆಲ್ಲ=ಸೀರೆಯ ಸೆರಗೆಲ್ಲ (ಸಾಲಿ=ಸೇಲೆ, ಶಾಲೆ, ಸೆಲ್ಲೆಯ, ಶಲ್ಯ)

೩೩ ಹರದಿ=ಹೆಂಗಸು ; ಮಡದಿ. (ತಮಿಳು : ಪರತ್ತೈ=ಪರಸ್ತ್ರೀ. ಇಲ್ಲಿ 'ಸ್ತ್ರೀ' ಎಂಬರ್ಥದಲ್ಲಿ ಮಾತ್ರ ಪ್ರಯೋಗ). ಪಟ್ಟೆ=ಪಟ್ಟೆಯ ಸೀರೆ.

೩೬ ಹಾಗೆ ಹೋಗಿ ಹೀಗೆ ಬರಲಾರೆ : ಹೋದ ಮೇಲೆ ಹೆಚ್ಚು ದಿನ ನಿಲ್ಲದೆ ಬೇಗ ಹಿಂದಕ್ಕೆ ಬರಲಾರೆ. ತೆರಳ್ತೀನು=ಹೋಗುತ್ತೇನೆ.

# ಗೌರಮ್ಮನ ಮದುವೆ (೨)

ಪಂಕ್ತಿ

೧ ಹುಟ್ಟಿದಳೆ : ಹುಟ್ಟಿದಳು. ಅರ್ಥವಿಲ್ಲದೆ ' ಎ ' ಸೇರಿರುವ ಕಡೆಯೆಲ್ಲ ಹೀಗೆ ಬರೆದಿಲ್ಲ. ಸುಲಭವಾಗಿಯೇ ಗೊತ್ತಾಗುವುದೆಂದು ನಂಬಿದೆ.

೨ ಅಷ್ಟ್ಯಾಗಿ ಇಷ್ಟ್ಯಾಗಿ : ಸ್ವಲ್ಪ ಸ್ವಲ್ಪವಾಗಿ ಬೆಳೆದು. ದೊಡ್ಡೋಳು= ದೊಡ್ಡವಳು.

೪ ಗೌರೀ=ಗೌರಿಯು.

೬ ಬ್ರಾಂಬರಿಗೆ=ಬ್ರಾಹ್ಮಣರಿಗೆ.

೭ ಇಲ್ಲಿಂದ ಮುಂದೆ ಒಂದೊಂದಾಗಿ ಹಲವು ಜಾತಿಗಳವರ ವಿಮರ್ಶೆ ಕಂಡು ಬರುತ್ತದೆ. ಸಾವಾಸ=ಸಹವಾಸ.

೧೧ ತಣ್ಣೀರಲ್ಲಿ ಬೀಳಲಾರೆ : ' ಬೀಳಲಾರೆ ' ಎಂಬ ಮಾತಿನಲ್ಲಿ ತಣ್ಣೀರು ಸ್ನಾನ ಎಷ್ಟು ಕಷ್ಟವೆಂಬುದು ಸೂಚಿತವಾಗುತ್ತದೆ.

೨೨ ಒಕ್ಕಲರ=ಒಕ್ಕಲಿಗರ. ಗೆಯ್ಯಲಾರೆ=ಉಳಲಾರೆ ; ಕೃಷಿಮಾಡಲಾರೆ.

೨೩ ಶತ್ತ=ಸೆತ್ತ.

೨೭ ಬ್ಯಾಡರಿಗೆ=ಬೇಡರಿಗೆ.

೨೮ ಬಿಲ್ಲಂಬು=ಬಿಲ್ಲು+ಅಂಬು ; ಬಿಲ್ಲು ಬಾಣ.

೩೨ ಕುರಿಬಣ್ಣ=ಕುರಿಯ ತುಪ್ಪಟದಂಥ ಒರಟು ಬಟ್ಟೆ (?)

೩೩ ಕಂಬ್ಳಿ=ಕಂಬಳಿ.

೩೫ ಕೋಮಟಿಗರಿಗೆ=ವ್ಯಾಪಾರಿಗಳಿಗೆ, ವೈಶ್ಯರಿಗೆ.

೩೬ ಯಾಪಾರ=ವ್ಯಾಪಾರ, ಜೂಜಿನ ಯಾಪಾರ.

೩೮ ಕುಟ್ಟನಾರೆ=ಕುಟ್ಟಲಾರೆ. ' ನಾ ' ಎಂದು ನುಡಿಯುತ್ತಾರೆ.

೩೯ ಕಾಸಿಗೆ ಕಾಸಿಗೆ ತಕ್ಕಡಿಯನ್ನು........

೪೩ ಹುಳಿಯುಂಬ್ಳಿ=ಹುಳಿಯಾದ ಅಂಬಲಿ.

೪೬ ಹದಿನೇಳು ಹತ್ತು ಜಾತಿ : ' ಎಲ್ಲ ಜಾತಿಗಳನ್ನೂ ' ಎಂದು ಅಭಿಪ್ರಾಯ, ' ಹದಿನೆಂಟು ಜಾತಿ ' ಎಂದು ರೂಢಿಯಲ್ಲಿ ಮಾತಾಡುವುದುಂಟು. ೧೮, ಅಥವಾ ೧೭+೧೦ ಜಾತಿಗಳ ವಿವರ ಸರಿಯಾಗಿ ಗೊತ್ತಿಲ್ಲ.

# ಟಿಪ್ಪಣಿ

೪೭ ಕುರಿಯುಮ್ಮ=ನೀನೆ ಮನಸ್ಸಿನಲ್ಲಿ ಭಾವಿಸಿಕೊ, ಇಂಥವರೆಂದು ನಿರ್ಧರಿಸು. ಕುರುತೀಯೊ=ಕುರಿಯುತ್ತಿಯೊ.

೪೮ ಸಿದ್ಧ ಪಟ್ಟಣತ್ತಾವ: ಸಿದ್ಧಪಟ್ಟಣದ ಹತ್ತಿರ. ಶಿವಗಂಗೆಯ ಸಮೀಪದಲ್ಲಿ ಈ ಹೆಸರಿನ ಊರಿರಬಹುದು. (ತಾವ, ತಾವು, ಠಾವು, ಸ್ಥಾನ.)

೫೧ ಕೊಡುಸಯ್ಯ=ಕೊಡಿಸಯ್ಯ.

೫೩ ತಣಿಗಿಲ್ಲ=ತಣಿಗೆಯಿಲ್ಲ ; ತಣಿಗೆ=ತಟ್ಟಿ. ಕೊಪ್ಪರಿಕೆ=ಬಾಯಗಲದ ಒಂದು ಬಗೆಯ ಪಾತ್ರೆ ; ಚಟ್ಟಿ.

೫೪ ಏರೋಕೆ ಕುದುರಿಲ್ಲ=ಏರುವುದಕ್ಕೆ ಕುದುರೆಯಿಲ್ಲ (ಕುದುರೆ+ಇಲ).

೫೫ ಒಡವೆ+ಇಲ್ಲ.

೫೮ ಎಲ್ಲಾದರ್ಹೋಗೆ=ಎಲ್ಲಾದರೂ ಹೋಗೆ.

೫೯ ತಂದೆಯ ಮಾತು ಕೇಳದೆ ಹೋದದ್ದಕ್ಕೆ ಇದು ಶಿಕ್ಷೆಯೆಂದು ಕಾಣುತ್ತದೆ.

೬೧ ಕುರಿತಳು=ನೆನೆದಳು ; ಧ್ಯಾನಿಸಿದಳು.

೬೮ ಭದ್ರಾಕ್ಷಿಮರ (?)

೭೨ ನಿಂಬ್ಯಣ್ಣ ಮಡಗಿ=ನಿಂಬೆಯ ಹಣ್ಣನ್ನು ಇಟ್ಟು.

೭೩ ಶಿವ ತನ್ನನ್ನು ಒಲಿಯಲೆಂದು ಗೌರಿ ಇಷ್ಟು ಕಠಿನ ತಪಸ್ಸು ಮಾಡಿದಳು.

೭೬ ಗೌರಿಯನ್ನು ಪರೀಕ್ಷಿಸುವುದಕ್ಕಾಗಿ ಶಿವ ಮುದಿ ಜಂಗಮನಾಗಿ ಬರುತ್ತಾನೆ.

೭೯ ಕ್ಯಾರೆಹಾವು=ಕೇರೆಹಾವು. ಇದು ನೀರಿನಲ್ಲಿ ವಾಸಮಾಡುವುದು ವಾಡಿಕೆ.

೮೦ ಹೆಬ್ಬೆಹಾವು (?). ಪಾಗು=ರುಮಾಲು

೮೨ ಗೌರಿದ್ದ=ಗೌರಿ+ಇದ್ದ ; ಗೌರಿಯಿದ್ದ (ಎಂದಾಗಬೇಕು)

೮೩ ಗೌರಿ ಜಂಗಮನಿಗೆ ಮುತ್ತು ತಂದು ಭಿಕ್ಷ ಹಾಕಿದಳು.

೮೪ ಮುಕ್ಕು ಜ್ವಾಳ=ಮುಕ್ಕಾದ, ಒಡೆದು ಚೂರಾದ, ಜೋಳ.

೮೫ ರವರತ್ನ=ನವರತ್ನ. 'ರ' ಕಾರವನ್ನೆ ಉಚ್ಚರಿಸುವುದು ಹಾಡುವವರ ವಾಡಿಕೆ.

೮೭ ಎಂದೀಯ=ಎನ್ನುತ್ತೀಯಲ್ಲ.

೮೮ ವಡವ್ಯಲ್ಲ=ಒಡವೆಯೆಲ್ಲ.

೯೧ ಚೆಂಬ್ನಲ್ಲಿ=ಚೆಂಬಿನಲ್ಲಿ.

೯೪ ನಡಿಯಲೆ=ನಡೆಯಲಿ. 'ನಡಿ' ಎನ್ನುವುದು ರೂಢಿ. ಹೋಗಾನ= ಹೋಗೋಣ.

೯೫ 'ಆಕಾಶವೇನುಂಟೋ (ಅಷ್ಟಗಲಕ್ಕೂ) ಚಪ್ಪರವ ಹಾಕಿ'; ಆಕಾಶದಗಲಕ್ಕೂ, ಬಹು ವಿಸ್ತಾರವಾದ ಎಂದು ಭಾವ.

೯೬ ಹಸೆಗಲ್ಲು=ಹಸೆವಣೆ. ಶಿವ ಪಾರ್ವತಿಯರ ಮದುವೆಗೆ ಆಕಾಶವೇ ಚಪ್ಪರ; ಭೂಮಿಯೇ ಹಸೆವಣೆ!

೯೮ ಬಾರ್‍ಂಬರಿಗೂವೆ=ಬ್ರಾಹ್ಮಣರನ್ನೂ. ಇಬ್ಬರಿಗೂ ಕರಸಿ: ದ್ವಿತೀಯೆಗೆ ಷಷ್ಠಿ.

೯೯ ಲಗ್ನವಾದಿತು=ಲಗ್ನವಾಯಿತು.

೧೦೦ ಸ್ವಾಮಿಗಾ ತಾಯಿತಂದೆ=ಸ್ವಾಮಿಯ ತಾಯಿತಂದೆ. 'ಅಭವ' ಎಂದು ಹೆಸರಾದ ಶಿವನಿಗೂ ತಾಯಿತಂದೆಗಳು ಬಂದರು! ಭಕ್ತರ ನಂಬಿಕೆಯಂತೆ ತಾನೆ ದೇವರ ವ್ಯವಹಾರ!

## ಸೋಬಾನೆ ಮತ್ತು ಒಸಗೆಯ ಪದಗಳು

ಮದುವೆಯ ಕಾಲದಲ್ಲಿ ಈ ಪದಗಳನ್ನು ಹಾಡುತ್ತಾರೆ. ಹಾಡುವ ಹೆಂಗಸರೆಲ್ಲ ಎರಡು ಗುಂಪಾಗುತ್ತಾರೆ. ಒಂದು ಗುಂಪಿನವರು ಎರಡು ಚರಣ (ಎರಡನೆಯ ಸಾಲಿನಲ್ಲಿ ಗೀಟು ಹಾಕಿರುವವರೆಗೆ) ಹೇಳಿ ನಿಲ್ಲಿಸುತ್ತಾರೆ. ಕೂಡಲೆ ಎರಡನೆಯ ಗುಂಪಿನವರು ಎರಡನೆಯ ಸಾಲನ್ನು ಮಾತ್ರ (ಮೊದಲ ಗುಂಪಿನವರು ಹೇಳಿ ಬಿಟ್ಟಷ್ಟನ್ನು ಮಾತ್ರ) ಪಲ್ಲವಿಯಂತೆ ಹಾಡುತ್ತಾರೆ. ಬಳಿಕ ಮೊದಲ ಗುಂಪಿನವರು ಎರಡನೆಯ ಚರಣದಿಂದ ಆರಂಭವಮಾಡಿ ಮೊದಲಿನಂತೆಯೆ ಎರಡೆರಡು ಚರಣವಾಗಿ ಮುಂದುವರಿಸುತ್ತಾರೆ. ಹಲವು ದನಿ ಒಟ್ಟುಗೂಡಿ ಹಾಡುವಾಗ ಒಂದು ಅಪೂರ್ವ ಆನಂದಲಹರಿ ಹರಿಯುತ್ತದೆ.

ಸೋಬನ, ಸೋಬಾನ, ಸೋಬಾನೆ=ಶೋಭನ; ಶುಭಕಾರ್ಯ. ಒಸಗೆ= ಸಂತೋಷ, ಶುಭ.

೧ ತೆಂಕಲ=ದಕ್ಷಿಣದ (ತೆಂಕ=ದಕ್ಷಿಣ) ಕೆಂಚೇರ=ಕೆಂಚಿಯರನ್ನು (ಕೆಂಚಿ=ಕೆಂಪನೆಯ ಹೆಣ್ಣು). ಅಂಚು. ಗುಪ್ಪಟ್ಟೆ ಸೆರಗು=ಅಂಚಿನಲ್ಲಿ ಗುಪ್ಪಟ್ಟೆ ಕಾಯಿನ ಚಿತ್ರವಿರುವ ಸೆರಗು

೨ ಬಡಗಲ=ಉತ್ತರದ (ಬಡಗು=ಉತ್ತರ) ಬೆಡಗೀರ=ಬೆಡಗಿಯರನ್ನು.

೩ ಅರಗು=ಕೊನೆಯ ಭಾಗ; ಅಂಚು.

೪ ಮಲ್ಲಿ=ಮನೆಯಲ್ಲಿ. ಮುಸುರಿಲ್ಲ=ಮುಸುರೆಯಿಲ್ಲ. ಈ ಮನೇ.... ಚೆಲುವೇರೋ=ಚೊಕ್ಕಟವೇ ಚಲುವೆಂದು ಇದರ ಭಾವ.

## ಟಿಪ್ಪಣಿ

೬ ಕಿರುದಂಗೇರು=ಕಿರಿಯ ತಂಗಿಯರು. ತಕ್ಕೊಂಡು=ತೆಗೆದು ಕೊಂಡು. ನೆಲಾ ಬಳಿ=ನೆಲವನ್ನು ಸಾರಿಸು. ಗೀರ ಬರದರೆ=ರಂಗವಲ್ಲಿಯ ಎಳೆ ಬರೆದರು.

೭ ಉಪ್ಪರಿಗೊಳಗೆ=ಉಪ್ಪರಿಗೆಯೊಳಗೆ.

೮ ಚೆಮ್ಮಾಳಿಗೆ=ಅಂದವಾದ ಮಾಳಿಗೆ ('ಶೆಮ್+ಮಾಳಿಗೈ' ಶೆಮ್=ಚೆಲುವು. ತಮಿಳು)

೯ ಚೌಕ=ನಾಲ್ಕು ಮೂಲೆಯ ಚೌಕನಾದ ಹಸೆ. ಸುರಗಿಳಿ=ದೇವ ಲೋಕದ ಗಿಳಿ. ಸುವ್ವರದ=ಸುಸ್ವರದ.

೧೧ ಇತ್ಯಾಕೆ=ಇತ್ತ+ಯಾಕೆ. ಬರೆದವ್ವ=ಬರೆದೆಯವ್ವ. ಸೂಲಿಗ ರಾಯ=ಸೂರ್ಯ. 'ಸೂರಿಯ' 'ಸೂಲಿಗ' ಎಂದಾಗಿದೆ. ಸೂಲಿಗರಾಯ ಎತ್ತ ಮೂಡಿದರೂ ಜಗಕೆಲ್ಲ : ಇದು ಇತ್ಯಾಕೆ ಬರೆದೆಯೆಂಬ ಪ್ರಶ್ನೆಗೆ ಉತ್ತರ. "ಸೂರ್ಯ ಎಲ್ಲಿದ್ದರೂ ಬೆಳಕು ಲೋಕಕ್ಕೆಲ್ಲ ಹರಡುತ್ತದೆ. ಅದರಂತೆ ಹಸೆ ಎಲ್ಲಿ ಬರೆದರೂ ಅದರ ಶುಭ ಫಲ ಬಂದೇ ಬರುತ್ತದೆ." ಎಂದು ಅಭಿಪ್ರಾಯ.

೧೩ ಹಂಡಕ್ಕಿ=ಬಣ್ಣ ಬಣ್ಣಗಳಿರುವ ಅಕ್ಕಿ. ದುಂಡಕ್ಕಿ=ಸ್ವಲ್ಪವೂ ಮುರಿಯದ ಅಕ್ಕಿ. ಬಂದೂರು ನಮ್ಮೂರಿಗೆ ೮-೧೦ ಮೈಲಿ ದೂರದಲ್ಲಿದೆ.

೧೪ ಹಾಲಕ್ಕಿ, ನೀಲಕ್ಕಿ, ನೀಲವರ್ಣದಕ್ಕಿ : ಇವಕ್ಕೇನೇನು ಭೇದವೋ ತಿಳಿಯದು.

೧೫ ಗಣೆಗೆ=ಗಳಿಗೆ (ಧಾನ್ಯ ತುಂಬುವ ಗುಡಾಣದ ಆಕಾರದ ಗೂಡೆ); ಒತ್ತಿ=ಒತ್ತಿನಲ್ಲಿ ; ಹತ್ತಿರ. ಸಟ್ಟಿ=ಸೆಟ್ಟಿ ; ಸಾವುಕಾರ ; ಶ್ರೀಮಂತ (ಶ್ರೇಷ್ಠಿ ಶೆಟ್ಟಿ ; ಸೆಟ್ಟಿ). ತತ್ತಾರೆ=ತಂದು ಕೊಡೆ. ಹಸೆಹುಯ್ಯೆ : ಬಣ್ಣ ಬಣ್ಣದ ಅಕ್ಕಿಯನ್ನು ಮೊದಲೆ ಗುರುತುಮಾಡಿಕೊಂಡಿರುವ ಅಂಕಣಗಳಲ್ಲಿ ತುಂಬಿ ಹಸೆ ಬರೆಯುತ್ತಾರೆ. ಹಾಗೆ ಅಕ್ಕಿಯನ್ನು 'ಹುಯ್ಯು'ವುದರಿಂದ ಹಸೆ ಹುಯ್ಯೆ ಎಂದಿದೆ.

೧೬ ಗೋದ್ವೆ=ಗೋದುವೆ, ಗೋಧಿ (ಗೋಧೂಮ)

೧೮ ಪಾಂಡವರ ಅಂಗಿಯ ಸೆರಗು : ಇದರ ವಿಚಾರ ಗೊತ್ತಿಲ್ಲ.

೧೯ ವಸ್ತರ=ವಸ್ತ್ರ.

೨೦ ಲಕ್ಕವ್ವ=ಲಕ್ಷ್ಮಿ. ಲಕ್ಷ್ಮಿ ತುಳಸಿಯರು ವಿಷ್ಣುವಿನ ರಾಣಿಯರು. ತಿಮ್ಮಪ್ಪ=ತಿರುಪತಿಯ ದೇವರು (ತಿರು+ಮಲೈ+ಅಪ್ಪ) ರಾಣಿ+ಹಸೆಯ.

೨೨ ಚವ್ರುಲವ=ಚೌರಿಯನ್ನು ; ಚಾಮರವನ್ನು.

೨೩ ಅನುವಾಗಿ=ಸರಿಯಾಗಿ ; ಹೊಂದಿಕೆಯಾಗಿ.

೨೪ ಕೊಡಬೈದು=ಕೊಡಬಹುದು.

೨೬ ಅಂದುಳ್ಳೆ=ಅಂದವುಳ್ಳ (' ಅಂದ ಮತ್ತು ಒಳ್ಳೆಯ ' ಎಂಬರ್ಥದಲ್ಲಿ ' ಅಂದೊಳ್ಳೆ ' ಎಂದಿದ್ದರೂ ಇರಬಹುದು). ಚೆಂದುಳ್ಳೆ=ಚೆಂದ+ಉಳ್ಳ+ಎ ಅಪ್ಪಯ್ಯ : ಮದವಣಿಗನನ್ನು ವಿಶ್ವಾಸದಿಂದ ಹೀಗೆ ಕರೆಯುತ್ತಾರೆ ' ಮಗು ' ಎಂದು ಅಭಿಪ್ರಾಯ ಸಾಮಾನ್ಯವಾಗಿ ಮಕ್ಕಳನ್ನು ' ಅಪ್ಪಯ್ಯ ' ಎಂದು ಕರೆಯುವುದು ರೂಢಿ. ಒಲಪಿನ=ಒನಪಿನ ; ಸೊಗಸಿನ.

೨೭ ಆಯುಳ್ಳೆ=ಆಯುಸ್ಸುಳ್ಳ ; ಚಿರಂಜೀವಿಗಳಾದ ಛಾಯುಳ್ಳೆ=ಕಳೆಯುಳ್ಳ ಆಯ ನೋಡಾರೆ : ಆಯವನ್ನು (ಸೊಗಸನ್ನು, ಅಚ್ಚುಕಟ್ಟನ್ನು) ನೋಡಿದರು.

೨೮, ೨೯ ಇದ್ರೊ=ಇದ್ದಳು ; ಇದ್ದನು. ಹಸೆಯ ಮೇಲೆ ಕೂತಿದ್ದ ಮಗ ಅವ್ವನಿಗೂ ಅಪ್ಪನಿಗೂ ದೇವರ ಹಾಗೆ ಕಾಣುತ್ತಾನೆ.

೩೦ ದೆಸೆಮೂರತಿ=ದಿಕ್ಪಾಲಕ ; ಕುಲದೇವತೆ ( ? ). ಸಿಸುವೆ=ಶಿಶುವೆ.

೩೧ ಮನಮೂರತಿ=ಮನಸ್ಸಿನಲ್ಲಿ ಭಜಿಸುವ ದೇವರು.

೩೨ ಗಂಧನಿಡುವ್ರೋಕೆ=ಗಂಧವನ್ನಿಡುವುದಕ್ಕೆ.

೩೪ ಸರಪ=ಸರ್ಪ ' ಪಾಗಿನ ಮೇಲಿನ ಸರಪ ' : ಮದವಣಿಗ ಶಿವನೆಂಬ ಅಭಿಪ್ರಾಯ. ಸಾದವನಿಟ್ಟು : ಇಲ್ಲಿ 'ಸಾದು' ಎಂಬುದನ್ನು ' ಸಾದ ' ಎಂದು ಅಕಾರಾಂತ ಪ್ರಕೃತಿಯಾಗಿಟ್ಟುಕೊಂಡಿದೆ.

೩೫ ಮಂಡೆ=ತಲೆ.

೩೮ ಹೊಳ್ಡು=ಹೊರಡು. ಪಲ್ಲೈಸು=ಪಲ್ಲವಿಸು, ಚಿಗುರು. ಗೌಳಿ=ಶಕುನದ ಹಲ್ಲಿ. ಮದಲಿಂಗ=ಮದವಣಿಗ.

೪೨ ಗೆದಿಯೋಕೆ=ಗೆಲ್ಲುವುದಕ್ಕೆ. ' ಗೆಲ್ ' ಮೂಲರೂಪ. ಗೆದ್ದನು, ಗೆದ್ದು ಮೊದಲಾದ ಭೂತರೂಪಗಳನ್ನು ನೋಡಿ, ಅವಕ್ಕೆ ' ಗೆದಿ ' ಮೂಲರೂಪವಾಗಿರಬೇಕೆಂದು ಭಾವಿಸಿ ''ಗೆದಿ ' ಎಂಬ ಧಾತುವನ್ನು ಕಲ್ಪಿಸಿಕೊಂಡಂತೆ ಕಾಣುತ್ತದೆ (ಉತ್ತರ ಕರ್ಣಾಟಕದಲ್ಲಿ ಇದು ಬಳಕೆ).

೫೨ ಕೆಂಬರುಗಣ್ಣಿನ=ಕೆಂಗಣ್ಣಿನ. ' ತುರುಕರ ಕಾವಲಿಟ್ಟು' : ಈ ಮಾತು ಈ ಪದ್ಯ ಈಚಿನಕಾಲದ್ದೆಂದು ಸೂಚಿಸುತ್ತದೆ.

೫೩ ರಾವುಗಣ್ಣಿನ=ನೋಡಿದರೆ ಹೆದರಿಕೆಯಾಗುವಂಥ ಕೆರಳುಗಣ್ಣುಗಳುಳ್ಳ.

೫೪ ಪುತ್ರಯ್ಯ+ಹಾಲುಂಬೊ=ಮಗ ಹಾಲುಕುಡಿಯುವ. ಒಳಲೆ ಎಂಬುದಕ್ಕೆ ಬದಲಾಗಿ 'ವಳಲೆ' ಎಂದು ವಕಾರವನ್ನು ನುಡಿಯುತ್ತಾರೆ. ಹೇರಿಗೆ=ಬಂಡಿಯ ಮೇಲೆ ಹೇರಿರುವ ಪದಾರ್ಥಗಳ ಜೊತೆಗೆ (ಹೇರು=ಹೇರಿದ್ದು)

೫೭ ಅಂಕದೇರಿ : ' ಅಂಕ ' ಎಂಬ ಊರಿನ ಕೆರೆಯೇರಿಯಿರಬಹುದು. ಅಥವಾ ' ಅಂದವಾದ ' ಎಂಬರ್ಥವಿದ್ದರೂ ಇರಬಹುದು. ಬೇಲೂರ ಸಂಪಿಗೆ :

ಬೇಲೂರ ಸಂಪಿಗೆ ಪ್ರಸಿದ್ಧವಾಗಿತ್ತೆಂದು ಕಾಣುತ್ತದೆ. ಬೇಲೂರಿಗೆ ಹಿಂದೆ 'ಚಂಪಕಕಾನನ' ಎಂದು ಹೆಸರಿತ್ತು (ಕೆಲವು ಸ್ತೋತ್ರಗಳಲ್ಲಿ ಆ ಹೆಸರಿದೆ). ದೇವಸ್ಥಾನದ ಪ್ರಾಕಾರದಲ್ಲಿ ಈಚೀಚಿನವರೆಗೂ ದೊಡ್ಡ ದೊಡ್ಡ ಸಂಪಿಗೆಯ ಮರಗಳಿದ್ದವು.

೫೮ ಆಲದೇರಿ: ಆಲದ ಮರವಿರುವ ಏರಿ (?). ಆಲೂರಿನ ಏರಿಯಿರ ಬಹುದೆ? ಬೆಲ್ಲದ ಗುಡಾರ: ಇದರ ಭಾವವೇನೋ ಗೊತ್ತಿಲ್ಲ.

೫೯ ಬುತ್ರ್ತೆಲ್ಲಿ=ಬುತ್ತಿ+ಎಲ್ಲಿ ; ಬುತ್ತಿಯನ್ನು ಎಲ್ಲಿ. ಸುಕ್ಕರ=ಶುಕ್ರ.

೬೦ ಬೀಡು=ಬಿಟ್ಟ ಬಳಿ ; ತಂಗಿದೆಡೆ.

೬೧ ವರಾದ: ವರಹ ಬೆಲೆಬಾಳುವ. ಮದುವಣಾನ: ಮದುವಣ್ಣನ ; ಮದುವಣಿಗನ.

೬೨ ಅಂದರ ಗಿರಿ: ಇದೊಂದು ಗಿರಿಯ ಹೆಸರೆ? ಅಥವಾ 'ಅಂದದ ಗಿರಿ' ಎಂಬುದು ಬಾಯಿಂದ ಬಾಯಿಗೆ ದಾಟಿ ಈ ರೂಪಕ್ಕೆ ಬಂದಿರಬಹುದೆ? ಮಳಿಗಿಂದ= ಮಳಿಗೆಯಿಂದ ; ಅಂಗಡಿಯಿಂದ.

೬೯ ನಾಗವಳ್ಳಿ=ನಾಗವಲ್ಲಿ, ವೀಳೆಯದೆಲೆಯ ಬಳ್ಳಿ ; (ಇಲ್ಲಿ) ವೀಳೆಯದೆಲೆ.

೭೦ ಬಸುಮಂಗ: ಭಸ್ಮಾಂಗ; ಸಗಣಿ.

೭೧, ೭೨ ಗಮ್ಮನ್ನೋದೆ: ಗಮ್ಮೆನ್ನುವುದು ; ಸುವಾಸನೆ ಬೀರುವಂಥದು. ಕಾತರಂಗಡಿ, ವಲ್ಲಪುರಂಗಡಿ: ಇವು ಸಾಂಬ್ರಾಣಿ ಮಾರುವ ಅಂಗಡಿಯವರ ಹೆಸರೆಂದು ಕಾಣುತ್ತದೆ. ವಲ್ಲಿಕೆ=ಮೆಲ್ಲಗೆ.

೭೩ ಗುರುಸ್ವಾಮಿ=ಮದುವೆ ಮಾಡಿಸುವ ಜಂಗಮ, ಪುರೋಹಿತರು. ತಪ್ಪನೆ=ಬೇಗನೆ. ಸದರ್ಹೋಗಿ=ಸದರು ಹೋಗಿ ; ಎದುರಿಗೆ ಹೋಗಿ. ಇಲ್ಲಿ ಉತ್ತು' ಎಂಬುದರ ಭಾವವೇನು? ಗದಿಗೆ=ಗದ್ದಿಗೆ ; ಪೀಠದ ಜಗುಲಿ.

೭೪ ಅಯ್ತೆ=ಇದೆ.

೭೫ ಎಳೆಕಂಕ್ಣ=ಎಳೆಯ (ದಾರದ) ಕಂಕಣ. 'ಎಲೆಕಂಕ್ಣ=ಎಲೆಯ ಕಂಕಣ' ಎಂದೂ ಹೇಳುತ್ತಾರೆ. ವೀಳೆಯದೆಲೆಯನ್ನು ಸೇರಿಸಿ ಕಂಕಣ ಕಟ್ಟುತ್ತಾರಾದ್ದರಿಂದ ಆ ಪಾಠವೂ ಉಚಿತವಾಗಿದೆ.

## ಗೋದಿಕಲ್ಲು ಶಾಸ್ತ್ರದ ಹಾಡು

೧ ಒಳ್ಳಿಗೆ=ಒರಳಿಗೆ. ಹಟ್ಟಿಯಲ್ಲಿರುವ ಕಲ್ಲಿನ ಒರಳಿಗೆ. ನಾರೇರು= ನಾರಿಯರು. ತೊಳಿಸು=ಬೆಳ್ಳಗಾಗುವಂತೆ ಕುಟ್ಟು (ತೊಳೆ+ಇಸು)

೩ ಒಳಕಲ್ಲು=ಒರಳ ಕಲ್ಲು. ಧಣಿರೆಂಬೊ=ಧಣಿರೆಂದು ಸದ್ದು ಮಾಡುವ.

೫ ಕನ್ನೇರು=ಕನ್ಯೆಯರು.

೭ ಮರ=(ಕೇರುವ) ಮೊರ. ಜರ‍್ಡಿ=ಒಂದರಿ (ಧಾತು : ಒಲಿ, ಒನೆ). ಪಾಡಾರೆ=ಹಾಡಿದರು. 'ಒನಕೆ'ಯನ್ನು 'ಒನಿಕೆ' ಎನ್ನುವುದೇ ಹೆಚ್ಚು ರೂಢಿ.

೧೦ ದ್ಯೂ್ರವಿಗೆ : ಈ ಮಾತು ಮೂಲ ಗುರುತಿಸಲಾರದಷ್ಟು ಕೆಟ್ಟುಹೋಗಿದೆ. 'ತುರುಬಿಗೆ' ಎಂದಿರಬಹುದೇ ? ಒಲಿದಾಡದಂತೆ ಸೆರಗನ್ನು ಸೊಂಟಕ್ಕೆ ಕಟ್ಟಿಕೊಂಡು ಕುಟ್ಟುತ್ತಾರೆ.

## ಲೆತ್ತ ಆಡಿದ್ದು

೧ ಲೆತ್ತ=ಪಗಡೆ (ಹಳೆಯ ರೂಪ : ನೆತ್ತ. ಇದನ್ನು ಈಗಲೂ ಹಳ್ಳಿಗರು ಕೆಲವರು ಉಚ್ಚರಿಸುತ್ತಾರೆ). ಕೂಟಿ=ಕೂಡೆ, ಸಂಗಡ; ಜೊತೆಯಲ್ಲಿ.

೩ ನೆರಿ=ನಿರಿ. ಒದರು : ಒದಿರು ಎಂದು ನುಡಿಯುತ್ತಾರೆ.

೫ ಒದರ್ಯಾರೆ=ಒದರಿಯಾರೆ ? ಒದರಬಾರದು ಎಂದು ಅಭಿಪ್ರಾಯ.

೭ ಸರಿಬಂದರೆ=ನನಗೆ ಅನುಕೂಲವಾಗಿ ಬಂದರೆ. ಇಡಿಗಾಯಿ : ದೇವರೆದುರಿಗೆ ನಿವಾಳಿಸಿ ಕಾಯನ್ನು ನೆಲಕ್ಕೆ ಅಪ್ಪಳಿಸುತ್ತಾರೆ. ಹೀಗೆ ಒಡೆದ ಕಾಯನ್ನು ಪ್ರಸಾದವಾಗಿ ತೆಗೆದುಕೊಳ್ಳುವುದಿಲ್ಲ. ಇದಕ್ಕೆ 'ಇಡಿಗಾಯಿ ಹಾಕುವುದು' ಎನ್ನುತ್ತಾರೆ. ಗ್ಯಾನ=ಜ್ಞಾನ ; ಮನಸ್ಸಿನ ಆಲೋಚನೆ.

೯ ಹಿವಹಿಡಿಯದಿದ್ದರೆ : ಅಭಿಪ್ರಾಯ ಗೊತ್ತಾಗುವುದಿಲ್ಲ.

೧೦ ದಿಡುನ=ದಡವನ್ನು, ಒಂದು ಕೊನೆಯನ್ನು (?)

೧೪ ಭ್ರಾಳ=ಬಹಳ.

### ತೆನೆ ೫—ಸಂಕೀರ್ಣ ಪದಗಳು

## ಹಚ್ಚೆಯ ಪದ

೧ ಚಿತ್ತಾರ=ಚಿತ್ರ. ಗೇದ=ಕೆತ್ತಿದ. ಕಲು=ಕಲ್ಲು. ರಾಮುಣನ=ರಾಮಣ್ಣನ.

೨ ಪತ್ತರ=ಪತ್ರ, ಕಾಗದ. ಒಂಟಿ : ಕಿವಿಯ ಒಂದು ಒಡವೆ. ಗೋವಿನ ಸೆರೆಗಳ ಬಿಡಿಸಯ್ಯ : ಹಿಂದಿನ ಕಾಲದಲ್ಲಿ ಕಲಹ ಪ್ರಾರಂಭಿಸುವಲ್ಲಿ ದನಗಳನ್ನು ಸೆರೆಹಿಡಿಯುವುದು ರೂಢಿಯಾಗಿತ್ತು. ಊರ ಶೂರರು ಯುದ್ಧಮಾಡಿ ಅವನ್ನು ಬಿಡಿಸುತ್ತಿದ್ದರು. ಆ ಯುದ್ಧಗಳಲ್ಲಿ ಮಡಿದವರ ಸ್ಮಾರಕವಾಗಿ ವೀರಗಲ್ಲುಗಳನ್ನು ನೆಡುತ್ತಿದ್ದರು. ಅಂಥ ವೀರಗಲ್ಲುಗಳು ಕನ್ನಡನಾಡಿನ ತುಂಬ ಇವೆ. ನೀರಿಗಪ್ಪಣೆಯ

## ಟಿಪ್ಪಣಿ

ಕೊಡಿಸಯ್ಯಾ : ಕೆರೆಬಾವಿಗಳ ನೀರು ಬಳಸಲು ಗೌಡನ ಅಪ್ಪಣೆ ಬೇಕಾಗಿತ್ತು (ಇದು ಮುಖ್ಯವಾಗಿ ವ್ಯವಸಾಯಕ್ಕೆ ನೀರು ಬಳಸುವಲ್ಲಿ ಅನ್ವಯಿಸುತ್ತಿತ್ತೆಂದು ಕಾಣುತ್ತದೆ). ಈ ಮಾತುಗಳಿಂದ ಗೌಡನ ಘನತೆ ವ್ಯಕ್ತವಾಗುತ್ತದೆ.

೩ ದುರುಗ=ದುರ್ಗ. ಬಯಿದಾಳು=ಬೈದಾಳು. ಕಲಿಕ್ಯಾವು= ಕಲಕಿಯಾವು.

೪ ಮಾಸಾವೆ=ಮಾಸಿದವೆ. ಸೆಣದಾವೆ=ಸೆಳೆದವು, ಎಳೆಯಿತು.

೫ ರುಷಿಗೋಳ=ಋಷಿಗಳ.

೬ ಸಂತೀಗೆ=ಸಂತೆಗೆ. 'ಸಂತಿ' ಎಂದು ಇಕಾರಾಂತವಾಗಿ ಹೇಳುವುದು ಹೆಚ್ಚು ಬಯಕೆಯಿಲ್ಲ. ತಕ್ಕೊಳ್ಳಣ=ತೆಗೆದುಕೊಳ್ಳೋಣ. ಚವಲಿ=ಚವರಿ; ಚೌರಿ ( ಸಂ. ಚಮರಿ)

೭ ಮುಗೆ=ಮೊಗೆ ತುಂಬು

೮ 'ಎಳಗೆಂಪು ನಾದ್ದರೆ' ಎಂದು ನುಡಿಯುತ್ತಾರೆ. ಮೇಲು ನೋಟದ ಅಂದ ಚೆಂದಕ್ಕೆ ಮರುಳಾಗಬಾರದು ಎಂದು ಇದರ ಭಾವ.

೯ ಮಯಮುಳ್ಳು : ಮುಳ್ಳುಮಯ. ಮುಳ್ಳು ತುಂಬಿದೆ, ಎಂದರ್ಥ. ಮೈಯೆಲ್ಲ ಮುಳ್ಳು ಎಂಬರ್ಥಕೊಡುವ ' ಮಯಿ ಮುಳ್ಳು ' ಎಂದಿದ್ದರೂ ಇರಬಹುದು. ಮೆದ್ದು=ತಿಂದು.

## ಬಂಡಿಯ ಪದ

೧ ಬಂಡಾಟ=ಕಷ್ಟ; ಪೇಚಾಟ. ಹಳದsಡೆ=ಹಳ್ಳದ+ಅಡೆ, ಅಂಚಿನಲ್ಲಿ.

೨ ಕಾಕು=ಗಟ್ಟಿಯಾದ ಕೂಗು ; ಅಬ್ಬರ, ಗರ್ಜನೆ.

೩ ಗುಡದ ಮ್ಯಾಗೆ=ಗುಡ್ಡದ ಮೇಲೆ. ಮ್ಯಾಕೆ=ಮೇಲಕ್ಕೆ. ಉಣು= ಉಣ್ಣು. ಬಿಟ್ಟಿ=ಬಿಟ್ಟಿ ಕೆಲಸ

೪ ಸವುಸಾರ=ಸಂಸಾರ. ಕುಡಿದೋಟು=ಕುಡಿದಷ್ಟು.

೬ ಮೀನು ನುಂಗಿತು ಮೊಸಳೆಯು : ಅಸಾಧ್ಯವಾದ್ದು ಸಾಧ್ಯವಾಗಿ ಬಿಟ್ಟಿದೆಯೆಂದು ಆಶ್ಚರ್ಯ ಸೂಚಿಸುವ ಮಾತು. ನುಂಗ್ಯವ್ಳೆ=ನುಂಗಿದ್ದಾಳೆ. ತಾನು ಚೆಲುವೆಯಾಗಿ ಸೊಗಸುಗಾತಿಯಾಗಿದ್ದರೂ ತನ್ನ ಗಂಡನನ್ನು ಆ ಊರಿನ ರಾಣಿ ( ರೂಪವಂತೆ ಸೂಳೆ ? ) ವಶಪಡಿಸಿಕೊಂಡಿದ್ದಾಳೆಂಬುದು ಅಂಥ ಆಶ್ಚರ್ಯದ ಸಂಗತಿ.

೭ ರಾಗೀ ಮಾಡು=ರಾಗಿಯನ್ನು ಕೇರಿ ಕಲ್ಲು ಕಸ ತೆಗೆದು ಶುದ್ಧಿಮಾಡು. ನಿಂತವ್ನೆ=ನಿಂತಿದ್ದಾನೆ. ಬಿಸುಲಾಗೆ=ಬಿಸಿಲಿನಲ್ಲಿ. ಬಿಸುಲು ಎಂದು ಉಕಾರವನ್ನೆ ನುಡಿಯುತ್ತಾರೆ.

## ಮಾರಿಯ ಪದ

೧ ಅರಿಸಿನ ಕಂಬೀ ಸೀರೆ=ಹಳದಿ ಬಣ್ಣದ ಗೀರಂಚಿನ ಸೀರೆ. ಕಣಕಾಲ್ ಗಂದರಿಸಿನ=ಮಾರಿಯನ್ನು ಹೊತ್ತು ಕುಣಿಯುವವರು ಮೊಳಕಾಲವರೆಗೂ ಗೀರು ಗೀರಾಗಿ ಗಂಧವನ್ನೂ ಅರಿಸಿನವನ್ನೂ ಬಳಿದುಕೊಂಡಿರುತ್ತಾರೆ. ಮಲತೋೀನ=ಮಲಿತವನ ; ದುರಹಂಕಾರದಿಂದ ಬೀಗಿದವನ.

೨ ಅಕ್ಕನ ಊರು ; ತಂಗಿಯ ಊರು.

೩ ಎತ್ತ್ರೋೀಳ್=ಎತ್ತುವವಳು ; ಕೊಯ್ದುಕೊಳ್ಳುವವಳು. ನಿಸ್ತ್ರೆ 'ಮಿತ್ರ' ಎಂದಿರಬಹುದೆ ?

೪ ಗದ್ಯಾಗೆ=ಗದ್ದೆಯಲ್ಲಿ. ಪುಷ್ಪ=ಪುಷ್ಪ, ಹೂವು.

೫ ಜಾಲಹೂವು : ಕಾಡಿನಲ್ಲಿ ದೊರೆಯುವ ಬಹು ಸುವಾಸನೆಯ ಒಂದು ಜಾತಿಯ ಹೂವು.

೬ ಮುಗಿಲು ಚಂದದ್ ಹೂವ : ಮುಗಿಲಿನಂತೆ ಕಪ್ಪಾದ ಹೂವೆಂದು ಭಾವವೆ ? ಈರಣನ=ಈರಣ್ಣನ ; ವೀರಭದ್ರ ಸ್ವಾಮಿಯ. ಇಲ್ಲಿ, 'ಶಿವ' ಎಂದು ಅರ್ಥವಿರುವಂತೆ ತೋರುತ್ತದೆ.

## ಚೋಮನ ಪದ

೧ ತಕ್ಕಂಡು=ತೆಗೆದುಕೊಂಡು. ಹೋಗಿದ್ದೊ=ಹೋಗಿದ್ದೆಯೊ. ಮೂಡುನಾಳ=ಮೂಡಣ, ಪೂರ್ವದಿಕ್ಕಿನ ('ಮೂಡಣಾಗಣ' ಎಂಬುದು 'ಮೂಡುನಾಳ' ಎಂದಾಗಿರಬಹುದು. ಅಥವಾ 'ಮೂಡುನಾಡ' ಎಂಬುದು ಹೀಗೆ ರೂಪಾಂತರವಾಗಿದ್ದರೂ ಇರಬಹುದು.) ಅಯಿಬೋೀಗ=ವೈಭೋಗ ; ವೈಭವ.

೨ ನೆತ್ಯಗಳ=ನೆತ್ತಿಯಾಗಣ ; ನೆತ್ತಿಯ. 'ಅಣ' ಪ್ರತ್ಯಯ ಮೂಡ, ಪಡುವ ಮುಂತಾದ ದಿಕ್ಕು ಸೂಚಿಸುವ ಪದಗಳಿಗೆ ಸೇರುವುದೆ ಹೊರತು ಹೀಗೆ ಪ್ರಯೋಗವಾಗುವುದು ವ್ಯಾಕರಣದ ಬಳಕೆಯಲ್ಲ. ಜುಂಗ=ಗರಿಯನ್ನು. ಚೋಮನ ತಲೆಯ ಮೇಲೆ ನವಿಲು ಗರಿಯನ್ನು ಬೀಸಣಿಗೆಯಾಕಾರದಲ್ಲಿ ಸೆಕ್ಕಿಸಿರುತ್ತಾರೆ. ವಯಿರಿ=ವೈರಿ, ಶತ್ರು.

೩ ದೊಡ್ಡಾನು=ದೊಡ್ಡವನು. ಸಣ್ಣಾನು=ಸಣ್ಣವನು.

೪ ಒದರುಟ್ಟ=ಒದರಿ+ಉಟ್ಟ. ಸೂಳೆಮನೆಗೆ+ಹೋೀಗೋೀ, ಹೋೀಗುವ.

೫ ಉದ್ದನ್ನ=ಉದ್ದವಾದ. ಬಾಡು=ಮಾಂಸ. ಗನವಾದೊ=ಘನವಾಯಿತು. ಶ್ರೇಷ್ಠವಾಯಿತು. ಕಾವಳದ ಎಡೆ : ಭಾವವೇನು ?

## ಟಿಪ್ಪಣಿ

೬ ಹಂಕದ : 'ಅಂಕದ' (ಬಾಗಿದ) ಎಂದಿರಬಹುದೆ? ಚ್ಯಾಮ=ಚೋಮ.

೭ ಚೋಣೂರ.... ಹರಿದನು : ಇದು ಚೋಣೂರೆಂಬ ಸ್ಥಳದ ಯಾವುದೊ ಒಂದು ಸಂಗತಿಯನ್ನು ಸೂಚಿಸುತ್ತದೆ. ಚೋಮ, ಮಾರಿ, ಮೊದಲಾದ ದೇವರುಗಳನ್ನು ಹೊರಡಿಸಿ, ತಮ್ಮ ಕಾರ್ಯ ನಡೆಯುವುದೋ ಇಲ್ಲವೋ ಎಂಬುದನ್ನು ತಿಳಿಯಲು ಯಾವುದೊ ಒಂದು ಸ್ಥಳಕ್ಕೆ ಹೋಗಬೇಕೆಂದು, ಒಂದು ವಸ್ತುವನ್ನು ಬಳಸಬೇಕೆಂದು— ಇದೇ ಮುಂತಾಗಿ ಮನಸ್ಸಿನಲ್ಲಿ ಕುರಿತುಕೊಂಡು ಪ್ರಾರ್ಥಿಸಿಕೊಳ್ಳುತ್ತಾರೆ. ಇದಕ್ಕೆ 'ಕುರು' ಕೇಳುವುದು ಎಂದು ಹೆಸರು. ದೇವರು ಆ ಕುರುಹಿನಿಂದ ಉತ್ತರ ಕೊಡುವುದಕ್ಕೆ 'ಕುರು ಕೊಡುವುದು' ಎಂದು ಹೆಸರು. ಇದು ಈಗಲೂ ಹಳ್ಳಿಯ ಕಡೆ ರೂಢಿಯಿದೆ.

೮ ಹೋಗ್ವಾಗ=ಹೋಗುವಾಗ. ತಾಳೆಹೂವೆಂದು ಮುಡಿದಳು: ಇದು ಈತನ ರಸಿಕತೆಗೆ ಕುರುಹು.

೯ ಕಗ್ಗದ=ಬಹುಗಟ್ಟಿಗನಾದ. ಬೀರ=ವೀರ ; ವೀರಭದ್ರ. ಸಬ್ಬದಂಡೆಲ್ಲ=ಸರ್ವದಂಡೆಲ್ಲವೂ. 'ಶರ್ವ ಎಂದರೆ ಶಿವನ ದಂಡೆಲ್ಲವೂ' ಎಂದೂ ಅರ್ಥ ಮಾಡಬಹುದು. ನಿನ ಮ್ಯಾಲೆ=ನಿನ್ನ ಮೇಲೆ ; ನಿನ್ನ ಅಧೀನ ಎಂದು ಅಭಿಪ್ರಾಯ. ಗನ=ಘನ. ಹಬ್ಗೇಲಿ=ಹಬ್ಬಿಗೆಯಲ್ಲಿ.

## ಹತ್ತಿಯ ಹಾಡು

೧ ಹೊಲನು : ಹೊಲ. 'ಪೊಲನ್' ಎಂಬ ಹಳಗನ್ನಡ ರೂಪದ ಉಳಿಕೆ. ಹತ್ತಿಯ ಬೆಳೆಗೆ ಪ್ರಶಸ್ತವಾದ ಭೂಮಿಯನ್ನು ಈ ಎರಡು ಪಂಕ್ತಿಗಳಲ್ಲಿ ಸೂಚಿಸಿದೆ. ಕಬ್ಬಿಣದ ಕೊಡನು : ಕಬ್ಬಿಣದ ಕೊಡದಿಂದ ನೀರು ಹಾಕುವುದಕ್ಕೆ ಸೂಚನೆಯೇ? ಹೊತರನ=ಹೊತ್ತಾರೆಯ, ಬೆಳಗಿನ (ಹಳಗನ್ನಡ : ಪೊಳ್ತರೆ) ಬೈಗಿನ=ಸಂಜೆಯ. ಜೋಗೋ ಜೋಗೋ : ತೂಗಾಡುವ. ಅಳ್ಳೆ=ಅರಳೆ: ಬೀಜ ತೆಗೆದು ಸೋಸಿದ ಹತ್ತಿ. ಅಳ್ಳೇ ಇಕ್ಕಿ=ಅರಳೆಮಾಡಿ. ಗಿಣಿಕೆ=ಗಿಣ್ಣು (?). ಹಂಜಿ : ನೂಲುವುದಕ್ಕನುಕೂಲಿಸುವಂತೆ ಸಿದ್ಧಗೊಳಿಸಿದ ಅರಳೆಯ ಬತ್ತಿ. ಬಿಲ್ಲು, ಕದುರು, ರಾಟೆ ಇವುಗಳನ್ನು ಉಪಯೋಗಿಸುವ ರೀತಿಯನ್ನು ಇಲ್ಲಿ ವರ್ಣಿಸುವಂತೆ ತೋರುತ್ತದೆ. ಅದೇ.... ಬ್ರಹ್ಮ: ಸರಿಯಾಗಿ ಅರ್ಥವಾಗುವುದಿಲ್ಲ. 'ರಾಟೆಗೆ ಕದಿರು ಬಹು ಮುಖ್ಯ' ಎಂದು ಭಾವ. ಕದಿರೇಯು : ಕದಿರು+ಏ+ಅ. ಅವಧಾರಣಾರ್ಥಕ ಪ್ರತ್ಯಯ ಎರಡು ಸಲ ಸೇರಿದೆ 'ಕದಿರೆ' ಎಂಬಲ್ಲಿಯ ಬ್ರಹ್ಮನನ್ನು ಸಂಬೋಧಿಸಿದ್ದರೂ ಇರಬಹುದು. ಕದಿರೆಯ ರೆಮ್ಮವ್ವೆಯೆಂಬ ಶಿವಶರಣೆಗೂ ಈ ಹಾಡಿಗೂ ಸಂಬಂಧವಿರಬಹುದೆ?

೨ ನೂಲುವ ಮತ್ತು ನೇಯುವ ವಿವರ ಇಲ್ಲಿ ಬಂದಿದೆ. ಆದರೆ ವಾಕ್ಯಗಳನ್ನು ಸಮಂಜಸವಾಗಿ ಹೊಂದಿಸಿ ಅರ್ಥ ಮಾಡಲಾಗುವುದಿಲ್ಲ. ನೂಲುವ ನೇಯುವ ವೃತ್ತಿಯಲ್ಲಿರುವ ಹಳಬರಿಗೆ ತಿಳಿದೀತು. ಮಳ=ಮೊಳ. ಜಾಡ=ಜೇಡ ; ನೇಯುವವನು. ಘಳಿಗೆ=ಮಡಿಕೆ ; ಮಡಿಸಿದ ಬಟ್ಟೆ. ಘಳಿಗೇ ತಂದರೆ ಕೇಳೋರಿಲ್ಲವಲ್ಲಾ :

ನಮ್ಮ ನಾಡಿನಲ್ಲಿ ಸಿದ್ಧವಾದ ಬಟ್ಟೆ ಜನಕ್ಕೆ ಬೇಕಿಲ್ಲವಲ್ಲಾ ಎಂದು ಈ ಹಾಡು ಕಟ್ಟಿದವರಿಗೆ ವ್ಯಥೆ.

೩ ಈ ಯೆರಡು ನುಡಿಗಳಲ್ಲಿ ಹತ್ತಿಯಿಂದ ದೊರಕುವ ಪ್ರಯೋಜನಗಳನ್ನು ವಿವರಿಸಿದೆ. ಇಂದ್ರನಿಗೂ ಪರಮೇಶ್ವರನಿಗೂ ಈ ಬಟ್ಟೆ ಮೆಚ್ಚಿಕೆ. ಮೈಮುಟ್ಟುಗಳು=ಮೈಯ ಸಲಕರಣೆಗಳು, ಇಲ್ಲಿ ಉಡುವ ತೊಡುವ ಬಟ್ಟೆಗಳು. ಜನಿವಾರದ ಬ್ರಾಹ್ಮಣರು : ಬ್ರಾಹ್ಮಣರ ಜನಿವಾರ ಹತ್ತಿಯಿಂದಾದದ್ದೆಂದು ಸೂಚನೆ. ತೊಳೆದರೆ : 'ತಳಿದರೆ' ಎಂದಿರಬೇಕು. ತಳಿ=ಎರಚು. 'ಬ್ರಾಹ್ಮಣರಿಂದ ಆಶೀರ್ವಾದ ಪಡೆದರೆ' ಎಂದು ಅಭಿಪ್ರಾಯ. ಸತ್ಯಕ್ಕೆ....ಗಿಡವೇ : ಸತ್ಯಕ್ಕಾಗಿ ಹರಿಶ್ಚಂದ್ರ ನೊಂದಂತೆ ನೊಂದದ್ದು ಹತ್ತಿಯ ಗಿಡ, ಎಂದು ಭಾವವಿರಬಹುದು.

೪ ಬಾಣಂತಿ+ಹೆತ್ತರೆ. ನಾರೀರ್ಜಡೆಯ ಲಾಡಿಗಳು : ಈಗಿನವರು 'ಟೇಪು' ಉಪಯೋಗಿಸುವಂತೆ ಆಗಿನವರೂ ಉಪಯೋಗಿಸುತ್ತಿದ್ದರು. ಜಂಗಿನ ಪಠ=? ಪ್ಯಾಟಿ=ಪೇಟೆ. ಉಟ್ಟಾವಳಿ=ಉಡುವ ಬಟ್ಟೆ. ಲೋಡಿ=ಲೋಡು, ಒರಗು ದಿಂಬು. ಹೊಳೆಜಲತಾರದ=ಹೊಳೆಯುವ ಜರತಾರಿಯ. ಬೇರಿ=? ಜಂಬೂಖಾನ=ಜಂಖಾನ (?). ಹತ್ತಿ ನಾಡ ಸಂಜೀವನ : ದೇಶಕ್ಕೆ ಜೀವವೆರೆದು ಕಾಪಾಡುವುದು ಹತ್ತಿ. ಈ ಮಾತನ್ನು ಈಗ ಮಹಾತ್ಮಾ ಗಾಂಧಿಯವರು ಸಾರಿ ಹೇಳುತ್ತಿದ್ದಾರೆ.

## ಬಾಂದಿನವರ ಹಾಡು

೧ ಬಾಂದು ಹಾಕುವವರು ಕೂಳಿಕ್ಕದೆ=ಅನ್ನ ಹಾಕದೆ.

೨ ಒಂದೇ ಜಾತಿಗೆ ಆಗುವ ಸಂಗತಿ ತಂದರು : ಬಾಂದು ಹಾಕುವುದರಿಂದ ಜಾತಿ ಕೆಡುವುದೆಂದು ಆಗಿನ ಜನರ ಭಯ.

೩ ಹರಣಿ=? ಶಾಣಿ=ಬಾವುಟ. ತಾರಾಡಿಸು=ತುಂಬ ಓಡಾಡಿಸು. ಗ್ರಾಮುಗಳೆಲ್ಲ=ಗ್ರಾಮುಗಳನ್ನೆಲ್ಲ. ಮನಸ್ಸಿಗೆ ಹಿತ ತೋರದ ಊರುಗಳನ್ನೆಲ್ಲ ಧ್ವಂಸ ಮಾಡಿಬಿಡುತ್ತಾರೆ

೪ ಹಾರೇಲಿ=ಹಾರೆಯಿಂದ. ನೆಲದ ಗುಣವನ್ನು ನೋಡಿ ಕಂದಾಯ ನಿರ್ಧರಿಸುವ ರೀತಿಯನ್ನು ಹಾಸ್ಯ ಮಾಡುವಂತಿದೆ. ಮಣ್ಣಿನ ರುಚಿಯಿಂದ ಗುಣ ನಿರ್ಣಯಿಸುವರೆಂದು ಅವರು ನಂಬಿಯೇ ಇದ್ದರೇನೊ !

೫ ಅವ್ವಲ್=ಮೊದಲನೆಯದು. ದೂಯಂ=ಎರಡನೆಯದು. ಸೀಯಂ=ಮೂರನೆಯದು. ಚಾರಂ=ನಾಲ್ಕನೆಯದು. ಸೀಯಂ....ನೋಡೆಲೊ : ತಮಗೆ ತೋರಿದ ಹಾಗೆ ತರಗತಿಯನ್ನು ಬದಲಾಯಿಸಿ ಬಿಡುತ್ತಾರೆಂದು ಭಾವ.

೬ ಗೋರಿಗಳ್ಹಾಕಿಸಿ : ಬಾಂದುಗಳನ್ನು ಗೋರಿಗಳೆಂದು ಭಾವಿಸಿ ಹೇಳುತ್ತಿದ್ದಾರೆ. ಮನಸ್ಸಿಗೆ ಬೇಡವಾದದ್ದು ಕೆಟ್ಟದ್ದಾಗಿ ಕಾಣುವುದು ಸಹಜ.

೭ ಚಾಂಡಿನವರು ಗ್ರಾಮಾಧಿಕಾರಿಗಳನ್ನು ಪೀಡಿಸುವರೆಂದು ಇದರ ಭಾವ.

೮ ಹೊಲಗದ್ದೆಗಳಿಗೆ ದಾರಿ ಬಿಡಿಸುವುದನ್ನು ಕುರಿತ ಮಾತು ಇದು. ವಸ್ತ್ರ ನಾಯಕನು ಹೋಗುವ ವೇಳೆಗೆ : ಪ್ರಾಣ ಹೋಗುವ ಹೊತ್ತಿಗೆ.

೧೦ ರಾಜಾಸಾಹೇಬ್ ದೌಲತ್ತು=ಮೈಸೂರು ಮಹಾರಾಜರ ಅಧಿಕಾರ.

೧೧ ತಂತೀ ಕಳ್ಳರು : ತಂತಿಯ ಮೂಲಕ ವರ್ತಮಾನ ಕಳಿಸುವ ಪರಂಗಿಯವರು. ತಮಗೆ ಬೇಡದವರಾದ್ದರಿಂದ ಹೀಗೆ ಅವರನ್ನು ಬೈಯುತ್ತಾರೆ. ಅಂತರ ಮಾರ್ಗದಿ ಹೊಗೆ ಬಂದ್ಹೋಗುವ ಕಂತು : ರೈಲನ್ನು ಕುರಿತ ಮಾತು.

೧೨ ಹೆಂಗಸು ದೌಲತ್ತು : ವಿಕ್ಟೋರಿಯಾ ರಾಣಿಯ ರಾಜ್ಯಭಾರವನ್ನು ಸೂಚಿಸುತ್ತಿರಬಹುದು. ಭಂಗವಾಗಿದೆ : ಕಷ್ಟವಾಗಿದೆ. ರಾಜ್ಯಾಧಿಕಾರ ನಮ್ಮ ಮಹಾರಾಜರ ಕೈತಪ್ಪಿ ಈಸ್ಟ್ ಇಂಡಿಯಾ ಕಂಪನಿಯವರಿಗೆ ಸೇರಿದ್ದರಿಂದ ಜನಕ್ಕೆ ಕಷ್ಟವಾಗಿದೆಯೆಂದು ಕೊನೆಯ ಮೂರು ಪದ್ಯಗಳಲ್ಲಿ ವ್ಯಥೆಪಡುತ್ತಾರೆ.

## ತೆನೆ ೬—ಚರಿತ್ರೆಯ ಪದಗಳು

## ಸರ್ಜಪ್ಪನಾಯಕ

ಪಲ್ಲವಿ. ದುಸುಮುಖ : ದುಷ್ಮುಖ (?) 'ದಶಮುಖ (ರಾವಣನಂತೆ ಪರಾಕ್ರಮಿ) ಎಂದಿದ್ದೀತೆ ? ಇದೇ ಮೊದಲಾದ ಕೆಲವು ಮಾತುಗಳಿಗೆ ಅರ್ಥವಾಗುವುದಿಲ್ಲ.

೧ ಎಳ್ಡು=ಎರಡು. ಮಿರಡಿಯ ಸರಪಣಿ= ? ತಂಕ=ತನಕ, ವರೆಗೆ.

೨ ಈಟೇಟು=ಇಷ್ಟಿಷ್ಟು. ಹುಡುವುಗರು=ಹುಡುಗರು. ಪಯ್ಣ=ಪಯಣ ; ಪ್ರಯಾಣ.

೪ ಬಂಡ=ಕುರಿಯ ತುಪ್ಪಟ, ಉಣ್ಣೆ. ಸರ್ಜಪ್ಪನಾಯಕನನ್ನು ಸೆರೆಹಿಡಿದಿಟ್ಟಿದ್ದರು. ಅವನು ಸೆರೆಯಿಂದ ತಪ್ಪಿಸಿಕೊಂಡು ವೇಷಮರಸಿಕೊಂಡು ಕುರುಬರೊಡನೆ ಸೇರಿ ಕೆಲವು ಕಾಲ ಇದ್ದು, ತನ್ನೂರಿಗೆ ಮತ್ತೆ ಬಂದು ದಂಗೆಯೆಬ್ಬಿಸಿದನು. ಕುರುಬರ ಕೆಲಸ ಮಾಡಿದ್ದನ್ನು ಈ ಪದ್ಯದಲ್ಲಿ ವರ್ಣಿಸಿದೆ. ಕಾರೆ ಗಿಡದಲ್ಲಿ ಕೈ ಜಗಳ : ಸರ್ಕಾರದ ಸಿಪಾಯಿಗಳು ವೇಷಧಾರಿಯಾಗಿದ್ದವನನ್ನು ಗುರುತಿಸಿ ಹಿಡಿಯಹೋದಾಗ ಆದ ಕಲಹವನ್ನು ಇದು ಸೂಚಿಸುತ್ತದೆ.

೫ ಹಳ್ಳವದಲ್ಲಿ=ಹಳ್ಳದಲ್ಲಿ. ಕುದ್ರೆ=ಕುದುರೆ. ರಣಸೂರದಲ್ಲಿ=ರಣರಂಗದಲ್ಲಿ (?). ಕೈ ಜಗಳದಲ್ಲಿ ಸರ್ಜಪ್ಪನಾಯಕ ಶತ್ರುವನ್ನು ಕೊಂದನು. ಕತ್ತಿ ಅಲ್ಲಿ ಬಿದ್ದು ಹೋಯಿತು. ಬಳಿಕ ಅವನು ಕುದುರೆ ಹತ್ತಿಕೊಂಡು ತನ್ನ ಊರಿಗೆ ಓಡಿಹೋದನು. ಓಡಿ [illegible] ಕುದುರೆ ಲಾಯದಲ್ಲಿ ಬಿದ್ದು ಸತ್ತಿತು—ಇಷ್ಟು ಕಥೆ ಇಲ್ಲಿ [illegible]ವಾಗಿದೆ.

೬ ಯಮಡೊಳ್ಳು=ಯಮಡೋಲು; ಒಂದು ರಣವಾದ್ಯ (?). ಸಂಗೀತ ಬಿಡಿಸಿಕೊಂಡು : ಹಾಡಿಸಿಕೊಂಡು. ವ್ಯಾಳ=ಮೇಳ, ನರ್ತನ. ಈ ಪದ್ಯದಲ್ಲಿ ಸರ್ಜಪ್ಪನ ವೈಭವದ ವರ್ಣನೆಯಿದೆ.

೭ ಮಿತ್ತೂರಿ=ಪಿತೂರಿ(?). ಸುಕನಾತಿ=ಮಾಯಗಾತಿ(?).

೮ ತಾನ=ಸ್ನಾನ. ಮಾಸಾಮಿ=ಮಹಾಸ್ವಾಮಿ.

೯ ಗಿರಿಜಂತ=ಗಿರಿಜೆಯಂಥ. ಹುಯ್ಯಿದಳು=ಹುಯ್ದಳು.

೧೦ ಒಬ್ಬನನ್ನು ಸೆರೆಹಿಡಿಯಲು ಇಷ್ಟೊಂದು ಸಾಧನಗಳು.

## ಲಕ್ಕಣ್ಣ—ಈರಣ್ಣ

೧ ಇಸ್ತಾರ=ವಿಸ್ತಾರ. ಬೆಳಕನ್ನು=ಬೆಳಕೂನು(?) ; ಬೆಳಕು. ರೊಟ್ಟಿಯ ಸುಡವ್ವ : ದೊರೆ ಮಕ್ಕಳು ಕೂಡ ತಾಯಿ ಸುಟ್ಟುಕೊಟ್ಟ ರೊಟ್ಟಿಯನ್ನೆ ಬುತ್ತಿಕಟ್ಟಿಕೊಂಡು ಹೋಗುತ್ತಾರೆ.

೨ ಕಂದ್ಗಳಿರ=ಕಂದಗಳಿರ. ಹೋದೀರೊ=ಹೋಗುವಿರೊ? ನಾ ಹುಟ್ಟಿದೋಳು ಒಬ್ಬಳೆ : ಅಣ್ಣ ಮಾಡಿದ ದ್ರೋಹದಿಂದ ತನಗೆ ಯಾರೂ ಇಲ್ಲವೆಂದು ರೋಸಿ ಹೇಳುತ್ತಾಳೆ.

೩ ಕೆಟ್ಟಿ ಕೆಟ್ಟಿ : ಆಡುವುದು ತಪ್ಪೆಂದು ಸೂಚಿಸುವ ಉದ್ಗಾರ. ಸೋಗೆ ಬಲ್ಲಾಳರಾಯ, ವಜ್ರಬಲ್ಲಾಳರಾಯ : ಅರ್ಥವೇನು ? ಚರಿತ್ರೆಯಲ್ಲಿ ಈ ಹೆಸರು ಗಳಿವೆಯೆ ?

೪ ಏಟೂನೆ=ಎಷ್ಟನ್ನೂ. ಆದ್ವು=ಆದವು. ಲೆಕ್ಕವೆ=ಲಕ್ಷ್ಯವೆ.

೬ ತೇಜಿ=ಕುದುರೆ. ಗೌಳಿ=(ಶಕುನದ) ಹಲ್ಲಿ.

೭ ಮನೆಗೋಳು=ಮನೆಗಳು. ಎಡದೇ, ಎಡದೆಯ=ಎಡದ, ಎಡಗಡೆಯ. ಬಲದೇ,—ಯ=ಬಲಗಡೆಯ.

೮ ಒಂಟು=ಒಂಟಿ. ಇಲ್ಲಿ ಹೇಳಿರುವವೆಲ್ಲ ಅಪಶಕುನಗಳು.

೧೦ ಕಳುವ್ಯಾರು=ಕಳುಹಿದರು ; ಕಳಿಸಿದರು. ಬರುತೀತೆ=ಬರುತ್ತದೆ. ಮಾಡಾಣ=ಮಾಡೋಣ. ಬರುತಾರೆ : ಕಥೆ ಹೇಳುವಲ್ಲಿ ಭೂತಕಾಲಕ್ಕೆ ಬದಲಾಗಿ ವರ್ತಮಾನಕಾಲ ಪ್ರಯೋಗ.

೧೧ ಮಾರ್ಗದಾರಿಗೆ=ದೊಡ್ಡ ದಾರಿಗೆ, ರಾಜ ಮಾರ್ಗಕ್ಕೆ. ಮೇಲೋಕ=ಮೇಲಿನ ಲೋಕ. ಅಣಗಜ್ಜೆ=ಅನೆಕಜ್ಜೆ ; ದಪ್ಪ ದಪ್ಪ ಕಜ್ಜೆ. ಸಣಗಜ್ಜೆ=ಸಣ್ಣ ಕಜ್ಜೆ.

೧೨ ಸ್ವಾವ್ಗೋಳು=ಸ್ವಾಮಿಗಳು. ಕೆರೀರೆಂದು=ಕರೆಯಿರಿ ಎಂದು. ಅರುವಾದು=ಅರಿವಾಯಿತು.

೧೩ ಮಂಗಳವಾರೊಪ್ಪತ್ತು : ಮಧ್ಯಾಹ್ನ ಕಳೆದ ಮೇಲೆ ಸಂಜೆಗೆ ಮೊದಲಿನ ಹೊತ್ತನ್ನು 'ಒಪ್ಪತ್ತು' ಎನ್ನುವುದು ರೂಢಿ. ಸೂಲಕೆ=ಶೂಲಕ್ಕೆ.

೧೪ ನೋಡೋ ಹೊತ್ಗೆ=ನೋಡುವ ಹೊತ್ತಿಗೆ; ನೋಡಿದಾಗ. ಕುಂತಿದ್ದ=ಕೂತಿದ್ದ.

೧೫ ಹೊಟ್ಟಸ್ತವು=ಹೊಟ್ಟೆ ಹಸಿದವು; ಹಸಿವಾಯಿತು. ಅಡಿಯೆ=ಕೆಳಗಡೆಯಲ್ಲಿ. ಬಿಚ್ಯಾರು=ಬಿಚ್ಚಿದರು.

೧೬ ಒಡಕಲ್ಲು=ಒಡಕಲು; ಬೇಳೆ. ಹಾಕ್ಯಾರು=ಹಾಕಿದರು.

೧೭ ಕಲ್ಲುಕಟ್ಟೇತಾವ=ಕಲ್ಲು ಕಟ್ಟೆಯ ಬಳಿ. ಕುಂತರು=ಕುಳಿತರು (ಹಳೆಯ ರೂಪ : ಕುಳ್ತರು)

೧೮ ಅಡುಗೂರ ಅಜ್ಜವ್ವ : ಅಡುಗೂಳಜ್ಜಯಿ ?

೧೯ ಏಟೂನೆ ಮಾತರಕು=ಎಷ್ಟು ಮಾತ್ರಕ್ಕೂ. ಏನೆಂದೋ=ಏನೆಂದಳು.

೨೦ ಶಿವದನ : 'ಶಿವದಾರ' ಎಂದಿರಬಹುದೆ? ಒಂಟಿ ಮರಟಿ : ಇದು ಹಳೆಯ ಬೀಡಿಗೆ ಒಂದು ಮೈಲಿ ಪೂರ್ವಕ್ಕೆ ಇರುವ ಒಂದು ಗುಡ್ಡ.

೨೧ ದನೀನ, ಕರೀನ=ದನವಿನ, ಕರುವಿನ. ದನಕರುಗಳನ್ನು ಕಾಯುವ. ಅಣಾದಿರ=ಅಣ್ಣಂದಿರ.

೨೨ ಮೂಡುತೀತೆ=ಮೂಡುತ್ತದೆ; ಹುಟ್ಟುತ್ತದೆ ('ಮೂಡು' ಎಂಬು ದಿನ್ನೂ ಜನರಲ್ಲಿ ಬಳಕೆಯಲ್ಲಿದೆ). ಎರಡು ಸೂರ್ಯರು : ಲಕ್ಕಣ್ಣ, ಈರಣ್ಣ—ಇಬ್ಬರೂ ಎರಡು ಸೂರ್ಯರಂತಿದ್ದರೆಂದು ಭಾವ.

೨೩ ಅಂಗುನೂಲು : ಪೂಜೆಗೆ ಇಟ್ಟುಕೊಳ್ಳುವ ದಾರ. ತಂಬ್ಟ=ತಂಬಿಟ್ಟು. ಪೂಜೋರ್‌ಹಂಗೆ=ಪೂಜಿಸುವವರ ಹಾಗೆ. ಪೂಜಾದು=ಪೂಜೆ ಆದವು; ಪೂಜಿಸಿ ಆಯಿತು. ಹಸಿಸೂಲ, ಬಸಿಸೂಲ : ಕಾಸದ, ಕಾಸಿದ ಶೂಲ (?)

೨೪ ಗೆವರ್ಯಾಳು=ಗೀರಿದಳು, ಪರಚಿದಳು. ಮಖಾಡೆ=ಮುಖ ಅಡಿಯಾಗಿ.

೨೫ ಮಂಡೇಲ್=ಮಂಡೆಯಿಂದ, (ಇಲ್ಲಿ) ಮಂಡೆಯ ಕೂದಲಿಂದ. ಬಂದೈದಾವೆ; ಬಂದಿದ್ದಾವೆ : ಬಂದಿದೆ.

೨೮ ಕದ ಬಾಗಲ ಹಾಕ್ಯಾರೆ : ಹರಿಯಲದೇವಿಗೆ ಆದರ ಮಾಡಬಾರದೆಂದು ರಾಜಾಜ್ಞೆಯಾಗಿತ್ತು. ಹಾರೋರ=ಹಾರುವರ, ಬ್ರಾಹ್ಮಣರ. ಬಕ್ರೀಲಿ=ಬಕ್ಕರೆಯಲ್ಲಿ (=ಒಡಕು ಹಂಚು).

೩೦ ನೀರ ಹುಯ್ಕೋತಿದ್ಲು=ಸ್ನಾನಮಾಡುತ್ತಿದ್ದಳು. ಕಮ್ಯಾದು=ಕಡಮೆಯಾಯಿತು.

## ಟಿಪ್ಪೂಸುಲ್ತಾನನ ಬೀಳಿನ ಹಾಡು

೧ ದೌಲತ್ತು=ಅಧಿಕಾರ. ಬಾನಾಡಿ=ಆಕಾಶದಲ್ಲಿ ಹಾರಾಡಿ.

೨ ಗೆಲ್‌ಗುಡಿಸಾಲ್=ಗೆಲವಿನ ಬಾವುಟದ ಸಾಲು (ಗುಡಿ=ಬಾವುಟ); ವಿಜಯಧ್ವಜದ ಪಂಕ್ತಿ. ತನ್=ತನ್ನ.

೩ ಎದೆದಲ್ಲಣಿಸುತ=ಎದೆಯನ್ನು ನಡುಗಿಸುತ್ತ.

೪ ಅವನಾ ಫ್ರೆಂಚರೊ : ಟಿಪ್ಪೂಸುಲ್ತಾನನ ಸೈನ್ಯದಲ್ಲಿ ಅನೇಕ ಜನ ಫ್ರೆಂಚರಿದ್ದರು.

೭ ಕಪ್ಪನೆ ಕಳೆ ಬೀರಿ : ನೀರು ಬಹು ಆಳವಾದ ಕಡೆ ಕಪ್ಪಗೆ ಕಾಣುವುದು ಸಹಜ.

೮ ಸಜ್ಜನು ತೋರುತ್ತ : ಸದಾ ಕಾಳಗಕ್ಕೆ ಅಣಿಯಾಗಿ.

೧೨ ಹದನು : ರೀತಿ.

೧೩ ಉಣವಿನ ಧಾನ್ಯ=ಆಹಾರ ಧಾನ್ಯ. ಹದಿನೆಂಟು ಬಗೆಯ ಧಾನ್ಯಗಳು ಯಾವುವೊ ?

೧೬ ಪರಿವಿಡಿಯಿಂದ=ಕ್ರಮವಾಗಿ. ಎಂಟು ಕಾಲಗಳಲ್ಲಿ: ಅಭಿಪ್ರಾಯ ತಿಳಿಯುವುದಿಲ್ಲ. ಉರು ಸಿರಿ=ಹೆಚ್ಚಾದ ಐಶ್ವರ್ಯ.

೧೯ ಮುಡಿ=ಕಿರೀಟ. (ಕೀರ್ತಿಯ ಮುಡಿ=ಕೀರ್ತಿಯ ಕಿರೀಟ)

೨೧ ಬಬ್ಬರ್ ಜಂಗ್ : ಹುಲಿಯಂಥ ಶೂರ.

೨೨ ದಿಕ್ಪಾಲಕರಲ್ಲಿ........ಬಗೆಯೊಲ್ಲಿ : ಟಿಪ್ಪುಸುಲ್ತಾನನ ಸೇನಾಪತಿಗಳು ದಿಕ್ಪಾಲಕರಿಗಿಂತಲೂ ಪರಾಕ್ರಮಶಾಲಿಗಳಾಗಿದ್ದರೆಂದು ಅಭಿಪ್ರಾಯ. ಕಮ್ರುದ್ದೀನ್, ಷೇರ್‌ಖಾನ್, ಮೀರ್ ಸಾದಕ್, ಮೀರಾ ಹುಸೇನ್, ಸುಬ್ರಾಯಮೂರ್ತಿ, ಬಬ್ಬರ್ ಜಂಗ್ ಭೀಮರಾವ್, ಖಾನ್‌ಜೆಹಾನ್‌ಖಾನ್, ಸೈಯದ್ ಸಾಹೇಬ್—ಇವರೆ ಆ ಅಷ್ಟ ಸೇನಾಪತಿಗಳು. ಶ್ರೀ ಪ್ರೊಫೆಸರ್ ಬಿ. ನಾಗೇಶರಾಯರವರು ಈ ಬಬ್ಬರ್‌ಜಂಗ್ ಭೀಮರಾಯರ ವಂಶದವರು.

೨೪ ರಂಜಕಕಣ : ಫಿರಂಗಿಗೆ ಬೆಂಕಿ ಹೊತ್ತಿಸುವುದಕ್ಕೆ ಉಪಯೋಗಿಸುವ ರಂಜಕದ ಕಣ.

೨೫ ಕಲಿ ಮೊಗಲರು=ಶೂರರಾದ ಮೊಗಲ ಸಿಪಾಯಿಗಳು. ಸುಲ್ತಾನನ ಸೈನ್ಯದಲ್ಲಿ ಮೊಗಲ ಸಿಪಾಯಿಗಳದೂ ಪ್ರತ್ಯೇಕ ತಂಡಗಳಿದ್ದಿರಬೇಕು.

೨೭ ಟಿಪ್ಪೂ ಸುಲ್ತಾನ್ ದೈವಭಕ್ತನೆಂದು ಪ್ರಸಿದ್ಧಿ. ಭಗತ್ಪ್ರೇರಣೆಯಿತ್ತೆಂದೆ ಯಲಾ : ಭಗವಂತನ ದಿವ್ಯ ಪ್ರೇರಣೆ ತನಗಿತ್ತೆಂದು ಟಿಪ್ಪು ಹೇಳಿಕೊಳ್ಳುತ್ತಿದ್ದನಂತೆ. ಕುರಾನಿನ.... ಎಲ್ಲಿ : ಗಾಢವಾದ ಮತ ಶ್ರದ್ಧೆಯೂ ದುರದೃಷ್ಟಕ್ಕೆ ಎದುರಲ್ಲವೆಂದು ಭಾವ.

೩೦ ಹಳಮೆಯ=ಪುರಾತನವಾದ.

೩೨ ಮುಡಿ=ತಲೆ, ಕಿರೀಟ. ಶಾಸನಗಳ=ಅಪ್ಪಣೆಗಳ.

೩೩ ಶ್ರೀಮಂತನು : ಪೇಷ್ವೆ.

೩೫ ಸಿಂಗಳ ನಾಡಿಂದ=ಸಿಂಹಳ ದೇಶದಿಂದ. ಇಂಗ್ಲಿಷರು ಸಿಂಹಳದಿಂದ ಬಂದರೆಂದರೆ ಹೊಂದುವುದಿಲ್ಲ. 'ಸಿಂಗಳ' ಎಂದರೆ ಇನ್ನೇನರ್ಥಮಾಡಿಕೊಂಡಿದ್ದರೊ ತಿಳಿಯದು.

೩೬ ಆಗಲೆ.... ಹಾಳಾಯ್ತು : ಇಂಗ್ಲಿಷರು ಗೆದ್ದು ಮೈಸೂರಿನ ಸ್ವಾತಂತ್ರ್ಯ ನಾಶವಾದಕೂಡಲೆ ಭೂಲೋಕದ ಸೌಖ್ಯವೊಂದೂ ನಮ್ಮ ಪಾಲಿಗೆ ಉಳಿಯಲಿಲ್ಲವೆಂದು ಕವಿ ವ್ಯಥೆಪಡುತ್ತಾನೆ.

## ಟಿಪ್ಪೂಸುಲ್ತಾನನ ಬೀಳಿನ ಹಾಡು (೨)

೨ ಅವನೊಡನೆಯೆ ನಮ್ಮಾಸೆಗಳೆಲ್ಲಾ ಕುಸಿದಂದು : ಟಿಪ್ಪೂ ಸುಲ್ತಾನನು ಮುಸಲ್ಮಾನ್ ಸಾಮ್ರಾಜ್ಯ ಸ್ಥಾಪನೆಮಾಡುವನೆಂದೂ ಅವನ ಆಶ್ರಯದಲ್ಲಿ ಮಹಮ್ಮದೀಯ ಮತ ತಾನೇ ತಾನಾಗುವುದೆಂದೂ ಮುಸಲ್ಮಾನರು ಹಲವು ಹಿರಿಯಾಸೆಗಳನ್ನು ಕಟ್ಟಿಕೊಂಡಿದ್ದರೆಂದು ತೋರುತ್ತದೆ. ಅವನ ಸೋಲಿನಲ್ಲಿ ಅದೆಲ್ಲ ಧ್ವಂಸವಾಯಿತು. ಬೊಡ್ಡೀಮಕ್ಕಳ ತಲೆ ಮೇಲೆ ಮಣ್ಣು ಸುರಿಯಲಿ : ತಮ್ಮ ಆಸೆ ಧ್ವಂಸವಾದ್ದರಿಂದ ಹೀಗೆ ಬಯ್ಯುತ್ತಾರೆ.

೩ ಅಜಿತ=ಎಂದೂ ಸೋಲದವನು.

೪ ಯೆಸೀದನ ಆ ದ್ರೋಹಿ ಸಂತಾನ : ಮತಸ್ಥಾಪಕರಾದ ಮಹಮ್ಮದ್ ಅವರ ಮೊಮ್ಮಗ ಹುಸೇನ್ ಅವರು ವೋಸಕ್ಕೆ ಒಳಗಾಗಿ ಕರ್ಬಲ ಮರುಭೂಮಿಯಲ್ಲಿ ಕೊಲೆಯಾದಾಗ ಖಲೀಫನಾಗಿದ್ದವನು ಯೆಸೀದ್. ಕರ್ಬಾಲದ ಕೊಲೆಗೆ ಅವನೇ ಕಾರಣನೆಂದು ಭಾವಿಸಿ ಷಿಯಾ ಪಂಗಡದವರು ಅವನನ್ನು ದ್ರೋಹಿಯೆನ್ನುತ್ತಾರೆ. ಅಂಥ

ದ್ರೋಹಿಯ ವಂಶದವನೇ ಸುಲ್ತಾನನ ಸೋಲಿಗೆ ಕಾರಣನಾದನೆಂದು ಹೀಗೆ ಬೈಯುತ್ತಾರೆ. ನಂಬಿಕೆಗೇಡಿ, ಮಾಡಿದನವನೇ : ಅವನು ಯಾರೆಂದು ಸ್ಪಷ್ಟವಾಗಿ ಹೆಸರು ಹೇಳಿಲ್ಲ. ಮೀರ್‌ಸಾದಕನನ್ನು ಸೂಚಿಸುತ್ತಿರಬಹುದೆ ?

## ತೆನೆ ೭ — ಬ್ರಾಹ್ಮಣರ ಹಾಡುಗಳು

## ನಂಜುಂಡ ಜೋಗಿ

ಸೂಚನೆ. ಹೇಮಗಿರಿರಾಯ : ಪಾರ್ವತಿಯ ತಂದೆ ಹಿಮವಂತ. 'ಹೇಮಗಿರಿ' (ಚಿನ್ನದ ಬೆಟ್ಟ) ಮೇರು ಪರ್ವತ. 'ಹಿಮಗಿರಿ ರಾಯನ' ಎಂದಿದ್ದು ಮಾತ್ರ ಕಡಮೆ ಯಾಗಿ ಛಂದಸ್ಸಿಗೆ ಸಾಲದೆ ಬಂದದ್ದರಿಂದ 'ಹಿಮ'ವನ್ನು 'ಹೀಮ' ಎಂದು ಎಳೆದು ಕಡೆಗೆ ಅದು 'ಹೇಮ' ಎಂದಾಗಿರಬೇಕು. ಕಾಮನೊಯ್ರಿ=ಕಾಮನ ವೈರಿ. 'ಕಾಮ ವೈರಿ' ಎಂದರೆ ಸರಿಯಾಗುತ್ತದೆ. ನಂಜುಂಡ : ನಂಜು ಉಂಡವನು : ವಿಷವನ್ನು ಕುಡಿದವನು ; ಶಿವ.

೧ ಮುಪ್ಪುರ=ಮೂರು ಪಟ್ಟಣಗಳು ; ತ್ರಿಪುರಗಳು. ಮುಪ್ಪುರಗಳನ್ನು ಗೆದ್ದವನು ಶಿವ. ಈ ಮಹಿಮೆಯನ್ನು ಇಲ್ಲಿ ಪಾರ್ವತಿಗೂ ಆರೋಪಿಸಿದ್ದಾರೆ. ಸುಪ್ಪಾಣಿ ಮುತ್ತು=ಅತ್ಯುತ್ತಮವಾದ ಮುತ್ತು. ಬೀದೀಲಿ=ಬೀದಿಯಲ್ಲಿ.

೨ ನಾರಿರನ್ನಳೆ=ನಾರಿಯರಲ್ಲಿ ರತ್ನವಾದವಳೆ. ಮಾರೊ=ಮಾರುವ. ಮದನಾರಿ=ಮನ್ಮಥನ ಶತ್ರು ; ಶಿವ.

೩ ಅಸುರ ವೈರಿ ಪ್ರೀಯ : ಅಸುರರಿಗೆ ವೈರಿಯಾದ ಶ್ರೀ ಮಹಾವಿಷ್ಣು ವಿಗೆ ಪ್ರಿಯನಾದವನು, ಶಿವ. ಜೋಗಿ : ಶಿವ ಜೋಗಿಯ ವೇಷದಲ್ಲಿ ಬಂದಿದ್ದನು. (ಸಂ. ಯೋಗಿ). ನೊಸಲುಗಣ್ಣಿನ ಜೋಗಿ : ಹಣೆಯಲ್ಲಿ ಕಣ್ಣುಳ್ಳ ಜೋಗಿ (ನೊಸಲು=ಹಣೆ)

೪ ಉಂಡೋರು=ಉಂಡವರು ; ಊಟಮಾಡಿದವರು. ಒಯ್ಯಾರಿ= ಬೆಡಗಿ.

೫ ಕಂಜ : ನೀರಿನಲ್ಲಿ ಹುಟ್ಟಿದ್ದು, ಕಮಲ. ಮುಂಜೆರಗು : (ಮುನ್+ ಸೆರಗು) ಸೆರಗಿನ ಮುಂಭಾಗ.

೬ ನಿಟ್ಟಿಸಳುಗಣ್ಣು=ನಿಡಿದಾದ (ಉದ್ದವಾದ) ಎಸಳಾದ ಕಣ್ಣು. ಚೆಲ್ವೆ= ಚೆಲುವೆ, ಸುಂದರಿ.

೭ ಆದಿ ಪರಬ್ರಹ್ಮನಂದಿನಿ : 'ಬೊಮ್ಮನಂದಿನಿ' ಎಂದಿದ್ದರೆ ಪ್ರಾಸ ಹೊಂದುತ್ತದೆ. ಆದಿ ಪರಬ್ರಹ್ಮನಿಗೆ, ಪರಬ್ರಹ್ಮಸ್ವರೂಪಿಯಾದ ಶಿವನಿಗೆ ಆನಂದ ವನ್ನುಂಟುಮಾಡುವವಳು.

೮ ಕಂಡ ಪುರುಷನು : ತನಗೆ ಪರಿಚಯವಿಲ್ಲದ ಯಾವನೋ ಮನುಷ್ಯ. ' ಖಂಡ ಪರಶು ' ಎಂಬ ಮಾತು ಈ ರೂಪ ತಾಳಿದ್ದರೂ ಇರಬಹುದು. ಉದ್ದಂಡ= ಕಟ್ಟುವಿಾರಿದ.

೯ ಓಡುವ್ರೊ=ಓಡುವ. ಗರಳಾರೂಢ=ವಿಷಕುಡಿದು ಜಯಿಸಿ ಸಿದ್ಧಿ ಪಡೆದವನು. ರೂಢಭಸ್ಮ=ಯೋಗ ಸಿದ್ಧಿಯನ್ನು ಪಡೆದವನು ಬಯಸಿದ್ದಾಗುವಂತೆ ಪ್ರಯೋಗಿಸಲು ಮಂತ್ರಿಸಿದ ಬೂದಿ ; ' ಮೆಚ್ಚು ಬೂದಿ, ಮಂಕು ಬೂದಿ '

೧೦ ಗರಳಪುರಿ : ನಂಜನಗೂಡು (ಗರಳ=ವಿಷ, ನಂಜು)

೧೧ ಚಾಂದಾಂಬ : ? ಮಾಧವನ ಪ್ರಿಯ : ವಿಷ್ಣುವಿನ ಪ್ರೀತಿಗೆ ಪಾತ್ರ ನಾದವನು ; ಶಿವ. ಶಿವ ವಿಷ್ಣುಗಳು ಸ್ನೇಹಿತರೆಂದು ನಂಬಿಕೆ. ವಿಷ್ಣು ಶಿವನ ಭಾವ ನೆಂದು ಭಾವಿಸಿರುವುದೂ ಉಂಟು.

೧೨ ಕಪ್ಪಿನಿ : ' ಕಪಿನಿ ' ಹೊಳೆ ಪ್ರಾಸಕ್ಕಾಗಿ ' ಕಪ್ಪಿನಿ ಯಾಗಿದೆ.

೧೫ ವದನ=ಮುಖ. ಹೊಳೆವ್ರೊ=ಹೊಳೆಯುವ.

೧೬ ಯಾದಗಿರಿ ಮಗಳು : ಯಾವ ಗಿರಿ ಪ್ರಸಿದ್ಧವಾಗಿದೆಯೋ ಆ ಹಿಮ ವಂತನ ಮಗಳು ಎಂದು ಭಾವ (ಯಾದ=ಯಾವ). ಬೋಧರಾತ್ಮಕಿ : 'ಭೂಧರಾತ್ಮಜೆ' ಎಂದಿರಬೇಕು ' ಯಾದುಗಿರಿ ಮಗಳು ' ಎಂದು ನುಡಿಯುತ್ತಾರೆ. ' ಯದು ' ಗಿರಿ ' ಯಾದು 'ಗಿರಿಯಾಗಿದೆ ಹಾಡಿನ ಎಳೆತದಲ್ಲಿ. ಈ ಕವಿಯ ದೃಷ್ಟಿಯಲ್ಲಿ ನಂಜನ ಗೂಡೇ ಕೈಲಾಸ. ಯದುಗಿರಿಯೆ (ಮೇಲುಕೋಟೆ ಬೆಟ್ಟ) ಹಿಮಗಿರಿ.

೧೭ ಸಾಧನೆ : ' ಸ್ವಾದನೆ ' ಎಂದು ತಪ್ಪಾಗಿ ನುಡಿಯುತ್ತಾರೆ.

೧೮ ಜಲಧರ=ಜಲವನ್ನು, ನೀರನ್ನು ಧರಿಸಿದವನು. ಗಂಗೆಯನ್ನು ತಲೆ ಯಲ್ಲಿ ಹಿಡಿದಿಟ್ಟಿರುವ ಶಿವ.

೨೦ ಗಿರಿ ಕೃಪಾಳರು : ಗಿರಿರಾಜನ ಕೃಪೆಗೆ ಪಾತ್ರರಾದವರು ; ಅವನ ಆಶ್ರಿತರು.

೨೨ ಹರದಿ=ಮಡದಿ.

೨೩ ಕುರುಳು=ತಲೆಗೂದಲು. ಜೋಗಿಟ್ಟ=ಜೋಗಿಯಿಟ್ಟ. ತಳಿಗೆ= ಊಟದ ತಟ್ಟೆ. ಕುಂಭ ಕುಚಗಳು ಹೊಳೆಯುತ: ' ಕುಂಭಕುಚಗಳ ನೋಡಿಯುತ ' ಎಂದಿರಬಹುದೆ ? ಜಗದಂಬ=ಲೋಕಕ್ಕೆಲ್ಲ ತಾಯಿ.

೨೪ ಕರಿ ಕಾಯಿಗಳು=ಕಾಯಿಪಲ್ಲೆಯಗಳು.

೨೫ ಇಲ್ಲದೋರು=ಇಲ್ಲದವರು, ಬಡವರು. ದೊರಕೊಂಬುದು= ದೊರೆಯುವುದು, ಸಿಕ್ಕುವುದು, (ದೊರೆಕೊಳ್ಳುವುದು). ಒಲ್ಲಿದರೆ=ಒಲಿದಿದ್ದರೆ, ಒಲ್ಲಿದ್ದರೆ,

ಬೇಕಾಗಿದ್ದರೆ. 'ಒಲ್' ಧಾತು ನಿಷೇಧಾರ್ಥದಲ್ಲಿ ಮಾತ್ರ ಪ್ರಯೋಗದಲ್ಲಿದೆ. ಒಲ್ಲದಿರೆ: 'ಒಲ್ಲದಿದ್ದರೆ' ಎಂದು ನುಡಿಯುತ್ತಾರೆ. ಅದು ಛಂದಸ್ಸಿಗೆ ಹೆಚ್ಚಾಗುತ್ತದೆ.

೨೬ ಬ್ರಹ್ಮವರ : ಬ್ರಹ್ಮ ಕೊಟ್ಟ ವರ. ತಪ್ಪದೆ ನಡೆದೇ ನಡೆಯುವಂಥದು. ಸುಮ್ಮನೇ ಮೂಗಳಾಗಿ...'ಮಾನಳಾಗಿ' ಎಂದು ನುಡಿಯುತ್ತಾರೆ. ನಾಲ್ಕನೆಯ ಪಂಕ್ತಿಯಲ್ಲೂ ಪ್ರಾಸ ತಪ್ಪಿದೆ.

೨೭ ಕರ್ಪುರವೀಳ್ಯ=ಕರ್ಪೂರ ವೀಳೆಯ.

## ಗಿರಿಜಾ ಕಲ್ಯಾಣದಿಂದ

### ಗಿರಿರಾಜ ಉಮೆಯರ ಸಂವಾದ

ಪಾರ್ವತಿ ಶಿವನನ್ನು ಮೆಚ್ಚಿ ಅವನಿಗೇ ತನ್ನನ್ನು ಕೊಟ್ಟು ಮದುವೆಮಾಡಬೇಕೆನ್ನುತ್ತಾಳೆ. ಆಗ ತಂದೆಗೂ ಮಗಳಿಗೂ ಆದ ಸಂವಾದ ಇದು.

೧ ಕ್ಷೀಣೆಯಿಂದಲಿ : ತಾನು ಕ್ಷೀಣನಾಗುವಂತೆ, ಮಾನಕ್ಕೆ ಕಡಮೆಯಾಗುವಂತೆ (?) 'ಕ್ಷೀಣನಂದದಿ' ಎಂದಿರಬಹುದು ಬಡವನ ಹಾಗೆ, ಕೀಳನ ಹಾಗೆ ಎಂದರ್ಥ. ಪ್ರಾಣ ಸಂಚರಣೆಗೆ=ಪ್ರಾಣ ಸಂಚಾರಕ್ಕಾಗಿ, ಪ್ರಾಣವುಳಿಸಿಕೊಳ್ಳುವುದಕ್ಕೆ, ಪ್ರಾಣಧಾರಣೆಗೆ ಅಶನ=ಅನ್ನ, ಆಹಾರ.

೩ ಆರಂಬ=ಬೇಸಾಯ. ಉಂಬರೆ=ಉಣ್ಣುವುದಕ್ಕೆ.

೪ ತ್ರೈಭುವನವ=ಮೂರು ಲೋಕಗಳನ್ನೂ.

೫ ಆದಿ : ಶಿವ ಎಲ್ಲಕ್ಕೂ ಮೊದಲು. ಅನಾದಿ : ಆದಿಯಿಲ್ಲದವನು ; ಶಿವನಿಗೆ ಆದಿಯೆ ಇಲ್ಲ. ಅವನು ಸದಾ ಇರುವವನು, ಹುಟ್ಟಿಲ್ಲದವನು. ವೇದನಾದವಾದ ಜಿತ=ವೇದ ನಾದಕ್ಕೂ ವೇದವಾದಕ್ಕೂ ವಶವಾಗತಕ್ಕವನು. ನಿರ್ಮಾಯ : 'ನಿರ್ಮಾಯ' (ಮಾಯೆಯ ಸೋಂಕಿಲ್ಲದವನು) ಎಂದಿರಬಹುದು. ಭೇದರಹಿತ=ಭೇದವಿಲ್ಲದವನು (ಈ ಹಾಡು ಬರೆದವರು ಅದ್ವೈತಿಯೆಂದು ತೋರುತ್ತದೆ). ಗುಣಹರ=ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳನ್ನೂ ಪರಿಹರಿಸುವವನು. ನಿಜಬೋಧಾತ್ಮಕ=ಸತ್ಯಜ್ಞಾನ ಸ್ವರೂಪ.

೬ ಘಟದೀಪದಂತೆ ರಂಜಿಸಿ ತೋರುವನ : ಗಡಿಗೆಯೊಳಗೆ ಇರುವ ದೀಪದಂತೆ ಹೊಳೆಯುತ್ತಿರುವವನು. ಗಡಿಗೆ ಕವಿದಿರುವ ವರೆಗೂ ಒಳಗೆ ಉರಿಯುತ್ತಿರುವ ದೀಪ ಕಾಣುವುದಿಲ್ಲ. ಆ ಗಡಿಗೆ ಇಲ್ಲವಾದ ಕೂಡಲೆ ದೀಪದ ಪ್ರಕಾಶ ಗೋಚರಿಸುವುದು. ಹಾಗೆಯೇ ಮಾಯೆಯ, ಅಜ್ಞಾನದ ಆವರಣ ಹೋದ ಕೂಡಲೆ ಸ್ವಯಂ ಪ್ರಕಾಶನಾದ ಪರಮಾತ್ಮ ಕಾಣಿಸಿಕೊಳ್ಳುವನು. ಶಿವನೇ ಆ ಪರಮಾತ್ಮ. ನಿಟಿಲಾಕ್ಷ=ಹಣೆಯಲ್ಲಿ ಕಣ್ಣುಳ್ಳವನು.

೭ ಪ್ರತ್ಯಗಾತ್ಮ ಪರಮಾತ್ಮ : ಬೇರೆ ಬೇರೆಯಾಗಿರುವ ಜೀವಾತ್ಮರು ಮತ್ತು ಎಲ್ಲಾ ಆತ್ಮಗಳಲ್ಲೂ ಅಂತರ್ಯಾಮಿಯಾಗಿರುವ ಪರಮಾತ್ಮ—ಈ ಎಲ್ಲ ಶಿವನೇ. ಜರೆವ್ರೋರೆ : ಜರೆಯುವರೆ ? ಜರೆಯಬಹುದೆ ?

೮ ಕಪಟ ಮಾಯಂತೆ : 'ಕಪಟ ಮಯನಂತೆ' ಎಂದಿರಬಹುದು. ಇದರ ಭಾವವೇನು ? ಎಲ್ಲ ಜಾತಿಗಳೊಳು ಬಂಧುತ್ವವಂತೆ : ಇದು ನಿಂದಾ ಸ್ತುತಿ. ಜಾತಿಯ ಕಟ್ಟನ್ನು ಮೀರಿ ನಡೆಯುವವನೆಂದು ನಿಂದೆ. ಸರ್ವಸಮನಾಗಿ ನಡೆಯುವವನೆಂದು ಸ್ತುತಿ.

೯ ಹಿಡಿಯ ಬಲ್ಲವರ್ ಯಾರು....ಇಲ್ಲಿ ವಿವರಿಸಿರುವ ಕಾರ್ಯಗಳು ಶಿವ ಸರ್ವ ಶಕ್ತನೆಂಬುದಕ್ಕೆ ಗುರುತು. ಪನ್ನಂಗ=ಪನ್ನಗ, ಹಾವು.

## ಗೌರಿಯ ಕಲ್ಯಾಣ

ಇದು ಧಾರೆಯಾಗುವಾಗ ಹೇಳುವ ಹಾಡು.

ಪಲ್ಲವಿ|| ಕರುಣಾ ಕಟಾಕ್ಷ=ಕರುಣೆ ಸೂಸುವ ಕಟಾಕ್ಷ (ಕಡೆಗಣ್ ನೋಟ) ವುಳ್ಳವನು.

೧ ಸಿದ್ಧ್ರಾಪುರ : ಸಿದ್ಧರ (ಆ) ಪುರ. ಹಿಮವಂತನ ರಾಜಧಾನಿ. ನಾಲ್ಕನೆಯ ತನೆಯಲ್ಲಿ ಕೊಟ್ಟಿರುವ ಗೌರಮ್ಮನ ಮದುವೆಯಲ್ಲಿಯೂ 'ಸಿದ್ಧಪಟ್ಟಣ' ಇದೆ. ಅಲ್ಲಿ ಅದು ಶಿವಗಂಗೆಯ ಬಳಿ ಬಂದಿದೆ. ಸುಮ್ಮನದಿ=ಸುಮನದಿಂದ. ಒಳ್ಳೆಯ ಮನಸ್ಸಿನಿಂದ ; ಸಂತೋಷದಿಂದ.

೨ ಇಲ್ಲಿಂದ ಮುಂದೆ ನಾಗ್ದಾನ ಮೊದಲುಗೊಂಡು ಮದುವೆಯಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳನ್ನೂ ಕ್ರಮವಾಗಿ ವರ್ಣಿಸಿದೆ ಸಿಬ್ಬಣ ತೆರಳುವುದು=ಗಂಡಿನವರು ಮದುವೆಗಾಗಿ ಹೆಣ್ಣಿನ ಮನೆಗೆ ಹೊರಟುಬರುವುದು. ಬಿಡಾರ=ವಾಸಕ್ಕಾಗಿ ಬಿಟ್ಟಿರುವ ಮನೆ ; ತಂಗುವ ಮನೆ.

೩ ನಗರಾಜ ತನುಜೆ=ಪರ್ವತರಾಜನ ಮಗಳು. ಮುಗುದೆ=ಮುಗ್ಧೆ, ಅರಿಯದವಳು. ಹರಿದ್ರ=ಅರಿಸಿನ. ಸೊಬಗಿಲ್ಲ=ಸೊಬಗಿನಿಂದ. ದುಕೂಲ=ರೇಷ್ಮೆ ಬಟ್ಟೆ.

೪ ನಾಂದಿ=ದೇವತಾರಾಧನರೂಪವಾದ ಮಂಗಳ ಕರ್ಮ. ಪುಣ್ಯಾವರ್ಚನೆ=ಪುಣ್ಯಾಹವಾಚನ ಪರಿಶುದ್ಧಿಗಾಗಿ ಮಾಡುವ ಒಂದು ಕರ್ಮ. ನವಗ್ರಹ ಹವನ=ನವಗ್ರಹಗಳ ಅನುಗ್ರಹಕ್ಕಾಗಿ ಮಾಡುವ ಹೋಮ. ಬ್ರಹ್ಮಭೋಜನ=ಬ್ರಾಹ್ಮಣ ಸಂತರ್ಪಣೆ. ಮಧುಪರ್ಕ=ಮದುವಣಿಗನಿಗೆ ಕೊಡುವ ಜೇನು, ಹಣ್ಣು. ನಗುತ=ಸಂತೋಷದಿಂದ. ಇಲ್ಲಿ ಪ್ರಾಸ ಕೆಟ್ಟಿದೆ ಏನೋ ತಪ್ಪಿರಬೇಕು.

೫ ಇತ್ತೆರದಲಿ=ಎರಡು ರೀತಿಯಲ್ಲಿ. 'ಇಕ್ಕೆಲದಲಿ' (ಎರಡು ಕಡೆಯಲ್ಲಿ) ಎಂದಿದ್ದರೆ ಮೇಲು. ಶಕುನದ ಸೊಡಲು: ಹಿಟ್ಟಿನಲ್ಲಿ ಮಾಡಿ ಧಾರೆಯ ಕಾಲದಲ್ಲಿ ಹೊತ್ತಿಸಿಡುವ ಸೊಡಲು, ದೀಪ (ಸೊಡರು, ಸೊಡಲು). ಮಂಗಳಾಷ್ಟಕ: ವಧೂವರರಿಗೆ ಮಂಗಳವನ್ನು ಕೋರುವ ಆಶೀರ್ವಾದದ ಎಂಟು ಪದ್ಯಗಳು. ಚೆನ್ನದ ಗಳಿಗೆ=ಒಳ್ಳೆಯ ಹೊತ್ತು: ಸುಮುಹೂರ್ತ.

೬ ಕಡಲಡಿ....ಕ್ರಮ: ಅಭಿಪ್ರಾಯ ಸ್ಪಷ್ಟವಾಗುವುದಿಲ್ಲ. ವೇದಘೋಷ ಸಮುದ್ರಘೋಷದಂತೆ ತೆರೆತೆರೆಯಾಗಿ ಉಕ್ಕಿ ಬರುತ್ತಿತ್ತೆಂದು ಭಾವವಿರಬಹುದೆ? ಉಗ್ಗಡಿಸು=ಗಟ್ಟಿಯಾಗಿ ಹೇಳು. ಗುಡ=ಬೆಲ್ಲ ತಳಿ=ಮೇಲೆ ಎರಚು. ಮೃಡ ಗೆದ್ದನೆಂದು: ಗಂಡು ಹೆಣ್ಣುಗಳಲ್ಲಿ ಜೀರಿಗೆ ಬೆಲ್ಲವನ್ನು ಯಾರು ಮೊದಲು ಹಾಕುತ್ತಾರೋ ಅವರ ಪ್ರಭಾವ ಹೆಚ್ಚಾಗುವುದೆಂದು ನಂಬಿಕೆ. ಗಂಡು ಮೊದಲು ಹಾಕಿ ಗೆಲ್ಲಬೇಕೆಂಬುದು ಸಾಮಾನ್ಯ ನಿರೀಕ್ಷಣೆ.

೭ ಆನೆಯ ಗೌರಿ: ? ಇಲ್ಲಿನ ಕಥೆ ಸ್ಪಷ್ಟವಾಗುವುದಿಲ್ಲ. ಸುವ್ವಳಿಸು: ಮೊಳಗು.

೯ ಒಪ್ಪಿಡಿನಡುವಿನ=ಒಂದು ಹಿಡಿಯಲ್ಲಿ ಹಿಡಿಯಬಹುದಾದ (ಷ್ಟುಸಣ್ಣ) ನಡುವುಳ್ಳ (ನಡು=ಸೊಂಟ). ಕಪ್ಪುಗೊರಳ=ಕಪ್ಪು ಕೊರಳಲ್ಲಿರುವವನು; ವಿಷದ ಗುರುತು ಕುತ್ತಿಗೆಯಲ್ಲಿರುವವನು; ಶ್ರೀಕಂಠ; ಶಿವ. ಕಪಟದಿ ತಾ ಬಂದು: ಕಥೆಯೇನೋ ಗೊತ್ತಿಲ್ಲ. ಉಪ್ಪಲಗೌರಿ= ?

೧೦ ಕ್ಷಿರಾನ್ನ=ಹಾಲು ಅನ್ನ. ಮದುಮಕ್ಕಳಿಗೆ ಹಾಲು ಅನ್ನವನ್ನೆ ಬಡಿಸುವುದು. ಮಜ್ಜಿಗೆಯನ್ನಾಗಲಿ ಮೊಸರನ್ನಾಗಲಿ ಹಾಕುವುದಿಲ್ಲ.

೧೧ ನಾಗವಲಿ=ನಾಕಬಲಿ. ದೇವತೆಗಳ ತೃಪ್ತಿಗಾಗಿ ನಾಲ್ಕನೆಯ ದಿನ ನಡಸುವ ಒಂದು ಕರ್ಮ ರೂಢಿಯ ರೂಪ: ನಾಗೋಲಿ.

೧೨ ಬಳುವಳಿ=ಮದುವೆಯಲ್ಲಿ ತಂದೆ ಮಗಳಿಗೆ ಕೊಡುವ ವಸ್ತುಗಳು (ಬಳಿವಳಿ)

## ಗೌರಮ್ಮನನ್ನು ಗಂಡನ ಮನೆಗೆ ಕಳಿಸಿದ್ದು

೧ ಮಂದಾರವದನೆ=ಮಂದಾರದ ಹೂವಿನಂತೆ ಸುಂದರವಾದ ಮುಖವುಳ್ಳವಳು. ಈ ಉಪಮಾನ ಮತ್ತೆಲ್ಲೂ ಕಂಡುಬಂದಿಲ್ಲ. ಮೇನಕಿ: ಹಿಮವಂತನ ಹೆಂಡತಿ, ಪಾರ್ವತಿಯ ತಾಯಿ. 'ಮೇನಾ' ಎಂದು 'ಕುಮಾರ ಸಂಭವ'ದಲ್ಲಿ ಹೇಳಿದೆ. ಅಪ್ಪಿದೊ=ಅಪ್ಪಿದಳು (ಅಪ್ಪಿದೊ, ನುಡಿದೊ, ಕಂಡೊ ಎಂದು ಮುಂತಾಗಿ ಒಕಾರಾಂತವಾಗಿ ಹೇಳುವುದು ಹಿಂದಿನ ರೂಢಿ)

೨ ಅಭ್ರ್ಭುತ=ಅದ್ಭುತ ; ಭಯಂಕರವಾದ. ನಂಜ=ವಿಷವನ್ನು. ಭೂತದ ಹಿಂಡು: ಭೂತನಾಥ ಶಿವ. ನಂದಿ, ಭೃಂಗಿ....ಇವರೆಲ್ಲ ಶಿವನ ಪರಿವಾರದ ಗಣನಾಥರು ನಾಗಕುಂಡಲ=ಹಾವನ್ನು ಕಿವಿಯ ಒಡವೆಯಾಗಿ ಇಟ್ಟುಕೊಂಡವನು.

೩ ಪರ್ವತಾಗ್ರದಲಿ : ಅತ್ಯುನ್ನತ ಸ್ಥಾನದಲ್ಲಿ. ಸರ್ವವನ್ನೂ ಮೀರಿ ಮೇಲಿರುವವರು ಗೌರೀಶಂಕರರು. ಈ ಭಾವದಿಂದಲೇ ಇರಬೇಕು, ಹಿಮಗಿರಿಯ ಅತ್ಯುನ್ನತ ಶಿಖರವನ್ನು 'ಗೌರೀಶಂಕರ' ಎಂದು ಕರೆದಿರುವುದು. ಗದ್ದುಗೆ=ಪೀಠ. ತಾನೇ ತಾನು : ಶಿವನಿಗೆ ಎಣೆಯಾದವರೂ ಹೆಚ್ಚಾದವರೂ ಯಾರೂ ಇಲ್ಲ. ಅವನು ಅದ್ವಿತೀಯ.

೪ ತರಳೆ=ಪ್ರೀತಿಪಾತ್ರಳಾದ ಮಗಳು. ಕರೆಯ ಬಹೆವು ನಾಳೆ: ತಂದೆ ತಾಯಿಗಳನ್ನೂ ತವರುಮನೆಯನ್ನೂ ಅಗಲಿ ಹೋಗುವಾಗ ಹೆಣ್ಣು ಮಕ್ಕಳಿಗೆ ತುಂಬ ಸಂಕಟ. 'ಬೇಗ ಕರೆದುಕೊಂಡು ಬರುತ್ತೇವೆ' ಎಂದು ತಾಯ್ತಂದೆಗಳು ಸಮಾಧಾನ ಹೇಳುವುದು ರೂಢಿ.

## ಗೌರಿದೇವಿ ತವರಿಗೆ ಹೋಗಿ ಬಂದದ್ದು

೧ ಪುರುಷ=ಗಂಡ. ಗೌರವಕ್ಕಾಗಿ ಬಹುವಚನ ಪ್ರಯೋಗ.

೨ ಅಲ್ಲಿ ನಿನಗ್ಯಾರುಂಟು : ನಿನಗೆ+ಯಾರು+ಉಂಟು. 'ನನ್ನನ್ನು ಬಿಟ್ಟು ನೀನೊಬ್ಬಳೇ ಹೋದರೆ ಹಿತವಿಲ್ಲ' ಎಂದು ಅಭಿಪ್ರಾಯವಿರಬಹುದು. ಜೆಲ್ಲೆ ಗಂಗಳ=ಉದ್ದವಾದ ಕಣ್ಣುಗಳುಳ್ಳ. ನೀರೆ=ಸೊಬಗಿ, ಸುಂದರಿ. ಎಡೇ ಸೆವೆ= ಎಡೆಯ ಸೇವೆ, ಎಡೆಮಾಡಿ ಬಡಿಸುವ ಸೇವೆ. ಅನ್ನಪೂರ್ಣೆಯಲ್ಲವೆ ಆಕೆ ?

೩ ಮೀರಿದೋಳು=ಮೀರಿದವಳು, ಅವಿಧೇಯಳು. ಅಗಲಿಕೆಯನ್ನು ತಾಳಲಾರದೆ, ಬೇಗ ಬರಲೆಂದು ಆಡುವ ಆಣೆ ಮಾತು. ನಿಜಮೂರ್ತಿ=ಸತ್ಯಸ್ವರೂಪಿ, ಆತ್ಮಸ್ವರೂಪಿ.

೪ ತಿರಿದುಂಬರೆ: 'ಮೂರು ಲೋಕದಲ್ಲೂ ಭಿಕ್ಷೆ ಬೇಡಿ ಉಂಡು ನೆಮ್ಮದಿಯಾಗಿರಬಹುದಲ್ಲಾ. ಏಕಿಷ್ಟು ಯೋಚನೆ?' ಎಂದು ಅಭಿಪ್ರಾಯ. ಗೌರಿ ವಿನೋದಕ್ಕೆ ಹೀಗೆ ಹೇಳುತ್ತಾಳೆ.

೫ ಮಾತ್ರೆ=ಮಾತಿಗೆ. ಪೊಡವಿ=ಭೂಮಿ (ಪೃಥ್ವಿ)

೬ ಗೌರಿ ತವರು ಮನೆಗೆ ಹೋಗಿ ಬಂದಾಗ ಅವಳಿದ್ದ ರೀತಿ. ರಂಭ್ನಿಮ್ಮ= ರಂಭೆ+ನಿಮ್ಮ ; ರಂಭೆ= (ಇಲ್ಲಿ) ಸುಂದರಿ. ಕಂಗಳದಿ=ಕಣ್+ಕಳದಿ, ಕಣ್ಣಿನ ಪ್ರದೇಶದಲ್ಲಿ.

೮ ಮಾತಂದಳು=ಮಾತ+ಅಂದಳು. 'ಅನ್ನು' ಎಂಬ ರೂಪ ಮಾತಿನಲ್ಲಿ ಬಳಕೆ.

೯ ಇತ್ರು=ಇತ್ತರು, ಕೊಟ್ಟರು.

೧೦ ಸೇರು: ಧಾನ್ಯದ ಒಂದು ಅಳತೆ, ೨೪೦ ಸೇರು. ಒಂದಡಿಗೆ: ಒಂದು ಸಲ ಕೊಪ್ಪರಿಗೆಯಲ್ಲಿ ಕಾಸಿ ತಯಾರಿಸುವಷ್ಟು; ೭-೮ ಮಣ. ಕಾಯ್+ಇತ್ತರು.

೧೧ ಬಿಂದಿಗ್ಗಳು=ಬಿಂದಿಗೆಗಳು. ಚೆಂಬತ್ತರು=ಚೆಂಬು+ಅತ್ತರು.

೧೨ ಸಕಲಾತಿ=(ಕಡುಗೆಂಪು ಬಣ್ಣದ) ಉಣ್ಣೆ ಬಟ್ಟೆ (Scarlet ಎಂಬುದರ ತದ್ಭವ). ಪಟ್ಮಂಚ=ಪಟ್ಟ ಮಂಚ; ಸಿಂಹಾಸನದಂಥ ಉತ್ತಮ ಮಂಚ (?)

೧೩ ಎಮ್ಮೆಂಟು=ಎಮ್ಮೆ+ಎಂಟು (ಆಗಮಕ್ಕೆ ಬದಲಾಗಿ ಲೋಪ ಆಗಿದೆ).

೧೪ ಚೇಪರಿಸಿನ=ಕೆಂಪಗಿರುವ ಒಂದು ಬಗೆಯ ಅರಿಸಿನ. ಮುತ್ತೈದೇರು=ಮುತ್ತ+ಐದೆಯರು. ತುಂಬೋರು=ತುಂಬುವರು. (ಇಲ್ಲಿ) ತುಂಬಿದರು ಎಂದು ಭಾವ.

೧೫ ಉತ್ತರಾಯಣ ಕೂಟ: 'ಉತ್ತರಾಯರ ಕೂಟೆ' ಎಂದು ಹೇಳುತ್ತಾರೆ. ಅದಕ್ಕೆ ಅರ್ಥವಾಗುವುದಿಲ್ಲ. ಭುವನೇಶ್ವರನ ಕೆಲದಲ್ಲಿ: ಕಾವೇರಿ ಹೇಮಾವತೀ ನದಿಗಳ ಸಂಗಮದಲ್ಲಿ ಒಂದು ಶಿವದೇವಾಲಯವಿತ್ತಂತೆ. ಅದು ಈಗ ಕನ್ನಂಬಾಡಿ ಕಟ್ಟೆಯಲ್ಲಿ ಮುಳುಗಿದೆಯೆನ್ನುತ್ತಾರೆ.

## ಗೌರಮ್ಮನಿಗೆ ಸೋಗಿಲಕ್ಕಿ ಇಕ್ಕಿದ್ದು

ಸೋಗಿಲು=ಮಡಿಲು. ಹೆಣ್ಣು ಮಕ್ಕಳನ್ನು ಮನೆಯಿಂದ ಕಳಿಸಿ ಕೊಡುವಾಗ ಅಕ್ಕಿ, ಬೆಲ್ಲ, ಅರಿಸಿನದ ಕೊನೆ, ಕಾಯಿ ಮೊದಲಾದ್ದನ್ನು ಅವರ ಮಡಿಲಿಗಿಟ್ಟು ಕೊಟ್ಟು ಕಳಿಸುವುದು ಸಂಪ್ರದಾಯ ಅನುಕೂಲವಂತರು ಮುತ್ತು, ರತ್ನ ಮೊದಲಾಗಿ ಏನೇನು ಬೇಕಾದರೂ ಕೊಡಬಹುದು.

೧ ಬಿಗಿದವು=ಬಿಗಿಯಲ್ಪಟ್ಟವು ಎಂದರ್ಥ. ಕರ್ಮಣಿ ಪ್ರಯೋಗ. ಕಳುವಲಿ=ಕಳುಹಲಿ. ಹೆಗ್ಗಾಳೆ=ಹಿರಿ+ಕಾಳೆ; ದೊಡ್ಡ ಕಹಳೆ. ಹಿಡಿದವೆ: ಹಿಡಿದವು+ಎ. ಹಿಡಿದು ಊದಿದರು ಎಂದರ್ಥ. ಇದೂ ಕರ್ಮಣಿ ಪ್ರಯೋಗ.

೩ ಹಸ್ತ=ಕೈ. ಬಿಚ್ಚೋಲೆ=ಮುತ್ತೈದೆಯರು ಸುತ್ತ ಕಿವಿಯಲ್ಲಿ ಧರಿಸುವ ಓಲೆಯು ಗರಿ ತೆಗೆದಿಟ್ಟರೆ ಸುರುಳಿ ಬಿಚ್ಚಿಕೊಳ್ಳುವುದರಿಂದ 'ಬಿಚ್ಚೋಲೆ' ಎಂದು ಹೆಸರಾಯಿತು. ಐದೆತನ=ಸೌಮಂಗಲ್ಯ; ಗಂಡನುಳ್ಳವಳಾಗಿರುವುದು.

೪ ತಾಳೋಲೆ=ತಾಳೆಯ ಓಲೆ. ತಾಳೆಯ ಮರದ ಗರಿಗೇ 'ಓಲೆ'ಯೆಂದು ಹೆಸರು.

೫ ಹೊಸ್ತಿಲು=ಹೊಸಲು (ಹೊಸಗನ್ನಡ. 'ಪೊಸಂತಿಲ್' ಹಳಗನ್ನಡ). ನೊಡಿದೊ=ನೋಡಿದಳು. ಪೊಡವಂಟ=ಅಡ್ಡಬಿದ್ದ, ಕಾಲಿಗೆರಗಿದ, ನಮಸ್ಕಾರ ಮಾಡಿದ. ಪೊಡವಂಟೊಡೆ+ಹರಸಿದಳು: ನಮಸ್ಕಾರ ಮಾಡಲಾಗಿ .... (ಇದು ಹಳಗನ್ನಡದ ಪ್ರಯೋಗ. ಬಹು ಹಿಂದಿನ ಕಾಲದಿಂದ ಉಳಿದು ಬಂದಿರಬೇಕು)

೭ ಇತ್ತ+ಹ್ಯಾಗೆ (ಹೇಗೆ)

## ಭೋಜನದ ರಗಳೆ

ಪಂಕ್ತಿ. ೧-೮ ಗಣನಾಥಗೆ+ಒಂದಿಪೆ: 'ವಂದಿಪೆ' ಎಂದಿರಬೇಕಾಗಿತ್ತು. 'ಗಣನಾಥ ವಂದಿಪೆ'ಎಂದು ತಿದ್ದಿದರೆ ಸರಿಹೋಗುತ್ತದೆ. ಶರಣು= 'ರಕ್ಷಣೆ ಬೇಡುತ್ತೇನೆ, ನಮಸ್ಕಾರ,' ಎಂದರ್ಥ. ಪಶುಪತಿ=ಶಿವ. ಪಾಲಿಸು=ದಯಮಾಡಿ ಕೊಡು. ಮಹದೇವ= ಮಹಾದೇವ ; ಶಿವ. ನಿಟ್ಟಿಸಿ=ಚೆನ್ನಾಗಿ ವಿಚಾರ ಮಾಡಿ ನೋಡಿ (ದೃಷ್ಟಿಸಿ, ದಿಟ್ಟಿಸಿ, ನಿಟ್ಟಿಸಿ). 'ವಂದಿಪೆ. ವರ್ಣಿಪೆ' ಮೊದಲಾದ ಹಳಗನ್ನಡದ ರೂಪಗಳನ್ನು ಬೆರಸಿರುವುದು ವಿನೋದಕ್ಕೆ ಕಳೆ ಕಟ್ಟುತ್ತದೆ.

೯-೨೯ ಹೊನಭಟ್ಟರೆ = ಹೊನ್ನಭಟ್ಟರೆ. ತಿಮ್ಮಣ್ಣಭಟ್ಟರ ಮಗನೆಲ್ಲಿ ಹೋದ? ಅಳಿಯ+ಏನಾದ? ಕೈಮರೆತರೆ ಸಮಯ ಹೋಗೋದೆ: ಯಾವುದನ್ನಾದರೂ ಸ್ವಲ್ಪ ಮರೆತರೂ ಸಮಯದಲ್ಲಿ ಕೆಲಸ ಕೆಟ್ಟು ಹೋಗುತ್ತದೆ. ಕಾಶೀವಾಸಿ=ಕಾಶಿಯಲ್ಲಿ ವಾಸ ಮಾಡಿದವನು ; ಕಾಶೀ ಯಾತ್ರೆ ಮಾಡಿದವನು. ಸೊಬಾನೇ ಸೋಮಯಾಜಿಗಳು : 'ಸೋಬಾನೆ' ಎಳೆದಂತೆ ರಾಗವಾಗಿ ಬಹು ನಿದಾನವಾಗಿ ಮಾತಾಡುವ ಸೋಮಯಾಜಿ (=ಸೋಮಯಜ್ಞ ಮಾಡಿದವನು). ಕಲ್ಕ್ಯ : ಭೋಜನ ಕಾಲದಲ್ಲಿ ಹೇಳುವ ಒಂದು ಬಗೆಯ ಪ್ರಬಂಧಕ್ಕೆ "ಕಲ್ಕ್ಯ" ಎನ್ನುತ್ತಿದ್ದರಂತೆ. 'ಕಲ್ಕಿ ಹೇಳುವ' ಎಂದೂ ಆಗಬಹುದು. 'ಕಲಿಕೆಯ ಮಾತು ಆಡುವ' ಎಂದು ಅರ್ಥವಾಗುತ್ತದೆ. ಭೋ ಮಾನಿಗಳು=ಬಹು ಮಾನಿಗಳು. ಹೆಬ್ಬಾರೊಕ್ಕಲು : ಹೆಬ್+ಹಾರುವ+ಒಕ್ಕಲು. ಹಿರಿಯ ಬ್ರಾಹ್ಮಣ ಮನೆತನ. (ಹಾರುವ=ಪಾರ್ವ; ನೋಡುವವನು. ಪಾರ್=ನೋಡು. ಸಂಸ್ಕೃತ : ಪ್ರಷ್ಟಾ. ದೃಶ್=ನೋಡು). ಗುಡ್ಡದ ಕೇರಿ, ಒಡ್ಡರ ಕೊಡಗಿ, ಮೊದಲಾದವು ಶೃಂಗೇರಿಯ ಹತ್ತಿರದ ಸ್ಥಳಗಳು.

೩೦-೪೧ ಪ್ರಸ್ತ=ಉತ್ಸವ. ಶಿಸ್ತು=ಕಟ್ಟುನಿಟ್ಟು ; ಅಚ್ಚುಕಟ್ಟು. (ಸಂಸ್ಕೃತ: ಶಿಷ್ಟಿ). ಎಮ್ಮ=ನಮ್ಮ. ಹುಡುಗರನೆಲ್ಲ ಕಡೆಗೆಳೆದ್ಹಾಕಿ : ಹೀಗೆ ಹುಡುಗರನ್ನು ಒಕ್ಕಡೆಗೆ ನೂಕಿ ಕಡೆಗಣಿಸುವುದು ಅಪರೂಪವೇನಲ್ಲ. ಹೊರಿೀಕೆ=ಹೊರಕ್ಕೆ. ಗುರಿಕಾರ್ರಿಗೆ=ಗುರಿಕಾರರಿಗೆ, ಹಿರಿಯ ಯಜಮಾನರಿಗೆ. ಚೌಕವ ಕಟ್ಟಿ : ತಮ್ಮ ಕಡೆಯವರಿಗೆಲ್ಲ ಬೇಕಾಗುವಷ್ಟು ಎಲೆಗಳಿಗೆ ಬಟ್ಟೆ ಕಟ್ಟಿ ಕಾದಿಟ್ಟು ಕೊಳ್ಳುವ ವಾಡಿಕೆ

ಇಂದಿಗೂ ಸುಬ್ರಹ್ಮಣ್ಯ ಮುಂತಾದ ಕಡೆಗಳಲ್ಲಿ ರೂಢಿಯಾಗಿದೆ. ಘುಮ್ಮನೆ=ಸುಮ್ಮನೆ, ಸದ್ದು ಮಾಡದೆ; ಬೇಗ ಬೇಗ (?). ಆಟದ ಭಾಗೋತ್ರಿಗೆ: ಆಟದ ಭಾಗವತಂಗೆ. ಯಕ್ಷಗಾನದ ಆಟ ಕಲಿಸಿ ಕುಣಿಸುವವರನ್ನು 'ಭಾಗೋತರು' (ಭಾಗವತರು) ಎಂದು ಕರೆಯುತ್ತಾರೆ. ಚೇಷ್ಟೇ ಭಟ್ಟಂಗಳು: ಚೇಷ್ಟೆ ಮಾಡುವ ಹುಡುಗರು. ಮುತ್ತೈದ್ಯೋರಿಗೆ=ಮುತ್ತೈದೆಯರಿಂಗೆ.

೪೩-೪೭ ಹತ್ತುವರೇ=ಹತ್ತೋಣವೆಂದರೆ; ಹತ್ತುವುದಕ್ಕೆ. ಗಂಗಾಮೃತ=ಕುಡಿಯುವ ನೀರು.

೪೮-೬೯ ಏ ಬೆಡಗೆ=ಎಷ್ಟು ಬೆಡಗಿನದಿರಬಹುದು! ಅಡಿಗೆ ಮಾಡಿದವರ ಕೈಗುಣದ ಪ್ರಶಂಸೆ. ಚೇಣೀಕಾಯಿ=ಸೋರೇಕಾಯಿ; ಸಕ್ಕರೆಗುಂಬಳ ಕಾಯಿ. ಮಾವಗ್ ತಂದ್ದಾಕ್=ತಮಗೆ ಬೇಕಾಗಿರುವಾಗ ಮಾವನಿಗೆ, ಅವರಿಗೆ, ಇವರಿಗೆ ಎಂದು ತರಿಸಿ ಹಾಕಿಸಿಕೊಳ್ಳುವುದೊಂದು ಚಮತ್ಕಾರ. ಹಸನಾಗಿವೆ=ಹೊಂದಿಕೊಂಡು ಹದವಾಗಿವೆ. ಶಾಕಂಗಳು=ಕಾಯಿಪಲ್ಲೆಗಳು; ತರಕಾರಿಗಳು. ಪಾಕಂಗಳು=ಅಡಿಗೆಗಳು. ಸರಳೆಮ್ಮೆ=ಸದಾ ಕರೆಯುವ, ಹೆಚ್ಚು ಹಾಲಿನ ಎಮ್ಮೆ. ಔಸರದೋರ್ಗೆ=ಅವಸರದವರಿಂಗೆ. ಹೊತ್ತಾಯಿತೆಂದು ಗದ್ದಲ ಮಾಡುವವರಿಗೆ

೭೦-೭೩ ಎಲ್ಲಾವರಿಗೂ=ಎಲ್ಲರಿಗೂ. ಹೊದೆವರೆ=ಹೊದೆಯೋಣವೆಂದರೆ. ನೆಮ್ಮಿದ=ಆಶ್ರಯಿಸಿದ, ಒರಗಿಕೊಂಡ. ಗಂಧಾಕ್ಷತೆಯು ಕರಗೆ: ಊಟ ಮಾಡಿದ ಆಯಾಸಕ್ಕೆ ಬೆವರಿ ಗಂಧಾಕ್ಷತೆಯೂ ಕರಗಿಹೋಯಿತು!

೭೪-೯೧ ಕೆಪ್ಪ=ಕಿವುಡ. ನಾಮಾಂಕಿತ=ಹೆಸರು. ಸೋಮಾರ=ಸೋಮವಾರ. ಅವಧಾನಂಗಳಿಗೆ=ಅವಧಾನಿಗಳಿಗೆ. ಔಸ್ತಿ=ಔಷಧಿ. ಕಿಗ್ಗ=ಶೃಂಗೇರಿಯ ಹತ್ತಿರ ಇರುವ ಒಂದು ಊರು. ಮೂರು ಹಣ ಮುಪ್ಪಾಗ=ಮೂರು ಮುಕ್ಕಾಲು ಹಣ. (ಒಂದು ಹಣಕ್ಕೆ ೧೪ ದುಡ್ಡು). ಎಣ್ಣೊರಿಗೆ=ಒಂದು ಭಕ್ಷ್ಯ. ನೆರೆದೊ=ನೆರೆದಳು. ದೊಡ್ಡವಳಾದಳು. ಅಂಗ್ಡೀಲ್=ಅಂಗಡಿಯಲ್ಲಿ. ಸೂಳೇರಾಟ=ಸೂಳೆಯರ ನರ್ತನ.

೯೨-೯೬ ಕೂಟಲ=ಕೂಡಣ, ಜೊತೆಯ. ಮಡಿ ಬಂದ=ಒಗೆದು ಬಂದ. ಹಚ್ಚಡ=ಒಳ್ಳೆಯ ಬಟ್ಟೆ (ಹಸರು ಬಟ್ಟೆಯಿರಬಹುದೆ? ಅಥವಾ 'ಒರ್+ಚವಡಿ'=ಒಂಟಿ ಮಡಿಕೆಯ ಬಟ್ಟೆ—ಎಂಬುದು ಒರ್ಚಡ, ಹೊರ್ಚಡ, ಹಚ್ಚಡ ಎಂದಾಯಿತೊ?). ಓದಿಸಿ=ಉಡುಗೊರೆಯಾಗಿ ಕಾಣಿಕೆಕೊಟ್ಟು.

ಈ ರಗಳೆ ಇಲ್ಲಿಗೆ ಮುಗಿಯಿತೆಂದು ಎಲ್ಲ ಹೇಳುತ್ತಾರೆ. ಆದರೂ ಮುಗಿದಂತೆ ಕಾಣುವುದಿಲ್ಲ.

## ಹಬ್ಬ

ಹಬ್ಬ ಮಾಡುವುದು ಹೇಗೆಂಬುದನ್ನು ಈ ಹಾಡಿನಲ್ಲಿ ವಿವರಿಸಿದೆ. 'ಉಂಡು ತಿಂದು

ನಲಿಯುವುದು ಹಬ್ಬವಲ್ಲ ; ಸ್ವತಂತ್ರ ಜೀವನವೇ ಹಬ್ಬ ' ಎಂಬ ಮಾತನ್ನು ಇದು ಒತ್ತಿ ಹೇಳುತ್ತದೆ.

೨ ಉರ್ವಿಗೀಶ್ವರ=ಲೋಕಕ್ಕೆಲ್ಲ ಒಡೆಯನಾದವನು.

೫ ಉಂಬೋದು=ಊಟಮಾಡುವುದು.

೬ ಮಣಿಕರ್ಣಿಕೆ : ಕಾಶಿಯಲ್ಲಿನ ಪ್ರಧಾನ ತೀರ್ಥ.

ತೆನೆ ೮—ಬಸವನ ಅಷ್ಟಮಿಯ ಹಾಡುಗಳು

## ನೀರು ತುಂಬಿಟ್ಕೊಂಡಾಗ ಹೇಳುವುದು

೧ ಮದ್ದಾನಂಥ ಎಮ್ಮೆ : ಮದ್ದಾನೆಯಂಥ ಎಮ್ಮೆ. ತಂಬಿಗ್ಗೆ= ತಂಬಿಗೆಗೆ.

೨ ಆನೆ ಬಂತು.... : ಬಸವನ ಪೂಜೆಗೆ, ಆನೆ ಕುದುರೆಗಳ ಸಡಗರವೆಲ್ಲ ಉಂಟೆಂದು ಭಾವ. ಲಕ್ಷಮ್ಮ=ಲಕ್ಷ್ಮಿ+ಅಮ್ಮ, ಲಕ್ಷ್ಮಮ್ಮ. ತಳಿ=ಎರಚು ; ಸೂಸು.

೩ ಹಸ್ತಿಲೊಟ್ಟಿನ ಮೇಲೆ : ಹೊಸ್ತಿಲೊಟ್ಟಲಿನ ಮೇಲೆ ; ಹೊಸಲಿನ ಮೇಲೆ, ಹತ್ತಿರ, ಪಕ್ಕದಲ್ಲಿ '. ' ಗಂಗೆಯ ದಡದಲ್ಲಿ ' ಎಂದರ್ಥ.

## ಬಾಗಿಲು ತಡೆಯುವ ಹಾಡು

ಪಂಕ್ತಿ ೨೪ ಅತ್ತೆಯ ಹೆಸರು ಹೇಳಲು ದಿಗಿಲು, ಅದಕ್ಕೇ ಅದನ್ನು ಮುಚ್ಚಿ ಮುಚ್ಚಿ ಹೇಳುವುದು.

## ನೀರಿಡುವಾಗ

ಪಂಕ್ತಿ ೮ ಸಂಧ್ಯಾವ್ನೆ=ಸಂಧ್ಯಾವಂದನೆ.

## ಕೋಲನ್ನಾಡೋಣ ಬನ್ನಿ

ಇದನ್ನೂ ಮುಂದಿನ ಹಾಡುಗಳನ್ನೂ ಕೋಲಾಟವಾಡುವಾಗ ಹಾಡುತ್ತಾರೆ.

೧ ಆಡೋಣ : ' ಆಡಾಣ ' ಎಂದು ನುಡಿಯುತ್ತಾರೆ. ಚೆಪ್ಪು ಅರಿಸಿನ= ಚೇಪು ಅರಿಸಿನ.

೨ ಹಾಗ=೪ ಆಣೆ. ಹಣವಿನ ಶಿಸ್ತು : ಒಂದು ಹಣ ವೆಚ್ಚದಿಂದ ಮಾಡಿ ಕೊಂಡಿರುವ ಶಿಸ್ತು ' ಹವಣಿನ ಶಿಸ್ತು ' ಎಂದಿದ್ದರೆ ಚೆನ್ನಾಗಿತ್ತು. ಶಿಸ್ತು ಹವಣಾಗಿದೆ ಯೆಂದು ಅಭಿಪ್ರಾಯವಾಗುತ್ತಿತ್ತು.

೩ ದುಡ್ಡು=೪ ಕಾಸು ಬೆಲೆಯ ಒಂದು ನಾಣ್ಯ.

## ಮಂದರಧರ ತಡೆದನ್ ಯಾತಕೊ

ಇದು ಕೃಷ್ಣ ರುಕ್ಮಿಣಿಯರ ಸರಸದ ಕಥೆ. ರುಕ್ಮಿಣಿ ಗರ್ವದಿಂದ ಸೆಡೆದಿರಲು ಕೃಷ್ಣ ಅವಳ ಬಳಿ ಹೋಗದೆ ತಡೆಯುತ್ತಾನೆ. ಆಗ ಅವಳು ಪೇಚಾಡುತ್ತಾಳೆ. ಅಗಲಿಕೆಯನ್ನು ತಾಳಲಾರದೆ ಗರ್ವವನ್ನು ಬಿಟ್ಟು ಕೃಷ್ಣನಿಗೆ ಹೇಳಿ ಕಳಿಸುತ್ತಾಳೆ. ಅವಳು ಸಂಕಟ ಪಡುತ್ತಿರಲು ದೂತಿಯಿಂದ ಸಂಗತಿಯನ್ನರಿತು ಕೃಷ್ಣ ಬಂದು ನಲ್ಲೆಯನ್ನು ಸಂತಯಿಸುತ್ತಾನೆ. ಈ ಕಥೆ ದೊಡ್ಡದು. ಮಾದರಿಗೆ ಕೆಲವು ನುಡಿಗಳನ್ನು ಮಾತ್ರ ಆಯ್ದು ಬರೆದಿದೆ.

೧ ಮಂದರಧರ=ಮಂದರ ಪರ್ವತವನ್ನು (ಕೂರ್ಮಾವತಾರದಲ್ಲಿ) ಎತ್ತಿದ ಮಹಾವಿಷ್ಣು, ಇಲ್ಲಿ ಶ್ರೀಕೃಷ್ಣ.

೨ ರಕ್ಕಸರ ಸಂಹಾರದನ: 'ರಾಕ್ಷಸರನ್ನು ಸಂಹಾರ ಮಾಡಿದವನು' ಎಂದು ಭಾವ. 'ಸಂಹಾರಕ' ಎಂಬರ್ಥದಲ್ಲಿ 'ಸಂಹಾರ' ಎಂದು ಪ್ರಯೋಗಿಸಿದೆ.

೩ ನಾಗಶಯನ=ಸರ್ಪವೇ ಶಯನವಾಗಿರುವವನು; ಹಾವಿನ ಹಾಸಿಗೆಯಲ್ಲಿ ಮಲಗಿದವನು. ಜರೆದಳು=ಕಳೆಗುಂದಿದಳು. ಬಳಲಿಹೋದಳು. ಜಾಗುಮಾಡದೆ=ಮೌನವಾಗಿದ್ದು ಉದಾಸೀನ ಮಾಡದೆ.

೪ ಬಾಹಾ=ಬಾಹು(=ಬಹು)+ಆ; ಬರುವ. ತುಂಗ ವಿಕ್ರಮನ್ನ=ತುಂಗ ವಿಕ್ರಮನ; ಉನ್ನತ ಪರಾಕ್ರಮಶಾಲಿಯ. ಬಹು ಎತ್ತರಕ್ಕೆ ಬೆಳೆದ ತ್ರಿವಿಕ್ರಮನ ಎಂದೂ ಅರ್ಥಮಾಡಬಹುದು. ಮಾಡಿದೊ=ಮಾಡಿದಳು.

೫ ವ್ಯಾಕುಲಪೋಗಿದ್ದನೆ: ಇದ್ದನು+ಎ. 'ಇದ್ದನಲ್ಲ' ಎಂದು ಭಾವ. ಕಿಂಕರವಾದೆ='ನೊಂದುಕೊಂಡೆ' ಎಂದರ್ಥ ಮಾಡಬೇಕು.

೭ ಗುಟುಕಿತ್ತು=(ಹಕ್ಕಿ ಗುಟುಕು ಕೊಡುವ ಹಾಗೆ) ತಾಂಬೂಲವನ್ನು ಅವಳ ಬಾಯಿಗೆ ಕೊಟ್ಟು.

೧೧ ಸಪ್ತ ರಾಗಗಳಿಂದ=ಏಳು ರಾಗಗಳಿಂದ. ಸಪ್ತ ಸ್ವರಗಳು ಪ್ರಸಿದ್ಧ. ಸಪ್ತರಾಗಗಳು ಯಾವುವೊ ?

## ಶಿವನು ಭಿಕ್ಷಕೆ ಬಂದ ನೀಡು ಬಾರೆ

೧ ಒಂದೆ ಕ್ಕೈಲಿ=ಒಂದು ಕೈಯಲ್ಲಿ. 'ಎ'ಗೆ ಅರ್ಥವಿಲ್ಲ. ಅಜನ ಕಪೋಲ=ಬ್ರಹ್ಮನ ತಲೆಯೋಡು. ಬ್ರಹ್ಮನಿಗೆ ಮೊದಲು ಐದು ತಲೆಗಳಿದ್ದವಂತೆ. ಯಾವುದೋ ಒಂದು ಅವಿನಯದಿಂದ ಶಿವ ಬ್ರಹ್ಮನ ಒಂದು ತಲೆಯನ್ನು ಚಿವುಟಹಾಕಿದನಂತೆ. ಹೀಗೆಂದು ಪುರಾಣ ಕಥೆ. ಪತಾಕಿ=ಪತಾಕೆ; ಬಾವುಟ.

೨ ಎದೆದಲ್ಲಣ=ಎದೆಯನ್ನು ನಡುಗಿಸುವ. ಉಳಿದ ಮಾತುಗಳಿಗೆ ಸರಿಯಾಗಿ ಅರ್ಥವಾಗುವುದಿಲ್ಲ.

೪ ವೈಯಾರ=ಬೆಡಗು ; ಸೊಬಗು. 'ಮೂರು ಲೋಕದ ಸೌಂದರ್ಯ ಸ್ವರೂಪವೇ' ಶಿವ ಎಂದು ಅಭಿಪ್ರಾಯವಿರಬಹುದು. ಆರ್ಥಿ=ಆರ್ತಿ ; ಪ್ರೀತಿ. ನಾಟ್ಯ ಶಿವನ ಲೀಲೆ.

೫ ತಿಂಗಡಿ=ಬಾಲದ ಗರಿ. ಬಿದಿರಿನ ಬಿಲ್ಲು. ಸೋಗೆಯ ನವಿಲು=ದಟ್ಟವಾದ (ಸೋಗೆ ; ತೋಗೈ—ತಮಿಳು) ಉಳ್ಳ ನವಿಲು. ಶಿವನ ವಿಷಕಂಠ ನವಿಲಿನ ಕೊರಳಿನಂತೆ ಅಂದವಾಗಿ ಕಾಣುತ್ತದೆ.

೬ ಕಕ್ಷ=ಕಂಕಳು. ಧರಿಸ್ಯಾನು=ಧರಿಸಿದ್ದಾನೆ.

೭ ಮನೆ ಮನೆ ದಪ್ಪಲೆ=ಪ್ರತಿ ಮನೆಯ ಬಳಿಯಲ್ಲೂ. ದಿಮ್ಮಿಸಾಲೆ : ಇದು ಒಂದು ಬಗೆಯ ಕುಣಿತ.

೮ ಹೊತ್ತ=ಹೊತ್ತಿದ ; ಉರಿಯುವ. 'ಧರಿಸಿದ' ಎಂದರೂ ಹೊಂದುತ್ತದೆ. ಮೂರು ಕೆಂಡ : 'ಸೂರ್ಯ ಚಂದ್ರ ಅಗ್ನಿಗಳು ಶಿವನ ಕಣ್ಣು' (ಸೋಮಸೂರ್ಯಾಗ್ನಿ ಲೋಚನಃ) ಎಂಬುದನ್ನು ಸೂಚಿಸುವಂತಿದೆ.

೯ ಹೆಜ್ಜಾಪು ಊರಿಯೋಗೆ ಅಂತೆ : ಅಭಿಪ್ರಾಯ ತಿಳಿಯದು.

೧೧ ತೋರಬಾರದ ಹಣ್ಣು ಫಲಾರಕ್ಕೆ ಆಗಬೇಕಂತೆ : ಹೇಳಿ ತಿಳಿಸಲಾಗದ, ಅನುಭವೈಕ ವೇದ್ಯವಾದ ಆತ್ಮತತ್ತ್ವವೇ ತೋರಬಾರದ ಹಣ್ಣು. ಆತ್ಮಾನುಭವವೇ ಶಿವನಿಗೆ ಆಹಾರ, ನೈವೇದ್ಯ. ಫಲಾರ=ಫಲಾಹಾರ. ಆರತಿನೆತ್ತ ಬೇಕು=ಆರತಿಯನ್ನೆತ್ತಬೇಕು.

೧೨ ಗುರು ಹಿರಿಯಂಗಳ : ಗುರುಹಿರಿಯರ್ಗಳ, ಗುರುಹಿರಿಯರುಗಳ. ಶಿವ ಎಲ್ಲರಿಗೂ ದೊಡ್ಡವನು. ಈವನು=ಕೊಡುವವನು.

## ಕೋಲು ಸುವರ್ಣನೆ

ಪಲ್ಲವಿ || ಬರುಗೊಂಬೆ=ಪ್ರದಕ್ಷಿಣೆ ಮಾಡುತ್ತೇನೆ.

೧ ಸುವರ್ಣನೆ : ಒಳ್ಳೆಯ ಬಣ್ಣವುಳ್ಳವನೆ. ಇದು ಬಸವನಿಗೆ ಅನ್ವಯಿಸುವ ಮಾತು. ಪ್ರವೃಢ=ಪ್ರೌಢ. ಕುಂಕುಮದ ಪ್ರವೃಢನೆ : ಬಸವನ ಕೋಡಿಗೆ ಕುಂಕುಮ ಬಳಿದು ಅಲಂಕಾರ ಮಾಡುವುದುಂಟು.

೨ ರತಿಸುವೆ=ರಚಿಸುವೆ ; ಅಲಂಕರಿಸುತ್ತೇನೆ.

೩ ಒಕ್ಕಳ=ಒಕ್ಕೊಳಗ ; ಒಂದು ಕೊಳಗ. ಹೊನಗೆಜ್ಜೆ=ಹೊನ್ನ (ಚಿನ್ನದ) ಗೆಜ್ಜೆ.

೪ ಹಸಿಯ ಕಲ್ಲು=ಕಾರ ಅರೆಯುವ ಕಲ್ಲು. ಅರೆಯುವ ಕಲ್ಲು ಬಹು ಗಟ್ಟಿ. ಬಸವಣ್ಣ ಬರುವ ರಭಸಕ್ಕೆ ಎಂಥ ಗಟ್ಟಿ ಕಲ್ಲೂ ಒಡೆದು ಸೀಳಿಹೋಯಿತೆಂದು ಭಾವ.

೫ ಈರಣ್ಣ=ವೀರಣ್ಣ. ವೀರಭದ್ರಸ್ವಾಮಿ. ಗೋರಿಕಲ್ಲು : ಒಂದು ಬಗೆಯ ಕಲ್ಲು.

೬ ರಥಬಳ್ಳಿ : ಇದು ಯಾವ ಬಳ್ಳಿಯೋ ತಿಳಿಯದು. ತೆರವು=ಅವಕಾಶ. 'ಬಾಗಲು' ಎಂದು 'ಗ'ಕಾರವನ್ನೆ ಉಚ್ಚರಿಸುತ್ತಾರೆ.

೭ ಗೋರಿ=ದೋಟಿ (ಪದಾರ್ಥಗಳನ್ನು ಹತ್ತಿರಕ್ಕೆ ಎಳೆದುಕೊಳ್ಳುವ ಸಲಕರಣೆ) ಯಿರಬಹುದೆ ? ಶಾರೆ=ಸೇರೆ, ಸೆರೆ.

೯ ಚಿಬ್ಲ=ಚಿಬ್ಬಲು ; ಸಣ್ಣ ಮೊರ; ಮುತ್ತಿಲು.

೧೦ ಬಸವಣ್ಣನ ಶಿವಪೂಜೆ : ಈ ಮಾತು ನೋಡಿದರೆ ಇದು ಲಿಂಗವಂತರಲ್ಲಿ ಮೊದಲು ಪ್ರಚಾರದಲ್ಲಿದ್ದ ಪದವೆಂದೂ ಕಾಲಕ್ರಮದಲ್ಲಿ ಬ್ರಾಹ್ಮಣರಲ್ಲಿ ಬಳಕೆಗೆ ಬಂತೆಂದೂ ಊಹಿಸಬಹುದು. ಬಸವನ ಪೂಜೆಯ ಒಟ್ಟು ಸಂಪ್ರದಾಯವೇ ಬ್ರಾಹ್ಮಣರದ್ದಲ್ಲವೆಂದು ತೋರುತ್ತದೆ. ಬಸವನನ್ನು ನಂಬಿ ನೆಲ ಉತ್ತು ಜೀವಿಸುವ ಒಕ್ಕಲಿಗರಲ್ಲಿ ಮೊದಲು ರೂಢಿಯಾಗಿದ್ದಿರಬೇಕು.

೧೨ ಈರಣ್ಣನ ಮಕ್ಕಳಿರ : ವೀರಭದ್ರನ ಮಕ್ಕಳೆಂದು ಭಕ್ತರನ್ನು ಸಂಬೋಧಿಸಿರಬಹುದು. ಮನೆಯವರನ್ನು ಕುರಿತದ್ದೂ ಆಗಬಹುದು. ಸೀಳುಗೇದಿಗೆಯ ಮುಡಿಬನ್ನಿ : ಶಿವನಿಗೆ ಕೇದಿಗೆ (ತಾಳೆಯ) ಹೂ ಆಗದು. ಶಿವರಾತ್ರಿಯಲ್ಲಿ ಮಾತ್ರ ತಾಳೆಯ ಹೂವನ್ನು ಸೀಳಿ ಪೂಜೆ ಮಾಡಬಹುದಂತೆ.

೧೩-೧೪ ಇವೆರಡೂ ಕಾವೇರಿ ಶ್ರೀರಂಗಪಟ್ಟಣವನ್ನು ಸುತ್ತಿ ಹರಿದದ್ದನ್ನು ವರ್ಣಿಸುತ್ತವೆ.

## ದುಡ್ಡು ಕೇಳುವ ಹಾಡು

೧ ಎಂದ್ರೆ=ಎಂದರೆ.

೨ ನುಸ್ದ್ಹೋದ=ನುಸಿದು ಹೋದ.

೫ ಅಡ್ಡ=ಅರ್ಧ ; ಎಂಟಾಣೆ.

೬ ಹಾಗ=ನಾಲ್ಕನೆಯ ಒಂದು ಭಾಗ ; ನಾಲ್ಕಾಣೆ.

## ಹರಕೆ

೧ ಉದ್ದಾಗಲಿ=ಉದ್ದವಾಗಲಿ. 'ಉದ್ದಿನ ಕಾಯಿ ಬಹು ಉದ್ದವಾಗಿ ಬೆಳೆಯಲಿ.' ಆಗ್ಲಿ=ಆಗಲಿ. ಏಳು ಗೊನೆಯಾಗ್ಲಿ : ಸಮೃದ್ಧಿಯಾಗಿ ಬೆಳೆಯಲಿ ಎಂದು ಭಾವ.

೨ ಅಣ್ತಮ್ಮದಿರು=ಅಣ್ಣತಮ್ಮಂದಿರು. ಸೀತಾಂಗ್ನೇರಂಥ=ಸೀತಾಂಗನೆಯರಂಥ ; ಸೀತಾದೇವಿಯಂಥ (ಇಲ್ಲಿ ಬಹುವಚನ ಗೌರವಾರ್ಥಕ). ಮಡದೀರು=ಮಡದಿಯರು ; ಹೆಂಡತಿಯರು.

೪ ಸೌಭದ್ರೇರಂಥ=ಸುಭದ್ರೆಯಂಥ.

೫ ಒಂದು ಸಾವಿರವಾಗ್ಲಿ : ಒಂದಿದ್ದದ್ದು ಸಾವಿರವಾಗಿ ಬೆಳೆದು ಹೆಚ್ಚಲಿ.

೬ ಹೆಚ್ಚೊಕ್ಕಲು=ಎಲ್ಲರಿಗಿಂತ ಹೆಚ್ಚಿನವನೆಂದು ಹೆಸರು ಪಡೆದ ಹಿರಿಯೊಕ್ಕಲು. ಹತ್ತೊಕ್ಕಲು=ಒಂದು ಮನೆ ಹತ್ತು ಮನೆಯಾಗಿ ಬೆಳೆಯಲಿ.

# ಅನುಬಂಧ

## ಇಮಾಂ ಹುಸೇನರ ಬಲಿದಾನ

ಮುಸ್ಲಿಂ ಮತಸ್ಥಾಪಕರಾದ ಪೈಗಂಬರ್ ಮಹಮದ್ ಅವರಿಗೆ ಫಾತಿಮಾ ಎಂಬೊಬ್ಬ ಮಗಳಿದ್ದಳು. ಅವರ ಚಿಕ್ಕಪ್ಪನ ಮಗ ಅಲಿ ಎಂಬವರಿಗೆ ಅವಳನ್ನು ಕೊಟ್ಟು ಮದುವೆಯಾಗಿತ್ತು. ಆ ದಂಪತಿಗಳಿಗೆ ಹಸನ್, ಹುಸೇನ್ ಎಂಬಿಬ್ಬರು ಮಕ್ಕಳಿದ್ದರು.

ಮುಸ್ಲಿಮರಿಗೆ ಗುರು, ದೊರೆ, ದಳಪತಿ ಎಲ್ಲ ಮಹಮದರೇ. ಅವರ ಅನಂತರ ಅಳಿಯ ಅಲಿ ಉತ್ತರಾಧಿಕಾರಿ (ಕಲೀಫ್) ಆಗಬೇಕೆಂದು ಮಹಮದ್ ಅವರು ಹೇಳಿದ್ದರಂತೆ. ಆದರೆ ಹಾಗಾಗಲಿಲ್ಲ. ಅಲಿ ಮಹಮದ್ ಅವರ ಉತ್ತರಕ್ರಿಯೆಗಳಲ್ಲಿ ತೊಡಗಿದ್ದಾಗ, ಅಬು ಬೆಕರ್ ಎಂಬಾತನನ್ನು ಕಲಿಫ ಪಟ್ಟಕ್ಕೆ ಆಯ್ದರು. ಅಲಿ ತಮ್ಮ ಹಕ್ಕನ್ನು ಸಾಧಿಸಹೋಗದೆ ಶಾಂತರಾಗಿದ್ದರು. ಧರ್ಮದೇಶಿಕ (ಇಮಾಮು) ರಾಗಿದ್ದರು.

ಅಬು ಬೆಕರನ ಅನಂತರವೂ ಅಲಿಯವರ ಹಕ್ಕಿಗೆ ಮನ್ನಣೆ ದೊರೆಯಲಿಲ್ಲ. ಮತ್ತಿಬ್ಬರು ಕಲೀಫರಾದ ಮೇಲೆ ಅಲಿಯವರನ್ನು ಕಲೀಫ ಪಟ್ಟಕ್ಕೆ ಆಯ್ದರು.

ಅಲಿ ಬಹು ನಿಷ್ಠುರು. ಕೊರಾನಿಗನುಸಾರವಾಗಿ ಕಟ್ಟುನಿಟ್ಟಾಗಿ ಆಳತೊಡಗಿದರು. ಹಲವರು ತಿರುಗಿಬಿದ್ದರು; ದಂಗೆಗಳಾದವು. ಅಲಿಯವರು ದಂಗೆಗಳನ್ನಡಗಿಸಿದರು. ಆದರೂ ಒಂದು ಪ್ರಾಂತದ ಮುಖ್ಯಾಧಿಕಾರಿಯಾಗಿದ್ದ ಮೊಆವಿಯ ಎಂಬವನು ತಂತ್ರದಿಂದ ಅಲಿಯವರ ಕಡೆಯ ಜನರನ್ನು ಒಲಿಸಿಕೊಂಡನು. ಮೊಆವಿಯನೂ ಮಹಮದ್ ಅವರ ವಂಶದವನೇ. ಬಹು ದೂರದ ಜ್ಞಾತಿ. ಅಲಿಯವರು ಒಮ್ಮೆ ಮಸೀದಿಯಲ್ಲಿ ಪ್ರಣಾಮ ಮಾಡಿ ಪ್ರಾರ್ಥಿಸುತ್ತಿದ್ದಾಗ ದ್ರೋಹಿಯೊಬ್ಬನು ಅವರ ಕತ್ತನ್ನು ಕತ್ತರಿಸಿ ಹಾಕಿದನು.

ಅವರ ಹಿರಿಯ ಮಗ ಹಸನ್ ಮುಂದಿನ ಉತ್ತರಾಧಿಕಾರಿ. ಆಗಿನ ಸಂದರ್ಭವನ್ನು ವಿಮರ್ಶಿಸಿ ಅವರು ಒಪ್ಪಂದ ಮಾಡಿಕೊಂಡು ಮೊಆವಿಯನಿಗೆ ಕಲೀಫ್ ಪದವಿಯನ್ನು ಬಿಟ್ಟುಕೊಟ್ಟರು. ರಾಜಕೀಯಕ್ಕೆ ಹೋಗದೆ ಕೇವಲ ಧರ್ಮದಲ್ಲೇ ನಿರತರಾಗಿದ್ದರೂ ಇಮಾಂ ಹಸನ್ ದ್ರೋಹಕ್ಕೆ ಬಲಿಬಿದ್ದು ಮಡಿದರು. ಆಮೇಲೆ ಅವರ ತಮ್ಮ ಹುಸೇನ್ ಇಮಾಮರಾದರು.

ಮೊಆವಿಯನು ತನ್ನ ಮಗ ಯೆಸೀದ್ ಕಲೀಫನಾಗಬೇಕೆಂದು ನಿರ್ಧರಿಸಿ ಮಡಿದನು. ಯೆಸೀದನು ಕಲೀಫ್‌ಗಿರಿಯನ್ನು ವಶಪಡಿಸಿಕೊಂಡನು. ಮೊಆವಿಯನು ಮಹಮದರ ಮನೆತನಕ್ಕೆ ಸೇರಿದವರಲ್ಲಿ ಹಲವರನ್ನು ಕೊಲೆ ಮಾಡಿಸಿದ್ದನು. ಯೆಸೀದನೂ ಆ ದ್ರೋಹವನ್ನೇ ಮುಂದುವರಿಸಿದನು

ಇಮಾಂ ಹುಸೇನರೂ ತನ್ನನ್ನು ಕಲೀಫನೆಂದು ಒಪ್ಪಿಕೊಂಡು ಗೌರವಿಸಬೇಕೆಂದು ಯೆಸೀದ್ ನಿರೂಪ ಕಳಿಸಿದನು. ಅವರು ಒಪ್ಪಿಕೊಳ್ಳಲಿಲ್ಲ. ಒಪ್ಪಿಕೊಳ್ಳದಿದ್ದವರಿಗೆ ಶಿರಶ್ಛೇದಮಾಡಬೇಕೆಂದು ಆಜ್ಞೆಯಾಗಿತ್ತು.

ಹೀಗೆಯೇ ಕೆಲವು ಕಾಲ ಕಳೆಯುವಲ್ಲಿ ಕೂಫ ಪ್ರಾಂತದ ಜನ ಯೆಸೀದನ ಆಳಿಕೆಗೆ ಬೇಸತ್ತು, ಹುಸೇನರನ್ನು ತಮ್ಮ ನಾಯಕರಾಗಬೇಕೆಂದು ಬಯಸಿದರು ಧರ್ಮ ರಕ್ಷಣೆಗಾಗಿ ಹೊರಟುಬರಬೇಕೆಂದೂ, ತಾವು ಬೆಂಬಲಕ್ಕಿರುವುದಾಗಿಯೂ ಹೇಳಿ ಕಳಿಸಿದರು.

ಹುಸೇನರು ತುಂಬ ವಿಚಾರಮಾಡಿ ಧರ್ಮರಕ್ಷಣೆಯ ಕರೆಯನ್ನು ಕಡೆಗಣಿಸುವುದು ಸರಿಯಲ್ಲವೆಂದು ನಿರ್ಧರಿಸಿ, ಕೂಫದ ಪ್ರಜೆಗಳನ್ನು ನಂಬಿ ಪರಿವಾರದೊಡನೆ ಪ್ರಯಾಣ ಬೆಳಸಿದರು. ಈ ಸುದ್ದಿಯನ್ನರಿತು ಯೆಸೀದ್ ಅಲ್ಲಿಗೆ ಬೇರೊಬ್ಬ ಅಧಿಕಾರಿಯನ್ನು ದೊಡ್ಡ ದಂಡಿನೊಡನೆ ಕಳಿಸಿಕೊಟ್ಟನು. ಆಗ ಕೂಫದ ಪ್ರಜೆಗಳು ಯೆಸೀದನ ಕಡೆಗೇ ಸೇರಿಕೊಂಡುಬಿಟ್ಟರು. ಹುಸೇನರು ಆಶ್ರಯಹೀನರಾಗಿ ಶತ್ರುಗಳ ನಡುವೆ ಸಿಕ್ಕಿ ಕೊಂಡರು

ಹುಸೇನರ ಜೊತೆಯಲ್ಲಿ ಹೆಂಗಸರೂ ಮಕ್ಕಳೂ ಬಹಳ ಮಂದಿಯಿದ್ದರು. ಮಹಮದ್ ಅವರ ಸಂತಾನದಲ್ಲಿ ಮುಕ್ಕಾಲುಪಾಲು ಅವರ ಸಂಗಡ ಇದ್ದರು. ಮೈ ಗಾವಲಿಗೆ ಇದ್ದ ದಂಡು ಬಹು ಸ್ವಲ್ಪ. ಆಗ ಅವರು ತಮ್ಮ ಪರಿವಾರದವರಿಗೆ ತಮ್ಮ ಸ್ಥಿತಿಯನ್ನು ವಿವರಿಸಿ ಪ್ರಾಣರಕ್ಷಣೆ ಬಯಸುವವರೆಲ್ಲ ಹೊರಟುಹೋಗಬಹುದೆಂದು ತಿಳಿಸಿದರು. ಎಲ್ಲ ಹೊರಟುಹೋಗಿ ಕೊನೆಯಲ್ಲಿ ಎಪ್ಪತ್ತೊಂದು ಮಂದಿ ಮಾತ್ರ (ಅವರ ಮನೆಯವರೂ ಸೇರಿ) ಅವರ ಜೊತೆ ಉಳಿದರು.

ಹುಸೇನರು ಈ ಅಲ್ಪ ಪರಿವಾರದೊಡನೆ ಮುಂದುವರಿದು ಮೊಹರಂ ತಿಂಗಳ ಎರಡ ನೆಯ ತೇದಿಯಲ್ಲಿ ಕರ್ಬಲ ಎಂಬ ಬಳಿ ಬಂದು ಸೇರಿದರು. ಶತ್ರುಸೈನ್ಯ ಅವರನ್ನು ಸುತ್ತುಗಟ್ಟಿತು. ಒಂದು ಕಡೆ ಯೂಫ್ರಟೀಸ್ ನದಿ, ಒಂದು ಕಡೆ ಮರಳುಕಾಡು. ಶತ್ರು ಗಳು ಇಮಾಮರ ಪರಿವಾರಕ್ಕೆ ನೀರು ದೊರೆಯದಂತೆ ಹೊಳೆಯ ದಾರಿಗೆ ಅಡ್ಡನಿಂತರು. ನೀರಿಲ್ಲದೆ ಸಾಯುವಂತೆ ಮಾಡಬೇಕೆಂದೂ ಸತ್ತ ಮೇಲೆ ಹೆಣವನ್ನು ತುಳಿಯಬೇಕೆಂದೂ ರಾಜಾಜ್ಞೆಯಾಗಿತ್ತಂತೆ.

ನೀರಿಲ್ಲದೆ ಎಲ್ಲರೂ ತಲ್ಲಣಿಸಿದರು. ಮಕ್ಕಳು ಗಂಟಲೊಣಗಿ ಅಳಲಾರದೆ ಸೊರಗಿದವು. ಈ ಸಂಕಟಕ್ಕೆ ಹುಸೇನರ ಎದೆ ಕರಗಿತು. ಶತ್ರುಗಳಿಗೆ ಮನಕರಗಲಿಲ್ಲ. ತಿಳಿ ನೀರನ್ನು ಕೊಡಗಳಲ್ಲಿ ತುಂಬಿ ತಂದು ಅವರೆದುರಿಗೆ ನೆಲಕ್ಕೆ ಸುರಿದು, ಹಂಗಿಸ ತೊಡಗಿದರು.

ಮೊಹರಂ ಎಂಟನೆಯ ರಾತ್ರೆ ಐವತ್ತು ಮಂದಿ ಶೂರರು ನುಗ್ಗಿಹೋಗಿ ಸಾಹಸ ಮಾಡಿ ಇಪ್ಪತ್ತು ಕೊಡ ನೀರು ತಂದರು. ಮರುದಿನ ಬೆಳಗ್ಗೆ ದೊಡ್ಡ ದಂಡು ಹುಸೇನರ ಬೀಡಿನ ಮೇಲೆ ನುಗ್ಗಿತು. ಆಗ ಹುಸೇನರು ನಿರಪರಾಧಿಗಳನ್ನು ಕೊಲ್ಲುವುದು ಧರ್ಮ ವಲ್ಲವೆಂದು ಉಪದೇಶ ಮಾಡಿದರು. ಆ ಉಪದೇಶ ಶತ್ರುಗಳ ಕಿವಿಗೆ ಬೀಳಲಿಲ್ಲ. ದೇವರ ಪ್ರಾರ್ಥನೆಗೂ ಧ್ಯಾನಕ್ಕೂ ಒಂದು ದಿನ ಅವಕಾಶಕೊಡುವಂತೆ ಕೇಳಿದರು

ಏನು ಮನಸ್ಸು ಬಂತೋ, ಕ್ರೂರಿಗಳ ಮನಸ್ಸು ಕರಗಿ ಒಪ್ಪಿಕೊಂಡರು. ಹುಸೇನರೂ ಪರಿವಾರದವರೂ ಈಶ್ವರಧ್ಯಾನದಲ್ಲಿ ಮಗ್ನರಾದರು.

ಮರುದಿನ, ಮೊಹರಂ ಹತ್ತನೆಯ ದಿನ, ಬೆಳಗ್ಗೆ ಕಾಳಗ ಮೊದಲಾಯಿತು. ನೀರಿಲ್ಲದೆ ಬಾಯೊಣಗಿ ಸಂಕಟಪಡುತ್ತಿದ್ದ ಧರ್ಮವೀರರು ಸರ್ವ ಸನ್ನಾಹದಿಂದ ಕೂಡಿದ ಶತ್ರುಗಳನ್ನೆದುರಿಸಿ, ಸಿಂಹ ಪರಾಕ್ರಮವನ್ನು ಮೆರೆದು ಹೋರಿದರು. ಹಲವರನ್ನು ಕೊಂದು ಒಬ್ಬೊಬ್ಬರಾಗಿ ಮಡಿದೊರಗಿದರು. ಹುಸೇನರ ತಂಗಿ ಸೈನಾಬ್, ತನ್ನ ಇಬ್ಬರು ಮಕ್ಕಳನ್ನು (ಅವರು ಕ್ರಮವಾಗಿ ಎಂಟು ಒಂಭತ್ತು ವರ್ಷದವರು) ಹುಸೇನರಿಗಿಂತ ಮೊದಲು ರಣರಂಗಕ್ಕೆ ನುಗ್ಗಲು ಹುರಿದುಂಬಿಸಿ ಕಳಿಸಿದಳು. ಹಸನರ ಮಗ ಕಾಸಿಂ, ಇನ್ನೂ ೧೦-೧೫ ವರ್ಷದ ಹುಡುಗನಾದರೂ ಎಂಥ ವೀರನನ್ನೂ ನಾಚಿಸುವಂತೆ ಯುದ್ಧ ಮಾಡಿದನು.

ಕಡೆಗೆ ಹುಸೇನರ ಸರದಿ ಬಂತು. ಅವರು ಬಹು ಪರಾಕ್ರಮದಿಂದ ಯುದ್ಧ ಮಾಡಿದರು. ಗಾಯಗೊಂಡು ರಕ್ತ ಸುರಿಯುತ್ತಿರಲು, ಮೆಲ್ಲನೆ ಮೈಯೆಳೆದುಕೊಂಡು ನದಿಯ ದಡಕ್ಕೆ ಹೋಗಿ ಕುಡಿಯಲೆಂದು ಬೊಗಸೆಯಲ್ಲಿ ನೀರೆತ್ತಿಕೊಂಡರು. ಆ ನೀರು ತುಟಿ ಸೋಕುವಷ್ಟರಲ್ಲಿ ಬಾಯಿಗೆ ಬಾಣ ತಗುಲಿ ಬೊಗಸೆಯ ನೀರು ರಕ್ತವಾಯಿತು. ಆ ಬಳಿಕ ಅವರು ಭಗವಂತನನ್ನು ಸ್ಮರಿಸುತ್ತ, ಮೇಲಿದ್ದ ಹಗೆಗಳಮೇಲೆ ಬಿದ್ದರು. ದ್ರೋಹಿಗಳು ಸುತ್ತಲೂ ಮುತ್ತಿದರು. ರಕ್ತ ಸೋರಿ ಶಕ್ತಿಗುಂದಿದ ಇಮಾಂ ಹಸನರು ನೆಲಕ್ಕುರುಳಿದರು. ಮರಣ ಮುಖದಲ್ಲಿದ್ದ ಆ ವೀರಗುರುವಿನ ಮೇಲೆ ದಂಡಾಳುಗಳು ನುಗ್ಗಿ ತಲೆ ಕತ್ತರಿಸಿದರು; ಹೆಣವನ್ನು ಕಾಲ್ಕೆಳಗೆ ತುಳಿದರು; ತಮಗೆ ತೋರಿದಂತೆಲ್ಲ ಅವಮಾನಮಾಡಿದರು.

ಇಮಾಂ ಹುಸೇನರ ತಲೆಯನ್ನೂ, ಕಳೆದುಳಿದ ಹೆಂಗಸರು ಮಕ್ಕಳನ್ನೂ ಯೆಸೀದನಿಗೆ ಕಾಣಿಕೆಯಾಗಿ ಕಳಿಸಿದರು. ಅವನು ಜನಾಭಿಪ್ರಾಯಕ್ಕಂಜಿ ಪೈಗಂಬರರ ಮನೆತನದವರನ್ನು ಮರ್ಯಾದೆಯಿಂದ ಹಿಂದಕ್ಕೆ ಕಳಿಸಿದನು. ಮುಂದೆ ಮಹಮದರ ಸಂತಾನಕ್ಕೆ ಕಲೀಫ್ ಪದವಿ ಇಲ್ಲವಾಯಿತು. ಅವರು ಕಲೀಫ್ ಪದವಿಯನ್ನು ಬಯಸದೆ ಕೇವಲ ಧರ್ಮಗುರುಗಳಾಗಿ ಉಳಿದರೂ ಕೂಡ ಅವರಿಗೆ ಕಿರುಕುಳ ಮಾತ್ರ ತಪ್ಪಲಿಲ್ಲ.

ಮಹಮದವರ ಸಂತತಿಯವರಿಂದ ತಮ್ಮ ರಾಜಕೀಯಾಧಿಕಾರಕ್ಕೆ ಎಲ್ಲಿ ಚ್ಯುತಿ ಬಂದೀತೋ ಎಂದು ಹೆದರಿ ಕಲೀಫರು ಅವರ ಮೇಲೆ ಸದಾ ಕಣ್ಣಿಟ್ಟಿರುತ್ತಿದ್ದರು; ಒಂದಲ್ಲ ಒಂದು ಬಗೆಯಿಂದ ಅವರನ್ನು ಪೀಡಿಸುತ್ತಿದ್ದರು. ವಿದ್ಯಾವಿನಯಸಂಪತ್ತು, ಧರ್ಮನಿಷ್ಠೆ, ಶಾಂತಿ ಪ್ರಿಯತೆಗಳಲ್ಲಿ ಮಾದರಿಯಾಗಿದ್ದ ಆ ಗುರುಪುತ್ರರನ್ನು ಮುಸ್ಲಿಂ ಪ್ರಪಂಚವೆಲ್ಲ ಮೆಚ್ಚಿ ಆದರಿಸಿತು; ಇಮಾಮರೆಂದು ಭಕ್ತಿದೋರಿತು.

ಮಹಮದರ ಮನೆತನಕ್ಕೇ ಸರ್ವಾಧಿಕಾರವೂ ಇರಬೇಕೆಂಬ ಪಕ್ಷದವರು 'ಷಿಯಾ' ಗಳು; ಉಳಿದವರು 'ಸುನ್ನಿ'ಗಳು. ಮುಸ್ಲಿಂ ಜನತೆಯಲ್ಲಿ ಷಿಯಾಗಳು ಬಹು

ಕಡೆಮೆ ; ಸುನ್ನಿಗಳೇ ಅಧಿಕಸಂಖ್ಯೆಯವರು. ಷಿಯಾ ಪಂಗಡದವರು ಅಲಿಯವರಿಗಿಂತ ಹಿಂದೆ ಆಳಿದ ಮೂವರು ಕಲೀಫರನ್ನು ಕಲೀಫರೆಂದು ಒಪ್ಪಿಕೊಳ್ಳುವುದಿಲ್ಲ. ಅಲಿಯವರು ಮತ್ತು ಅವರ ಸಂತತಿಯಲ್ಲಿ ಹನ್ನೊಂದನೆಯ ತಲೆಯವರೆಗಿನವರು-ಒಟ್ಟು ಹನ್ನೆರಡು ಮಂದಿ ಇಮಾಮರೆಂದು ಅಂಗೀಕರಿಸುತ್ತಾರೆ. ಮಹಮದರ ಮನೆತನಕ್ಕೆ ಒದಗಿ ಬಂದ ಘೋರ ದುಃಖವನ್ನು ನೆನೆದು ಸದಾ ಕೊರಗುತ್ತಿರುತ್ತಾರೆ.

ಇಮಾಂ ಹುಸೇನರ ಹೆಂಡತಿ ಇರಾನಿನ (ಪರ್ಷಿಯಾ ದೇಶದ) ರಾಜಪುತ್ರಿ. ಆ ಕಾರಣ ದಿಂದಿರಬಹುದು ಇರಾನಿನಲ್ಲಿ ಷಿಯಾ ಪಂಗಡದವರೇ ಮುಕ್ಕಾಲು ಮೂರುವೀಸ ಪಾಲು.

ಒಟ್ಟಿನಲ್ಲಿ ಮಹಮದರ ಸಂತತಿಯವರ ಕಥೆ ಕರುಣೆಯನ್ನುಕ್ಕಿಸುವ ದುರಂತ ಕಥೆ. ಧರ್ಮವೊಂದನ್ನು ನಂಬಿ ಉಳಿದ ಯಾವುದನ್ನೂ ಲಕ್ಷಿಸದೆ ಅದಕ್ಕಾಗಿ ತಮ್ಮನ್ನೆ ಬಲಿದಾನ ವಾಗಿ ಅರ್ಪಿಸಿದ ಆ ಸಂತರ ಬಾಳು ದೈವಭಕ್ತರಿಗೆ ದಾರಿದೋರುವ ನಂದಾ ದೀಪವಾಗಿ ಮೆರೆಯುತ್ತಿದೆ.

ಕರ್ಬಲದ ಬಯಲಿನಲ್ಲಿ ಇಮಾಂ ಹುಸೇನರು ಬಲಿಯಾದ್ದರ ಸ್ಮಾರಕವೇ "ಮೊಹರಂ ಹಬ್ಬ."

---

# ಶ್ರೀ ಎಲ್. ಗುಂಡಪ್ಪನವರ ಗ್ರಂಥಗಳು

## ಭಾಸ ನಾಟಕಗಳ ಭಾಷಾಂತರ

೧ ಭಾಸನ ಏಕಾಂಕ ನಾಟಕಗಳು: ಸಂಸ್ಕೃತದಿಂದ ಕನ್ನಡಿಸಿದ ಪುರಾತನ ಏಕಾಂಕ ನಾಟಕಗಳ ಸಂಗ್ರಹ. ೧—೪—೦

೨ ಭಾಸನ ಪಂಚರಾತ್ರ: ಮಹಾಭಾರತ ಕಥೆಯನ್ನು ಮಂಗಳಕ್ಕೆ ಮಾರ್ಪಡಿಸಿರುವ ಭಾಸನ ಒಂದು ಅಪೂರ್ವ ಕಲ್ಪನೆ ಮೂರಂಕದ ನಾಟಕ. ೦—೧೨—೦

೩ ಪ್ರತಿಜ್ಞಾ ಯೌಗಂಧರಾಯಣ: ಪುರಾತನ ಭರತಖಂಡದ ಒಬ್ಬ ಪ್ರಸಿದ್ಧ ಮಂತ್ರಿಯ ನೀತಿ ಚಾತುರ್ಯವನ್ನು ಚಿತ್ರಿಸುವ, ನಾಟಕ ೦—೧೦—೦

೪ ಚಾರುದತ್ತ: ಪುರಾತನ ಭರತಖಂಡದ ಒಂದು ಸಾಮಾಜಿಕ ಚಿತ್ರ. 'ಮೃಚ್ಛಕಟಿಕ'ಕ್ಕೆ ಮೂಲವೆಂದು ಭಾವನೆಯಿದೆ. ೦—೮—೦

೫ ಸ್ವಪ್ನವಾಸವದತ್ತ: ಉದಯನ ವಾಸವದತ್ತೆಯರ ಆದರ್ಶ ಪ್ರೇಮವನ್ನು ಚಿತ್ರಿಸುವ ಮನೋಹರವಾದ ನಾಟಕ. (ಅಚ್ಚಿನಲ್ಲಿದೆ)

## ತಮಿಳು ಸಾಹಿತ್ಯದಿಂದ

೬ ನಾಲ್ಮಣಿ ಕಡುಕು: ಸಂಘಕಾಲದ ಪುರಾತನ ತಮಿಳು ನೀತಿ ಶತಕವೊಂದರ ಕನ್ನಡ ಭಾಷಾಂತರ. ೦—೩—೦

೭ ತಿರುವಾಚಕಂ, ಭಾಗ ೧: ತಮಿಳು ನಾಡಿನ ಶ್ರೀ ಮಾಣಿಕ್ಯವಾಚಕ ಸ್ವಾಮಿಗಳ ಸ್ತೋತ್ರ ಗ್ರಂಥದ ಮೊದಲ ನಾಲ್ಕು ಅಧ್ಯಾಯಗಳ ಭಾಷಾಂತರ. (ಅಚ್ಚಿನಲ್ಲಿ)

## ಇಂಗ್ಲಿಷಿನಿಂದ

೮ ಟಾಲ್‌ಸ್ಟಾಯವರ ಕಥೆಗಳು: ರಷ್ಯ ದೇಶದ ಪ್ರಸಿದ್ಧ ಸಾಧು ಟಾಲ್‌ಸ್ಟಾಯವರ ಇಪ್ಪತ್ತು ಕಥೆಗಳು. ೧—೮—೦

೯ ಸೊಹ್ರಬ್—ರುಸ್ತುಂ: ಫರ್ದೂಸಿ ಕವಿಯ 'ಷಾ ನಾಮ' ಮಹಾಕಾವ್ಯದ ಒಂದು ಪ್ರಕರಣ

## ಸ್ವಂತ

೧೦ ಚಟಾಕಿ: ಮಕ್ಕಳ ಪದ್ಯಗಳ ಸಂಗ್ರಹ. ೦—೮—೦

೧೧ ಕನ್ನಡ ಸಾಹಿತ್ಯ ಚಿತ್ರಗಳು, ಸಾಲು ೧: ಪುರಾತನ ಕನ್ನಡ ಸಾಹಿತ್ಯವನ್ನು ಜನಕ್ಕೆ ಪರಿಚಯ ಮಾಡಿಕೊಡುವ ಬರಹಗಳು. ಮೊದಲನೆಯ ಈ ಸಾಲಿನಲ್ಲಿ ಹಲವು ಕಥೆಗಳಿವೆ. ೧—೪—೦

೧೨ ಕನ್ನಡ ಸಾಹಿತ್ಯ ಚಿತ್ರಗಳು, ಸಾಲು ೨: (ಅಚ್ಚಿನಲ್ಲಿ)

## ಸಂಕಲನ

೧೩ ಹಿತ ವಚನಂ: ಪಂಪನ ಆದಿ ಪುರಾಣದಿಂದ ಆಯ್ದ ನೂರು ಪದ್ಯಗಳ ಸಂಗ್ರಹ (ಅಚ್ಚಿನಲ್ಲಿ)

MODI POWER
PRINTING
WORKS,
NARASIMHARAJA
ROAD, B. CITY